ಮಂಗಳೂರು
ಗುರುವಾರ, 19 ಫೆಬ್ರವರಿ 2026
ಸಂಪುಟ 47, ಸಂಚಿಕೆ 322, ಪುಟಗಳು 12+6
ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಹೆದ್ದಾರಿಗಳಲ್ಲಿ ಜೇನುಸ್ನೇಹಿ 'ಬೀ ಕಾರಿಡಾರ್' | ೦೭
ಕತ್ರಾ: ಆದಿಶಂಕರರಿಗೆ ದೇಗುಲ | ೦೭
3 ಮರಿಗಳಿಗೆ ಜನ್ಮ ನೀಡಿದ ಗಾಮಿನಿ | ೦೭

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪೂರ್ವಭಾದ್ರ

ದಿನದ ಮಾತು

ಜ್ಞಾನವಂತನಿಂದ ಮೂರ್ಖರು ಕಲಿಯುವುದಕ್ಕಿಂತ, ಮೂರ್ಖರಿಂದ ಜ್ಞಾನಿಗಳು ಕಲಿಯುವುದು ಹೆಚ್ಚು.
▲ರಾಮಕೃಷ್ಣ ಪರಮಹಂಸ

ತಮಿಳುನಾಡಿನ ಆಲೋಚನೆ ಏಕೆ ಹೀಗೆ?

ಗುರುತರ
• ಸೋಮಶೇಖರ ಸಿ.ಜೆ.
• ಪುಟ ೬

ಕಿರುಸುದ್ದಿ

ತಲಕಾಡಲ್ಲಿ ಕಾಡಾನೆ ದಾಳಿಗೆ ರೈತ ಸಾವು

• **ಮೈಸೂರು:** ಒಂಟಿ ಸಲಗ ದಾಳಿಗೆ ರೈತರೊಬ್ಬರು ಬಲಿಯಾಗಿರುವ ಘಟನೆ ಜಿಲ್ಲೆಯ ತಿ.ನರಸೀಪುರ ತಾಲೂಕಿನ ತಲಕಾಡು ಹೋಬಳಿಯ ಪರಿಣಾಮಿಪುರ ಗ್ರಾಮದಲ್ಲಿ ನಡೆದಿದೆ. ಪರಿಣಾಮಿಪುರದ ನಿವಾಸಿ ಗುರುಮಲ್ಲಪ್ಪ (70) ಮೃತಪಟ್ಟವರು. ಇವರು ಕಬ್ಬಿನ ಗದ್ದೆಗೆ ನೀರು ಹಾಯಿಸುವ ವೇಳೆ ಹಿಂದಿನಿಂದ ಬಂದ ಕಾಡಾನೆ ದಾಳಿ ಮಾಡಿ ತುಳಿದು ಸಾಯಿಸಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ತಹಸೀಲ್ದಾರ್ ಸುರೇಶಾಚಾರ್, ತಿ. ನರಸೀಪುರ ಪೊಲೀಸ್ ವೃತ್ತನಿರೀಕ್ಷಕ ಧನಂಜಯ್ ಹಾಗೂ ತಾಲೂಕು ವಲಯ ಅರಣ್ಯ ಅಧಿಕಾರಿ ಉಮೇಶ್ ಪರಿಶೀಲನೆ ನಡೆಸಿದರು. ➡ಪುಟ ೪

ಡಾ.ಸಿ.ಎ.ಎ.ರಾಘವೇಂದ್ರ ರಾವ್ ಅಸ್ತಂಗತ



• **ಮಂಗಳೂರು:** ಶ್ರೀನಿವಾಸ ವಿಶ್ವವಿದ್ಯಾಲಯ, ಶ್ರೀನಿವಾಸ ಸಮೂಹ ಶಿಕ್ಷಣ ಸಂಸ್ಥೆಗಳ ಕುಲಾಧಿಪತಿ, ಎ. ಶಾಮರಾವ್ ಫೌಂಡೇಶನ್ ಅಧ್ಯಕ್ಷ ಮತ್ತು ದೂರದೃಷ್ಟಿಯ ಧೀಮಂತ ನಾಯಕ ಡಾ. ಸಿ.ಎ. ಎ. ರಾಘವೇಂದ್ರ ರಾವ್ (88) ಅವರು ಫೆ.17ರಂದು ಚೆನ್ನೈನಲ್ಲಿ ಇಹಲೋಕ ತ್ಯಜಿಸಿದ್ದಾರೆ.

• ಪುಟ ೩

ದೇಶದ ಪ್ರತಿಷ್ಠೆ ಹಾಳು ಮಾಡಲು ರಾಗಾ ಯತ್ನ

• ಪುಟ ೨

ನಂದಿನಿ ಉತ್ಪನ್ನ ತಪ್ಪು ಸಂದೇಶ: ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ

• ಪುಟ ೫



ಪಾಕ್‌ಗೆ 2ನೇ ಜಲ ಪೆಟ್ಟು!

• ಪುಟ ೭

ಸುದ್ದಿ ಸಮಗ್ರ

ಮೈಕ್ರೋಸಾಫ್ಟ್, ಗೂಗಲ್ ಸಂಸ್ಥೆಗಳಿಂದ ಹೂಡಿಕೆ ಘೋಷಣೆ

ಎಐಗೆ ಭಾರತ ಕೇಂದ್ರ





• **ಹೊಸದಿಲ್ಲಿ:** ಇಲ್ಲಿ ನಡೆಯುತ್ತಿರುವ ಐದು-ದಿನಗಳ ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಬುಧವಾರ ಹಲವಾರು ಪ್ರಮುಖ ಒಪ್ಪಂದಗಳು ನಡೆದಿದ್ದು, ಇದರಲ್ಲಿ ಪ್ರಮುಖವಾಗಿ ಮೈಕ್ರೋಸಾಫ್ಟ್ ಮತ್ತು ಗೂಗಲ್ ಸಂಸ್ಥೆಗಳು ಜಾಗತಿಕ ದಕ್ಷಿಣ ದೇಶಗಳಲ್ಲಿ ಕೃತಕ ಬುದ್ಧಿಮತ್ತೆ(ಎಐ) ವಿಸ್ತರಣೆಗೆ ಮಹತ್ವಾಕಾಂಕ್ಷಿ ಹೂಡಿಕೆ ಮತ್ತು ಯೋಜನೆಗಳನ್ನು ಘೋಷಿಸಿವೆ. ಈ ಘೋಷಣೆಗಳು ಭಾರತವನ್ನು ಜಾಗತಿಕ ಎಐ ಕೇಂದ್ರವಾಗಿ ರೂಪಿಸುವ ದಿಸೆಯಲ್ಲಿ ಮಹತ್ವದ ಹೆಜ್ಜೆಯಾಗಿ ಕಾಣಿಸಿಕೊಂಡಿವೆ.

ಮೈಕ್ರೋಸಾಫ್ಟ್ ಸಂಸ್ಥೆ ದಶಕಾಂತ್ಯದೊಳಗೆ ಜಾಗತಿಕ ದಕ್ಷಿಣ ಪ್ರದೇಶಗಳಲ್ಲಿ ಎಐ ಪ್ರವೇಶವನ್ನು ವಿಸ್ತರಿಸಲು 50 ಬಿಲಿಯನ್ ಡಾಲರ್ ಹೂಡಿಕೆ ಮಾಡುವುದಾಗಿ ಘೋಷಿಸಿದೆ. ಜಾಗತಿಕ ಉತ್ತರ ದೇಶಗಳಿಗಿಂತ ಜಾಗತಿಕ ದಕ್ಷಿಣದಲ್ಲಿ ಎಐ ಅಳವಡಿಕೆ ಪ್ರಮಾಣ ಕಡಿಮೆಯಿದ್ದು, ಈ ಅಂತರ ಹೆಚ್ಚುತ್ತಿದೆ ಎಂದು ಕಂಪನಿ ಎಚ್ಚರಿಸಿದೆ. ಮೂಲಸೌಕರ್ಯ ಅಭಿವೃದ್ಧಿ, ಕೌಶಲ ವೃದ್ಧಿ, ಬಹುಭಾಷಾ ಎಐ ಅಭಿವೃದ್ಧಿ, ಸ್ಥಳೀಯ ನವೀನತೆ ಹಾಗೂ ಎಐ ಬಳಕೆಯ ಮೌಲ್ಯಮಾಪನ ಎಂಬ ಐದು ಪ್ರಮುಖ ಕ್ಷೇತ್ರಗಳಲ್ಲಿ ಹೂಡಿಕೆ ಕೇಂದ್ರೀಕರಿಸಲಾಗುತ್ತದೆ. ಕಳೆದ ಆರ್ಥಿಕ ವರ್ಷದಲ್ಲಿ ಭಾರತ ಸೇರಿದಂತೆ ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ದಕ್ಷಿಣ ಪೂರ್ವ ಏಷ್ಯಾದಲ್ಲಿ ಡೇಟಾಸೆಂಟರ್ ಮೂಲಸೌಕರ್ಯಕ್ಕೆ 8 ಬಿಲಿಯನ್ ಡಾಲರ್ ಹೂಡಿಕೆ ಮಾಡಿರುವುದಾಗಿ ತಿಳಿಸಿದೆ.

ಮೈಕ್ರೋಸಾಫ್ಟ್ ಎಲಿವೇಟ್ ಉಪಕ್ರಮದಲ್ಲಿ 2028ರೊಳಗೆ 20 ಮಿಲಿಯನ್ ಜನರಿಗೆ ಎಐ ಪ್ರಮಾಣಪತ್ರ ನೀಡುವ ಗುರಿ ಹೊಂದಿದ್ದು, ಭಾರತದಲ್ಲಿ 2030ರೊಳಗೆ 20 ದಶಲಕ್ಷ ಮಂದಿಗೆ ಎಐ ಕೌಶಲ ನೀಡಲು ಯೋಜಿಸಿದೆ.

ಸಮುದ್ರದಾಳದ ಕೇಬಲ್ ಘೋಷಿಸಿದ ಗೂಗಲ್

ಇದೇ ವೇಳೆ, ಗೂಗಲ್ ಸಿಇಒ ಸುಂದರ್ ಪಿಚೈ, ಭಾರತ-ಅಮೆರಿಕ ನಡುವೆ ಎಐ ಸಂಪರ್ಕವನ್ನು ಬಲಪಡಿಸಲು ಹೊಸ ಸಮುದ್ರಾಳದ ಕೇಬಲ್ ಮಾರ್ಗಗಳನ್ನು ಘೋಷಿಸಿದರು. ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿ 15 ಬಿಲಿಯನ್ ಡಾಲರ್ ಮೌಲ್ಯದ ಎಐ ಹಬ್ ಸ್ಥಾಪನೆಯಾಗಲಿದ್ದು, ಅದರಲ್ಲಿ ಗಿಗಾವಾಟ್ ಮಟ್ಟದ ಗಣಕ ಮೂಲಸೌಕರ್ಯ ಹಾಗೂ ಅಂತಾರಾಷ್ಟ್ರೀಯ ಕೇಬಲ್ ಗೇಟ್‌ವೇ ಇರಲಿದೆ. 20 ಮಿಲಿಯನ್ ಸಾರ್ವಜನಿಕ ಸೇವಕರಿಗೆ ತರಬೇತಿ, 11 ಮಿಲಿಯನ್ ವಿದ್ಯಾರ್ಥಿಗಳಿಗೆ ಬೆಂಬಲ, ಹಾಗೂ 10,000 ಅಟಲ್ ಟಿಂಕರಿಂಗ್ ಲ್ಯಾಬ್‌ಗಳಿಗೆ ಜನರೇಟಿವ್ ಎಐ ನೆರವು ನೀಡುವ ಯೋಜನೆಗಳನ್ನು ಪ್ರಕಟಿಸಲಾಗಿದೆ. ಜತೆಗೆ 30 ಮಿಲಿಯನ್ ಡಾಲರ್ ಮೌಲ್ಯದ 'ಎಐ ಫಾರ್ ಸೈನ್ಸ್ ಇಂಪ್ಯಾಕ್ಟ್ ಚಾಲೆಂಜ್' ಆರಂಭಿಸಿ ವಿಜ್ಞಾನ ಸಂಶೋಧನೆಗೆ ಉತ್ತೇಜನ ನೀಡಲಾಗುತ್ತಿದೆ.

ಎಸ್ಟೋನಿಯಾನ-ಕಝಕಿಸ್ತಾನ ನಾಯಕರ ಜತೆ ಪ್ರಧಾನಿ ಚರ್ಚೆ

ಮೋದಿ ಅವರು ಬುಧವಾರ ಎಸ್ಟೋನಿಯಾ ಅಧ್ಯಕ್ಷ ಅಲರ್ ಕರಿಸ್ ಅವರೊಂದಿಗೆ ಮಹತ್ವದ ದ್ವಿಪಕ್ಷೀಯ ಮಾತುಕತೆ ನಡೆಸಿ, ಭಾರತ-ಯುರೋಪಿಯನ್ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದ ಹಿನ್ನೆಲೆಯಲ್ಲಿ ಆರ್ಥಿಕ ಸಹಕಾರವನ್ನು ಇನ್ನಷ್ಟು ಬಲಪಡಿಸುವ ಬಗ್ಗೆ ಚರ್ಚಿಸಿದರು. ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಎಸ್ಟೋನಿಯಾದ ಸಾಧನೆಗಳನ್ನು ಮೆಚ್ಚಿದ ಮೋದಿ, ಭವಿಷ್ಯದ ತಂತ್ರಜ್ಞಾನ, ಇಂಧನ ನಿರ್ವಹಣೆ, ಕೌಶಲ್ಯಾಭಿವೃದ್ಧಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಹಯೋಗ ವಿಸ್ತರಿಸಲು ಒತ್ತು ನೀಡಿದರು. ➡ಪುಟ ೪

ಗಿನ್ನಿಸ್ ದಾಖಲೆ ಬರೆದ ಭಾರತ

• **ಹೊಸದಿಲ್ಲಿ:** ಕೇವಲ 24 ತಾಸುಗಳೊಳಗೆ ಬರೋಬ್ಬರಿ 2.5 ಲಕ್ಷ ಮೀರಿ ಪ್ರತಿಜ್ಞಾ ಘೋಷಣೆ! ತನ್ಮೂಲಕ ಭಾರತ ಬರೆದಿದೆ ಹೊಸ ಗಿನ್ನಿಸ್ ದಾಖಲೆ. ➡ಪುಟ ೪

ಗಲ್ಗೋಟಿಯಾಸ್ ಮಳಿಗೆ ತೆರವು

• ಪುಟ ೭

26 ತಿಂಗಳ ಹಿಂಬಾಕಿ ಪಾವತಿಗೆ ಸರ್ಕಾರ ಆದೇಶ

ಇಂದು ಸಾರಿಗೆ ಮುಷ್ಕರ ಇರಲಿದೆ ಬಸ್ ಸಂಚಾರ



• **ಬೆಂಗಳೂರು:** ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ ರಾಜ್ಯ ಸರ್ಕಾರ ಸಿಹಿ ಸುದ್ದಿ ನೀಡಿದೆ. ಕಳೆದ 38 ತಿಂಗಳಿಂದ ಬಾಕಿ ಉಳಿಸಿಕೊಂಡಿದ್ದ ವೇತನ ಹಿಂಬಾಕಿ (ಅರಿಯರ್ಸ್) ಹಾಗೂ ವೇತನ ಪರಿಷ್ಕರಣೆಗಾಗಿ ಆಗ್ರಹಿಸಿ ಸಾರಿಗೆ ಸಿಬ್ಬಂದಿ ನಡೆಸಲುದ್ದೇಶಿಸಿದ್ದ ಪ್ರತಿಭಟನೆಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ. ನೌಕರರ ಪ್ರಮುಖ ಹಕ್ಕೊತ್ತಾಯಗಳಲ್ಲಿ ಒಂದಾದ 26 ತಿಂಗಳ ಹಿಂಬಾಕಿ ಪಾವತಿಸಲು ಸರ್ಕಾರ ಆದೇಶ ಹೊರಡಿಸಿದೆ. ಈ ನಡುವೆ ಎಲ್ಲ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲು ಸಾರಿಗೆ ಜಂಟಿ ಕ್ರಿಯಾಸಮಿತಿ ನಿರ್ಧರಿಸಿದೆ.

ಬೆಂಗಳೂರು ಚಲೋಗೆ ಕರೆ

ನೌಕರರ ವೇತನ ಪರಿಷ್ಕರಣೆ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ ಸಾರಿಗೆ ಇಲಾಖೆ ಸರ್ಕಾರದ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ಆದರೂ ಸಾರಿಗೆ ನೌಕರರ ಜಂಟಿ ಕ್ರಿಯಾಸಮಿತಿ ಪದಾಧಿಕಾರಿಗಳು ತಮ್ಮ ಬೇಡಿಕೆಗಳಿಗೆ ಈಡೇರಿಕೆಗೆ ಗುರುವಾರ (ಫೆ.19) ಬೆಂಗಳೂರು ಚಲೋ ಹಮ್ಮಿಕೊಂಡಿದ್ದಾರೆ.ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ 2020 ಜ.1ರಿಂದ 2023 ಫೆ.28 ರವರೆಗಿನ 38 ತಿಂಗಳ ಬಾಕಿ ಪಾವತಿ ಹಾಗೂ 2024 ಜ.1ರಿಂದ ನಾಲ್ಕು ವರ್ಷಗಳ ವೇತನ ಒಪ್ಪಂದ ಈಡೇರಿಸುವಂತೆ ಒತ್ತಾಯಿಸಿ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಆಶ್ರಯದಲ್ಲಿ ಫೆ.19ರಂದು ಫ್ರೀಡಂ ಪಾರ್ಕ್‌ನಲ್ಲಿ ಬೆಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲು ತೀರ್ಮಾನ ಕೈಗೊಂಡಿತ್ತು. ➡ಪುಟ ೪

ಬಸ್ ಸೇವೆ ಸ್ಥಗಿತ ಇಲ್ಲ: ಸಚಿವ ರಾಮಲಿಂಗಾರೆಡ್ಡಿ

ಸುದ್ದಿಗಾರರೊಂದಿಗೆ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಷ್ಕರಕ್ಕೆ ಕರೆ ನೀಡಿರುವ ನಾಲ್ಕು ಸಾರಿಗೆ ನಿಗಮಗಳ ಸಂಘಟನೆಗಳ ಮುಖಂಡರ ಜತೆ ಮಾತುಕತೆ ನಡೆಸುವಂತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಅವರಿಗೆ ಸೂಚಿಸಲಾಗಿದೆ. ಬಸ್ ಸೇವೆ ಸ್ಥಗಿತಗೊಳಿಸುವುದಿಲ್ಲ. ➡ಪುಟ ೪

ಶಕ್ತಿ ಯೋಜನೆಯಿಂದ ಎಷ್ಟು ಹಣ ಬಾಕಿ: ಹೈಕೋರ್ಟ್ ಪ್ರಶ್ನೆ

• **ಬೆಂಗಳೂರು:** ಮಹಿಳೆಯರಿಗೆ ಉಚಿತ ಬಸ್ ಸೇವೆ ಕಲ್ಪಿಸುತ್ತಿರುವ ಮಹತ್ವಾಕಾಂಕ್ಷಿ ಶಕ್ತಿ ಯೋಜನೆಯ ಭಾಗವಾಗಿ ಸಾರಿಗೆ ನಿಗಮಗಳಿಗೆ ಎಷ್ಟು ಹಣವನ್ನು ರಾಜ್ಯ ಸರ್ಕಾರ ಬಾಕಿ ಉಳಿಸಿಕೊಂಡಿದೆ ಎಂಬುದನ್ನು ತಿಳಿಸುವಂತೆ ಸಾರಿಗೆ ನಿಗಮಗಳಿಗೆ ಹೈಕೋರ್ಟ್ ಬುಧವಾರ ನಿರ್ದೇಶಿಸಿದೆ.




ಸಾರಿಗೆ ನಿಗಮಗಳ ಮೃತ ಸಿಬ್ಬಂದಿಗೆ ತಲಾ 30 ಲಕ್ಷ ಪರಿಹಾರ ಬಿಡುಗಡೆ ಮಾಡಲು ನಿರ್ದೇಶಿಸುವಂತೆ ಕೋರಿ ದಾವಣಗೆರೆ ತಾಹೀರ್ ಹುಸೇನ್, ರಾಯಚೂರಿನ ಅಜೀಜ್ ಪಾಷಾ ಜಾಗೀರದಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ಅವರ ವಿಭಾಗೀಯ ಪೀಠ ನಡೆಸಿತು. ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಅಪಾರ ಪ್ರಮಾಣದಲ್ಲಿ ಉಚಿತ ಬಸ್ ಸೇವೆ ನೀಡಲಾಗುತ್ತಿದೆ. ➡ಪುಟ ೪

ಪಾಶ್ಚಾತ್ಯ ರಾಷ್ಟ್ರಗಳಿಂದ ಮೂಲಭೂತವಾದ: ಡಾ.ಭಾಗ್ವತ್

ಸವಾಲುಗಳಿಗೆ ಭಾರತ ಪರಿಹಾರ

• **ಲಕ್ನೋ:** ಪಾಶ್ಚಾತ್ಯ ರಾಷ್ಟ್ರಗಳು ಮೂಲಭೂತವಾದ ಪ್ರಚುರಪಡಿಸುತ್ತಿವೆ. ತಾವು ಮಾತ್ರ ಪ್ರಬಲರಾಗಬೇಕು. ತಮಗೆ ಬೇಕಾದ ರೀತಿ ಸ್ವೇಚ್ಛೆಯಿಂದ ಬದುಕಬೇಕು. ಉಳಿದವರ ಗೊಡವೆ ಬೇಡ ಎಂಬ ಸ್ವಾರ್ಥ ಚಿಂತನೆಯವರು. ಇಷ್ಟೇ ಅಲ್ಲ, ತಮ್ಮ ಹಾದಿಗೆ ಅಡೆತಡೆಯಾಗಿ ಕಾಣುವವರನ್ನು ಮುಗಿಸಿಯೇ ಬಿಡುವವರು. ಅಮೆರಿಕ, ಚೀನಾಗಳಿಂದು ಇದೇ ಹಾದಿ ಅನುಸರಿಸಿವೆ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗ್ವತ್ ಹೇಳಿದ್ದಾರೆ. ಅಂತೆಯೇ ಜಗತ್ತು ಇಂದು ಎದುರಿಸುತ್ತಿರುವ ನಾನಾ ರೀತಿಯ ಸವಾಲುಗಳಿಗೆ ಭಾರತದ ಬಳಿ ಪರಿಹಾರಗಳಿವೆ ಎಂದು ಗಮನ ಸೆಳೆದಿದ್ದಾರೆ.



ಲಕ್ನೋ ವಿವಿಯ ಮಾಳವೀಯ ಆಡಿಟೋರಿಯಂನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜಗತ್ತು ಇಂದು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಿಗೆ ಭಾರತದ ಬಳಿ ಪರಿಹಾರಗಳಿವೆ. ➡ಪುಟ ೪

ಹಿಂದು ಸಮಾಜದ ಒಗ್ಗಟ್ಟು ಸಂಘದ ಗುರಿ

ರಾಷ್ಟ್ರ ಸಂಪನ್ನವಾಗಬೇಕೆಂಬುದು ಆರೆಸ್ಸೆಸ್ ಗುರಿ. ನಾನು ಮತ್ತು ನನ್ನ ಕುಟುಂಬ ಮಾತ್ರ ಖುಷಿಯಾಗಿದ್ದರೆ ಸಾಕು, ಇದೇ ಎಲ್ಲ ಎಂಬ ಚಿಂತನೆ ಬಿಟ್ಟು, ಇಡೀ ರಾಷ್ಟ್ರದ ಬಗ್ಗೆ ಚಿಂತನೆ ಹೊಂದಬೇಕು. ಆರೆಸ್ಸೆಸ್ ಸಮಾಜದ ಏಕತೆ ಮತ್ತು ಗುಣಾತ್ಮಕತೆಗೆ ಮಹತ್ವ ನೀಡುತ್ತದೆ. ಕೇವಲ ಬರಹಗಳ ಓದುವುದರಿಂದ ಆರೆಸ್ಸೆಸ್ ನಿಮಗೆ ಅರ್ಥವಾಗದು. ಈ ಸಂಘಟನೆಯೊಳಗೆ ಬನ್ನಿ ಮತ್ತು ಆರೆಸ್ಸೆಸ್ ಏನೆಂಬುದನ್ನು ಕಣ್ಣಾರೆ ಕಂಡುಕೊಳ್ಳಿ. ಇಡೀ ಹಿಂದು ಸಮಾಜದ ಒಗ್ಗಟ್ಟು ಆರೆಸ್ಸೆಸ್ ಹೊಣೆಗಾರಿಕೆ. ➡ಪುಟ ೪

ಕಸ ವಿಲೇವಾರಿಗೆ ಬೆಳ್ಳಹಳ್ಳಿ-ಮಿಟ್ಟಗಾನಹಳ್ಳಿ ಗ್ರಾಮಸ್ಥರ ಆಕ್ರೋಶ

ಬೆಂಗಳೂರು ಕಸದ ಲಾರಿಗಳಿಗೆ ತಡೆ

• **ಬೆಂಗಳೂರು:** ನಗರದಲ್ಲಿ ಕಸ ಸಮಸ್ಯೆ ಇನ್ನಷ್ಟು ಗಂಭೀರವಾಗುವ ಸಾಧ್ಯತೆ ದಟ್ಟವಾಗಿದೆ. ಗ್ರಾಮಾಭಿವೃದ್ಧಿ ನಿಧಿ ಬಿಡುಗಡೆ ಮಾಡದ ಹಿನ್ನೆಲೆಯಲ್ಲಿ ಬೆಳ್ಳಹಳ್ಳಿ-ಮಿಟ್ಟಗಾನಹಳ್ಳಿ ಕಸ ಡಂಪಿಂಗ್ ಯಾರ್ಡ್ (ಲ್ಯಾಂಡ್‌ಫಿಲ್-ಭೂ ಭರ್ತಿ)ಗೆ ಕಸ ವಿಲೇವಾರಿ ಮಾಡಲು ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿ, ಮಂಗಳವಾರದಿಂದ ಕಸದ ಲಾರಿಗಳನ್ನು ತಡೆಹಿಡಿದಿದ್ದಾರೆ. ಸ್ಥಳೀಯ ಜನಪ್ರತಿನಿಧಿಗಳ ನೇತೃತ್ವದಲ್ಲಿ ಕಸ ವಿಲೇವಾರಿಯನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ.

ಬೆಳ್ಳಹಳ್ಳಿ-ಮಿಟ್ಟಗಾನಹಳ್ಳಿ ಭೂ ಭರ್ತಿಗೆ ವಿರೋಧ ವ್ಯಕ್ತವಾದ ಹಿನ್ನೆಲೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ದೊಡ್ಡಬಳ್ಳಾಪುರದ ಚಿಗರೇನಹಳ್ಳಿ ಬಳಿ ಇರುವ ಎಂಎಸ್‌ಜಿಪಿ ಕಸದ ಘಟಕಕ್ಕೆ ಲಾರಿಗಳನ್ನು ಕಳುಹಿಸಿದೆ. ಆದರೆ ವಿಷಯ ತಿಳಿದ ಅಲ್ಲಿಯ ಗ್ರಾಮಸ್ಥರೊಂದಿಗೆ ಶಾಸಕ ಧೀರಜ್ ಮುನಿರಾಜು ನೇತೃತ್ವದಲ್ಲಿ ಹೋರಾಟ ಮಾಡಿದ್ದು, ನಿತ್ಯ ಬರುವ 72 ಲಾರಿ ಹೊರತುಪಡಿಸಿ, ಹೆಚ್ಚುವರಿಯಾಗಿ ಬಂದ ಲಾರಿಯನ್ನು ತಡೆದಿದ್ದಾರೆ. ➡ಪುಟ ೪



ಬಿಜೆಪಿ ಶಾಸಕರ ಬ್ಲ್ಯಾಕ್‌ಮೇಲ್‌ಗೆ ಬಗ್ಗುವುದಿಲ್ಲ: ಡಿಸಿಎಂ ಡಿಕೆಶಿ

ಕಸದ ವಿಚಾರವಾಗಿ ಮಾತನಾಡಿದ ಡಿ.ಕೆ.ಶಿವಕುಮಾರ್, ಬಿಜೆಪಿ ಶಾಸಕರು ಕಸ ಹಾಕಬಾರದು ಹಾಗೂ ನಮಗೆ ಅನುದಾನ ಬೇಕು ಎಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಅರವಿಂದ ಲಿಂಬಾವಳಿ, ದೊಡ್ಡಬಳ್ಳಾಪುರ ಶಾಸಕರು ಬ್ಲ್ಯಾಕ್‌ಮೇಲ್ ಮಾಡಿದ್ದಾರೆ. ➡ಪುಟ ೪

ಮಾರ್ಚ್ 16ಕ್ಕೆ ರಾಜ್ಯಸಭೆಯ 37 ಸ್ಥಾನಗಳಿಗೆ ಚುನಾವಣೆ

ಬಿಜೆಪಿ ಮೇಲುಗೈ ಸಾಧಿಸುವ ಸಾಧ್ಯತೆ

• **ಹೊಸದಿಲ್ಲಿ:** ಮಾರ್ಚ್ 16ರಂದು ನಡೆಯಲಿರುವ ರಾಜ್ಯಸಭೆಯ ದ್ವೈವಾರ್ಷಿಕ ಚುನಾವಣೆಯಲ್ಲಿ ಒಟ್ಟು 37 ಸ್ಥಾನಗಳಿಗೆ ಮತದಾನ ನಡೆಯಲಿದ್ದು, ಈ ಬಾರಿ ಬಿಜೆಪಿ ಮೇಲುಗೈ ಸಾಧಿಸುವ ಸಾಧ್ಯತೆಗಳು ನಿಚ್ಚಳವಾಗಿವೆ. ಈ ಸ್ಥಾನಗಳು ಏ.2, 9ರಂದು ಖಾಲಿಯಾಗಲಿವೆ. ಚುನಾವಣಾ ಆಯೋಗದ ಪ್ರಕಟಣೆ ಪ್ರಕಾರ ಮಹಾರಾಷ್ಟ್ರ (7), ಒಡಿಶಾ (4), ತೆಲಂಗಾಣ (2), ತಮಿಳುನಾಡು (6), ಛತ್ತೀಸ್‌ಗಢ (2), ಪಶ್ಚಿಮ ಬಂಗಾಳ (5), ಅಸ್ಸಾಂ (3), ಹರ್ಯಾಣ (2), ಹಿಮಾಚಲ ಪ್ರದೇಶ (1), ಬಿಹಾರ (5) ರಾಜ್ಯಗಳಲ್ಲಿ ರಾಜ್ಯಸಭೆ ಸ್ಥಾನಗಳು ಖಾಲಿಯಾಗುತ್ತಿವೆ.

ಫೆ.26ಕ್ಕೆ ಅಧಿಸೂಚನೆ ಪ್ರಕಟ: ಖಾಲಿಯಾಗುವ ರಾಜ್ಯಸಭೆ 37 ಸ್ಥಾನಗಳಿಗೆ ಫೆ.26ರಂದು ಅಧಿಸೂಚನೆ ಹೊರಡಿಸಲಾಗುತ್ತದೆ. ಮಾ.16ರ ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಅದೇ ದಿನ ಸಂಜೆ 5ರಿಂದ ಮತ ಎಣಿಕೆ ನಡೆಯಲಿದೆ. ಮಹಾರಾಷ್ಟ್ರ, ಒಡಿಶಾ, ಬಿಹಾರ, ಛತ್ತೀಸ್‌ಗಢ, ಹರ್ಯಾಣ, ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ಆಡಳಿತವಿದೆ ಅಥವಾ ಅಥವಾ ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರವಿದೆ. ➡ಪುಟ ೪

ಸತೀಶ ಜಾರಕಿಹೊಳಿ ಮನವಿಗೆ ಸ್ಪಂದಿಸಿದ ಗಡ್ಕರಿ

ರಾಜ್ಯದ 6 ರಸ್ತೆ ಮೇಲ್ದರ್ಜೆಗೆ

• **ಬೆಳಗಾವಿ:** ರಾಜ್ಯದ ಆರು ಪ್ರಮುಖ ರಸ್ತೆಗಳನ್ನು ಮೇಲ್ದರ್ಜೆಗೇರಿಸುವಂತೆ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳನ್ನು ಚತುಷ್ಪಥ, ಷಟ್ಪಥ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಬೇಕು ಎಂದು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಗಡ್ಕರಿ ಅವರಿಗೆ ಮನವಿ ಸಲ್ಲಿಸಲಾಗಿತ್ತು ಎಂದರು. ಬಿಜೆಪಿಯಿಂದ ಆಯ್ಕೆಯಾದ ಸಂಸದರು, ಲೋಕಸಭಾ ಸದಸ್ಯರೂ ರಾಜ್ಯದ ಹಲವು ರಸ್ತೆಗಳನ್ನು ಅಭಿವೃದ್ಧಿಪಡಿಸುವಂತೆ ಒತ್ತಾಯಿಸಿದ್ದರು. ಈ ಬೇಡಿಕೆಗೆ ಸ್ಪಂದಿಸಿದ ಸಚಿವ ಗಡ್ಕರಿ ಅವರು, ರಾಜ್ಯ ಲೋಕೋಪಯೋಗಿ ಇಲಾಖೆ ಅಧೀನದಲ್ಲಿದ್ದ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವಹಿಸಿಕೊಂಡು ರಸ್ತೆಗಳನ್ನು ವಿಸ್ತರಣೆ ಮಾಡಬೇಕು ಎಂದು ಸೂಚನೆ ನೀಡಿದ್ದಾರೆ.

ಜೇವರ್ಗಿ-ಬಳ್ಳಾರಿ ಮಧ್ಯದ 265 ಕಿ.ಮೀ.



ಉದ್ದದ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ತನ್ನ ಅಧೀನಕ್ಕೆ ತೆಗೆದುಕೊಂಡು ಅಭಿವೃದ್ಧಿ ಕೆಲಸ ಶುರು ಮಾಡುವಂತೆ ಸೂಚನೆ ನೀಡಿದ್ದಾರೆ. ಜೇವರ್ಗಿ, ಶಹಾಪುರ, ಸುರಪುರದಿಂದ ಲಿಂಗಸುಗೂರುವರೆಗಿನ ರಸ್ತೆಯು ಹೆಸರಿಗಷ್ಟೇ ರಾಷ್ಟ್ರೀಯ ಹೆದ್ದಾರಿಯಾಗಿತ್ತು. ಜೇವರ್ಗಿ, ಶಹಾಪುರ, ಹೊಸಪೇಟೆ ಮಾರ್ಗದ ಮೂಲಕ ಬೆಂಗಳೂರಿಗೆ ಹೊರಡುವ ಬಸ್‌ಗಳು ಕೆಟ್ಟ ರಸ್ತೆಯಿಂದಾಗಿ ನಿಗದಿತ ಅವಧಿಗಿಂತ ತಡವಾಗಿ ತಲುಪುತ್ತಿವೆ. ಆದಕ್ಕಾಗಿಯೇ ತುರ್ತು ಕೆಲಸ ಇದ್ದವರು ರಾಯಚೂರು, ಮಂತ್ರಾಲಯ ಮಾರ್ಗವಾಗಿ ಬೆಂಗಳೂರಿಗೆ ಸಂಚರಿಸುತ್ತಿದ್ದಾರೆ.


ಖಂಡ್ರೆ ಸಮ್ಮತಿ | ವಾಹನ, ಟ್ರಿಪ್, ಸಮಯ ಕಡಿತ

ಬಂಡೀಪುರದಲ್ಲಿ ಸಫಾರಿ ಶುರು

• **ಬೆಂಗಳೂರು:** ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಟ್ರಿಪ್, ಸಮಯ ಮತ್ತು ವಾಹನ ಸಂಖ್ಯೆಯಲ್ಲಿ ಕಡಿತ ಮಾಡಿ ಗುರುವಾರದಿಂದ (ಫೆ.19) ಸಫಾರಿ ಪುನರಾರಂಭಕ್ಕೆ ಸಮ್ಮತಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.



ಹುಲಿ ದಾಳಿಯಿಂದ ಸರಣಿ ಸಾವು ಸಂಭವಿಸಿದ ಹಿನ್ನೆಲೆಯಲ್ಲಿ ಕಳೆದ ನ. 7ರಿಂದ ಸ್ಥಗಿತಗೊಳಿಸಲಾಗಿದ್ದ ಸಫಾರಿ ಪುನರಾರಂಭದ ಬಗ್ಗೆ ಬುಧವಾರ ವಿಕಾಸಸೌಧದಲ್ಲಿ ಉನ್ನತಾಧಿಕಾರಿಗಳೊಂದಿಗೆ ಸಚಿವರು ಸಭೆ ನಡೆಸಿ ಬಳಿಕ ಈ ಮಾಹಿತಿ ನೀಡಿದರು. ಈ ಹಿಂದೆ ಬಂಡೀಪುರದಲ್ಲಿ 8 ಗಂಟೆ ಕಾಲ ಸಫಾರಿ ನಡೆಯುತ್ತಿತ್ತು. ಈಗ ಅದನ್ನು 5 ಗಂಟೆಗೆ ತಗ್ಗಿಸಲಾಗಿದೆ. ಅದೇ ರೀತಿ ಸುಂಕದಕಟ್ಟೆಯಲ್ಲಿ 6 ಗಂಟೆ ಹಾಗೂ ನಾಗರಹೊಳೆಯಲ್ಲಿ 4 ಗಂಟೆ ಕಾಲ ಮಾತ್ರ ಸಫಾರಿಗೆ ಪ್ರಥಮ ಹಂತದಲ್ಲಿ ಅನುಮತಿಸಲಾಗಿದೆ ಎಂದರು. ಬಂಡೀಪುರ, ನಾಗರ ಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮದ ಧಾರಣಾ ಸಾಮರ್ಥ್ಯವನ್ನು ವೈಜ್ಞಾನಿಕವಾಗಿ ನಿಗದಿಪಡಿಸಲು ರಚಿಸಲಾಗಿರುವ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ತಾಂತ್ರಿಕ ಸಮಿತಿ ನೀಡಿರುವ ಪ್ರಾಥಮಿಕ ವರದಿ ಪರಾಮರ್ಶೆ ನಡೆಸಿದರು. ➡ಪುಟ ೪



ಸಫಾರಿ ವಾಹನಗಳಿಗೆ ಜಿಪಿಎಸ್

ಸಫಾರಿ ವಾಹನಗಳನ್ನು ಕತ್ತಲಾದ ಬಳಿಕ ಓಡಿಸುವುದು, ಹೆಚ್ಚುವರಿ ಅವಧಿಗೆ ಓಡಿಸುವುದೇ ಮೊದಲಾದ ದುರ್ಬಳಕೆ ತಡೆಗಟ್ಟಲು ಕಡ್ಡಾಯವಾಗಿ ಮುಂದಿನ 2 ತಿಂಗಳೊಳಗಾಗಿ ಎಲ್ಲ ಸಫಾರಿ ವಾಹನಗಳಿಗೆ ಎಂಜಿನ್ ಸಂಪರ್ಕಿತ ಜಿಪಿಎಸ್ ಮತ್ತು ಡ್ಯಾಷ್ ಕ್ಯಾಮೆರಾ ಅಳವಡಿಸಬೇಕು ಎಂದು ಸೂಚಿಸಲಾಗಿದೆ.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,42,000(2,43,100) ಅಪರಂಜಿ ಚಿನ್ನ 15,132(15,236) ಆಭರಣ ಚಿನ್ನ: 14,135(14,200) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 83,734(283↑) ಎನ್‌ಎಸ್‌ಇ 25,819(93↑)

$1 = ₹90.68

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೨
ಗುರುವಾರ
19 ಫೆಬ್ರವರಿ 2026
ಮಂಗಳೂರು



ಕೋಲಾರ ಜಿಲ್ಲೆಯ ವೇಮಗಲ್‌ನಲ್ಲಿ ದೇಶದ ಮೊಟ್ಟ ಮೊದಲ ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣೆ ಘಟಕವನ್ನು ಉದ್ಘಾಟಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ಅವರು ವರ್ಚುವಲ್ ಮೂಲಕ ಉದ್ಘಾಟನಾ ಸಮಾರಂಭ ನೆರವೇರಿಸಿದ್ದಾರೆ. ಫ್ರಾನ್ಸ್ ಮೂಲದ ಏರ್‌ಬಸ್ ಮತ್ತು ಭಾರತದ ಟಾಟಾ ಅಡ್ವಾನ್ಸಡ್ ಸಿಸ್ಟಮ್ಸ್ ಲಿಮಿಟೆಡ್ ಈ ಘಟಕವನ್ನು ಜಂಟಿಯಾಗಿ ಅಭಿವೃದ್ಧಿಪಡಿಸಿದೆ.

ಕೋಲಾರ ಜಿಲ್ಲೆಯ ವೇಮಗಲ್ ನಲ್ಲಿ ದೇಶದ ಚೊಚ್ಚಲ ಖಾಸಗಿ ಹೆಲಿಕಾಪ್ಟರ್ ಜೋಡಣಾ ಘಟಕ

ರಾಜ್ಯಕ್ಕೆ ಮತ್ತೊಂದು ಗರಿ

ಕರ್ನಾಟಕದಲ್ಲಿ ಈಗಾಗಲೇ ಎಚ್ ಎಎಲ್, ಇಸ್ರೊ, ಡಿಆರ್‌ಡಿಒ ಮೊದಲಾದ ಸಂಸ್ಥೆಗಳು ರಕ್ಷಣೆ ಹಾಗೂ ಬಾಹ್ಯಾಕಾಶ ವ್ಯವಸ್ಥೆಯ ಬೆನ್ನೆಲುಬಿನಂತೆ ಕಾರ್ಯನಿರ್ವಹಿಸುತ್ತಿವೆ. ವೇಮಗಲ್ ನಲ್ಲಿ ನಿರ್ಮಿಸಿರುವ ಎಚ್–125 ಹೆಲಿಕಾಪ್ಟರ್‌ಗಳ ಜೋಡಣಾ ಘಟಕದಿಂದ ರಾಜ್ಯ ಸ್ಥಾನಮಾನ ಮತ್ತಷ್ಟು ಗಟ್ಟಿಯಾಗಲಿದೆ.

ಏನಿದು ಎಚ್ -125 ಹೆಲಿಕಾಪ್ಟರ್? ಏರ್‌ಬಸ್

ಎಚ್–125 ಎಂಬುದು ಎಕ್ಯುರೆಯಿಲ್ ಸರಣಿಯಿಂದ ಬಂದ ಏಕ–ಎಂಜಿನ್ ಲೈಟ್ ಯುಟಿಲಿಟಿ ಹೆಲಿಕಾಪ್ಟರ್ ಆಗಿದೆ. ಇದುವರೆಗೆ ಈ ಸಂಸ್ಥೆಯಿಂದ ಉತ್ಪಾದಿಸಲಾದ ಅತ್ಯಂತ ಯಶಸ್ವಿ ಹೆಲಿಕಾಪ್ಟರ್‌ಗಳಲ್ಲಿ ಒಂದಾಗಿದೆ. ಇದು ವಿಶ್ವಾದ್ಯಂತ 40 ಮಿಲಿಯನ್‌ಗಿಂತಲೂ ಹೆಚ್ಚು ಹಾರಾಟದ ಗಂಟೆಗಳನ್ನು ದಾಖಲಿಸಿದೆ ಮತ್ತು ವೈಮಾನಿಕ ಕೆಲಸದಿಂದ ಹುಡುಕಾಟ ಮತ್ತು ರಕ್ಷಣೆಯವರೆಗಿನ ಕಾರ್ಯಾಚರಣೆಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ. ಮೂಲತಃ ಎಎಸ್–350 ನಂತಹ ಹಿಂದಿನ ಬ್ರಾಂಡ್ ಹೆಸರುಗಳಲ್ಲಿ ಕರೆಯಲ್ಪಡುತ್ತಿದ್ದ ಎಚ್–125, ಅದರ ವಿಶ್ವಾಸಾರ್ಹತೆ, ಕಡಿಮೆ ನಿರ್ವಹಣೆ ಮತ್ತು ಹೊಂದಿಕೊಳ್ಳುವಿಕೆಗೆ ಮೌಲ್ಯಯುತವಾಗಿದೆ. ಇದು ತುರ್ತು ಸೇವೆಗಳು, ವೈಮಾನಿಕ ಚಿತ್ರೀಕರಣ, ಪ್ರವಾಸೋದ್ಯಮ, ಕಾನೂನು ಜಾರಿ, ಅಗ್ನಿಶಾಮಕ ಮತ್ತು ನಾಗರಿಕ ಸಾರಿಗೆಯಂತಹ ವ್ಯಾಪಕ ಶ್ರೇಣಿಯ ವಲಯಗಳಿಗೆ ಸೇವೆ ಸಲ್ಲಿಸುತ್ತದೆ.

ಭಾರತ ಫ್ರಾನ್ಸ್ ಒಪ್ಪಂದ

ಈ ಪಾಲುದಾರಿಕೆಯು ಎಚ್–125 ಹೆಲಿಕಾಪ್ಟರ್‌ನ ನಾಗರಿಕ ಮತ್ತು ಸಂಭಾವ್ಯ ಮಿಲಿಟರಿ ರೂಪಾಂತರಗಳನ್ನು ಉತ್ಪಾದಿಸಲು ಭಾರತೀಯ ಅಸೆಂಬ್ಲಿ ಲೈನ್ ಅನ್ನು ಸ್ಥಾಪಿಸುವುದನ್ನು ಒಳಗೊಂಡಿದೆ. ಸಂವೇದಕಗಳು ಅಥವಾ ಮಿಷನ್ ಉಪಕರಣಗಳನ್ನು ಸಾಗಿಸುವಂತಹ ಸುಧಾರಿತ ಸಾಮರ್ಥ್ಯಗಳೊಂದಿಗೆ ಯುದ್ಧತಂತ್ರದ ಪಾತ್ರಗಳಿಗಾಗಿ ವಿನ್ಯಾಸಗೊಳಿಸಲಾದ ಮಿಲಿಟರೀಕೃತ ಆವೃತ್ತಿಯಾದ ಎಚ್–125 ಅನ್ನು ಸಹ ಯೋಜನೆಗಳು ಪರಿಗಣಿಸುತ್ತವೆ. ಹಲವಾರು ಭಾರತೀಯ ಪೂರೈಕೆದಾರರು ಮೌಲ್ಯ ಸರಪಳಿಯನ್ನು ಪ್ರವೇಶಿಸುತ್ತಿದ್ದಾರೆ, ಉದಾಹರಣೆಗೆ ಮಹೀಂದ್ರಾ ಏರೋಸ್ಟ್ರಕ್ಚರ್ಸ್, ಫ್ಯೂಸ್ಲೇಜ್ ಘಟಕಗಳನ್ನು ತಯಾರಿಸಲು ಒಪ್ಪಂದ ಮಾಡಿಕೊಂಡಿದ್ದು, ಜಾಗತಿಕ ಹೆಲಿಕಾಪ್ಟರ್ ಉತ್ಪಾದನಾ ವ್ಯವಸ್ಥೆಯಲ್ಲಿ ಭಾರತದ ಪಾತ್ರವನ್ನು ಇನ್ನಷ್ಟು ಹೆಚ್ಚಿಸುತ್ತಿದೆ.

ಕರ್ನಾಟಕದಲ್ಲಿ ವರ್ಷಕ್ಕೆ 20 ಕಾಪ್ಟರ್ ನಿರ್ಮಾಣ

ಅರವಿಂದ ಬಿರಾದಾರ

ಆತ್ಮನಿರ್ಭರ ಭಾರತದ ಬಹುದೊಡ್ಡ ಭಾಗ

ಈ ಯೋಜನೆಯು ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ ಮತ್ತು ಮೇಕ್ ಇನ್ ಇಂಡಿಯಾ ಅಭಿಯಾನದ ಭಾಗವಾಗಿದ್ದು, ದೇಶೀಯ ಏರೋಸ್ಪೇಸ್ ವಲಯದಲ್ಲಿ ಸಂಪೂರ್ಣ ಖಾಸಗಿ ಬಂಡವಾಳದಡಿ ಹೆಲಿಕಾಪ್ಟರ್ ನಿರ್ಮಾಣವಾಗುತ್ತಿದೆ. ಈ ಘಟಕದಲ್ಲಿ ಹೆಲಿಕಾಪ್ಟರ್‌ನ ಫ್ಯೂಸ್ಲೇಜ್ (ಕವಚ), ವಿದ್ಯುತ್ ವೈರಿಂಗ್, ನಿಯಂತ್ರಣ ವ್ಯವಸ್ಥೆಗಳು, ಎಂಜಿನ್ ಅಳವಡಿಕೆ ಮತ್ತು ಏವಿಯಾನಿಕ್ಸ್ ಉಪಕರಣಗಳ ಜೋಡಣೆಯ ಜೊತೆಗೆ ಅತ್ಯಾಧುನಿಕ ಗುಣಮಟ್ಟದ ಪರೀಕ್ಷೆಗಳೂ ನಡೆಯಲಿವೆ.

ದೇಶದ ಮೊದಲ ಘಟಕ ವೇಮಗಲ್‌ನಲ್ಲಿ

ಹೆಲಿಕಾಪ್ಟರ್ ಜೋಡಣಾ ಘಟಕವು ಯುರೋಪಿಯನ್ ಯೂನಿಯನ್ ಏವಿಯೇಷನ್ ಸೇಫ್ಟಿ ಏಜೆನ್ಸಿ (ಇಎಎಸ್‌ಎ) ಪ್ರಾರಂಭದಲ್ಲಿಯೇ ಪ್ರಮಾಣೀಕರಿಸಿದ ದೇಶದ ಮೊಟ್ಟ ಮೊದಲ ಘಟಕವಾಗಿದೆ. ದೇಶದ ಮೊದಲ ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣಾ ಘಟಕ ಇದಾಗಿದ್ದು, ಮುಂದಿನ 20 ವರ್ಷಗಳಲ್ಲಿ ದಕ್ಷಿಣ ಏಷ್ಯಾದಲ್ಲಿ ಸುಮಾರು 500 ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಸೃಷ್ಟಿಯಾಗಲಿದೆ. ಅದನ್ನು ಪೂರೈಸಲು ಭಾರತವು ಸಮರ್ಥವಾಗಿದೆ. ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ಮತ್ತು ಏರ್‌ಬಸ್ ಹೆಲಿಕಾಪ್ಟರ್‌ಗಳ ಪಾಲುದಾರಿಕೆಯಲ್ಲಿರುವ ಈ ಸೌಲಭ್ಯವು, ಹಿಮಾಲಯದ ಶಿಖರಗಳಂತಹ ಎತ್ತರದ ಪ್ರದೇಶಗಳು ಸೇರಿದಂತೆ ಕಠಿಣ ಪರಿಸ್ಥಿತಿಯಲ್ಲಿಯೂ ಕಾರ್ಯನಿರ್ವಹಿಸುವ ಸಾಮರ್ಥ್ಯವಿರುವ ಬಹುಮುಖಿ ಹೆಲಿಕಾಪ್ಟರ್‌ಗಳನ್ನು ನಿರ್ಮಿಸುತ್ತದೆ. ಈ ಯೋಜನೆಯು ಭಾರತದ ರಕ್ಷಣೆ, ನಾಗರಿಕ ವಿಮಾನಯಾನ, ರಫ್ತು ಮಹತ್ವಾಕಾಂಕ್ಷೆಗಳು ಮತ್ತು ವಿಶಾಲವಾದ ಮೇಕ್ ಇನ್ ಇಂಡಿಯಾ ಗುರಿಗಳನ್ನು ಬೆಂಬಲಿಸುತ್ತದೆ.



ಕ್ಯಾಥರೀನ್ ವಾಟ್ರಿನ್ ಭೇಟಿಗೆ ಯಾಕಿಷ್ಟು ಮಹತ್ವ?

ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರೀನ್ ವಾಟ್ರಿನ್ ಈ ಭಾರತ ಭೇಟಿ ವೇಳೆ ಅವರು ಒಪ್ಪಂದಗಳಿಗೆ ಸಹಿ ಹಾಕಲಿದ್ದಾರೆ. ಒಂದು ರಕ್ಷಣಾ ಸಹಕಾರ ಒಪ್ಪಂದವನ್ನು ಮುಂದಿನ ಹತ್ತು ವರ್ಷಗಳಿಗೆ ನವೀಕರಿಸಲಾಗುತ್ತದೆ. ಹ್ಯಾಮರ್ ಕ್ಷಿಪಣಿಗಳ ಉತ್ಪಾದನೆಗೆ ಎಂಒಯು ಸಹಿ ಹಾಕಲಾಗುತ್ತದೆ. ಇದರೊಡನೆ, ಉಭಯ ದೇಶಗಳ ನಡುವಿನ ಪರಸ್ಪರ ನೈಜ ನಂಬಿಕೆಯನ್ನು ಪ್ರದರ್ಶಿಸುವ ಇನ್ನೊಂದು ಬೆಳವಣಿಗೆಯೂ ಇದ್ದು, ಭಾರತ – ಫ್ರಾನ್ಸ್ ಆಫೀಸರ್ಸ್ ಎಕ್ಸ್‌ಚೇಂಜ್ ಪ್ರೋಗ್ರಾಮ್ ಚಾಲನೆಗೊಳಿಸಲಿವೆ.

ಹೆಲಿಕಾಪ್ಟರ್ ರಫ್ತುದಾರ ದೇಶವಾಗಿ ಭಾರತ

ಇಲ್ಲಿ ತಯಾರಾಗುವ ಹೆಲಿಕಾಪ್ಟರ್‌ಗಳು ಕೇವಲ ಭಾರತಕ್ಕೆ ಸೀಮಿತವಾಗದೆ, ದಕ್ಷಿಣ ಏಷ್ಯಾದ ನೆರೆಯ ರಾಷ್ಟ್ರಗಳ ಅವಶ್ಯಕತೆಯನ್ನು ಪೂರೈಸಲಿವೆ. ಆ ಮೂಲಕ ಭಾರತವು ಹೆಲಿಕಾಪ್ಟರ್ ರಫ್ತುದಾರ ದೇಶವಾಗಿ ಬೆಳೆಯಲು ಸಹಕಾರಿಯಾಗಲಿದೆ.

ನಾನು ಕೈಗಾರಿಕೆ ಸಚಿವನಾದ ಬಳಿಕ ಘಟಕ ನಿರ್ಮಾಣಕ್ಕೆ 17 ಎಕರೆ ಜಮೀನು ನೀಡಲಾಗಿದ್ದು, ದಾಖಲೆಯ ರೀತಿಯಲ್ಲಿ ಕೇವಲ ಒಂದೂವರೆ ವರ್ಷದಲ್ಲಿ ಘಟಕ ಉದ್ಘಾಟನೆಯಾಗಿರುವುದು ಸಂತಸದ ವಿಷಯವಾಗಿದೆ. ಆಂಧ್ರಪ್ರದೇಶ, ಉತ್ತರಪ್ರದೇಶ ಮತ್ತು ಗುಜರಾತ್ ರಾಜ್ಯಗಳ ತೀವ್ರ ಸ್ಪರ್ಧೆ ನಡುವೆ ಈ ಯೋಜನೆ ಸಿಕ್ಕಿದೆ. ಮೊದಲ ವರ್ಷದಲ್ಲಿ 10 ಹೆಲಿಕಾಪ್ಟರ್‌ಗಳು ತಯಾರಾಗಲಿದ್ದು, ಮುಂದಿನ ಎರಡು ದಶಕಗಳಲ್ಲಿ 500 ಹೆಲಿಕಾಪ್ಟರ್‌ಗಳು ಸಿದ್ಧವಾಗಲಿವೆ.

■ ಎಂ.ಬಿ.ಪಾಟೀಲ್, ಕೈಗಾರಿಕಾ ಸಚಿವ

ಏರೋಸ್ಪೇಸ್ ಕ್ಷೇತ್ರದಲ್ಲಿ ಸ್ವದೇಶಿ ಬೇಡಿಕೆಗಳನ್ನು ಈಡೇರಿಸುವುದರ ಜತೆಗೆ ಜಾಗತಿಕವಾಗಿ ಹಲವು ರಾಷ್ಟ್ರಗಳ ಬೇಡಿಕೆಗಳನ್ನು ಈಡೇರಿಸುವುದು ದೇಶದ ಗುರಿಯಾಗಿದೆ. ಸಾರ್ವಜನಿಕ ಉದ್ದಿಮೆಗಳ ಮೂಲಕವೇ ರಕ್ಷಣಾ ಕ್ಷೇತ್ರದ ಅಗತ್ಯಗಳನ್ನು ಪೂರೈಕೆ ಮಾಡಿಕೊಳ್ಳಲಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಖಾಸಗಿ ಸಂಸ್ಥೆಗಳು ರಕ್ಷಣಾ ಕ್ಷೇತ್ರಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸುತ್ತಿರುವುದು ಗಮನಾರ್ಹವಾಗಿದೆ.

■ ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಕೇವಲ ಎರಡು ವರ್ಷಗಳ ಪ್ರಯತ್ನದ ಫಲವಾಗಿ ಈ ಹೆಲಿಕಾಪ್ಟರ್ ಜೋಡಣಾ ಘಟಕವನ್ನು ಆರಂಭಿಸಲಾಗುತ್ತಿದೆ. ಈ ರೀತಿಯ ಅನೇಕ ಘಟಕಗಳನ್ನು ಭಾರತ ದೇಶದ ಸಹಭಾಗಿತ್ವದಲ್ಲಿ ಆರಂಭಿಸಲಾಗುವುದು. ಈಗಾಗಲೇ ಭಾರತದಲ್ಲಿ 295ಕ್ಕೂ ಹೆಚ್ಚು ಯೋಜನೆಗಳು ಸಾಕಾರಗೊಳ್ಳುತ್ತಿವೆ. ಇದು ಆರ್ಥಿಕವಾಗಿ ಮಾತ್ರವಲ್ಲದೆ ಕೈಗಾರಿಕೆಗಳ ಉನ್ನತೀಕರಣಕ್ಕೂ ಸಹಕಾರಿಯಾಗಿದೆ.

■ ಕ್ಯಾಥರೀನ್ ವೌಟ್ರಿನ್, ಫ್ರಾನ್ಸ್ ರಕ್ಷಣಾ ಸಚಿವೆ



ರಾಜ್ಯದ ಯುವಕರಿಗೆ ಉದ್ಯೋಗ

ಫ್ರಾನ್ಸ್ ಮೂಲದ ಪ್ರತಿಷ್ಠಿತ ಏರ್‌ಬಸ್ ಕಂಪನಿಯು ಜಾಗತಿಕ ಮಟ್ಟದಲ್ಲಿ ಏಕ ಎಂಜಿನ್ ಹೆಲಿಕಾಪ್ಟರ್‌ಗಳ ಕ್ಷೇತ್ರದಲ್ಲಿ 4,300 ಹೆಲಿಕಾಪ್ಟರ್‌ಗಳೊಂದಿಗೆ, ಜಾಗತಿಕ ಮಾರುಕಟ್ಟೆಯಲ್ಲಿ ಈ ವಲಯದಲ್ಲಿ ಶೇ.80ರಷ್ಟು ಪಾಲು ಹೊಂದಿದೆ. ರಾಜ್ಯದಲ್ಲಿ ಎಚ್–125 ದರ್ಜೆಯ ಹೆಲಿಕಾಪ್ಟರ್ ತಯಾರಿಕೆಗೆ ಬೇಕಾದ ವಿಶ್ವಾಸಾರ್ಹತೆ ಮತ್ತು ಎಂಜಿನಿಯರಿಂಗ್ ಪರಿಣತಿಯಿದೆ. ಈ ವಲಯದಲ್ಲಿ ರಾಜ್ಯ ಸರಕಾರವು ಕೇಂದ್ರ ಸರಕಾರದೊಂದಿಗೆ ನಿಕಟವಾಗಿ ಕೆಲಸ ಮಾಡುವ ಆಸಕ್ತಿ ಹೊಂದಿದ್ದು, ಈ ಘಟಕವು ಭಾರತದ ದಕ್ಷತೆಯು ಪಡೆದುಕೊಳ್ಳುತ್ತಿರುವ ಹೊಸ ಶಕ್ತಿ ಮತ್ತು ಜಾಗತಿಕ ಮಟ್ಟದಲ್ಲಿ ಏರ್ಪಡಿಸಿಕೊಳ್ಳುವ ಸಹಭಾಗಿತ್ವದ ಸಂಕೇತವಾಗಿದೆ. ಇದರಿಂದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಸಮೃದ್ಧ ಅವಕಾಶಗಳು ತೆರೆದುಕೊಳ್ಳಲಿದ್ದು, ಉದ್ಯೋಗಸೃಷ್ಟಿಯೂ ಹೆಚ್ಚಾಗಲಿದೆ. ಇದರಿಂದ ರಾಜ್ಯದ ಯುವಜನರಿಗೆ ಆಧುನಿಕ ತಂತ್ರಜ್ಞಾನ ವಲಯಕ್ಕೆ ಪ್ರವೇಶ ಸಿಗುವ ಸಾಧ್ಯತೆಯಿದೆ.

- ಏರ್‌ಬಸ್ ಎಚ್–125ನಲ್ಲಿ ಇಬ್ಬರು ಪೈಲಟ್‌ಗಳು ಸೇರಿ 8 ಜನ ಪ್ರಯಾಣಿಸಬಹುದು.
- 1,075 ಕೆ.ಜಿ.ಯಷ್ಟು ತೂಕವನ್ನು ಸಾಗಿಸಬಲ್ಲದು.
- ಎಚ್–125 ಮೌಂಟ್ ಎವರೆಸ್ಟ್ ಶಿಖರದ ಮೇಲಿಳಿದ ಏಕೈಕ ಹೆಲಿಕಾಪ್ಟರ್
- ದಕ್ಷಿಣ ಏಷ್ಯಾದ ಬಹುದೊಡ್ಡ ರಫ್ತು ಮಾರುಕಟ್ಟೆ ಓಪನ್
- ವಿಶ್ವದ ಅತ್ಯಂತ ಯಶಸ್ವಿ ಸಿಂಗಲ್ ಎಂಜಿನ್ ಹೆಲಿಕಾಪ್ಟರ್
- ಕಠಿಣ ಹವಾಮಾನ ಪರಿಸ್ಥಿತಿಯಲ್ಲೂ ಹಾರಾಟ ನಡೆಸುವ ಸಾಮರ್ಥ್ಯ
- ಮುಂದಿನ 20 ವರ್ಷಗಳಲ್ಲಿ ಎಚ್125 ದರ್ಜೆಯ 500 ಲಘು ಹೆಲಿಕಾಪ್ಟರ್ ನಿರ್ಮಾಣ

ಪರಸ್ಪರ ಗರಿಷ್ಠ ನಂಬಿಕೆಗೆ ಸಹಕಾರಿ

ಅಂದರೆ, ಭಾರತೀಯ ಸೇನಾಧಿಕಾರಿಗಳು ತಿಂಗಳುಗಳ ಕಾಲ ಫ್ರಾನ್ಸಿನ ಫ್ರೆಂಚ್ ಮಿಲಿಟರಿ ವಿಭಾಗಗಳಲ್ಲಿ ನಿಯೋಜನೆಗೊಳ್ಳಲಿದ್ದು, ಫ್ರೆಂಚ್ ಯೋಧರು ಹೇಗೆ ಕೆಲಸ ಮಾಡುತ್ತಾರೆ, ಆಹಾರ ಸೇವಿಸುತ್ತಾರೆ, ತರಬೇತಿ ಹೊಂದುತ್ತಾರೆ, ಮತ್ತು ಹೋರಾಟ ನಡೆಸುತ್ತಾರೆ ಎನ್ನುವುದನ್ನು ಕಲಿಯಲಿದ್ದಾರೆ. ಇದೇ ವೇಳೆ, ಫ್ರೆಂಚ್ ಸೇನಾಧಿಕಾರಿಗಳು ಭಾರತದ ಮಿಲಿಟರಿ ಘಟಕಗಳಲ್ಲಿ ನಿಯೋಜನೆಗೊಳ್ಳಲಿದ್ದಾರೆ. ಅವರು ನಮ್ಮೊಡನೆ ವಾಸಿಸುತ್ತಾ, ನಮ್ಮ ಕಾರ್ಯತಂತ್ರಗಳನ್ನು ಕಲಿತು, ನಮ್ಮ ಭೂ ಪ್ರದೇಶಗಳನ್ನು ಅರ್ಥ ಮಾಡಿಕೊಂಡು, ತಮ್ಮ ಪ್ರಾವೀಣ್ಯತೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಉಭಯ ದೇಶಗಳ ನಡುವಿನ ನಂಬಿಕೆಯ ಅತಿದೊಡ್ಡ ಸಂಕೇತವಾಗಿದೆ. ಪರಸ್ಪರ ಗರಿಷ್ಠ ನಂಬಿಕೆ ಹೊಂದಿರುವ ದೇಶಗಳು ಮಾತ್ರವೇ ಇಂತಹ ನಿಯೋಜನೆ ನಡೆಸಲು ಸಾಧ್ಯ.

ಭಾರತ ಈ ಮೂಲಕ ಜಗತ್ತಿಗೆ ತಾನು ಕೇವಲ ರಕ್ಷಣಾ ಉಪಕರಣಗಳ ಖರೀದಿಗೆ ಸೀಮಿತವಾಗಿಲ್ಲ, ಬದಲಿಗೆ ಅವುಗಳನ್ನು ನಾವು ನಮ್ಮ ನಂಬಿಕಸ್ಥ ಸಹಯೋಗಿಗಳೊಡನೆ ನಮಗಾಗಿ ನಿರ್ಮಿಸುತ್ತಿದ್ದೇವೆ ಎಂಬ ಸಂದೇಶವನ್ನೂ ರವಾನಿಸಿದೆ. ಭಾರತ ಅವಲಂಬನೆಯಿಂದ ಸ್ವಾವಲಂಬನೆಯತ್ತ ಸಾಗುತ್ತಿದ್ದು, ಈ ಕ್ರಾಂತಿ ಕರ್ನಾಟಕದಿಂದಲೇ ಆರಂಭಗೊಳ್ಳುತ್ತಿದೆ.

ಹೆಲಿಕಾಪ್ಟರ್ ವಿಶೇಷತೆ

ಇನ್ನು ಎಚ್ 125 ಹೆಲಿಕಾಪ್ಟರ್ ಲೈಟ್ ಯುಟಿಲಿಟಿ ಹೆಲಿಕಾಪ್ಟರ್ ಆಗಿದ್ದು, ರಕ್ಷಣಾ ಕಾರ್ಯಾಚರಣೆಗಳು, ತುರ್ತು ವೈದ್ಯಕೀಯ ಸಾಗಾಣಿಕೆ, ಮತ್ತು ವಿಪತ್ತು ಪರಿಹಾರ ಸೇವೆಗಳಿಗೆ ಬಳಕೆಯಾಗಲಿದೆ. ಏರ್‌ಬಸ್ ಎಚ್–125 ಇಬ್ಬರು ಪೈಲಟ್‌ಗಳು ಮತ್ತು ಆರು ಜನ ಪ್ರಯಾಣಿಕರು ಪ್ರಯಾಣಿಸಬಹುದು. 1,075 ಕೆ.ಜಿ.ಯಷ್ಟು ತೂಕವನ್ನು ಸಾಗಿಸಬಲ್ಲದು. ಎಲ್ಲಕ್ಕಿಂತ ಮುಖ್ಯವಾಗಿ, ಎಚ್–125 ಮೌಂಟ್ ಎವರೆಸ್ಟ್ ಶಿಖರದ ಮೇಲಿಳಿದ ಏಕೈಕ ಹೆಲಿಕಾಪ್ಟರ್ ಆಗಿದ್ದು, ಅತ್ಯಂತ ಎತ್ತರದಲ್ಲಿ, ತೀವ್ರ ಹವಾಮಾನದಲ್ಲಿ ಕಾರ್ಯಾಚರಿಸುವ ಸಾಮರ್ಥ್ಯ ಪ್ರದರ್ಶಿಸಿದೆ.

ಇದು ಕಠಿಣ ಸನ್ನಿವೇಶಗಳಲ್ಲೂ ಕಾರ್ಯಾಚರಿಸಬಲ್ಲದಾಗಿದ್ದು, ವೈಮಾನಿಕ ಕಾರ್ಯ, ಅಗ್ನಿಶಾಮಕ, ಕಾನೂನು ಜಾರಿ, ರಕ್ಷಣೆ, ವಾಯು ಆಂಬುಲೆನ್ಸ್, ಮತ್ತು ಪ್ರಯಾಣಿಕರ ಸಂಚಾರಕ್ಕೂ ಬಳಕೆಯಾಗಲಿದೆ. ಭಾರತ ಇವುಗಳನ್ನು ವೇಮಗಲ್‌ನಲ್ಲಿ ನಿರ್ಮಿಸಲಿದ್ದು, ಎಚ್–125ನ ಹೆಚ್ಚಿನ ಎತ್ತರದ ಕಾರ್ಯಕ್ಷಮತೆಯು ಹೆಚ್ಚಿನ ಹಗುರ ಹೆಲಿಕಾಪ್ಟರ್‌ಗಳಿಗಿಂತ ಇದನ್ನು ಪ್ರತ್ಯೇಕಿಸುತ್ತದೆ. ಇದು ಬಿಸಿ ಮತ್ತು ಹೆಚ್ಚಿನ ಪರಿಸ್ಥಿತಿಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಲ್ಲದು – ತೆಳುವಾದ ಗಾಳಿ ಮತ್ತು ಹೆಚ್ಚಿನ ತಾಪಮಾನದ ಸಂಯೋಜನೆಯು ಸಾಮಾನ್ಯವಾಗಿ ಹೆಲಿಕಾಪ್ಟರ್ ಲಿಫ್ಟ್ ಅನ್ನು ಕಡಿಮೆ ಮಾಡುತ್ತದೆ. ಈ ಸಾಮರ್ಥ್ಯವು ಹಿಮಾಲಯದಂತಹ ಪರ್ವತ ಪ್ರದೇಶಗಳಿಗೆ ಸೂಕ್ತವಾಗಿದೆ, ಅಲ್ಲಿ ಭಾರತವು ಹೆಚ್ಚಾಗಿ ರಕ್ಷಣಾ, ಗಸ್ತು ಮತ್ತು ಲಾಜಿಸ್ಟಿಕ್ ಕಾರ್ಯಾಚರಣೆಗಳನ್ನು ನಡೆಸುತ್ತದೆ. ಅಂತಹ ಪರಿಸ್ಥಿತಿಗಳಲ್ಲಿ ಲಿಫ್ಟ್ ಮತ್ತು ಶಕ್ತಿಯನ್ನು ಕಾಪಾಡಿಕೊಳ್ಳಲು ಅನೇಕ ಹೆಲಿಕಾಪ್ಟರ್‌ಗಳು ಹೆಣಗಾಡುತ್ತವೆ, ಆದರೆ ಎಚ್–125 ಇವೆಲ್ಲಕಿಂತಲೂ ಭಿನ್ನವಾಗಿದೆ. ಇದು ಯುದ್ಧತಂತ್ರದ ಪ್ರಯೋಜನವನ್ನು ನೀಡುತ್ತದೆ.

ಎಚ್ -125 ಹೆಲಿಕಾಪ್ಟರ್ ಮತ್ತು ಮೌಂಟ್ ಎವರೆಸ್ಟ್ ಸಾಧನೆ

ಮೇ 14, 2005 ರಂದು ಪರೀಕ್ಷಾರ್ಥ ಪೈಲಟ್ ಡಿಡಿಯರ್ ಡೆಲ್ಸಾಲ್ಲೆ ಹೆಲಿಕಾಪ್ಟರ್ ಅನ್ನು ಮೌಂಟ್ ಎವರೆಸ್ಟ್ ಶಿಖರದ (8,848 ಮೀ) ಮೇಲೆ ಮೊದಲ ಬಾರಿಗೆ ಯಶಸ್ವಿಯಾಗಿ ಇಳಿಸಿದ್ದ. ಎಚ್–125 ಎವರೆಸ್ಟ್–ಹತ್ತುವ ಖ್ಯಾತಿ ಗಳಿಸಿತು ಇದು ಇಂದಿಗೂ ಉಳಿದುಕೊಂಡಿರುವ ವಿಶ್ವ ದಾಖಲೆಯಾಗಿದೆ.



20 ವರ್ಷದಲ್ಲಿ 500 ಹೆಲಿಕಾಪ್ಟರ್ ಸಿದ್ಧ

ಫ್ರಾನ್ಸ್ ಮೂಲದ ಏರ್‌ಬಸ್ ಮತ್ತು ಭಾರತದ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್‌ಎಲ್) ಜೊತೆಗೂಡಿ ಅಭಿವೃದ್ಧಿಪಡಿಸಿರುವ ದೇಶದ ಪ್ರಪ್ರಥಮ, ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣೆ ಘಟಕದಲ್ಲಿ ಮುಂದಿನ 20 ವರ್ಷಗಳಲ್ಲಿ ಎಚ್125 ದರ್ಜೆಯ 500 ಲಘು ಹೆಲಿಕಾಪ್ಟರ್ ಸಿದ್ಧವಾಗಲಿವೆ. ಇಲ್ಲಿ ಏವಿಯಾನಿಕ್ಸ್, ಹೈಡ್ರಾಲಿಕ್ ಸರ್ಕ್ಯೂಟ್, ಬಿಡಿಭಾಗಗಳು, ಇಂಧನ ವ್ಯವಸ್ಥೆ ಮತ್ತು ಎಂಜಿನ್‌ಗಳ ತಯಾರಿಕೆ ಸೇರಿದಂತೆ ಹಲವು ಮಹತ್ವದ ಚಟುವಟಿಕೆಗಳು ನಡೆಯಲಿವೆ.

ಮೊದಲ ಹೆಲಿಕಾಪ್ಟರ್ 2027ಕ್ಕೆ

ಮೊದಲ ಭಾರತದಲ್ಲಿ ತಯಾರಿಸಲಾದ ಎಚ್–125 ಹೆಲಿಕಾಪ್ಟರ್‌ಗಳು 2027ರ ಆರಂಭದ ವೇಳೆಗೆ ಬಿಡುಗಡೆಯಾಗುವ ನಿರೀಕ್ಷೆಯಿದೆ. ಆರಂಭಿಕ ಉತ್ಪಾದನಾ ಸಾಮರ್ಥ್ಯವು ವರ್ಷಕ್ಕೆ ಸುಮಾರು 10 ಹೆಲಿಕಾಪ್ಟರ್‌ಗಳಿಗೆ ಯೋಜಿಸಲಾಗಿದೆ, ಅಂತಿಮವಾಗಿ ಪ್ರಾದೇಶಿಕ ಬೇಡಿಕೆಯನ್ನು ಪೂರೈಸಲು ಹೆಚ್ಚಾಗುತ್ತದೆ.

ಏಷ್ಯಾದಲ್ಲಿ ಭಾರತವೇ ಮುಂಚೂಣಿ

ಫ್ರಾನ್ಸ್, ಅಮೆರಿಕ, ಬ್ರೆಜಿಲ್ ನಂತರ ಜಗತ್ತಿನ ನಾಲ್ಕನೆಯ ದೇಶವಾಗಿ ಭಾರತ ಅದರಲ್ಲೂ ಕರ್ನಾಟಕಕ್ಕೆ ಬಂದಿರುವುದು ಹೆಮ್ಮೆಯ ಸಂಗತಿ. ಇದು ಭಾರತ ಹಾಗೂ ಕರ್ನಾಟಕವನ್ನು ಬಾನೆತ್ತರಕ್ಕೆ ಹಾರಿಸುವ ಸಂಗತಿಯಾಗಿದೆ. ಎಚ್–125 ಹೆಲಿಕಾಪ್ಟರ್ ತಯಾರಿಕೆ ಮತ್ತು ಅಂತಿಮ ಜೋಡಣೆ ಘಟಕ ಬಂದಿರುವುದು ಈ ವಲಯಕ್ಕೆ ಮತ್ತಷ್ಟು ಬಲ ತರಲಿದೆ. ಜೊತೆಗೆ ನಿರ್ವಹಣೆ, ದುರಸ್ತಿ ಸ್ಥಾವರವೂ ಆರಂಭಗೊಂಡಿರುವುದು ರಾಜ್ಯದ ಕೈಗಾರಿಕಾ ಸ್ನೇಹಿ ವಾತಾವರಣಕ್ಕೆ ಸಾಕ್ಷಿಯಾಗಿದೆ.

ಸಿಂಗಲ್ ಎಂಜಿನ್ ಕಾಪ್ಟರ್ ಮಾಡಲಿದೆ ಮೋಡಿ

ಭಾರತದಲ್ಲಿ ರಕ್ಷಣಾ ಮತ್ತು ನಾಗರಿಕ ಉದ್ದೇಶದ ಹೆಲಿಕಾಪ್ಟರ್‌ಗಳನ್ನು ತಯಾರಿಸಲು ಖಾಸಗಿ ವಲಯದಲ್ಲಿ ಸ್ಥಾಪನೆಯಾದ ದೇಶದ ಏಕೈಕ ಮತ್ತು ಮೊದಲ ಅಂತಿಮ ಜೋಡಣಾ ಘಟಕ ಇದಾಗಿದೆ. ಈ ಘಟಕದಲ್ಲಿ ತಯಾರಾಗಲಿರುವ ಎಚ್–125 ಹೆಲಿಕಾಪ್ಟರ್, ವಿಶ್ವದ ಅತ್ಯಂತ ಯಶಸ್ವಿ ಸಿಂಗಲ್ ಎಂಜಿನ್ ಹೆಲಿಕಾಪ್ಟರ್ ಎಂದು ಹೆಸರುವಾಸಿಯಾಗಿದೆ. ಇದು ಅತಿ ಎತ್ತರದ ಪ್ರದೇಶಗಳಲ್ಲಿ ಮತ್ತು ಕಠಿಣ ಹವಾಮಾನ ಪರಿಸ್ಥಿತಿಯಲ್ಲೂ ಹಾರಾಟ ನಡೆಸುವ ವಿಶೇಷ ಸಾಮರ್ಥ್ಯವನ್ನು ಹೊಂದಿದೆ.

ಕಿರುಸುದ್ದಿ

ಕಾಸರಗೋಡಿನ ಕಿಮ್ಸ್ ಆಸ್ಪತ್ರೆಗೆ ಧನಂ ಎಕ್ಸಲನ್ಸ್ ಪ್ರಶಸ್ತಿ

ಕಾಸರಗೋಡು: ರಾಜ್ಯಮಟ್ಟದಲ್ಲಿ ಅತ್ಯುತ್ತಮ ಮೆಟರ್ನಿಟಿ ಆಸ್ಪತ್ರೆಗಿರುವ 'ಧನಂ ಎಕ್ಸಲನ್ಸ್' ಪ್ರಶಸ್ತಿಯು ಕಾಸರಗೋಡಿನ ಕಿಮ್ಸ್ ಆಸ್ಪತ್ರೆಗೆ ಲಭಿಸಿದೆ ಎಂದು ಆಸ್ಪತ್ರೆಯ ಮೆಡಿಕಲ್ ಸುಪ್ರಂಟೆಂಡೆಂಟ್ ಡಾ.ಉಷಾ ಮೆನನ್ ಮಂಗಳವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಆರೋಗ್ಯ ಕ್ಷೇತ್ರದ ಅತ್ಯುತ್ತಮ ಚಟುವಟಿಕೆಗಳನ್ನು ಪರಿಗಣಿಸಿ ಕಿಮ್ಸ್ ಆಸ್ಪತ್ರೆಗೆ ರಾಜ್ಯಮಟ್ಟದ ಈ ಅಂಗೀಕಾರ ಲಭಿಸಿದೆ. ಮಾತೃ – ಶಿಶು ಸಂರಕ್ಷಣೆ ಕ್ಷೇತ್ರದ ಈ ಅಂಗೀಕಾರದೊಂದಿಗೆ ಈ ಆಸ್ಪತ್ರೆಯಲ್ಲಿ 'ವೀನಸ್ ಫಸ್ಟ್ ಮದರ್ ಫೌಂಡೇಶನ್' ಎಂಬ ಯೋಜನೆಗೂ ಚಾಲನೆ ನೀಡಲಾಗಿದೆ. ಡಾ.ಉಷಾ ಮೆನನ್ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿರುವ ಸಮಗ್ರ ಹೆರಿಗೆ ನಂತರದ ಪರಿಪಾಲನಾ ವ್ಯವಸ್ಥೆಯು ಶೀಘ್ರದಲ್ಲೇ ಕಾರ್ಯಾರಂಭಗೊಳ್ಳುವುದು. ಗೈನೋಕಾಲಜಿ, ಪೀಡಿಯಾಟ್ರಿಕ್ಸ್ ವಿಭಾಗಗಳನ್ನು ಸಂಯೋಜಿಸಿ ಈ ಘಟಕ ಕಾರ್ಯಾಚರಿಸಲಿದೆ. ಇಲ್ಲಿ ಕೌನ್ಸಿಲಿಂಗ್ (ಸೈಕಾಲಜಿ)ಗೆ ಪ್ರತ್ಯೇಕ ಪ್ಯಾಕೇಜ್ ಕೂಡಾ ಏರ್ಪಡಿಸಲಾಗುವುದು ಎಂದು ಅವರು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಶಾದಿಯಾ ರಜಾಕ್, ಪ್ರೇಮ್ ಆರ್. ನಾಯರ್, ಕೆ.ರಾಜೇಶ್ವರಿ ಉಪಸ್ಥಿತರಿದ್ದರು.

ಮಂಗಳೂರು ಏರ್‌ಪೋರ್ಟ್‌ಗೆ ಪ್ರಶಸ್ತಿ



ಮಂಗಳೂರು: ಅತ್ಯುತ್ತಮ ಕಸ್ಟೋಡಿಯನ್‌ಶಿಪ್ ಪ್ರಶಸ್ತಿಯನ್ನು ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪಡೆದುಕೊಂಡಿದೆ. ಅಂತಾರಾಷ್ಟ್ರೀಯ ಕಸ್ಟಮ್ಸ್ ದಿನಾಚರಣೆ (ಐಸಿಡಿ) ಸಂದರ್ಭದಲ್ಲಿ ಈ ಪ್ರಶಸ್ತಿಯನ್ನು ವಿತರಿಸಲಾಯಿತು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಎಂ ಮೋಹನ್ ಆಳ್ವ ಅವರು ಪಣಂಬೂರಿನ ವ್ಯವಹಾರ ಅಭಿವೃದ್ಧಿ ಕೇಂದ್ರದಲ್ಲಿ ಮಂಗಳೂರು ಕಸ್ಟಮ್ಸ್ ಆಯುಕ್ತರಾದ ಪಿ ವಿನಿತಾ ಶೇಖರ್ ಅವರ ಸಮ್ಮುಖದಲ್ಲಿ ನಡೆದ ಐಸಿಡಿ 2026 ಸಮಾರಂಭದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಉತ್ತಮ ಕಾರ್ಯಕ್ಷಮತೆಯ ಆಮದುದಾರ/ರಫ್ತುದಾರ, ಅತ್ಯುತ್ತಮ ಕಸ್ಟೋಡಿಯನ್, ಅತ್ಯುತ್ತಮ ಕಸ್ಟಮ್ಸ್ ಬ್ರೋಕರ್ ಮತ್ತು ಅತ್ಯುತ್ತಮ ಸ್ಟೀಮರ್ ಏಜೆಂಟ್‌ಗಳನ್ನು ಒಳಗೊಂಡ ವ್ಯಾಪಾರ/ಪಾಲುದಾರರ ವಿಭಾಗದ ಪ್ರತಿನಿಧಿಗಳಲ್ಲಿ ಪ್ರಶಸ್ತಿಯನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಬೆಂಗಳೂರು ವಲಯದ 16 ಕಸ್ಟಮ್ಸ್ ಅಧಿಕಾರಿಗಳು ಸಹ ಸಮ್ಮಾನ್ ಪತ್ರ/ಪ್ರಶಂಸಾ ಪ್ರಮಾಣಪತ್ರವನ್ನು ಪಡೆದರು.

ಟಿಪ್ಪರ್‌ಗಳಿಂದ ಬ್ಯಾಟರಿ ಕಳವು

ವಿಟ್ಲ: ಕುದ್ದುಪದವು ಅರ್ಥ್ ಮೂವರ್ ಕಚೇರಿ ಮುಂಭಾಗದಲ್ಲಿ ನಿಲ್ಲಿಸಿದ ಎರಡು ಟಿಪ್ಪರ್‌ಗಳಿಂದ ಮೂರು ಬ್ಯಾಟರಿಗಳಿಂದ ಕಳುವುಗೈಯ್ಯಲಾಗಿದೆ. ಕೆಲಸ ಮುಗಿಸಿಕೊಂಡು ಬಂದು ಹಿಟಾಚಿ ತುಂಬಿದ ನಿಲ್ಲಿಸಿದಲ್ಲಿಂದ ಬ್ಯಾಟರಿ ತೆಗೆಯಲಾಗಿದೆ. ಸುಮಾರು ರೂ.45 ಸಾವಿರ ನಷ್ಟ ಸಂಭವಿಸಿದ ಬಗ್ಗೆ ಶ್ರೇಯಸ್ ಅವರು ನೀಡಿದ ದೂರಿನ ಪ್ರಕಾರ ವಿಟ್ಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೆಲವು ದಿನಗಳ ಹಿಂದೆ ಕಾಶಿಮಠ ಭಾಗದಲ್ಲಿ ನಿಲ್ಲಿಸಿದ ಲಾರಿಯಿಂದ ಬ್ಯಾಟರಿ ಕಳವು ಮಾಡಿದ ಬಗ್ಗೆ ಪ್ರಕರಣ ದಾಖಲಾಗಿತ್ತು.

ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ರಚನೆ

ಮಂಗಳೂರು: ಬಿಸಿರೋಡ್‌ನ ಸ್ಪರ್ಶ ಕಲಾಮಂದಿರದಲ್ಲಿ ಮಾ.27 ಹಾಗೂ 28ರಂದು ನಡೆಯಲಿರುವ ದಕ್ಷಿಣ ಕನ್ನಡ ಜಿಲ್ಲಾ 28ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ರಚಿಸಲಾಗಿದೆ ಎಂದು ದ. ಕ. ಜಿಲ್ಲಾ ಕ.ಸಾ.ಪ ಅಧ್ಯಕ್ಷ ಡಾ.ಎಂ.ಪಿ. ಶ್ರೀನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಗೌರವಾಧ್ಯಕ್ಷರಾಗಿ ರಾಜೇಶ್ ನ್ಯಾಕ್ ಯು., ಬಿ. ರಮಾನಾಥ ರೈ, ಅಧ್ಯಕ್ಷರಾಗಿ ಬಿ.ರಘುನಾಥ ಸೋಮಯಾಜಿ ಎರಕಳ, ಕಾರ್ಯಾಧ್ಯಕ್ಷರಾಗಿ ಪಿಯೂಷ್ ಎಲ್ .ರೋಡ್ರಿಗಸ್, ಉಪಾಧ್ಯಕ್ಷರಾಗಿ ಭುವನೇಶ್ ಪಚ್ಚಿನಡ್ಕ, ಪ್ರಕಾಶ್ ಕಾರಂತ, ಸುದರ್ಶನ್ ಜೈನ್, ಕೆಯ್ಯೂರು ನಾರಾಯಣ ಭಟ್, ಜಗನ್ನಾಥ ಚೌಟ ಬದಿಗುಡ್ಡೆ, ಉಮೇಶ್ ಸಾಲಿಯಾನ್ ಬೆಂಜನಪದವು, ಚಂದ್ರಪ್ರಕಾಶ ಶೆಟ್ಟಿ ತುಂಬೆ, ಪದ್ಮಶೇಖರ ಜೈನ್, ತುಳಸಿ ಪುರಂದರ, ಪ್ರಧಾನ ಕಾರ್ಯದರ್ಶಿಯಾಗಿ ಅಬೂಬಕ್ಕರ್ ಅಮ್ಮುಂಜೆ, ಕಾರ್ಯದರ್ಶಿಯಾಗಿ ದೇವಪ್ಪ ಕುಲಾಲ್, ಚಂದ್ರಹಾಸ ಶೆಟ್ಟಿ ಮಂಗಳೂರು, ರಾಮದಾಸ ಬಂಟ್ವಾಳ, ಕೋಶಾಧಿಕಾರಿಯಾಗಿ ಸುಭಾಶ್ಚಂದ್ರ ಜೈನ್, ಸಂಚಾಲಕರಾಗಿ ವಿಶ್ವನಾಥ ಬಂಟ್ವಾಳ ಆಯ್ಕೆಯಾಗಿದ್ದಾರೆ. ಇದರ ಜತೆಗೆ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ವಿವಿಧ ಸಮಿತಿ ಸಂಚಾಲಕರು ಹಾಗೂ ಸದಸ್ಯರನ್ನು ಸೇರಿಸಿ ವಿಸ್ತೃತ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.



ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಶ್ಯಾಂ ಭಟ್ ಹಾಗೂ ಸದಸ್ಯ ಎಸ್.ಕೆ. ವೆಂಟಗೋಡಿ ಅವರು ವೆನ್ ಲಾಕ್ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿದರು. ಆಸ್ಪತ್ರೆಯ ವಾರ್ಡ್ ಹಾಗೂ ಆಸ್ಪತ್ರೆ ಇನ್ನಿತರ ವಿಭಾಗಗಳಿಗೆ ಭೇಟಿ ನೀಡಿ ರೋಗಿಗಳೊಂದಿಗೆ ಸಮಾಲೋಚನೆ ನಡೆಸಿದರು. ರೋಗಿಗಳು ಚಿಕಿತ್ಸೆಯ ಬಗ್ಗೆ ಯಾವುದೇ ದೂರು ವ್ಯಕ್ತಪಡಿಸಿಲ್ಲ, ಒಟ್ಟಾರೆಯಾಗಿ ಜಿಲ್ಲಾ ಆಸ್ಪತ್ರೆಯ ಭೇಟಿಯು ತೃಪ್ತಿದಾಯಕವಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಜೆಇಇ ಮೈನ್ಸ್ ಪರೀಕ್ಷೆ | ಹೆಮ್ಮಾಡಿ ಜನತಾ ಪಿಯು ಕಾಲೇಜು

ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಸಾಧನೆ

ಹೆಮ್ಮಾಡಿ: ಕೇಂದ್ರ ಸರಕಾರದ ಎನ್ ಟಿ ಎ ಪ್ರಾಧಿಕಾರವು ನಡೆಸುವ ರಾಷ್ಟ್ರ ಮಟ್ಟದ ಜೆಇಇ ಮೈನ್ಸ್ 2026ರ ಪರೀಕ್ಷೆಯಲ್ಲಿ ಹೆಮ್ಮಾಡಿಯ ಜನತಾ ಪಿಯು ಕಾಲೇಜಿನ ವಿದ್ಯಾರ್ಥಿಗಳು ಬೈಂದೂರು, ಕುಂದಾಪುರ ತಾಲ್ಲೂಕಿನಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳಾದ ಧೀರಜ್ ಜಿ.ಡಿ 99.3604 ಪರ್ಸಂಟೈಲ್, ಮಾನ್ಯ ಪೂಜಾರಿ 98.6832 ಪರ್ಸಂಟೈಲ್, ಶ್ರೇಯಸ್ ಪಿ. ಗಾಣಿಗ 98.4693 ಪರ್ಸಂಟೈಲ್, ಶ್ರೀರಾಮ್ ಪಿ. ಭಟ್ 97.4402 ಪರ್ಸಂಟೈಲ್, ಶ್ರೀಧಾನ್ ಎಂ. ಶೆಟ್ಟಿ 97.5834 ಪರ್ಸಂಟೈಲ್, ನಹುಷ್ ಚಂದ್ರ ಬಿಲ್ಲವ 96.1127 ಪರ್ಸಂಟೈಲ್ , ಆಯುಷ್ ಯು. ಮೆಂಡನ್ 96.1817 ಪರ್ಸಂಟೈಲ್ ಅಂಕಗಳಿಸಿ ಸಾಧನೆ ಮೆರೆದಿದ್ದಾರೆ.

ಉಪನ್ಯಾಸಕರ ಸತತ ಮಾರ್ಗದರ್ಶನ

ಗ್ರಾಮೀಣ ಭಾಗವಾದ ಹೆಮ್ಮಾಡಿ, ಬೈಂದೂರು, ಕುಂದಾಪುರದ ಅನೇಕ ವಿದ್ಯಾರ್ಥಿಗಳು ಜೆಇಇ ಮೈನ್ಸ್ ಪರೀಕ್ಷೆಗೆ ತರಬೇತಿ ಪಡೆಯಲು ದೂರದ ಕಾರ್ಕಳ, ಮಂಗಳೂರಿಗೆ ತೆರಳಬೇಕಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕುಂದಾಪುರ ಭಾಗದ ಪ್ರತಿಷ್ಠಿತ ಸಂಸ್ಥೆಯಾದ ಜನತಾ ಪಿಯು ಕಾಲೇಜಿನಲ್ಲಿ ನುರಿತ ಉಪನ್ಯಾಸಕರ ಸತತ ಮಾರ್ಗದರ್ಶನದಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲೂ ಇಂತಹ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯುತ್ತೇವೆ ಎಂಬ ಆತ್ಮವಿಶ್ವಾಸವನ್ನು ಜನತಾ ವಿದ್ಯಾಸಂಸ್ಥೆ ಮೂಡಿಸಿದೆ.



ಮೆಸ್ಕಾಂ ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ಸಾರ್ವಜನಿಕರ ಆಗ್ರಹ

ವಿದ್ಯುತ್ ದರದ ಏರಿಕೆ ಬೇಡ; ದುಂದುವೆಚ್ಚ ಕಡಿವಾಣವಾಗಲಿ

ಮಂಗಳೂರು: ಪ್ರತಿ ಬಾರಿ ಮೆಸ್ಕಾಂ ವಿದ್ಯುತ್ ದರ ಏರಿಕೆ ಮೂಲಕ ಗ್ರಾಹಕರಿಗೆ ಹೊರೆ ಹೊರಿಸುತ್ತಿದೆ. ಆದರೆ ಈ ಬಾರಿ ಯಾವುದೇ ಕಾರಣಕ್ಕೂ ದರ ಏರಿಸಬಾರದು. ಇದರ ಬದಲಾಗಿ ದುಂದು ವೆಚ್ಚಗಳಿಗೆ ಕಡಿವಾಣ ಬೀಳುವಂತಾಗಲಿ ಎಂಬ ಆಗ್ರಹ ಗ್ರಾಹಕರಿಂದ ಬುಧವಾರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷ ಪಿ.ರವಿ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಮೆಸ್ಕಾಂ ಪ್ರಧಾನ ಕಚೇರಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಿಂದ ನಡೆದ ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ವ್ಯಕ್ತವಾಯಿತು.

ಮೆಸ್ಕಾಂನ 2024–25ನೇ ಸಾಲಿನ ವಾರ್ಷಿಕ ಪುನರ್ ಪರಿಶೀಲನಾ ಅರ್ಜಿಯ ಕುರಿತು ಈ ವಿಚಾರಣೆ ನಡೆಯಿತು.

ಮೆಸ್ಕಾಂನ ದರ ಏರಿಕೆಯ ಪ್ರಸ್ತಾವ ಹಾಗೂ ಸಾರ್ವಜನಿಕರ ಬೇಡಿಕೆಯನ್ನು ಆಲಿಸಿದ ಆಯೋಗದ ಅಧ್ಯಕ್ಷ ಪಿ.ರವಿಕುಮಾರ್ ಮಾತನಾಡಿ, ಗ್ರಾಹಕರು ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಎಲ್ಲವನ್ನು ಪರಿಶೀಲಿಸಲಾಗುವುದು. ಉಳಿದ ಎಸ್ಕಾಂಗಳಿಗೆ ಹೋಲಿಸಿದರೆ ಮೆಸ್ಕಾಂ ಉತ್ತಮ ಸಾಧನೆ ಮಾಡಿದೆ. ಈ ಬಾರಿ ದರ ಪರಿಷ್ಕರಣೆ ಇಲ್ಲ. ನಷ್ಟದ ಬಗ್ಗೆ ಮೆಸ್ಕಾಂ ಪ್ರಸ್ತಾವವನ್ನು ಪರಿಶೀಲಿಸಲಾಗುವುದು ಎಂದರು.

ಆರಂಭದಲ್ಲಿ ವಿಷಯ ಪ್ರಸ್ತಾಪಿಸಿದ ಶಾಸಕ ಆರಗ ಜ್ಞಾನೇಂದ್ರ ಅವರು, ಮೆಸ್ಕಾಂ ದರ ಕಡಿಮೆ ಮಾಡಬೇಕು ಹಾಗೂ ಆಯೋಗವು ಮೆಸ್ಕಾಂನ ಅನಿಯಮಿತ ಚಟುವಟಿಕೆಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಜಿ.ಕೆ.ಭಟ್ ಮಂಗಳೂರು ಮಾತನಾಡಿ, ಮೆಸ್ಕಾಂ ಆಡಳಿತ ವೆಚ್ಚವನ್ನು ಕಡಿಮೆ ಮಾಡಬೇಕು. ದಕ್ಷಿಣ ಭಾರತದ ಕೆಲವು ರಾಜ್ಯದಲ್ಲಿ ವಿದ್ಯುತ್ ದರ ಕಡಿಮೆ ಇದೆ. ಅದೇ ರೀತಿ ಇಲ್ಲೂ ಆಗಬೇಕು ಹಾಗೂ ಬೀದಿ ದೀಪ, ಸರಕಾರಿ ಕಚೇರಿ ಸೇರಿದಂತೆ ವಿವಿಧೆಡೆ ಅನಾವಶ್ಯಕವಾಗಿ ವಿದ್ಯುತ್ ನಷ್ಟ ಆಗುವುದನ್ನು ತಪ್ಪಿಸಬೇಕು ಎಂದು ಗಮನಸೆಳೆದರು.

ದರ ಏರಿಕೆಯ ಆಗತ್ಯವಿದೆ: ಜಯಕುಮಾರ್

ಮೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಜಯಕುಮಾರ್ ಆರ್. ಮಾತನಾಡಿ, ಕೆಇಆರ್ ಸಿ ನಿಗದಿ ಮಾಡಿದ ಪ್ರಕಾರ ವಿದ್ಯುತ್ ಖರೀದಿ ದರ 3957 ಕೋ.ರೂ ನಿಗದಿ ಮಾಡಿತ್ತು. ಆದರೆ ಇದು 4477.95 ಕೋ. ರೂಗೆ ಏರಿಕೆ ಆಗಿತ್ತು. ಜತೆಗೆ ಕಾರ್ಯ, ಪಾಲನಾ ವೆಚ್ಚ, ಸವಕಳಿ ಅಧಿಕವಾಗಿ ಸುಮಾರು 83.12 ಕೋ.ರೂ ಕೊರತೆ ಎದುರಿಸುವಂತಾಗಿದೆ. ಇದರ ನಿಭಾವಣೆಗೆ 11ರಿಂದ 12 ಪೈಸೆ ದರ ಏರಿಕೆ ಆಗತ್ಯ ಇದೆ ಎಂದರು.

ಸತ್ಯನಾರಾಯಣ ಉಡುಪ, ಜಗದೀಶ್ ಶರ್ಮ, ಕಾರ್ತಿಕ್, ಕಾರ್ಕಳ ಕಿಸಾನ್ ಸಂಘದ ಚಂದ್ರಹಾಸ ಶೆಟ್ಟಿ, ಶಿವಮೊಗ್ಗದ ಎನ್. ಕುಮಾರ್, ಕೆಸಿಸಿಐನ ಮುದಸ್ಸಿರ್,ಆಲ್ವಿನ್ ಡಿಸೋಜ ಮಾತನಾಡಿದರು.

ಆಯೋಗದ ಸದಸ್ಯ ಎಚ್.ಕೆ.ಜಗದೀಶ್ , ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್ ಉಪಸ್ಥಿತರಿದ್ದರು.



496 ಹೊಸ ಲೈನ್ ಮ್ಯಾನ್‌ಗಳ ನೇಮಕ

496 ಹೊಸ ಲೈನ್ ಮ್ಯಾನ್ ಗಳ ನೇಮಕ ಮಾಡಲಾಗಿದೆ. ಎಲ್ಲರೂ ಕೂಡ ಹೊರ ಜಿಲ್ಲೆಯವರು. ಕರಾವಳಿ ಭಾಗದವರಿಗೆ ಲೈನ್ ಮ್ಯಾನ್ ತರಬೇತಿ ನೀಡಿದರೂ ಬರುತ್ತಿಲ್ಲ. ನೇಮಕವಾದವರಲ್ಲಿ 396 ಮಂದಿ ವರ್ಗಾವಣೆ ಬಯಸಿದ್ದಾರೆ.

■ ಜಯಕುಮಾರ್ ಆರ್, ಮೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ

ನಿಯಮಗಳಿಗೆ ತಿದ್ದುಪಡಿ

ಈಗಾಗಲೇ ವಿದ್ಯುತ್ ಸಂಪರ್ಕದ ನಿಯಮಾವಳಿಗಳನ್ನು ಸರಳೀಕರಣ ಮಾಡಲು ತಿದ್ದುಪಡಿ ಪ್ರಕ್ರಿಯೆ ನಡೆಯುತ್ತಿದೆ. ಗ್ರಾಹಕರಿಂದ ಅಭಿಪ್ರಾಯ ಕೂಡ ಪಡೆಯಲಾಗುತ್ತಿದೆ. ಸದ್ಯ ಕರಡು ರಚನೆ ನಡೆಯುತ್ತಿದೆ. ಕರ್ನಾಟಕದಲ್ಲಿ ಉಚಿತ ವಿದ್ಯುತ್ ಯೋಜನೆ ಜಾರಿಯಲ್ಲಿರುವ ಕಾರಣದಿಂದ ಸೂರ್ಯಘರ್ ರೂಫ್ ಟಾಪ್ ಸೋಲಾರ್ ಯೋಜನೆ ಯಶಸ್ವಿಯಾಗಲಿಲ್ಲ. 200 ಯುನಿಟ್ ವರೆಗೆ ಉಚಿತ ವಿದ್ಯುತ್ ಇರುವ ಕಾರಣದಿಂದ ಸೂರ್ಯಘರ್ ಆರಂಭಕ್ಕೆ ಹೆಚ್ಚಿನ ಗ್ರಾಹಕರು ಇಲ್ಲಿ ಮನಸ್ಸು ಮಾಡುತ್ತಿಲ್ಲ.

■ ಪಿ.ರವಿಕುಮಾರ್, ಆಯೋಗದ ಅಧ್ಯಕ್ಷ

ದರ ಏರಿಕೆಗೆ ಮೆಸ್ಕಾಂ ಪ್ರಸ್ತಾವನೆ

ಮೆಸ್ಕಾಂ ಕಳೆದ ಅವಧಿಯಲ್ಲಿ ಅನುಭವಿಸಿದ 83.12 ಕೋ.ರೂ. ಆದಾಯ ಕೊರತೆಯನ್ನು ಸರಿದೂಗಿಸಲು ಪ್ರತೀ ಯುನಿಟ್‌ಗೆ 11ರಿಂದ 12 ಪೈಸೆ ದರ ಏರಿಕೆ ಮಾಡುವಂತೆ ಮೆಸ್ಕಾಂ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿತು.

ಪಾಠವೂ ಇದೆ, ಕಾಮಗಾರಿಯೂ ಮುಂದುವರೆದಿದೆ

ಶಾಸಕರು ನೀಡಿದ ಭರವಸೆ ನೀರಿನಲ್ಲಿಟ್ಟ ಹೋಮದಂತೆ

ಪುತ್ತೂರು: ಹಳೆಯ ತಾಲೂಕು ಕಚೇರಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪುತ್ತೂರು ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ತರಗತಿ ಬಳಿ ಸರಕಾರಿ ಆಸ್ಪತ್ರೆಗೆ ಸಂಬಂಧಿಸಿದ ಕಟ್ಟಡ ಕಾಮಗಾರಿಗಳಿಂದಾಗಿ ಧೂಳು ತುಂಬಿದ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಯರು ನಡೆಸಿದ ಪ್ರತಿಭಟನೆ ಬಳಿಕದ ಬೆಳವಣಿಗೆಯಲ್ಲಿ, ಶಾಸಕರು ನೀಡಿದ ಭರವಸೆ ನೀರಿನಲ್ಲಿಟ್ಟ ಹೋಮದಂತಾಗಿದೆ.

ಫೆ.16ರಂದು ರಸ್ತೆಗಿಳಿದು ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದಾಗ ಕಾಲೇಜ್ ವಿದ್ಯಾರ್ಥಿನಿಯರಿಗೆ ಸಮಸ್ಯೆಯಾಗದಂತೆ ಸಂಜೆ 5 ಗಂಟೆ ಬಳಿಕ ಕೆಲಸ ಮಾಡುವಂತೆ ಶಾಸಕರು ಗುತ್ತಿಗೆದಾರರಿಗೆ ಸೂಚನೆ ನೀಡಿದ್ದರು. ಆದರೆ, ಫೆ.19ರಂದು ಕೂಡಾ ತರಗತಿ ನಡೆಯುತ್ತಿದ್ದ ಸಂದರ್ಭವೇ ನಿರ್ಮಾಣ ಕೆಲಸ ಕಾರ್ಯ ನಡೆಯುತ್ತಿದೆ. ಉಳಿದ ಕೊಠಡಿಗಳಲ್ಲಿ ಬಾಗಿಲು ಮುಚ್ಚಿ ವಿದ್ಯಾರ್ಥಿನಿಯರಿಗೆ ತರಗತಿ ನಡೆಸಲಾಗುತ್ತಿದೆ.

ಕೊಠಡಿಯೊಳಗೆ ಧೂಳು ತುಂಬಿರುವುದರಿಂದ ತರಗತಿಗಳಲ್ಲಿ ಕುಳಿತುಕೊಳ್ಳಲಾಗುತ್ತಿಲ್ಲ, ಮಾತ್ರವಲ್ಲದೆ ನಮಗೆ ಅನಾರೋಗ್ಯ ಸಮಸ್ಯೆ ಕಾಡುತ್ತಿದೆ, ಜೊತೆಗೆ ಕಟ್ಟಡದ ಅರ್ಧಭಾಗವನ್ನು ಆಸ್ಪತ್ರೆಗೆ ನೀಡಿ ಅಲ್ಲಿ ಡಯಾಲಿಸೀಸ್ ಕೆಲಸಗಳು ನಡೆಯುತ್ತಿರುವುದರಿಂದ ವಾಸನೆಯೂ ಬರುತ್ತಿದೆ ಎಂದು ಹೇಳಿಕೊಂಡು ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದ್ದರು. ಈ ವೇಳೆ ಸ್ಥಳಕ್ಕೆ ಆಗಮಿಸಿದ್ದ ಶಾಸಕ ಅಶೋಕ್ ಕುಮಾರ್ ರೈ ನೀವು ಪ್ರತಿಭಟನೆ ನಿಲ್ಲಿಸಿ ತರಗತಿಗಳಿಗೆ ಹಾಜರಾಗಿ ಎಂದು ಶಾಸಕರು ಕೇಳಿಕೊಂಡಿದ್ದರು. ಆದರೆ, ಬುಧವಾರವೂ ಕಟ್ಟಡದ ಕೆಲಸ ಕಾರ್ಯ ನಿರಾತಂಕವಾಗಿ ನಡೆಯುತ್ತಿತ್ತು.



ಧೂಳು ತುಂಬಿದ ಕೊಠಡಿಗೆ ಬೀಗ

ಧೂಳು ತುಂಬಿರುವ ಕೊಠಡಿಗೆ ಬೀಗ ಹಾಕಿ ಪಕ್ಕದ ಕೊಠಡಿಯಲ್ಲಿ ವಿದ್ಯಾರ್ಥಿಗಳು ಸೇರಿಕೊಂಡಿದ್ದಾರೆ. ಅಂತಿಮ ಪದವಿ ವಿದ್ಯಾರ್ಥಿನಿಯರು ಇಂಟರ್ನ್‌ಶಿಪ್‌ಗೆ ತೆರಳಿದ್ದಾರೆ. ಅವರು ಬಂದಾಗ ವಿದ್ಯಾರ್ಥಿಗಳಿಗೆ ಕೊಠಡಿಗಳ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ.

ಏರ್‌ಪೋರ್ಟ್‌ನಲ್ಲಿ ಔಟ್ ಪೋಸ್ಟ್ ಉದ್ಘಾಟಿಸಿದ ಗೃಹಸಚಿವ ಡಾ.ಪರಮೇಶ್ವರ್

ಕಾನೂನು–ಸುವ್ಯವಸ್ಥೆಗೆ ಔಟ್ ಪೋಸ್ಟ್ ಸಹಕಾರಿ

ಮಂಗಳೂರು: ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆರಂಭಿಸಿರುವ ನೂತನ ಔಟ್ ಪೋಸ್ಟ್ ನ್ನು ಮಂಗಳವಾರ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು ಉದ್ಘಾಟಿಸಿದರು.

ವಿಮಾನ ನಿಲ್ದಾಣದ ನಿರ್ಗಮನ ಟೋಲ್ ಗೇಟ್ ಸಮೀಪ ತಂತ್ರಜ್ಞಾನಾತ್ಮಕವಾಗಿ ನಿರ್ಮಿಸಲಾದ ಈ ಪೊಲೀಸ್ ಔಟ್‌ಪೋಸ್ಟ್ ವಿಮಾನ ನಿಲ್ದಾಣದ ಭೂಭಾಗ (ಲ್ಯಾಂಡ್‌ಸೈಡ್) ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶ ಹೊಂದಿದೆ. ಯಾವುದೇ ಕಾನೂನು–ಸುವ್ಯವಸ್ಥೆ ಅಥವಾ ಭದ್ರತಾ ಸನ್ನಿವೇಶ ಉಂಟಾದಲ್ಲಿ ತ್ವರಿತ ಕ್ರಮ ಕೈಗೊಳ್ಳಲು ಇದು ಸಹಕಾರಿಯಾಗಲಿದೆ.

ಒಟ್ಟು 1,650 ಚದರ ಅಡಿ ವಿಸ್ತೀರ್ಣ ಹೊಂದಿರುವ ಈ ಎರಡು ಮಹಡಿ ಕಟ್ಟಡದಲ್ಲಿ ನೆಲ ಮಹಡಿಯಲ್ಲಿ ಹೋಲ್ಡಿಂಗ್ ಸೆಲ್, ಎರಡು ಕಾರ್ಯಕೇಂದ್ರ ಕೊಠಡಿಗಳು ಮತ್ತು ಕಚೇರಿ ವ್ಯವಸ್ಥೆ ಕಲ್ಪಿಸಲಾಗಿದೆ. ದೂರು ಸ್ವೀಕಾರ, ದಾಖಲಾತಿ ಹಾಗೂ ತಕ್ಷಣದ ಮಧ್ಯಪ್ರವೇಶಕ್ಕೆ ಅಗತ್ಯ ಸೌಲಭ್ಯಗಳನ್ನು ಇಲ್ಲಿ ಒದಗಿಸಲಾಗಿದೆ. ಮೊದಲ ಮಹಡಿಯಲ್ಲಿ ವಿಶ್ರಾಂತಿ ಕೊಠಡಿ ಹಾಗೂ ವಿಶೇಷ ಲ್ಯಾಂಡ್‌ಸೈಡ್ ನಿಯಂತ್ರಣ ಕೊಠಡಿ ವ್ಯವಸ್ಥೆ ಮಾಡಲಾಗಿದ್ದು, ಟರ್ಮಿನಲ್ ಹೊರಭಾಗದ ವಾಹನ ಸಂಚಾರ ಮತ್ತು ಸಾರ್ವಜನಿಕ ಚಟುವಟಿಕೆಗಳ ಮೇಲ್ವಿಚಾರಣೆಗೆ ಇದು ನೆರವಾಗಲಿದೆ.



ಶ್ರೀನಿವಾಸ ವಿಶ್ವವಿದ್ಯಾಲಯ, ಶ್ರೀನಿವಾಸ ಸಮೂಹ ಶಿಕ್ಷಣ ಸಂಸ್ಥೆಗಳ ಕುಲಾಧಿಪತಿ

ಡಾ.ಸಿ.ಎ.ಎ.ರಾಘವೇಂದ್ರ ರಾವ್ ಅಸ್ತಂಗತ

ಮಂಗಳೂರು: ಶ್ರೀನಿವಾಸ ವಿಶ್ವವಿದ್ಯಾಲಯ, ಶ್ರೀನಿವಾಸ ಸಮೂಹ ಶಿಕ್ಷಣ ಸಂಸ್ಥೆಗಳ ಕುಲಾಧಿಪತಿ, ಎ. ಶಾಮರಾವ್ ಫೌಂಡೇಶನ್ ಅಧ್ಯಕ್ಷ ಮತ್ತು ದೂರದೃಷ್ಟಿಯ ಧೀಮಂತ ನಾಯಕ ಡಾ. ಸಿ.ಎ. ಎ. ರಾಘವೇಂದ್ರ ರಾವ್ (88) ಅವರು ಫೆ.17ರಂದು ಚೆನ್ನೈನಲ್ಲಿ ಇಹಲೋಕ ತ್ಯಜಿಸಿದ್ದಾರೆ.

1937ರ ಅಕ್ಟೋಬರ್ 16ರಂದು ಉಡುಪಿ ಜಿಲ್ಲೆಯ ಅಡ್ಕ ಗ್ರಾಮದ ದಿ. ಎ. ಶಾಮರಾವ್ ಮತ್ತು ದಿ. ಎ. ಇಂದಿರಮ್ಮ ದಂಪತಿಗೆ ಜನಿಸಿದ ಡಾ. ರಾವ್ ಅವರು ತಮ್ಮ ಜೀವನವನ್ನೆಲ್ಲ ಶಿಕ್ಷಣ, ಆರೋಗ್ಯ, ಆತಿಥ್ಯ, ಹಣಕಾಸು ಮತ್ತು ಸಮಾಜಸೇವೆಗೆ ಸಮರ್ಪಿಸಿದರು. ಅವರ ಅಗಲಿಕೆಯಿಂದ ಕರ್ನಾಟಕದ ವೃತ್ತಿಪರ ಶಿಕ್ಷಣ ಹಾಗೂ ಸಂಸ್ಥಾಪನಾ ನಾಯಕತ್ವದ ಒಂದು ಯುಗ ಅಂತ್ಯಗೊಂಡಂತಾಗಿದೆ.

ವಾಣಿಜ್ಯ ಶಿಕ್ಷಣ ಮತ್ತು ಚಾರ್ಟರ್ಡ್ ಅಕೌಂಟೆನ್ಸಿ ಪೂರ್ಣಗೊಳಿಸಿದ ನಂತರ ಡಾ. ರಾವ್ ಅವರು ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. 1965ರಲ್ಲಿ ಮಂಗಳೂರಿನಲ್ಲಿ ಸ್ವತಂತ್ರ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯನ್ನು ಸ್ಥಾಪಿಸಿ, ಸಣ್ಣ ಮಟ್ಟದಿಂದ ಆರಂಭಿಸಿ ಪ್ರಾಮಾಣಿಕತೆ, ವೃತ್ತಿಪರತೆ ಮತ್ತು ಹಣಕಾಸು ನಿಷ್ಠೆಗೆ ಹೆಸರಾದ ಸಂಸ್ಥೆಯಾಗಿ ಅದನ್ನು ಬೆಳೆಸಿದರು.



ಶಿಕ್ಷಣ, ಆರೋಗ್ಯ ಮತ್ತು ಆತಿಥ್ಯದ ಮಹಾನ್ ಪರಂಪರೆ

ಡಾ. ರಾವ್ ಅವರು 1988ರಲ್ಲಿ ತಮ್ಮ ತಂದೆಯ ಸ್ಮರಣಾರ್ಥ ಎ. ಶಾಮರಾವ್ ಫೌಂಡೇಶನ್‌ನ್ನು ಸ್ಥಾಪಿಸಿದರು. ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಅದು ಶ್ರೀನಿವಾಸ ಶಿಕ್ಷಣ ಸಂಸ್ಥೆಗಳ ಸಮೂಹವಾಗಿ ಬೆಳೆದಿದ್ದು, ವೈದ್ಯಕೀಯ, ಇಂಜಿನಿಯರಿಂಗ್, ನರ್ಸಿಂಗ್, ಫಾರ್ಮಸಿ, ನಿರ್ವಹಣಾ ಅಧ್ಯಯನ, ಹೋಟೆಲ್ ಮ್ಯಾನೇಜ್ಮೆಂಟ್, ಅಲೈಡ್ ಹೆಲ್ತ್ ಸೈನ್ಸ್ ಸೇರಿದಂತೆ ವಿವಿಧ ಪದವಿ, ಸ್ನಾತಕೋತ್ತರ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು ನೀಡುತ್ತಿದೆ.

ನ್ಯಾಕ್ 'ಎ' ಶ್ರೇಣಿಯ ಬಹುಶಾಖಾ ಸಂಸ್ಥೆಯಾಗಿರುವ ಶ್ರೀನಿವಾಸ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿ ಅವರು ಹಲವಾರು ಕ್ಯಾಂಪಸ್‌ಗಳ ವಿಸ್ತರಣೆಗೆ ಮಾರ್ಗದರ್ಶನ ನೀಡಿದರು.

ಆರೋಗ್ಯ ಸೇವೆ ಮತ್ತು ಸಮಾಜ ಸೇವೆ

ಸಮಾಜದ ಕಲ್ಯಾಣದತ್ತ ಗಾಢ ಬದ್ಧತೆಯಿಂದ ಡಾ. ರಾವ್ ಅವರು ಬಹು–ವಿಶೇಷತೆಯ ಶ್ರೀನಿವಾಸ ಆಸ್ಪತ್ರೆಗೆ ಚಾಲನೆ ನೀಡಿದರು. ಈ ಆಸ್ಪತ್ರೆ ಗುಣಮಟ್ಟದ ವೈದ್ಯಕೀಯ ಸೇವೆಗಳನ್ನು ಒದಗಿಸುತ್ತಿದೆ.

ಆತಿಥ್ಯ ವಲಯದಲ್ಲಿ ಸಾಧನೆ

ಡಾ. ರಾವ್ ಅವರು ಮಂಗಳೂರಿನಲ್ಲಿ ಮೂರು ಪ್ರಸಿದ್ಧ ತ್ರಿ–ಸ್ಟಾರ್ ಶಾಕಾಹಾರಿ ಹೋಟೆಲ್‌ಗಳನ್ನು ಸ್ಥಾಪಿಸಿದರು. ಹೋಟೆಲ್ ಶ್ರೀನಿವಾಸ್, ಹೋಟೆಲ್ ಕೃಷ್ಣ ಭವನ, ಹೋಟೆಲ್ ಶ್ರೀನಿವಾಸ್ ಸಾಫ್ರಾನ್. ಈ ಸಂಸ್ಥೆಗಳು ಗುಣಮಟ್ಟ, ಶಿಸ್ತು ಮತ್ತು ಸೇವಾ ಶ್ರೇಷ್ಠತೆಯ ಸಂಕೇತಗಳಾಗಿದ್ದು, ಹೋಟೆಲ್ ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿಗೂ ಸಹಕಾರ ನೀಡುತ್ತಿವೆ.

ಡಾ. ಎ. ರಾಘವೇಂದ್ರ ರಾವ್ ಅವರು ಪತ್ನಿ ವಿಜಯಲಕ್ಷ್ಮಿ ರಾವ್, ಪುತ್ರಿ ಪದ್ಮಿನಿ ರಾವ್, ಪುತ್ರ ಡಾ. ಎ. ಶ್ರೀನಿವಾಸ್ ರಾವ್, ಅಳಿಯ ಡಾ. ಉದಯಕುಮಾರ್ ಮಯ್ಯ, ಸೊಸೆ ಪ್ರೊ. ಇಆರ್. ಮಿತ್ರಾ ಎಸ್. ರಾವ್, ಮೊಮ್ಮಕ್ಕಳಾದ ಡಾ. ಆದಿತ್ಯ ಮಯ್ಯ, ಮೇಘನಾ ಎಸ್. ರಾವ್, ಸಮತಾ ಎಸ್. ರಾವ್, ಈಶಾನ್ ಎಸ್. ರಾವ್ ಹಾಗೂ ಶ್ರೀನಿವಾಸ ವಿಶ್ವವಿದ್ಯಾಲಯ ಕುಟುಂಬದ ಸಾವಿರಾರು ಅಭಿಮಾನಿಗಳನ್ನು ಹಾಗೂ ಬಂಧುಗಳನ್ನು ಅಗಲಿದ್ದಾರೆ.

ಪ್ರಶಸ್ತಿಗಳು ಮತ್ತು ಗೌರವಗಳು

ಶಿಕ್ಷಣ, ವೃತ್ತಿಪರ ಶ್ರೇಷ್ಠತೆ ಮತ್ತು ಸಮಾಜಾಭಿವೃದ್ಧಿಗೆ ನೀಡಿದ ಮಹತ್ವದ ಕೊಡುಗೆಗಾಗಿ ಡಾ. ರಾವ್ ಅವರಿಗೆ ಕರ್ನಾಟಕ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ, ಚಿತ್ರಭಾರತೀ ಪ್ರಶಸ್ತಿ, ಎಸ್‌ಐಆರ್‌ಸಿ ಡೈಮಂಡ್ ಜೂಬಿಲಿ ಪ್ರಶಸ್ತಿ, ಭಾರತ ನಿರ್ಮಾಣ ಪ್ರಶಸ್ತಿಗಳು ಸಂದಿವೆ.



ಕಾಂಗ್ರೆಸ್‌ನಿಂದ ಸಾರ್ವಜನಿಕ ಆಸ್ತಿ ಕಬಳಿಕೆ: ಸಚಿವ ಜೋಶಿ


ಹೊಸದಿಲ್ಲಿ: ನಾಗರಿಕರಿಗೆ ಮೂಲಸೌಕರ್ಯ ಒದಗಿಸಬೇಕಾದ 24ಕ್ಕೂ ಹೆಚ್ಚು ನಿವೇಶನಗಳನ್ನು ಕಾಂಗ್ರೆಸ್ ಕಚೇರಿಗಳಿಗೆ ಬಳಸಲು ಆದೇನು ಕಾಂಗ್ರೆಸ್ ಪಿತ್ರಾರ್ಜಿತ ಆಸ್ತಿಯೇ? ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಕಿಡಿಕಾರಿದ್ದಾರೆ.



ರಾಜ್ಯದಲ್ಲಿ ನಾಗರಿಕ ಸೌಲಭ್ಯದ ನಿವೇಶನಗಳನ್ನು ಕಡಿಮೆ ಬೆಲೆಗೆ, ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕೆ ಹಂಚಿಕೆ ಮಾಡಿರುವುದು ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾ ಚಾರದ ಪರಮಾವಧಿ ಎಂದರು. ಸಾರ್ವಜನಿಕ ಉದ್ಯಾನವನ, ಗ್ರಂಥಾಲಯ, ಆಸ್ಪತ್ರೆಗಳಿಗೆ ಬಳಕೆ ಆಗಬೇಕಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಭೂಮಿಯನ್ನು 'ಕಾಂಗ್ರೆಸ್ ಭವನ್'ಗಳಿಗೆ ಮೀಸಲಿಟ್ಟಿರುವುದು ರಾಜ್ಯದ ಜನತೆಗೆ ಮಾಡಿದ ದ್ರೋಹ ಎಂದು ಖಂಡಿಸಿದ್ದಾರೆ.

ಒಂದೆಡೆ ಬಡವರಿಗೆ ನಿವೇಶನ ನೀಡಲು ಜಾಗವಿಲ್ಲ ಎನ್ನುವ ಈ ಕಾಂಗ್ರೆಸ್ ಸರ್ಕಾರ, ಇನ್ನೊಂದೆಡೆ ತನ್ನ ಪಕ್ಷದ ಕಚೇರಿಗಳಿಗೆ ಬಳಸಿಕೊಳ್ಳುತ್ತಿದೆ. ಈ ಮೂಲಕ ಸಾರ್ವಜನಿಕ ಆಸ್ತಿಯನ್ನು ಕಬಳಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜ್ಯದ ಸಾರ್ವಜನಿಕ ಆಸ್ತಿಯನ್ನು ಕಾಂಗ್ರೆಸ್ ಪಕ್ಷ ತನ್ನ ಪಿತ್ರಾರ್ಜಿತ ಆಸ್ತಿ ಎಂಬಂತೆ ಬಳಸಿಕೊಳ್ಳುತ್ತಿದೆ. ಬಡವರ ಹಿತ ಕಾಯುವ ಬದಲು ಕಾಂಗ್ರೆಸ್ ತನ್ನ ಪಕ್ಷದ ಹಿತಕ್ಕೆ ಸಾರ್ವಜನಿಕ ಆಸ್ತಿಯನ್ನು ಲೂಟಿ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಲೂಟಿ ಹೊಡೆಯುವುದೇ ಕಾಂಗ್ರೆಸ್‌ನ ಮೂಲ ಸಿದ್ಧಾಂತ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಪಕ್ಷದ ಕಚೇರಿಗಳಿಗೆ ಮಾಡಿರುವ ಈ ಅಕ್ರಮ ಹಂಚಿಕೆಯನ್ನು ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಇದನ್ನು ವಾಪಸ್ ಪಡೆಯದಿದ್ದರೆ ಬಿಜೆಪಿ ಹೋರಾಟ ಹಮ್ಮಿಕೊಳ್ಳಲಿದೆ ಎಂದು ಎಚ್ಚರಿಸಿದ್ದಾರೆ.

ರಾಮ ಬಾಣ



ಸಚಿವ ಜಾರ್ಜ್‌ರಿಂದ ಮೃತರ ಕುಟುಂಬಕ್ಕೆ ಪರಿಹಾರ ವಿತರಣೆ

ಬೆಂಗಳೂರು: ಕರ್ತವ್ಯದ ವೇಳೆ ಮಡಿದ ಬೆಸ್ಕಾಂನ ಮೂವರು ಸಿಬ್ಬಂದಿಯ ಕುಟುಂಬಸ್ಥರಿಗೆ ಇಂಧನ ಸಚಿವ ಕೆ.ಜೆ ಜಾರ್ಜ್ ತಲಾ ಒಂದು ಕೋಟಿ ರೂ. ಪರಿಹಾರದ ಚೆಕ್ ವಿತರಿಸಿದರು.

ಬೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ಸಂತ್ರಸ್ತರ ಕುಟುಂಬದವರನ್ನು ಭೇಟಿಯಾಗಿ ಅವರಿಗೆ ವಿಮಾ ಸಹಾಯವಾಗಿ ಚೆಕ್ ವಿತರಿಸಿದರು. ವಿದ್ಯುದಾಘಾತದಲ್ಲಿ ಮೃತಪಟ್ಟ ಗೌರಿಬಿದನೂರು ಉಪವಿಭಾಗದ ಸಹಾಯಕ ಪವರ್‌ಮ್ಯಾನ್ ಉದಯ್ ಕುಮಾರ್ ಅವರ ಪತ್ನಿ ವಿ. ಕೀರ್ತನಾ, ರಸ್ತೆ ಅಪಘಾತಗಳಲ್ಲಿ ಮೃತರಾದ ಗುಡಿಬಂಡೆ ಉಪವಿಭಾಗದ ಪವರ್‌ಮ್ಯಾನ್ ಬಿ.ವಿ. ಮಂಜಪ್ಪ ಅವರ ಪತ್ನಿ ದಾಕ್ಷಾಯಿಣಿ ಹಾಗೂ ಚಿಂತಾಮಣಿ ಉಪವಿಭಾಗದ ಪವರ್‌ಮ್ಯಾನ್ ಅಮರನಾಥ್ ಅವರ ಪತ್ನಿ ಮುನಿರತ್ನಮ್ಮ ಅವರಿಗೆ ಪರಿಹಾರದ ಚೆಕ್ ನೀಡಲಾಯಿತು.

ಇಲಾಖೆಯ ಸಿಬ್ಬಂದಿ, ವಿಶೇಷವಾಗಿ ಲೈನ್‌ಮ್ಯಾನ್‌ಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಅವರಿಗೆ ಅಗತ್ಯ ವೈಯಕ್ತಿಕ ರಕ್ಷಣಾ ಸಾಧನಗಳನ್ನು ಒದಗಿಸಲಾಗುತ್ತದೆ. ಆದರೂ, ಅನಿರೀಕ್ಷಿತ ಘಟನೆಗಳಲ್ಲಿ ಮೃತಪಟ್ಟ ಸಿಬ್ಬಂದಿಯ ಕುಟುಂಬದವರಿಗೆ ನೆರವಿನ ಹಸ್ತ ಚಾಚಲಾಗುತ್ತದೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಸೂಪರ್ ಸ್ಯಾಲರಿ ಅಕೌಂಟ್ ವಿಮಾ ಪ್ರಯೋಜನದಡಿ ಸಂತ್ರಸ್ತರ ಕುಟುಂಬದವರಿಗೆ ಈ ಚೆಕ್ ಹಸ್ತಾಂತರಿಸಲಾಗಿದೆ ಎಂದು ಜಾರ್ಜ್ ತಿಳಿಸಿದರು. ಈ ಸಂದರ್ಭದಲ್ಲಿ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್‌ನ ವ್ಯವಸ್ಥಾಕ ನಿರ್ದೇಶಕ ರಾಮ್ ಪ್ರಸಾತ್ ಮನೋಹರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್. ಶಿವಶಂಕರ ಹಾಗೂ ಹಿರಿಯ ಅಧಿಕಾರಿಗಳು ಇದ್ದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಆರೆಸ್ಸೆಸ್ ಒಂದು ದೆವ್ವ – ಪ್ರಿಯಾಂಕಾ ಖರ್ಗೆ
– ಕೃಷ್ಣ ದೇವತೆಗಳಿಗೆ ದೇವನಾಗಿ ಕಂಡ, ದಾನವರಿಗೆ ದುಷ್ಟನಾಗಿ ಕಾಣಿಸಿದ, ದೃಷ್ಟಿಯಂತೆ ಸೃಷ್ಟಿ!

ದಿನ ಭವಿಷ್ಯ

ಮೇಷ ಸವಾಲಿನ ದಿನ. ವೃತ್ತಿಯಲ್ಲೂ, ವೈಯಕ್ತಿಕವಾಗಿಯೂ ಹೆಚ್ಚು ಹೊಣೆ. ಸಂಬಂಧಕ್ಕೆ ಧಕ್ಕೆ. ಆರ್ಥಿಕ ಹಿಂಜರಿಕೆ. ಖರ್ಚೂ ಹೆಚ್ಚಳ.

ವೃಷಭ ಪೂರೈಸಲಾಗದ ಆಶ್ವಾಸನೆ ನೀಡಿ ಇಕ್ಕಟ್ಟಿಗೆ ಸಿಲುಕುವಿರಿ. ವರ್ಚಸ್ಸಿಗೆ ಧಕ್ಕೆ ತರುವ ಕಾರ್ಯ ಎಸಗದಿರಿ. ಟೀಕೆಗಳಿಗೆ ಎರವಾಗದಂತೆ ವರ್ತಿಸಿ.

ಮಿಥುನ ವೃತ್ತಿಯಲ್ಲಿ ಸಫಲತೆ. ಪರಿಶ್ರಮಕ್ಕೆ ಅಧಿಕ ಫಲ ಪಡೆಯುವಿರಿ. ಹೊಟ್ಟೆ ಕೆಡಿಸುವ ಆಹಾರ ತಿನ್ನದಿರಿ. ಪ್ರೀತಿಯ ಸಂಬಂಧ ಇನ್ನಷ್ಟು ಗಟ್ಟಿಗೊಳ್ಳಲಿದೆ.

ಕಟಕ ಎಂದಿನಂತಲ್ಲದ ಹೊಸತನಕ್ಕೆ ಯತ್ನಿಸುವಿರಿ. ಮನಸ್ಸು ಉಲ್ಲಸಿತಗೊಳಿಸುವ ಪ್ರಸಂಗ ಉಂಟಾದೀತು. ಪ್ರೀತಿಯ ಕ್ಷೇತ್ರದಲ್ಲಿ ಸಫಲತೆ.

ಸಿಂಹ ಪ್ರಗತಿಯ ದಿನ. ಉದ್ಯೋಗದಲ್ಲಿ ಹೊಸ ಅವಕಾಶ. ಏಕಾಂಗಿಗಳಿಗೆ ವೈವಾಹಿಕ ಬಂಧ ಏರ್ಪಡಬಹುದು. ತೃಪ್ತಿಕರ ಆರ್ಥಿಕ ಪ್ರಗತಿ.

ಕನ್ಯಾ ದಂಪತಿಗಳು ತಮ್ಮ ಸಂಬಂಧ ಬಲಪಡಿಸುವ ಕ್ರಮ ತೆಗೆದುಕೊಳ್ಳಬೇಕು. ಸಣ್ಣ ಭೇದವು ಸಂಬಂಧ ಕೆಡಿಸದಿರಲಿ. ಮುಖ್ಯ ಕಾರ್ಯ ಅಪೂರ್ಣ.

ತುಲಾ ವೃತ್ತಿಯಲ್ಲಿ ನಿಮ್ಮ ಕಠಿಣ ದುಡಿಮೆಗೆ ತೃಪ್ತಿಕರ ಫಲಿತಾಂಶ. ಆದರೆ ಕೆಲವು ವಿಷಯಗಳು ಮನಸ್ಸು ಕದಡುತ್ತವೆ. ನಿಮ್ಮ ಮಾತು ತಪ್ಪರ್ಥ ಬಿಂಬಿಸಬಹುದು.

ವೃಶ್ಚಿಕ ವೃತ್ತಿಯಲ್ಲಿ ಸೃಷ್ಟಿಯಾಗಿದ್ದ ಸಮಸ್ಯೆ ಪರಿಹಾರವಾಗಲಿದೆ. ಪ್ರೀತಿಯಲ್ಲಿ ಒಡಕು. ಕ್ಷುಲ್ಲಕ ವಿಷಯವೂ ಮನಸ್ಸು ಕೆಡಿಸಬಹುದು.

ಧನು ಹೊಣೆಗಾರಿಕೆ, ಒತ್ತಡ ಕಡಿಮೆ. ಯಾವುದೋ ವಿಷಯದಲ್ಲಿ ಭಾವುಕರಾಗಿ ನಿರ್ಧಾರ ತಾಳದಿರಿ. ಆದರ ಪ್ರಾಕ್ಟಿಕಲ್ ಆಯಾಮ ಪರಿಶೀಲಿಸಿ.

ಮಕರ ದುಗುಡಕ್ಕೆ ಕಾರಣವಾಗಿದ್ದ ವಿಷಯ ಇಂದು ಇತ್ಯರ್ಥ ಕಾಣಬಹುದು. ಆದರೆ ಸ್ವಲ್ಪ ಮಟ್ಟಿನ ಹಿನ್ನಡೆಯೂ ಉಂಟಾದೀತು.

ಕುಂಭ ಆತ್ಮೀಯ ಸಂಬಂಧಕ್ಕೆ ಹುಳಿ ಹಿಂಡಲು ಕೆಲವರ ಯತ್ನ ನಡೆದೀತು. ನೀವು ಎಚ್ಚರದಿಂದಿರಿ. ವೃತ್ತಿಯಲ್ಲಿ ಪ್ರತಿಕೂಲ ಪರಿಣಾಮ ಎದುರಿಸುವಿರಿ.

ಮೀನ ಒಳಿತು, ಕೆಡಕು ಎರಡನ್ನು ಎದುರಿಸುವಿರಿ. ಉದ್ವಿಗ್ನ ಸ್ಥಿತಿ ಕಾಣುವಿರಿ. ಆದರ ಜತೆಗೇ ಪರಿಹಾರದ ನಿರಾಳತೆಯೂ. ಆರೋಗ್ಯ ಕಾಳಜಿ ವಹಿಸಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ: 2,9,4,7

ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್‌ರಿಂದ ಕಾರ್ಯಕಾರಿಣಿ ಉದ್ಘಾಟನೆ

ಬಿಜೆಪಿ ಕಾರ್ಯಕಾರಿಣಿ ಸಭೆ ಇಂದು

ಬೆಂಗಳೂರು: ಅರಮನೆ ಮೈದಾನದಲ್ಲಿ ಇಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ ನಡೆಯಲಿದ್ದು, ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಕಾರ್ಯಕಾರಿಣಿಯ ಉದ್ಘಾಟನೆ ಮಾಡಲಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್ ಯಡಿಯೂರಪ್ಪ, ಡಿ.ವಿ.ಸದಾನಂದ ಗೌಡ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಸೋಮಣ್ಣ, ಶೋಭಾ ಕರಂದ್ಲಾಜೆ ಸೇರಿದಂತೆ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿ 1,250ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಸಭೆಯಲ್ಲಿ ರಾಜ್ಯದಲ್ಲಿ ಸರ್ಕಾರದ ವಿರುದ್ಧ ಹೋರಾಟ ಮುಂಬರುವ ವಿಧಾನಸಭೆಗಳ ಉಪಚುನಾವಣೆ, ವಿಧಾನಪರಿಷತ್, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸೇರಿದಂತೆ ಜಿಬಿಎ ಚುನಾವಣೆಗಳ ತಯಾರಿ ಬಗ್ಗೆ ಚರ್ಚೆ ನಡೆಯಲಿವೆ. ಅರಮನೆ ಮೈದಾನದ ಗೇಟ್ ನಂ.4ರಲ್ಲಿ ಬುಧವಾರ ಪೂರ್ವಸಿದ್ಧತೆ ಬಗ್ಗೆ ಪರಿಶೀಲಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ರಾಘವೇಂದ್ರ ಅವರು, ಬೆಳಿಗ್ಗೆ 8.30ರಿಂದ ರಾಜ್ಯದ ಮೂಲೆಮೂಲೆಗಳಿಂದ ನಮ್ಮ ಪ್ರತಿನಿಧಿಗಳು ಆಗಮಿಸುತ್ತಾರೆ. ಬೆಳಿಗ್ಗೆ 9.45ಕ್ಕೆ ಧ್ವಜಾರೋಹಣ ನೆರವೇರಲಿದೆ ಎಂದು ವಿವರಿಸಿದರು.

ಬಡವರ ವಿರೋಧಿ, ರೈತ ವಿರೋಧಿ, ಯುವ ಜನತೆಯ ವಿರೋಧಿ ಸರಕಾರವನ್ನು ಬುಡಸಮೇತ ಕಿತ್ತು ಹಾಕುವ ನಿಟ್ಟಿನಲ್ಲಿ ಬಹಳ ಗಂಭೀರ ಚರ್ಚೆಗಳು ನಡೆಯಲಿವೆ ಎಂದು ಹೇಳಿದರು. ನಿರ್ಣಯಗಳನ್ನೂ ನಾವು ಅಂಗೀಕರಿಸಲಿದ್ದೇವೆ ಎಂದು ಪ್ರಕಟಿಸಿದರು.



ಬಿ.ಎಸ್.ಯಡಿಯೂರಪ್ಪಗೆ ಅಭಿನಂದನೆ

ಮಾಜಿ ಸಿಎಂ ಬಿ.ಎಸ್ ಯಡಿಯೂರಪ್ಪ ಅವರು ಸಾರ್ವಜನಿಕ ಜೀವನದಲ್ಲಿ 50 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಪಕ್ಷದ ಎಲ್ಲಾ ಎಲ್ಲ ಹಿರಿಯರ ಸಮ್ಮುಖದಲ್ಲಿ ಅಭಿನಂದನಾ ಕಾರ್ಯಕ್ರಮ ನೆರವೇರಲಿದೆ.

₹1,194 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಬೆಂಗಳೂರು: ಆನ್‌ಲೈನ್ ಗೇಮಿಂಗ್ ವೇದಿಕೆಯಾದ ವಿನ್ಜೋ ಕಂಪನಿಯು ಬಳಕೆದಾರರಿಗೆ ವಂಚಿಸಿರುವ ಆರೋಪದ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಕಾರ್ಯಾಚರಣೆ ನಡೆಸಿ, ಕಂಪನಿಗೆ ಸೇರಿದ ಒಟ್ಟು 1,194 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಈ ಪೈಕಿ ಅಮೆರಿಕ ಮತ್ತು ಸಿಂಗಾಪುರದಲ್ಲಿರುವ ವಿದೇಶಿ ಬ್ಯಾಂಕ್ ಖಾತೆಗಳಲ್ಲಿದ್ದ ಸುಮಾರು 505 ಕೋಟಿ ರೂ. (55.69 ಮಿಲಿಯನ್ ಯುಎಸ್‌ಡಿ) ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈ ವಂಚನೆಯ ಜಾಲವು ಅತ್ಯಂತ ವ್ಯವಸ್ಥಿತವಾಗಿ ನಡೆದಿದ್ದು, ಕಂಪನಿಯ ನಿರ್ದೇಶಕರುಗಳಾದ ಪಾವನ್ ನಂದಾ ಮತ್ತು ಸೌಮ್ಯ ಸಿಂಗ್ ರಾಥೋಡ್ ಅವರು ಅಮೆರಿಕ ಹಾಗೂ ಸಿಂಗಾಪುರದಲ್ಲಿ ಶೆಲ್ ಕಂಪನಿಗಳನ್ನು ಸ್ಥಾಪಿಸಿ, ಭಾರತದಿಂದ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. 2025ರ ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಕಂಪನಿಯ ಕಚೇರಿ ಹಾಗೂ ನಿರ್ದೇಶಕರ ನಿವಾಸಗಳ ಮೇಲೆ ನಡೆದ ದಾಳಿಯ ವೇಳೆ ಇದಕ್ಕೆ ಸಂಬಂಧಿಸಿದ ಸಾಕ್ಷ್ಯಗಳು ಲಭ್ಯವಾಗಿತ್ತು.

ವಿನ್ಜೋ ಕಂಪನಿಯು ಹಣದ ಆಮಿಷವೊಡ್ಡಿ ಆಟಗಾರರನ್ನು ವಂಚಿಸುತ್ತಿತ್ತು. ನೈಜ ಹಣದ ಗೇಮಿಂಗ್ ಅಪ್ಲಿಕೇಶನ್‌ನಲ್ಲಿ ಬಳಕೆದಾರರು ಇತರ ಮನುಷ್ಯರೊಂದಿಗೆ ಆಟವಾಡುತ್ತಿದ್ದಾರೆ ಎಂದು ನಂಬಿಸಿ, ವಾಸ್ತವದಲ್ಲಿ ಅವರ ವಿರುದ್ಧ ಬಾಟ್‌ಗಳು, ಕೃತಕ ಬುದ್ಧಿಮತ್ತೆ ಮತ್ತು ಅಲ್ಗಾರಿದಮ್‌ಗಳನ್ನು ಬಳಸಿ ಆಟ ಆಡಿಸಲಾಗುತ್ತಿತ್ತು.

ಈ ತಂತ್ರದ ಮೂಲಕ ಬಳಕೆದಾರರು ಹಣ ಕಳೆದುಕೊಳ್ಳುವಂತೆ ಮಾಡಿ, ಆ ಹಣವನ್ನು ರೇಕ್ ಕಮಿಷನ್ ರೂಪದಲ್ಲಿ ಕಂಪನಿಯು ತನ್ನ ಆದಾಯವನ್ನಾಗಿ ಪರಿವರ್ತಿಸಿಕೊಳ್ಳುತ್ತಿತ್ತು.

ಬೆಂಗಳೂರು ಕಸದ ಲಾರಿಗಳಿಗೆ ತಡೆ

ಪುಟ ೧➡ ಈ ಎಲ್ಲ ಘಟನೆಯಿಂದ ಕಸ ತುಂಬಿದ ಲಾರಿಗಳು ಭೂ ಭರ್ತಿ ಪ್ರದೇಶದ ಬಳಿ ನಿಂತಿದ್ದು, ಬೆಂಗಳೂರಿನ ನಿತ್ಯದ ಕಸ ವಿಲೇವಾರಿಗೆ ತೊಡಕುಂಟಾಗಿದೆ. ಇದರಿಂದ ಸಿಲಿಕಾನ್ ಸಿಟಿಯಲ್ಲಿ ಕಸದ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ.

ಬಿಜೆಪಿ- ಕಾಂಗ್ರೆಸ್ ವಾಗ್ಯುದ್ಧ: ಬೆಂಗಳೂರಿನ ಕಸದ ಸಮಸ್ಯೆ ರಾಜಕೀಯ ತಿರುವು ಪಡೆದುಕೊಂಡಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಮಾತಿನ ಫೈಟ್ ಜೋರಾಗಿದೆ. ಕಸ ವಿಲೇವಾರಿಗೆ ಅಡ್ಡಿಪಡಿಸುವವರ ಮನೆ, ಕಚೇರಿ ಮುಂದೆ ಕಸ ಸುರಿಯುತ್ತೇವೆ ಎಂದು ಬಿಜೆಪಿ ಶಾಸಕರು, ಮುಖಂಡರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ. ಇನ್ನೊಂದೆಡೆ ಇಂತಹ ಸವಾಲು, ಬೆದರಿಕೆಗಳಿಗೆ ಬಗ್ಗುವುದಿಲ್ಲ ಎಂದು ಬಿಜೆಪಿ ನಾಯಕರು ತಿರಗೇಟು ನೀಡಿದ್ದಾರೆ.

ಬಿಜೆಪಿ ಶಾಸಕರ ಬ್ಲ್ಯಾಕ್‌ಮೇಲ್‌ಗೆ ಬಗ್ಗುವುದಿಲ್ಲ: ಡಿಸಿಎಂ ಡಿಕೆಶಿ

ಪುಟ ೧➡ ಹೀಗೆ ಮಾಡಿದರೆ ಕಸ ಎಲ್ಲಿಗೆ ಹೋಗಬೇಕು? ಕಸವು ಆರ್.ಅಶೋಕ್, ವಿಜಯೇಂದ್ರ ಅಥವಾ ಬಿಜೆಪಿ ಕಚೇರಿಗೆ ಹೋಗಬೇಕಾಗುತ್ತದೆ. ಇವರುಗಳು ಯಾರಿಗೆ ಎಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ತಿರುಗೇಟು: ಡಿ.ಕೆ.ಶಿವಕುಮಾರ್ ಮಾತಿಗೆ ಬಿಜೆಪಿ ನಾಯಕರು ತಿರುಗೇಟು ನೀಡಿದ್ದು, ಸವಾಲು, ಬೆದರಿಕೆಗಳಿಗೆ ಬಗ್ಗುವುದಿಲ್ಲ. ಮೊದಲು ಬೆಂಗಳೂರಿನ ರಸ್ತೆ ಗುಂಡಿ, ಕಸದ ಸಮಸ್ಯೆ ಸೇರಿದಂತೆ ನಗರದ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ನೀಡಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ. ಪ್ರತಿಪಕ್ಷ ನಾಯಕ ಆರ್. ಅಶೋಕ್ ಸರ್ಕಾರದ ವಿರುದ್ಧ ಕಿಡಿಕಾರಿ, ಸರ್ಕಾರವೇ ಒಂದು ಮಾಫಿಯಾ. ಕಸದ ಟೆಂಡರ್‌ನಿಂದ ಎಲ್ಲದಕ್ಕೂ ಕಮಿಷನ್ ಪಡೆಯುತ್ತಿರುವುದರಿಂದ ಸಮಸ್ಯೆ ಎದುರಾಗಿದೆ ಎಂದು ಆರೋಪಿಸಿದ್ದಾರೆ. ಶಾಸಕರಾದ ಎಸ್.ಆರ್.ವಿಶ್ವನಾಥ್, ಧೀರಜ್ ಮುನಿರಾಜು ಸಹ ಆಕ್ರೋಶ ವ್ಯಕ್ತಪಡಿಸಿದ್ದಾರೆ.



> ಗೌರವದಿಂದ ಇದ್ದರೆ ಸರಿ. ಕಸ ವಿಲೇವಾರಿಗೆ ಅಡ್ಡಿಪಡಿಸುವವರು ಶಾಸಕರಾದರೂ ಸರಿ, ಬೇರೆ ಯಾರೇ ಆಗಿದ್ದರೂ ಸಹ ಎಸ್ಮಾ ಕಾಯ್ದೆಯಲ್ಲಿ ಯಾವುದೇ ಕರುಣೆ ಇಲ್ಲದೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಶಾಸಕರ ಮನೆ ಮುಂದೆ ಅಥವಾ ಬಿಜೆಪಿ ಕಚೇರಿ ಎದುರು ಕಸವನ್ನು ತೆಗೆದುಕೊಂಡು ಹೋಗಿ ಹಾಕಬೇಕಾಗುತ್ತದೆ.
>
> ■ **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

ಬಿಜೆಪಿ ಮೇಲುಗೈ ಸಾಧಿಸುವ ಸಾಧ್ಯತೆ

ಪುಟ ೧➡ ಈ ಹಿನ್ನೆಲೆ ಬಿಜೆಪಿ ಸಂಸತ್‌ನ ಮೇಲ್ಮನೆಯಲ್ಲಿ ತನ್ನ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳುವ ನಿರೀಕ್ಷೆಯಲ್ಲಿದೆ. ಇನ್ನು ಹಿಮಾಚಲ ಪ್ರದೇಶ, ತಮಿಳುನಾಡು, ತೆಲಂಗಾಣ ಹಾಗೂ ಪಶ್ಚಿಮ ಬಂಗಾಳದಲ್ಲಿ ವಿರೋಧ ಪಕ್ಷಗಳ ಸರ್ಕಾರವಿದೆ. ಮಹಾರಾಷ್ಟ್ರದಲ್ಲಿ ಏಳು ಸ್ಥಾನಗಳು ಖಾಲಿಯಾಗುತ್ತಿದ್ದು, ವಿರೋಧ ಪಕ್ಷಗಳ ಮಹಾ ಅಭಿವೃದ್ಧಿ ಅಘಾಡಿ (ಎಂವಿಎ) ಒಗ್ಗಟ್ಟಿನಿಂದ ಸ್ಪರ್ಧಿಸಿದರೆ ಒಂದು ಸ್ಥಾನ ಗೆಲ್ಲುವ ಸಾಧ್ಯತೆ ಇದೆ ಎಂದು ರಾಜಕೀಯ ವಲಯಗಳಲ್ಲಿ ಚರ್ಚೆ ನಡೆಯುತ್ತಿದೆ.

ನಿವೃತ್ತಿಯಾಗುತ್ತಿರುವ ಪ್ರಮುಖರು: ಈ ಬಾರಿ ನಿವೃತ್ತಿಯಾಗುತ್ತಿರುವ ಪ್ರಮುಖ ಸಂಸದರಲ್ಲಿ ಶರದ್ ಪವಾರ್(ಎನ್‌ಸಿಪಿ-ಎಸ್‌ಪಿ), ಅಭಿಷೇಕ್ ಮನು ಸಿಂಘ್ವಿ (ಕಾಂಗ್ರೆಸ್), ಸಾಕೇತ್ ಗೋಖಲೆ (ಟಿಎಂಸಿ), ರಾಮದಾಸ್ ಅಠಾವಳೆ(ಆರ್‌ಪಿಐ-ಎ), ಎಂ.ತಂಬಿದುರೈ (ಎಐಎಡಿಎಂಕೆ) ಹಾಗೂ ತಿರುಚ್ಚಿ ಶಿವ (ಡಿಎಂಕೆ) ಸೇರಿದ್ದಾರೆ. ರಾಜ್ಯಸಭೆಯ ಈ ಚುನಾವಣೆಯು ಮುಂದಿನ ರಾಜಕೀಯ ಸಮೀಕರಣಗಳ ಮೇಲೆ ಮಹತ್ವದ ಪರಿಣಾಮ ಬೀರುವ ನಿರೀಕ್ಷೆಯಿದೆ. ಬಿಜೆಪಿ ತನ್ನ ಸಂಘಟನೆ ಮತ್ತು ಮೈತ್ರಿ ಬಲದ ಆಧಾರದ ಮೇಲೆ ಮೇಲ್ಮನೆಯಲ್ಲಿ ಮತ್ತಷ್ಟು ಬಲಿಷ್ಠವಾಗುವತ್ತ ಹೆಜ್ಜೆ ಇಟ್ಟಿದೆ.

ಸವಾಲುಗಳಿಗೆ ಭಾರತ ಪರಿಹಾರ

ಪುಟ ೧➡ ನಾವು ವಿಶ್ವ ನಾಯಕರಾಗಬೇಕೋ ನಾವೆಲ್ಲಾ ರಂಗಗಳಲ್ಲೂ ಪ್ರಬಲರಾಗಬೇಕು. ಸತ್ಯಕ್ಕೆ ಶಕ್ತಿಯ ಬೆಂಬಲವಿದ್ದಾಗಲೇ ಜಗತ್ತು ಇದನ್ನು ನಂಬುತ್ತೆ ಎಂದು ಪ್ರತಿಪಾದಿಸಿದರು.

ಸಂಶೋಧಕರಿಗೆ ಕರೆ: ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಂಶೋಧಕರ ಪಾತ್ರ ನಿರ್ಣಾಯಕ. ಭಾರತದ ದಿಕ್ಕು, ಸ್ಥಿತಿಗತಿಗಳ ಬದಲಿಸುವಲ್ಲಿ ಸಂಶೋಧನೆಗಳು ಮಹತ್ವದ ಪಾತ್ರ ವಹಿಸುತ್ತವೆ. ಸತ್ಯನಿಷ್ಠ ಮಾಹಿತಿಗಳನ್ನು ಬೆಳಕಿಗೆ ತರಲೇಬೇಕು. ಅಜ್ಞಾನದಿಂದ ಭಾರತವನ್ನು ಅರ್ಥೈಸಲಾಗದು ಎಂದ ಭಾಗ್ವತ್, ದೇಶಕ್ಕಾಗಿ ನಿಸ್ವಾರ್ಥದಿಂದ ಪ್ರಯತ್ನಶೀಲರಾಗಲು ಸಂಶೋಧಕರಿಗೆ ಮನವಿ ಮಾಡಿದರು.

ನೀವು ಏನೇ ಸಂಶೋಧನೆ ಮಾಡುವುದಿದ್ದರೂ ತಜ್ಞತೆ, ನಿಖರತೆ, ಶರೀರ, ಮನಸ್ಸು, ಹಣ ಎಲ್ಲವನ್ನೂ ಬಳಸಿ ರಾಷ್ಟ್ರಕ್ಕಾಗಿ ನಿಸ್ವಾರ್ಥದಿಂದ ಮಾಡಿ. ಸಂಘ ಪರಿವಾರದ ಬಗ್ಗೆ ತುಂಬು ಋಣಾತ್ಮಕ ಅಪಪ್ರಚಾರ ನಡೆದಿದೆ. ಈ ಅಪಪ್ರಚಾರಕ್ಕೆ ತೆರೆಹಾಕಬಲ್ಲ ನೈಜ ಸತ್ಯವನ್ನು ನೀವು ಬೆಳಕಿಗೆ ತರಬೇಕೆಂದು ಸಂಶೋಧಕರನ್ನು ಕೋರಿದರು.

ಬ್ರಿಟಿಷರ ಪ್ರಮಾದ ಅಳಿಸಿ ಹಾಕೋಣ: ಶಿಕ್ಷಣ, ಆರೋಗ್ಯ ಮೂಲಭೂತ ಆವಶ್ಯಕತೆಗಳು. ಇವು ವ್ಯಾಪಾರವಾಗಕೂಡದು. ಇವೆರಡೂ ಎಲ್ಲರಿಗೂ ಎಟಕುವಂತಿರಬೇಕು. ಪಾಶ್ಚಾತ್ಯ ರಾಷ್ಟ್ರಗಳು ಭಾರತದ ಶಿಕ್ಷಣ ವ್ಯವಸ್ಥೆಯನ್ನು ವಿರೂಪಗೊಳಿಸಿದರು. ಶಿಕ್ಷಣ ವ್ಯವಸ್ಥೆಯನ್ನು ಪಾಶ್ಚಾತ್ಯರು ಹಾಳುಗೆಡವಿದರು. ನಮ್ಮ ಶಿಕ್ಷಣ ವ್ಯವಸ್ಥೆ ರದ್ದುಗೊಳಿಸಿ ಅವರದೇ ಸ್ವಂತ ವ್ಯವಸ್ಥೆ ಜಾರಿಗೊಳಿಸಿದರು. ಈ ಮೂಲಕ ಕರಿ ಆಂಗ್ಲರನ್ನು ದುಡಿಮೆಗೆ ತಯಾರುಗೊಳಿಸುವುದು ಅವರ ದುರುದ್ದೇಶವಾಗಿತ್ತು. ಬ್ರಿಟಿಷರು ಮಾಡಿಟ್ಟು ಹೋಗಿರುವ ಈ ತಪ್ಪನ್ನು, ಈ ಪ್ರಮಾದವನ್ನು ಶಾಶ್ವತ ಅಳಿಸಿಹಾಕಬೇಕಿದೆ ಎಂದು ಭಾಗ್ವತ್ ಕರೆ ನೀಡಿದರು.

ಸಹನೆ, ಸಂಯಮಗಳ ಬದುಕು ನಮ್ಮದಾಗಿರಲಿ: ಇಂದು ಜಾಗತೀಕರಣವೆಂದರೆ ಮಾರುಕಟ್ಟೆ ಪೈಪೋಟಿ ಎಂದು ಅರ್ಥೈಸಲಾಗಿದೆ. ಇದು ತೀರಾ ಅಪಾಯಕಾರಿ. ನಾವು ವಸುಧೈವ ಕುಟುಂಬಕಮ್ ಚಿಂತನೆಯವರು. ಇಡೀ ಜಗತ್ತೇ ನಮ್ಮ ಕುಟುಂಬ. ಪ್ರತಿಯೊಬ್ಬರೂ ನೆಮ್ಮದಿಯಿಂದಿರಬೇಕು.

ಯಾರಿಗಾದರೂ ನೆಮ್ಮದಿ ಇಲ್ಲವೆಂದಾದರೆ ಇತರರೂ ನೆಮ್ಮದಿಯಿಂದ ಇರಲಾರರು. ಹಾಗಾಗಿ ನಮ್ಮ ಬದುಕು ವ್ಯಾಪಾರ ಮನೋಭಾವದ್ದಾಗಕೂಡದು. ಬದಲಾಗಿ ಸಹನೆ ಸಂಯಮಗಳ ಬದುಕಾಗಬೇಕು. ತಾಳ್ಮೆ ಮತ್ತು ತ್ಯಾಗಗಳ ಬದುಕು ನಮ್ಮ ಸಾಂಸ್ಕೃತಿಕ ಅಸ್ಮಿತೆ ಮತ್ತು ಆತ್ಮಜ್ಞಾನವಾಗಿದೆ ಎಂದರು.

ಹಿಂದು ಸಮಾಜದ ಒಗ್ಗಟ್ಟು ಸಂಘದ ಗುರಿ

ಪುಟ ೧➡ ಆರೆಸ್ಸೆಸ್ ಯಾರ ವಿರೋಧಿಯೂ ಅಲ್ಲ. ಆರೆಸ್ಸೆಸ್‌ಗೆ ಜನಪ್ರಿಯತೆ, ಅಧಿಕಾರ, ಪ್ರಭಾವ ಯಾವುದೂ ಬೇಡ, ಇವ್ಯಾವುದರ ಹಂಗಿಲ್ಲ ಎಂದು ಭಾಗ್ವತ್ ಸ್ಪಷ್ಟಪಡಿಸಿದರು.

ಗಿನ್ನಿಸ್ ದಾಖಲೆ ಬರೆದ ಭಾರತ

ಪುಟ ೧➡ ಇನ್ನಾವ ವೇದಿಕೆಯಲ್ಲ, ದಿಲ್ಲಿಯ ಭಾರತ್ ಮಂಟಪದಲ್ಲಿ ನಡೆಯುತ್ತಿರುವ ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆ 2026ರಲ್ಲಿ ಘಟಿಸಿರುವ ವಿಸ್ಮಯವಿದು ಎಂದು ಕೇಂದ್ರ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಬುಧವಾರ ಈ ಮಾಹಿತಿ ನೀಡಿದ್ದಾರೆ. ಭಾರತ ಎಐ ಮಿಷನ್, ಇಂಟೆಲ್ ಇಂಡಿಯಾ ಸಹಭಾಗಿತ್ವದಲ್ಲಿ ರಾಷ್ಟ್ರವ್ಯಾಪಿ ಎಐ ಹೊಣೆಗಾರಿಕೆ ಪ್ರತಿಜ್ಞಾ ಅಭಿಯಾನಕ್ಕೆ ಫೆ.16ರಂದು ಚಾಲನೆ ನೀಡಿತ್ತು.

ಎಸ್ಟೋನಿಯಾನ-ಕರ್ಝಕಿಸ್ತಾನ ನಾಯಕರ ಜತೆ ಪ್ರಧಾನಿ ಚರ್ಚೆ



ಪುಟ ೧➡ ಅಧ್ಯಕ್ಷ ಕರಿಸ್ ಜಾಗತಿಕ ವ್ಯವಸ್ಥೆಯ ಬದಲಾವಣೆಗಳು ಮತ್ತು ಪ್ರಜಾಪ್ರಭುತ್ವದ ಮೇಲೆ ಹೊಸ ತಂತ್ರಜ್ಞಾನಗಳ ಪರಿಣಾಮಗಳ ಬಗ್ಗೆ ಚರ್ಚೆ ನಡೆದಿದ್ದು, ರಷ್ಯಾದ ಇಂಧನ ಆಮದು ಕಡಿತಗೊಳಿಸಿರುವ ಭಾರತದ ಕ್ರಮವನ್ನು ಸ್ವಾಗತಿಸಿದರು.

ಕರ್ಝಕಿಸ್ತಾನ ಪ್ರಧಾನಿ ಜತೆ ಮಾತುಕತೆ: ಇನ್ನೊಂದೆಡೆ, ಮೋದಿ ಅವರು ಕರ್ಝಕಿಸ್ತಾನದ ಪ್ರಧಾನಿ ಓಲ್ಜಾಸ್ ಬೆಕ್ತೆನೋವ್ ಅವರನ್ನು ಭೇಟಿಯಾಗಿ ಭಾರತ-ಕರ್ಝಕಿಸ್ತಾನ ಪಾಲುದಾರಿಕೆಯನ್ನು ಮತ್ತಷ್ಟು ವಿಸ್ತರಿಸುವ ಬಗ್ಗೆ ಚರ್ಚಿಸಿದರು. ವ್ಯಾಪಾರ, ಇಂಧನ, ಮಹತ್ವದ ಖನಿಜಗಳು, ಅಪರೂಪದ ಭೂಮಿಧಾತುಗಳು, ರಕ್ಷಣಾ, ಸಂಪರ್ಕ ಹಾಗೂ ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಅಪಾರ ಸಹಕಾರ ಸಾಧ್ಯತೆಗಳಿವೆ ಎಂದು ಮೋದಿ ಹೇಳಿದರು.

ಹಿಂದು ಸಮಾಜದ ಏಕತೆ ಅವಶ್ಯ: ಭಾಗ್ವತ್

ಲಕ್ನೋ: ಹಿಂದು ಸಮಾಜದ ಏಕತೆ, ಸಬಲೀಕರಣ ತೀರಾ ಅಗತ್ಯವೆಂದು ಪ್ರತಿಪಾದಿಸಿರುವ ಆರೆಸ್ಸೆಸ್ ಸರಸಂಘಚಾಲಕ್ ಮೋಹನ್ ಭಾಗ್ವತ್, ಹಿಂದು ಸಮಾಜಕ್ಕೆ ಯಾವುದೇ ಬೆದರಿಕೆಗಳಿಲ್ಲದಿದ್ದರೂ ಸದಾ ಜಾಗೃತಾವಸ್ಥೆಯಲ್ಲಿರೋದು ತೀರಾ ಮುಖ್ಯ ಎಂದು ಎಚ್ಚರಿಸಿದ್ದಾರೆ. ಪ್ರತಿ ಹಿಂದು ಕುಟುಂಬಗಳು ಕನಿಷ್ಠ ಮೂವರು ಮಕ್ಕಳನ್ನು ಹೊಂದುವುದು ಕೂಡ ಅವಶ್ಯವೆಂದು ಭಾಗ್ವತ್ ಸಲಹೆಯಿತ್ತಿದ್ದಾರೆ. ಮೂರಕ್ಕಿಂತಲೂ ಕಡಿಮೆ ಸರಾಸರಿ ಸಂತಾನೋತ್ಪತ್ತಿ ದರ ಹೊಂದಿರುವ ಯಾವುದೇ ಸಮಾಜಗಳು ಭವಿಷ್ಯದಲ್ಲಿ ಮಾಯವಾಗುತ್ತವೆ ಎಂದಿದ್ದಾರೆ.

ತಲಕಾಡಲ್ಲಿ ಕಾಡಾನೆ ದಾಳಿಗೆ ರೈತ ಸಾವು

ಪುಟ ೧➡ ಈ ಒಂಟಿ ಸಲಗ ಶಿವನಸಮುದ್ರ, ಸತ್ಯ ಮಂಗಲ ಭಾಗದ ಅರಣ್ಯ ಪ್ರದೇಶದಿಂದ ತಪ್ಪಿಸಿಕೊಂಡು ಬಂದಿರುವ ಸಾಧ್ಯತೆ ಇದೆ ಎಂದು ಅರಣ್ಯಾಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ. ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿನೀಡಿದರೂ ಅವರು ಸಕಾಲಕ್ಕೆ ಬಾರದಿದ್ದರಿಂದಲೇ ಈ ದುರ್ಘಟನೆ ನಡೆದಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾರ್ಯಾಚರಣೆ: ಗ್ರಾಮಸ್ಥರ ಒತ್ತಾಯದ ಬಳಿಕ ಅರಣ್ಯ ಇಲಾಖೆ ಸಿಬ್ಬಂದಿ ಡ್ರೋನ್ ಕ್ಯಾಮರಾ ಬಳಸಿ ಕಾಡಾನೆಯನ್ನು ಪತ್ತೆ ಹಚ್ಚಿ, ಅರಣ್ಯ ಪ್ರದೇಶಕ್ಕೆ ವಾಪಸ್ ಕಳುಹಿಸಲು ಕಾರ್ಯಾಚರಣೆ ಆರಂಭಿಸಿದ್ದಾರೆ.

20 ಲಕ್ಷ ರೂ. ಪರಿಹಾರ: ಕಾಡಾನೆ ದಾಳಿಯಿಂದ ಮೃತಪಟ್ಟ ರೈತನ ಕುಟುಂಬಕ್ಕೆ ಅರಣ್ಯ ಇಲಾಖೆ ವತಿಯಿಂದ 20 ಲಕ್ಷ ರೂ. ಪರಿಹಾರ ನೀಡಲಾಗುವುದು. ಮೊದಲ ಹಂತದಲ್ಲಿ ಈಗಾಗಲೇ 5 ಲಕ್ಷ ರೂ. ಚೆಕ್ ವಿತರಿಸಲಾಗಿದ್ದು, ಉಳಿದ ಹಣವನ್ನು ಮರಣೋತ್ತರ ಪರೀಕ್ಷೆಯ ನಂತರ ನೀಡಲಾಗುವುದು ಎಂದು ಡಿಸಿಎಫ್ ಪರಮೇಶ್ ತಿಳಿಸಿದ್ದಾರೆ.

ಶಾಸಕರ ಪ್ರವಾಸ ಅನುಮಾನ

ಹುಬ್ಬಳ್ಳಿ: ಶಾಸಕರು, ಸಚಿವರು ಸ್ವಂತ ಖರ್ಚಿನಲ್ಲೇ ವಿದೇಶ ಪ್ರವಾಸಕ್ಕೆ ಹೋಗಿರಬಹುದು. ಆದರೆ, ಏಕಾಏಕಿ ಇಷ್ಟೊಂದು ಜನ ವಿದೇಶ ಪ್ರವಾಸಕ್ಕೆ ಹೋಗಿರುವುದು ಆಶ್ಚರ್ಯ. ಇದರಿಂದ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇಲ್ಲ ಎಂಬುದು ಸ್ಪಷ್ಟ ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು. ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ವಂತ ಖರ್ಚಿನಲ್ಲೇ ವಿದೇಶ ಪ್ರವಾಸಕ್ಕೆ ತೆರಳಿದ್ದರೂ ಪ್ರವಾಸದ ಉದ್ದೇಶ ಮಾತ್ರ ಅನುಮಾನ ಮೂಡಿಸುವಂತಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ನಡುವೆ ಸಿಎಂ ಕುರ್ಚಿಗಾಗಿ ಗುದ್ದಾಟ ನಡೆದಿದೆ ಎಂದರು.

ಬಂಡೀಪುರದಲ್ಲಿ ಸಫಾರಿ ಶುರು

ಪುಟ ೧➡ ಹಿಂದಿನ ಮುಖ್ಯ ವನ್ಯಜೀವಿ ಪರಿಪಾಲಕರು ಕಳೆದ ಡಿ.28ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ, ಸರಗೂರು ಗಡಿ ಪ್ರದೇಶಗಳಲ್ಲಿ ಸ್ಥಾಪಿಸಿರುವ ಮಾನವ-ವನ್ಯಜೀವಿ ನಿರ್ವಹಣಾ ಶಿಬಿರಗಳಿಗೂ ಭೇಟಿ ನೀಡಿ ಪರಿಶೀಲಿಸಿದ್ದು, ಸಫಾರಿ ಸ್ಥಗಿತಗೊಳಿಸಿದ ಬಳಿಕ ಹೆಚ್ಚುವರಿ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಳೆದ 2 ತಿಂಗಳಲ್ಲಿ ಯಾವುದೇ ಪ್ರಮುಖ ಅಹಿತಕರ ಘಟನೆಗಳು ನಡೆಯದಿರುವ ಹಿನ್ನೆಲೆಯಲ್ಲಿ ಹಂತಹಂತವಾಗಿ ಸಫಾರಿ ಪುನರಾರಂಭಿಸಬಹುದು ಎಂದು ಶಿಫಾರಸು ಮಾಡಿದ್ದರು ಎಂದು ಸಚಿವರು ಮಾಹಿತಿ ನೀಡಿದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಒಟ್ಟು ವಿಸ್ತೀರ್ಣ 1036 ಚದರ ಕಿ.ಮೀ. ಆಗಿದ್ದು, ಇದರಲ್ಲಿ ಪ್ರವಾಸೋದ್ಯಮ ವಲಯ ಕ್ಷೇತ್ರ ಶೇ.8 ಅಂದರೆ ಕೇವಲ 80 ಚದರ ಕಿ.ಮೀ. ಆಗಿದೆ. ಅದೇ ರೀತಿ ನಾಗರಹೊಳೆಯ ಒಟ್ಟು ವಿಸ್ತೀರ್ಣ 844 ಚದರ ಕಿ.ಮೀ. ಆಗಿದ್ದು, ಪರಿಸರ ಪ್ರವಾಸೋದ್ಯಮ ವಲಯ ಕೇವಲ 63 ಚದರ ಕಿ.ಮೀ. ಅಂದರೆ ಶೇ.7.5 ಮಾತ್ರ. ಹೀಗಾಗಿ ಹುಲಿಗಳು ಕಾಡಿನಿಂದ ನಾಡಿಗೆ ಬರುತ್ತಿರುವುದಕ್ಕೆ ಸಫಾರಿಯೇ ಕಾರಣ ಎಂದು ಹೇಳಲು ಯಾವುದೇ ವೈಜ್ಞಾನಿಕ ಆಧಾರ ಇಲ್ಲ ಎಂದು ಹಿರಿಯ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ ಎಂದರು.

ಸ್ಥಳೀಯ ಅಭಿವೃದ್ಧಿಗೆ ಸಫಾರಿ ಆದಾಯದ 3ನೇ 1 ಭಾಗ

ಪ್ರಸ್ತುತ ಪರಿಸರ ಪ್ರವಾಸೋದ್ಯಮ ಅಂದರೆ ಸಫಾರಿಯಿಂದ ಬರುವ ಒಟ್ಟು ಆದಾಯದ ಮೂರನೇ ಒಂದು ಭಾಗದಷ್ಟು ಹಣವನ್ನು ಅರಣ್ಯದಂಚಿನ ಗ್ರಾಮಗಳ ಸ್ಥಳೀಯ ಸಮುದಾಯದವರಿಗೆ ಕೌಶಲ್ಯ ಅಭಿವೃದ್ಧಿಗಾಗಿ, ಜಾನುವಾರುಗಳಿಗೆ ಮೇವು ಬೆಳೆಸಲು ಮತ್ತು ಪರಿಸರ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸುವ ಷರತ್ತಿನೊಂದಿಗೆ ಆರಂಭಿಸಲು ಮತ್ತು ವನ್ಯಜೀವಿ ಮಾನವ ಸಂಘರ್ಷ ತಡೆಯಲು ಸೂಕ್ತ ಸಿಬ್ಬಂದಿಯನ್ನು ಸೂಕ್ಷ್ಮ ಪ್ರದೇಶಗಳಲ್ಲಿ ನಿಯೋಜಿಸುವ ಷರತ್ತಿನೊಂದಿಗೆ ಸಫಾರಿ ಆರಂಭಿಸಲು ಸಮ್ಮತಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಶೇ.50ರಷ್ಟು ಸಫಾರಿ ವಾಹನ ಬಳಕೆ

ಬಂಡೀಪುರ, ಬಿಆರ್‌ಟಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಮತ್ತು ಮಲೆ ಮಹದೇಶ್ವರ ವನ್ಯಜೀವಿ ಧಾಮದಲ್ಲಿ ಮುಂಚೂಣಿ ಸಿಬ್ಬಂದಿ ಕೊರತೆ ಮತ್ತು ವಾಹನಗಳ ಆಗತ್ಯದ ಬಗ್ಗೆ ಚರ್ಚಿಸಲಾಗಿದ್ದು, ನವೆಂಬರ್ 7ಕ್ಕೆ ಮುನ್ನ ಸಫಾರಿಯಲ್ಲಿ ಬಳಕೆ ಆಗುತ್ತಿದ್ದ ವಾಹನಗಳ ಪೈಕಿ ಪ್ರಥಮ ಹಂತದಲ್ಲಿ ಶೇ.50ರಷ್ಟು ವಾಹನಗಳನ್ನು ಮಾತ್ರವೇ ಬಳಕೆ ಮಾಡಲು ನಿರ್ಧರಿಸಲಾಗಿದೆ. ಉಳಿದ ಶೇ.50ರಷ್ಟು ವಾಹನ ಮತ್ತು ಸಿಬ್ಬಂದಿಯನ್ನು ಅರಣ್ಯದಂಚಿನ ಗ್ರಾಮಗಳ ಬಳಿ ಗಸ್ತು ಹೆಚ್ಚಿಸಲು ಬಳಸುವ ಮೂಲಕ ವನ್ಯಮೃಗಗಳು ನಾಡಿಗೆ ಬಾರದಂತೆ ತಡೆಯಲು ಸೂಚಿಸಲಾಗಿದೆ.

ಇಂದು ಸಾರಿಗೆ ಮುಷ್ಕರ, ಇರಲಿದೆ ಬಸ್ ಸಂಚಾರ

ಪುಟ ೧➡ 38 ತಿಂಗಳ ಹಿಂಬಾಕಿ ವೇತನ ಪಾವತಿ ಬೇಡಿಕೆ ಸಂಬಂಧ 2020 ಜ.1ರಿಂದ 2023 ಫೆ.28 ಅವಧಿಗೆ 14 ತಿಂಗಳವರೆಗಿನ ಹಿಂಬಾಕಿವೇತನ ನೀಡಲು ಒಪ್ಪಿಗೆ ನೀಡಿ, ಇದಕ್ಕೆ ತಗಲುವ ವೆಚ್ಚ 718.93 ಕೋಟಿ ರೂ. ವಿಶೇಷ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಲಿದೆ. 38 ತಿಂಗಳ ಹಿಂಬಾಕಿ ಪೈಕಿ ಉಳಿದ 24 ತಿಂಗಳಲ್ಲಿ 2020 ಜ.1ರಿಂದ 2020 ಡಿ.30ರವರೆಗೆ 12 ತಿಂಗಳ ವೇತನ ಹಿಂಬಾಕಿ ಮೊತ್ತ 520.54 ಕೋಟಿ ರೂ. ವಿಶೇಷ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಲಿದೆ.

ಸಂಧಾನ ಪ್ರಕ್ರಿಯೆ: ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳ ನೌಕರರು ಮತ್ತು ಅಧಿಕಾರಿಗಳಿಗೆ 01.04.2025ರಿಂದ ಜಾರಿಗೆ ಬರುವಂತೆ ಶೇಕಡಾವಾರು ಎಷ್ಟು ಪ್ರಮಾಣದಲ್ಲಿ ವೇತನ ಹೆಚ್ಚಳ ಪರಿಷ್ಕರಿಸಬೇಕು ಎನ್ನುವ ಸಂಬಂಧ ಕಾರ್ಮಿಕ ಸಂಘಟನೆಗಳೊಡನೆ ಮಾತುಕತೆ ಮತ್ತು ಸಂಧಾನ ಪ್ರಕ್ರಿಯೆ ಪ್ರಾರಂಭಿಸಲು ಆದೇಶಿಸಲಾಗಿದೆ. ನಮ್ಮ ಬೇಡಿಕೆಯನ್ನು ಸಂಪೂರ್ಣವಾಗಿ ಈಡೇರಿಸಲಿಲ್ಲ. ಹಾಗಾಗಿ ಸಮಿತಿಯಿಂದ ಹಮ್ಮಿಕೊಂಡಿರುವ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗುತ್ತದೆ. ಈ ವೇಳೆ ಬಸ್‌ಗಳಲ್ಲಿ ವ್ಯತ್ಯಯವಾಗುವುದಿಲ್ಲ ಎಂದು ಸಮಿತಿ ಪದಾಧಿಕಾರಿಗಳು ತಿಳಿಸಿದ್ದಾರೆ.

ಶಕ್ತಿ ಯೋಜನೆಯಿಂದ ಎಷ್ಟು ಹಣ ಬಾಕಿ: ಹೈಕೋರ್ಟ್ ಪ್ರಶ್ನೆ

ಪುಟ ೧➡ ಉಚಿತ ಟಿಕೆಟ್ ನೀಡುತ್ತಿದ್ದಾರಲ್ಲಾ ಅದು ಹೇಗೆ ಕೆಲಸ ಮಾಡುತ್ತಿದೆ? ಇದುವರೆಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ? ಈ ಹಣ ಪಡೆದು ಕೋವಿಡ್ ಸಂದರ್ಭದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ಪಾವತಿಸಬಹುದಲ್ಲ? ಪರಿಹಾರ ಪಾವತಿಸಲು ಸಂಪನ್ಮೂಲ ಇಲ್ಲ ಎನ್ನುತ್ತಿದ್ದೀರಿ. ರಾಜ್ಯ ಸರ್ಕಾರವು ನಿಗಮಗಳಿಗೆ ಎಷ್ಟು ಉಚಿತ ಟಿಕೆಟ್ ಹಣ ಕೊಡಬೇಕು? ಶಕ್ತಿ ಯೋಜನೆಯಲ್ಲಿ ಸರ್ಕಾರ ಎಷ್ಟು ಬಾಕಿ ಉಳಿಸಿಕೊಂಡಿದೆ? ಅದು ನಿಮ್ಮ ಸಂಪನ್ಮೂಲವೇ ಅಲ್ಲವೇ ಎಂದು ಪೀಠ ಪ್ರಶ್ನಿಸಿತು. ಅಲ್ಲದೇ ವಾದ-ಪ್ರತಿವಾದ ಆಲಿಸಿದ ಪೀಠವು ವಿಚಾರಣೆಯನ್ನು ಮಾ.23ಕ್ಕೆ ಮುಂದೂಡಿದೆ.

ಬಸ್ ಸೇವೆ ಸ್ಥಗಿತ ಇಲ್ಲ: ಸಚಿವ ರಾಮಲಿಂಗಾರೆಡ್ಡಿ



ಪುಟ ೧➡ ಮುಷ್ಕರದ ಸಂದರ್ಭದಲ್ಲಿ ಪರ್ಯಾಯ ಸಾರಿಗೆ ವ್ಯವಸ್ಥೆ ಕಲ್ಪಿಸುವ ಅಗತ್ಯ ಕಂಡುಬರುವುದಿಲ್ಲ. ಸಾರಿಗೆ ಸಂಸ್ಥೆಗಳ ಸಂಘಟನೆಗಳ ಮುಖಂಡರು ಬಸ್ ಸೇವೆ ಸ್ಥಗಿತಗೊಳಿಸುತ್ತೇವೆಂದು ಹೇಳಿಲ್ಲ. ಸರ್ಕಾರದ ಗಮನ ಸೆಳೆಯಲು ಬೆಂಗಳೂರು ಚಲೋ ನಡೆಸುತ್ತಿದ್ದಾರೆ ಎಂದರು.

ನಾಳೆಯಿಂದ ರಾಷ್ಟ್ರೀಯ ಹಿಂದು ಆರ್ಥಿಕ ಮಹಾಸಂಗಮ

ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆಯ ಹೋಟೆಲ್ ಡೆನಿಸನ್ಸ್‌ನ ಮಥುರಾ ಸಭಾಂಗಣದಲ್ಲಿ ಹಿಂದು ಆರ್ಥಿಕ ಒಕ್ಕೂಟ ಹು-ಧಾ ಚಾಪ್ಟರ್‌ನಿಂದ ರಾಷ್ಟ್ರೀಯ ಮಟ್ಟದ ಹಿಂದೂ ಆರ್ಥಿಕ ಮಹಾಸಂಗಮವನ್ನು ಫೆ.20 ಮತ್ತು 21ರಂದು ಏರ್ಪಡಿಸಲಾಗಿದೆ ಎಂದು ಒಕ್ಕೂಟದ ಸಂಘಟನಾ ಕಾರ್ಯದರ್ಶಿ ಟಿ.ಆರ್.ಶಿವಪ್ರಸಾದ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟದ ಮುಖ್ಯಸ್ಥ ಶ್ರೀ ಸ್ವಾಮಿ ವಿಜ್ಞಾನಂದಜಿ, ಧರ್ಮಸ್ಥಳದ ಧರ್ಮಾಧಿಕಾರಿ, ಡಾ.ಡಿ.ವೀರೇಂದ್ರ ಹೆಗ್ಗಡೆ ಸಾನ್ನಿಧ್ಯ ವಹಿಸುವರು. ಶಾಸಕರಾದ ಪ್ರಸಾದ ಅಬ್ಬಯ್ಯ, ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಶ್ರೀನಿವಾಸ ಮಾನೆ, ತಜ್ಞರಾದ ಡಾ.ಆರ್.ವೈದ್ಯನಾಥನ್, ಹನುಮಂತರಾವ್ ಗಾಯಕ್ವಾಡ್ ಅತಿಥಿಗಳಾಗಿ ಆಗಮಿಸುವರು. ಫೆ.20ರಂದು ಬೆಳಗ್ಗೆ 9.30ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ ಎಂದರು. ಫೆ.21ರಂದು ನಡೆಯಲಿರುವ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಬಸವರಾಜ ಬೊಮ್ಮಾಯಿ ಅವರು ಆಗಮಿಸುವರು. ರಾಷ್ಟ್ರದ ವಿವಿಧ ಭಾಗಗಳಿಂದ ತಜ್ಞರು, ಆರ್ಥಿಕ ಚಿಂತಕರು ಈ ಮಹಾಸಂಗಮದಲ್ಲಿ ಭಾಗವಹಿಸುವರು. ಹಿಂದೂಗಳ ಆರ್ಥಿಕ ಸದೃಢತೆಗೆ ಈ ಮಹಾಸಂಗಮ ವೇದಿಕೆಯಾಗಲಿದೆ ಎಂದರು.

ಸಾವಿರ ಚಾಪ್ಟರ್ ಆರಂಭಿಸುವ ಗುರಿ: ಭಾರತದಾದ್ಯಂತ 100ಕ್ಕೂ ಹೆಚ್ಚು ಚಾಪ್ಟರ್‌ಗಳು ಸಕ್ರಿಯವಾಗಿವೆ. ಬೆಂಗಳೂರಿನಲ್ಲಿಯೇ 37ಕ್ಕೂ ಹೆಚ್ಚು ಚಾಪ್ಟರ್‌ಗಳಿವೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಐದು ಸಹಕಾರಿ ಸಂಸ್ಥೆಗಳಿವೆ. ಫೆ.20ರಂದು ಹುಬ್ಬಳ್ಳಿಯಲ್ಲಿ ಸುವರ್ಣಶಕ್ತಿ ಸೌಹಾರ್ದ ಸಹಕಾರಿಯನ್ನು ಉದ್ಘಾಟಿಸಲಾಗುವುದು. 2027ರ ಡಿಸೆಂಬರ್‌ನೊಳಗೆ ಜಾಗತಿಕ ಸಂಪರ್ಕ ಯೋಜನೆಗಳೊಂದಿಗೆ ಸಾವಿರ ಚಾಪ್ಟರ್ ಆರಂಭಿಸುವ ಗುರಿ ಇದೆ ಎಂದು ಹು-ಧಾ ಚಾಪ್ಟರ್ ಅಧ್ಯಕ್ಷ ವಿಜೇಶ ಸೈಗಲ್ ತಿಳಿಸಿದರು. ಹು-ಧಾ ಚಾಪ್ಟರ್ ಸಂಚಾಲಕ ಅರ್ಜನ ಮಹಾಜನ್, ಕಾರ್ಯದರ್ಶಿ ಗಿರೀಶ ಮಾನೆ, ಉಪಾಧ್ಯಕ್ಷ ಗೌತಮ ಬಾಫಣಾ, ಖಜಾಂಚಿ ಮುಕೇಶ ಪಾಂಚಾಲ ಸುದ್ದಿಗೋಷ್ಠಿಯಲ್ಲಿದ್ದರು.



ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ ವತಿಯಿಂದ 30 ಕೋಟಿ ರೂ. ಮೊತ್ತದ ಡಿವಿಡೆಂಡ್ ಅನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಸಲ್ಲಿಸಲಾಯಿತು. ಸಚಿವರಾದ ಕೆ. ವೆಂಕಟೇಶ್, ಚಲುವರಾಯಸ್ವಾಮಿ, ಕೃಷ್ಣ ಬೈರೇಗೌಡ, ನಿಗಮದ ಅಧ್ಯಕ್ಷರು ಸೇರಿ ಹಲವರಿದ್ದರು.

ಆರು ಮುಸ್ಲಿಂ ಯುವಕರ ಬಂಧನ

ಚಿಕ್ಕಮಗಳೂರು: ನಗರದ ವಿಜಯಪುರ ಬಡಾವಣೆಯಲ್ಲಿ ದಲಿತ ಮಹಿಳೆ ಮನೆ ಮೇಲೆ ಕಲ್ಲು ತೂರಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಸವನಹಳ್ಳಿ ಪೊಲೀಸರು 6 ಮಂದಿ ಮುಸ್ಲಿಂ ಯುವಕರನ್ನು ಬಂಧಿಸಿದ್ದಾರೆ. ಈ ಪೈಕಿ ನಾಲ್ವರು ಅಪ್ರಾಪ್ತರಾಗಿದ್ದಾರೆ.

ಎಲ್ಲಾ ಆರು ಮಂದಿಯನ್ನು ನ್ಯಾಯಾಧೀಶರೆದುರು ಹಾಜರುಪಡಿಸಲಾಗಿದೆ. ಈ ಪೈಕಿ ನಾಲ್ವರು ಅಪ್ರಾಪ್ತರನ್ನು ಹಾಸನದ ಬಾಲ ಮಂದಿರಕ್ಕೆ ಕರೆದೊಯ್ಯಲಾಗಿದೆ. ಉಳಿದಿಬ್ಬರು ನಗರದ ಮಲ್ಲೇಗೌಡ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದು ಇದರಲ್ಲಿ ಒಬ್ಬ ವಯಸ್ಕನಾಗಿದ್ದು, ಮತ್ತೊಬ್ಬ ಅಪ್ರಾಪ್ತನಾಗಿದ್ದಾನೆ. ಈ ನಡುವೆ ಕಲ್ಲು ತೂರಾಟ ಪ್ರಕರಣದ ಪ್ರಮುಖ ಆರೋಪಿ ಯಾಸೀನ್ ಎಂಬಾತ ತಲೆ ಮರೆಸಿಕೊಂಡಿದ್ದು, ಆತನ ಬಂಧನಕ್ಕೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

4 ಎಫ್‌ಐಆರ್ ದಾಖಲು: ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಒಟ್ಟು 4 ಎಫ್‌ಐಆರ್ ದಾಖಲಿಸಿದ್ದಾರೆ. ಈ ಪೈಕಿ ಎರಡು ಸ್ವಯಂ ಪ್ರೇರಿತ ಎಫ್‌ಐಆರ್‌ಗಳಾಗಿದ್ದು, ಇನ್ನೆರಡು ಕಲ್ಲು ತೂರಿದವರ ವಿರುದ್ಧ ಮಹಿಳೆ ಸುಧಾ ನೀಡಿರುವ ದೂರು, ಕಲ್ಲು ತೂರಿದ ಆರೋಪದಲ್ಲಿ ಆಸ್ಪತ್ರೆಗೆ ದಾಖಲಾಗಿರುವ ಅಕ್ಷದ್ ನೀಡಿರುವ ದೂರಿನ ಆಧಾರದಲ್ಲಿ ದಾಖಲಾದ ಎಫ್‌ಐಆರ್‌ಗಳಾಗಿವೆ.

18 ಮಂದಿ ವಿರುದ್ಧ ಪ್ರಕರಣ: ಪೊಲೀಸರು ದಾಖಲಿಸಿರುವ ಎರಡು ಸ್ವಯಂ ಪ್ರೇರಿತ ಎಫ್‌ಐಆರ್‌ನಲ್ಲಿ ಪೊಲೀಸ್ ಠಾಣೆ ಎದುರು ಪರ-ವಿರೋಧ ಪ್ರತಿಭಟನೆ ನಡೆಸಿದ 11 ಮಂದಿ ಹಿಂದೂ ಸಂಘಟನೆ ಮುಖಂಡರು ಮತ್ತು 8 ಮಂದಿ ಮುಸ್ಲಿಮರಿದ್ದಾರೆ. ಜಿಲ್ಲಾ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ್ ಕೋಟ್ಯಾನ್, ಬಜರಂಗದಳ ಮುಖಂಡ ಶ್ಯಾಂ ವಿ.ಗೌಡ ಸೇರಿದಂತೆ ಕೋಟೆ ಶ್ಯಾಂ, ಅಮಿತ್, ಕಿರಣ್, ಪ್ರದೀಪ್, ಅಕ್ಷತ್, ಶಶಿ ಆಲ್ದೂರು, ಆಟೋ ಶಿವಣ್ಣ, ಬೆಣ್ಣೆ ಕೃಷ್ಣ, ಪುನೀತ್ ಅಂಬುಲೆನ್ಸ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕಠಿಣ ಕ್ರಮಕ್ಕೆ ಆಗ್ರಹ

ನಗರದಲ್ಲಿ ಪದೇ ಪದೇ ನಡೆಯುತ್ತಿರುವ ಕಿಡಿಗೇಡಿ ಕೃತ್ಯಗಳಿಂದಾಗಿ ಸಾರ್ವಜನಿಕರ ನೆಮ್ಮದಿ ಹಾಳಾಗುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ಒತ್ತಡಗಳಿಗೆ ಮಣಿಯದೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎನ್ನುವ ಒತ್ತಾಯಗಳು ಕೇಳಿಬರುತ್ತಿವೆ.

ಕಿರುಸುದ್ದಿ

ಚಿಕಿತ್ಸಾ ವಿಧಾನಗಳಿಗೆ ಮಂಜೂರಾತಿ

ಬೆಂಗಳೂರು: ಸರ್ಕಾರಿ ದರಗಳಲ್ಲಿ ಒಂದು ವರ್ಷದವರೆಗೆ ಪ್ರಾಯೋಗಿಕ ಆಧಾರದ ಮೇಲೆ ದ್ವಿತೀಯ ಹಂತದ ಸರಳ (2ಎ) ಚಿಕಿತ್ಸಾ ವಿಧಾನಗಳಿಗೆ ಮಂಜೂರಾತಿ ಹಾಗೂ ಇತರೆ ಚಿಕಿತ್ಸಾ ವಿಧಾನಗಳಿಗೆ ರೆಫೆರಲ್ ವಿನಾಯಿತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ. ಸೇಂಟ್ ಜಾನ್ ಮೆಡಿಕಲ್ ಕಾಲೇಜು, ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜು, ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಮತ್ತು ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜು ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ (ಎಬಿ-ಎಆರ್‌ಕೆ) ಯೋಜನೆ ಅಡಿಯಲ್ಲಿ ಚಿಕಿತ್ಸಾ ವಿಧಾನಗಳಿಗೆ ರೆಫೆರಲ್ ವಿನಾಯಿತಿ ನೀಡಲು ತೀರ್ಮಾನಿಸಿದ್ದು, ಈ ಚಿಕಿತ್ಸೆಗಳಿಗೆ ತಗಲುವ ವೆಚ್ಚವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಹಂಚಿಕೆಯಾದ ಆಯವ್ಯಯ ಅನುದಾನದ ಅಡಿಯಲ್ಲಿ ಭರಿಸಬೇಕು ಎಂದು ಸೂಚಿಸಿದೆ.

ಅಪಘಾತ: ಒಂದೇ ಕುಟುಂಬದ ಮೂವರ ಸಾವು

ಕುಡಚಿ: ರಾಯಬಾಗ ತಾಲೂಕಿನ ಅಲಖನೂರ ಕರಿಸಿದ್ದೇಶ್ವರ ಅಗಸಿ ಬಾಗಿಲ ಹತ್ತಿರ ಬೆಳಗ್ಗೆ 9.30ರ ಸುಮಾರಿಗೆ ಬೈಕ್ ಹಾಗೂ ಟ್ರಕ್ ಮಧ್ಯೆ ಮುಖಾಮುಖಿ ಅಪಘಾತ ಸಂಭವಿಸಿದ ಪರಿಣಾಮ ಮೂರು ಮಂದಿ ಮೃತಪಟ್ಟ ಘಟನೆ ವರದಿಯಾಗಿದೆ. ಗಿರೇಪ್ಪಾ ಕುದ್ರಾಳಿ (38), ಪತ್ನಿ ಮಂಜುಳಾ (28) ಹಾಗೂ ಮಗಳು ಆರಾಧ್ಯ (7) ಮೃತ ದುರ್ದೈವಿಗಳಾಗಿದ್ದಾರೆ. ಮೃತರು ಜಮಖಂಡಿ ಮೂಲದವರು ಎನ್ನಲಾಗಿದೆ. ಗಿರೇಪ್ಪಾ ಕುದ್ರಾಳಿ ಅವರು ಬೈಕ್ ನಲ್ಲಿಯೇ ಮಿರಜ್ ನಿಂದ ಕುಟುಂಬ ಸಮೇತ ಜಮಖಂಡಿಗೆ ಹೋಗುತ್ತಿದ್ದರು ಎಂದು ತಿಳಿದು ಬಂದಿದೆ. ಹಾರೂಗೇರಿ ಕ್ರಾಸ್ ಕಡೆಯಿಂದ ಕುಡಚಿ ಕಡೆಗೆ ಟ್ರಕ್ ಚಾಲಕನು ಟ್ರಕ್‌ನ್ನು ಅತೀ ವೇಗವಾಗಿ ಹಾಗೂ ನಿಷ್ಕಾಳಜಿತನದಿಂದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಮಂಜುಳಾ ಹಾಗೂ ಆರಾಧ್ಯ, ಅವರ ತಲೆಗೆ ಭಾರೀ ಪೆಟ್ಟು ಬಿದ್ದ ಪರಿಣಾಮ ಸ್ಥಳದಲ್ಲಿಯೇ ಮೃತರಾಗಿದ್ದಾರೆ. ಗಿರೀಶ ಗಾಯಗೊಂಡ ಪರಿಣಾಮ ಸಮೀಪದ ಹಾರೂಗೇರಿ ಪಟ್ಟಣದ ನಾರಗೊಂಡ ಆಸ್ಪತ್ರೆಗೆ ದಾಖಲಿಸಿದ್ದಾರೆ. ಬೆಳಗ್ಗೆ 10.30 ಗಂಟೆ ಸುಮಾರಿಗೆ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ. ಈ ಕುರಿತು ಹಾರೂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ನಿ ಹತ್ಯೆ ಮಾಡಿ ಮನೆಯಲ್ಲೇ ಶವ ಹೂತು ಹಾಕಿದ್ದ ಭೂಪ

ವಿಜಯಪುರ: ಪತಿಯೇ ಪತ್ನಿಯನ್ನು ಬರ್ಬರವಾಗಿ ಹತ್ಯೆ ಮಾಡಿ ಕಳೆದ 24 ದಿನ ಶವವನ್ನು ಮನೆಯಲ್ಲೇ ಹೂತು ಹಾಕಿದ ಘಟನೆ ಜಿಲ್ಲೆಯ ದೇವರಹಿಪ್ಪರಗಿ ಪಟ್ಟಣದಲ್ಲಿ ತಡವಾಗಿ ಬೆಳಕಿಗೆ ಬಂದಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಇಲ್ಲಿನ ಪ್ರಭು ಕಾಳಪ್ಪ ರತ್ನಾಕರ (46) ಬಂಧಿತ ಆರೋಪಿ. ಪ್ರಭು ರತ್ನಾಕರ ಈತ ತನ್ನ ಪತ್ನಿ ಸರೋಜಿನಿ ರತ್ನಾಕರ ಹೆಸರಲ್ಲಿ ಸಿಕ್ಕಾಪಟ್ಟೆ ಸಾಲ ಮಾಡಿದ್ದ, ಈ ಸಾಲದ ವಿಷಯಕ್ಕೆ ಪತಿ-ಪತ್ನಿ ಮಧ್ಯೆ ಆಗಾಗ ಗಲಾಟೆ ನಡೆಯುತ್ತಿತ್ತು. ಕಳೆದ ಜ.24, 2026ರಂದು ರಾತ್ರಿ ಇಬ್ಬರ ಮಧ್ಯೆ ಜಗಳ ನಡೆದು, ಇದು ವಿಕೋಪಕ್ಕೆ ತೆರಳಿದೆ. ಆಗ ಕುಪಿತಗೊಂಡ ಆರೋಪಿ ಪ್ರಭು ರತ್ನಾಕರ, ತನ್ನ ಪತ್ನಿ ಸರೋಜಿನಿ ತಲೆಗೆ ಹಾರಿಯಿಂದ ಹೊಡೆದು ಹತ್ಯೆ ಮಾಡಿ, ಶವವನ್ನು ಮನೆಯಲ್ಲಿಯೇ ಹೂತು ಹಾಕಿದ್ದಾನೆ. ಬಳಿಕ ತನ್ನ ಪತ್ನಿ ಕಾಣೆಯಾಗಿದ್ದಾಳೆ ಎಂದು ಪೊಲೀಸ್ ಠಾಣೆಗೆ ದೂರು ನೀಡಿದ್ದಾನೆ. ಈಗ ವಿಷಯ ಬಯಲಿಗೆ ಬರುತ್ತಿದ್ದಂತೆಯೇ ಪೊಲೀಸರು, ಆರೋಪಿಯನ್ನು ಬಂಧಿಸಿ, ಶವ ಹೊರ ತೆಗೆದು ಪರೀಶಿಲನೆ ನಡೆಸಿದರು.



ಸಾರಿಗೆ ನಿಗಮಗಳ ನೌಕರರಿಗೆ 38 ತಿಂಗಳ ಹಿಂಬಾಕಿ: ವಿಪಕ್ಷ ನಾಯಕ ಅಶೋಕ್

ಮೀಸಲು ಯೋಜನೆಗಿಲ್ಲ ಹಣ

ಬೆಂಗಳೂರು: ಕಳೆದ ಬಜೆಟ್‌ನಲ್ಲಿ ಮೀಸಲಾದ ಹಣವನ್ನೇ ಯೋಜನೆಗಳಿಗೆ ನೀಡುತ್ತಿಲ್ಲ. ಈಗ ಹೊಸ ಬಜೆಟ್ ಮಾಡಲು ತಯಾರಿ ನಡೆಸಿದ್ದಾರೆ. ನಾಲ್ಕು ಸಾರಿಗೆ ನಿಗಮಗಳ ನೌಕರರು 38 ತಿಂಗಳ ಹಿಂಬಾಕಿ ನೀಡಿಲ್ಲವೆಂದು ಹೋರಾಟ ಮಾಡುತ್ತಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಕಿಡಿಕಾರಿದ್ದಾರೆ.



ವಿಧಾನಸೌಧದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಸಾರಿಗೆ ಸಚಿವನಾಗಿದ್ದಾಗ ನಷ್ಟವಿತ್ತೋ, ಲಾಭವಿತ್ತೋ ಎಂಬ ಮಾಹಿತಿ ಬಿಡುಗಡೆ ಮಾಡಲಿ. ಶಾಲಾ ಮಕ್ಕಳಿಗೆ ಬಸ್ ಸಿಗದೆ ಟಿಪ್ಪರ್‌ನಲ್ಲಿ ಹೋಗುತ್ತಿದ್ದಾರೆ. ಈ ಸರ್ಕಾರದಲ್ಲಿ ದುಡ್ಡಿಲ್ಲ ಆದರೂ ಶಾಸಕರು ಫಾರಿನ್ ಟೂರ್ ಮಾಡುತ್ತಿದ್ದಾರೆ ಎಂದು ಆಕ್ರೋಶ ಹೊರಹಾಕಿದರು.

ಬೆಂಗಳೂರಿನಲ್ಲಿ ಕಳೆದ ಮೂರು ತಿಂಗಳಿಂದ ಕಸ ವಿಲೇವಾರಿಯಾಗುತ್ತಿಲ್ಲ. ಲಾರಿಗಳಲ್ಲಿ ಕಸ ತುಂಬಿಹೋಗಿದೆ. ಬೆಂಗಳೂರನ್ನು ಸರ್ಕಾರ ಗಾರ್ಬೇಜ್ ಸಿಟಿ ಮಾಡಿದೆ. ಗುತ್ತಿಗೆದಾರರ ಸಂಘ ಎಲ್ಲ ಕಾಮಗಾರಿ ಸ್ಥಗಿತಗೊಳಿಸಲು ಸಿದ್ಧತೆ ಮಾಡಿದೆ. ಆದ್ದರಿಂದ ಕೂಡಲೇ ಹಣ ಬಿಡುಗಡೆ ಮಾಡಿ ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲಿ. ಇಲ್ಲವಾದರೆ ಜನರ ಶಾಪ ತಟ್ಟುತ್ತದೆ ಎಂದರು.

ನಾಯಿಗಳ ಕಿತ್ತಾಟ: ಸಿಎಂ ಡಿಸಿಎಂ ಕಚ್ಚಾಟವನ್ನು ನಾಯಿಗಳ ಕಿತ್ತಾಟ ಎಂದು ಸಚಿವ ಮಹದೇವಪ್ಪ ಹೇಳಿದ್ದಾರೆ. ಡಿ.ಕೆ.ಸುರೇಶ್ ಅವರು ನಿಯತ್ತಿನ ನಾಯಿಗಳು ಎಂದಿದ್ದಾರೆ. ಅಂದಮೇಲೆ ಬೀದಿ ನಾಯಿಗಳು ಯಾರು ಎಂದು ಉತ್ತರ ಕೊಡಬೇಕಿದೆ. ಕಾಂಗ್ರೆಸ್‌ನಲ್ಲಿ ಬೀದಿ ನಾಯಿ ಮತ್ತು ನಿಯತ್ತಿನ ನಾಯಿಗಳ ನಡುವೆ ಕಿತ್ತಾಟ ನಡೆಯುತ್ತಿದೆ. ಡಿ.ಕೆ.ಶಿವಕುಮಾರ್ ತಮಗೆ ಗೊತ್ತಿಲ್ಲ ಎನ್ನುತ್ತಾರೆ. ವಿದೇಶ ಪ್ರವಾಸ ಹೋಗಿರುವವರು ಸಿಎಂ ಬೆಂಬಲಿಗರೇ ಆಗಿದ್ದಾರೆ ಎಂದರು.

ನಾಯಕತ್ವ ಬದಲಾವಣೆ ಒಪ್ಪಂದ ಆಗಿದ್ದರೆ ತಿಳಿಸಲಿ

ರಾಜ್ಯದ ಮುಖ್ಯಮಂತ್ರಿ, ಪಕ್ಷದ ಅಧ್ಯಕ್ಷರ ವಿರುದ್ಧ ಹೀಗೆ ನಡೆದುಕೊಳ್ಳುತ್ತಾರೆ. ಒಪ್ಪಂದ ಆಗಿದ್ದರೆ ಎಷ್ಟು ವರ್ಷ ಒಪ್ಪಂದ ಆಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಬೇಕು. ಇದು ಬೆದರಿಕೆಯ ರಾಜಕೀಯವೇ ಎಂದು ತಿಳಿಸಬೇಕು. ಕಾಂಗ್ರೆಸ್ ಒಳಜಗಳದಿಂದಾಗಿ ಆಡಳಿತ ಕುಸಿದಿರುವಾಗ ಯಾವ ಕಾರಣಕ್ಕಾಗಿ ಬಜೆಟ್ ಮಂಡನೆ ಮಾಡುತ್ತಾರೆ ಎಂದು ಪ್ರಶ್ನೆ ಮಾಡಿದರು.

ಮಾಧ್ಯಮಗಳಿಗೆ ಸ್ಥಳ ನಿಗದಿ: ವಿಪಕ್ಷಗಳ ಟೀಕೆ

ಬೆಂಗಳೂರು: ವಿಧಾನಸೌಧದ ಪಶ್ಚಿಮ ದ್ವಾರದ ಬಳಿ ನಿಗದಿಪಡಿಸಲಾಗಿರುವ ಸ್ಥಳದಲ್ಲಿ ಮಾತ್ರ ಮಾಧ್ಯಮ ಪ್ರತಿನಿಧಿಗಳು ರಾಜಕೀಯ ನಾಯಕರ ಹೇಳಿಕೆಯನ್ನು ಪಡೆಯಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸುತ್ತೋಲೆ ಹೊರಡಿಸಿದೆ. ವಿಧಾನಸೌಧ ಒಳ ಪ್ರವೇಶಿಸುವ ಸಂದರ್ಭದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು ಹಾಗೂ ಗಣ್ಯ ವ್ಯಕ್ತಿಗಳ ಹೇಳಿಕೆಗಳನ್ನು ಪಡೆಯಲು ಹಿಂಬಾಲಿಸದಂತೆ ಆದೇಶದಲ್ಲಿ ತಿಳಿಸಲಾಗಿದೆ. ಈ ಸುತ್ತೋಲೆಗೆ ವಿಪಕ್ಷಗಳು ಅಸಮಾಧಾನಗೊಂಡಿದ್ದು, ಸರ್ಕಾರವನ್ನು ಟೀಕಿಸಿವೆ. ತನ್ನ ವೈಫಲ್ಯಗಳನ್ನ, ಯಡವಟ್ಟುಗಳನ್ನ, ಭ್ರಷ್ಟಾಚಾರವನ್ನ ಮುಚ್ಚಿಟ್ಟುಕೊಳ್ಳುವ ಸಲುವಾಗಿ ಮಾಧ್ಯಮಗಳ ಮೇಲೆ ನಿಯಂತ್ರಣ ಹೇರಲು ಹೊರಟಿರುವ ಕಾಂಗ್ರೆಸ್ ಸರ್ಕಾರ ತನ್ನ ಪ್ರಜಾಪ್ರಭುತ್ವ ವಿರೋಧಿ, ಸರ್ವಾಧಿಕಾರಿ ಧೋರಣೆಯನ್ನು ಮತ್ತೊಮ್ಮೆ ಪ್ರದರ್ಶನ ಮಾಡಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಹೇಳಿದ್ದಾರೆ. ಮಾಧ್ಯಮದವರು ವಿಧಾನಸೌಧದ ನಿಗದಿತ ಸ್ಥಳದಲ್ಲಿ ಮಾತ್ರ ಸಂದರ್ಶನ ಮಾಡಬೇಕು ಎನ್ನುವ ಈ ಅಸಂವಿಧಾನಿಕ ಆದೇಶವನ್ನ ಈ ಕೂಡಲೇ ವಾಪಸ್ಸು ಪಡೆಯಬೇಕು ಮತ್ತು ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾದ ಮಾಧ್ಯಮಗಳು ಸ್ವತಂತ್ರವಾಗಿ ತಮ್ಮ ಕರ್ತವ್ಯ ನಿರ್ವಹಣೆ ಮಾಡಲು ಮುಕ್ತ ಅವಕಾಶ ಮಾಡಿಕೊಡಬೇಕು ಎಂದು ರಾಜ್ಯ ಸರ್ಕಾರವನ್ನ ಆಗ್ರಹಿಸುತ್ತೇನೆ ಎಂದಿದ್ದಾರೆ. ವಿಧಾನಸೌಧ ನಿಮ್ಮ ಕಾಂಗ್ರೆಸ್ ಪಕ್ಷದ ಕಚೇರಿ ಅಲ್ಲ ಸ್ವಾಮಿ, ಅದು ಪ್ರಜಾಸೌಧ, ಏಳು ಕೋಟಿ ಕನ್ನಡಿಗರಿಗೆ ಸೇರಿದ ಶಕ್ತಿಸೌಧ. ಅಲ್ಲಿಗೆ ಮಾಧ್ಯಮದವರನ್ನು ಬರಬೇಡಿ ಎಂದು ನಿಯಂತ್ರಣ ಮಾಡಲು ಯಾರಿಗೂ ಅಧಿಕಾರವಿಲ್ಲ. ರೂಪಾಯಿ ಚಿನ್ನ, ನಗದು ಕಳ್ಳತನದಂತಹ ಪ್ರಕರಣಗಳು, ಅಕ್ರಮ ವ್ಯವಹಾರಗಳು ಇನ್ನಷ್ಟು ಬಯಲಾಗುತ್ತವೆ ಎನ್ನುವ ಭಯವೋ ಎಂದು ಕಿಡಿಕಾರಿದ್ದಾರೆ.



ನಂದಿನಿ ಉತ್ಪನ್ನ ತಪ್ಪು ಸಂದೇಶ: ಕಿಡಿಗೇಡಿಗಳ ವಿರುದ್ಧ ಕ್ರಮ

ಬೆಂಗಳೂರು: ನಂದಿನಿ ಉತ್ಪನ್ನಗಳನ್ನು ಬಳಸಿದರೆ ಕ್ಯಾನ್ಸರ್ ಬರುತ್ತದೆ ಎಂಬ ಸುದ್ದಿ, ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಮಾಹಿತಿ ಹರಡಲಾಗುತ್ತಿರುವ ಕೆಲ ಕಿಡಿಗೇಡಿಗಳಿಗೆ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾ ಮಂಡಳಿ (ಕೆಎಂಎಫ್) ಕಾನೂನು ಕ್ರಮಕ್ಕೆ ಮುಂದಾಗಿದೆ.

ನಂದಿನಿ ಉತ್ಪನ್ನಗಳು ಭಾರತೀಯ ಆಹಾರ ಸುರಕ್ಷೆ, ಗುಣಮಟ್ಟ ಪ್ರಾಧಿಕಾರ ನಿಗದಿಪಡಿಸಿದ ಎಲ್ಲ ಗುಣಮಟ್ಟ ಮತ್ತು ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದೇವೆ. ನಂದಿನಿ ಹಾಲು ಹಾಗೂ ಹಾಲು ಉತ್ಪನ್ನಗಳು ಸಂಪೂರ್ಣ ಸುರಕ್ಷಿತವಾಗಿದೆ. ಸ್ವಚ್ಛ ಮತ್ತು ಉತ್ತಮ ಗುಣಮಟ್ಟದ್ದ ಬಗ್ಗೆ ನಮ್ಮ ಗ್ರಾಹಕರಿಗೆ ಭರವಸೆ ನೀಡುತ್ತೇವೆ ಎಂದು ಮಾಹಿತಿ ನೀಡಿದೆ. ಕರ್ನಾಟಕ ಹಾಲು ಮಂಡಳಿಯು ಆಧಾರರಹಿತ, ತಪ್ಪು ದಾರಿಗೆಳೆಯುವ ಮತ್ತು ಬ್ರ್ಯಾಂಡ್‌ನ ಮಾನಹಾನಿಕರ ಹೇಳಿಕೆಗಳನ್ನು ತೀವ್ರವಾಗಿ ಖಂಡಿಸುತ್ತಿದ್ದು, ಇಂತಹ ದುರುದ್ದೇಶಪೂರಿತ ಕೃತ್ಯಗಳಲ್ಲಿ ತೊಡಗಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಕೆಎಂಎಫ್ ಎಚ್ಚರಿಕೆ ನೀಡಿದೆ.

ಈ ಕುರಿತು ಪ್ರತಿಕ್ರಿಯಿಸಿದ ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್, ನಂದಿನಿ ಗುಣಮಟ್ಟಕ್ಕೆ ಹೆಸರುವಾಸಿಯಾಗಿದೆ. ನಂದಿನಿ ಉತ್ಪನ್ನಗಳನ್ನು ಮಾಡುವಾಗ ಯಾವುದೇ ರೀತಿಯ ಕಲಬೆರಕೆ ಮಾಡುವುದಿಲ್ಲ. ಕೆಲ ಕಿಡಿಗೇಡಿಗಳು ಸಾಮಾಜಿಕ ಜಾಲತಾಣಗಳಲ್ಲಿ ಸುರಕ್ಷತೆ ಮತ್ತು ಗುಣಮಟ್ಟದ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಈ ಬಗ್ಗೆ ಒಕ್ಕೂಟದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ನಂದಿನಿ ಯಾವತ್ತೂ ಗುಣಮಟ್ಟದ ಜತೆ ರಾಜಿಯಾಗಿಲ್ಲ. ನಂದಿನಿಗೆ ಎಷ್ಟೇ ನಷ್ಟವಾದರೂ ಎಂದಿಗೂ ಗ್ರಾಹಕರಿಗೆ ಹಾಗೂ ರೈತರಿಗೆ ಅನ್ಯಾಯ ಮಾಡಿಲ್ಲ. ಗುಣಮಟ್ಟದ ಉತ್ಪನ್ನಗಳನ್ನು ಎಂದಿನಂತೆ ಮುಂದುವರೆಯಲಿದೆ ಎಂದು ತಿಳಿಸಿದರು.

ನಂದಿನಿ ಉತ್ಪನ್ನಗಳಲ್ಲಿ ಕಲಬೆರಕೆ ಮಾಡಿದರೆ ಕ್ರಮ

ನಂದಿನಿ ಉತ್ಪನ್ನಗಳಲ್ಲಿ ಕಲಬೆರಕೆ ಎಲ್ಲಿಲ್ಲಿ ಆಗುತ್ತಿದೆ ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮಲ್ಲೂ ಇದರ ಬಗ್ಗೆ ತಂಡ ರಚಿಸಲಾಗಿದ್ದು, ವಿವಿಧ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ. ಜನರಿಗೆ ಅಪಪ್ರಚಾರ ಆಗಬಾರದು ಎಂದು ಎಚ್ಚರಿಕೆ ವಹಿಸಲಾಗಿದೆ. ಬೇರೆ-ಬೇರೆ ಬ್ರ್ಯಾಂಡ್‌ಗಳ ಕಂಪನಿಯವರು ನಮ್ಮ ನಂದಿನಿ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಪಶುಸಂಗೋಪನಾ ಇಲಾಖೆಯ ಸಚಿವ ಕೆ. ವೆಂಕಟೇಶ್ ಆರೋಪಿಸಿದರು.

ರಾಜ್ಯಾದ್ಯಂತ ಕೈದಿಗಳ ಎನ್‌ಡಿಪಿಎಸ್ ಪರೀಕ್ಷೆ

ಹುಬ್ಬಳ್ಳಿ: ಜೈಲಿನಲ್ಲಿರುವ ಬಹುತೇಕ ಕೈದಿಗಳು ಗಾಂಜಾ ವ್ಯಸನಿಗಳಿರುತ್ತಾರೆ. ಇದನ್ನು ಸಂಪೂರ್ಣ ಕಡಿವಾಣ ಹಾಕಲಾಗುವುದು. ಜೈಲಿಗೆ ಬರುವ ಹಾಗೂ ಹೋಗುವ ಕೈದಿಗಳ ಎನ್‌ಡಿಪಿಎಸ್ ಪರೀಕ್ಷೆ ನಡೆಸಲಾಗುತ್ತಿದ್ದು, ರಾಜ್ಯಾದ್ಯಂತ ಒಂದು ವಾರದಲ್ಲಿ ಆರಂಭಿಸಲಾಗುವುದು ಎಂದು ಕಾರಾಗೃಹದ ಡಿಜಿಪಿ ಅಲೋಕ ಕುಮಾರ್ ತಿಳಿಸಿದರು.

ಇಲ್ಲಿಯ ವಿಶ್ವೇಶ್ವರನಗರದ ಉಪಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜೈಲಿನಲ್ಲಿ ಗಾಂಜಾ ಸೇವನೆ ಹಾಗೂ ಮೊಬೈಲ್ ಬಳಕೆ ಮಾಡುವವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಜೈಲಿನಲ್ಲಿರುವ ಕೈದಿಗಳನ್ನು ಸಹ ಪರೀಕ್ಷೆಗೆ ಒಳಪಡಿಸಲಾಗುವುದು. ಶಿಸ್ತು ಹಾಗೂ ನಿಯಮಗಳನ್ನು ಕೈದಿಗಳು ಕಡ್ಡಾಯವಾಗಿ ಪಾಲಿಸಬೇಕು. ಜೈಲಿನಿಂದ ಹೊರ ಹೋಗುವಾಗ ಉತ್ತಮ ನಾಗರಿಕರಾಗಬೇಕು. ಈ ನಿಟ್ಟಿನಲ್ಲಿ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.



ಹುಬ್ಬಳ್ಳಿ ಕಾರಾಗೃಹದಲ್ಲಿ 132 ಕೈದಿಗಳು ನಗರದ ಕಾರಾಗೃಹದಲ್ಲಿ ಕೊಲೆ, ಅತ್ಯಾಚಾರ, ದರೋಡೆ, ಕಳವು ಸೇರಿದಂತೆ ಹಲವು ಪ್ರಕರಣದಲ್ಲಿ ಭಾಗಿಯಾದ 132 ಕೈದಿಗಳಿದ್ದಾರೆ. ಅವರಿಗೆ ಜೈಲಿನಲ್ಲಿ ಯೋಗ, ಧ್ಯಾನ ಕಲಿಸಲಾಗುತ್ತಿದೆ. ಜೈಲಿನಿಂದ ಹೊರಗೆ ಬಂದ ಬಳಿಕ ಅಪರಾಧ ಕೃತ್ಯದಲ್ಲಿ ತೊಡಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಮೈತ್ರಿ ಧರ್ಮ ಪಾಲನೆ: ನಿಖಿಲ್

ಬೆಂಗಳೂರು: ನಾವು ಮೈತ್ರಿ ಧರ್ಮವನ್ನು ಅತ್ಯಂತ ಗೌರವದಿಂದ ಪಾಲಿಸುತ್ತಿದ್ದೇವೆ. ನಮ್ಮ ಮೈತ್ರಿಗೆ ಬಿಜೆಪಿ ಹೈಕಮಾಂಡ್ ನಾಯಕರ ಮಾರ್ಗದರ್ಶನ ಇದೆ. ಬಿಜೆಪಿಯಾಗಿರಲಿ, ಜೆಡಿಎಸ್ ಆಗಿರಲಿ ಯಾರು ಕೂಡ ಬಹಿರಂಗವಾಗಿ ಮಾತನಾಡಬಾರದು ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.



ಬುಧವಾರ ಜೆ.ಪಿ. ನಗರ ನಿವಾಸದ ಬಳಿ ಮಾಧ್ಯಮಗಳ ಜತೆ ಮಾತನಾಡಿ, ಈ ವಿಚಾರಗಳು ನಾಲ್ಕು ಗೋಡೆಗಳ ಒಳಗೆ ಚರ್ಚೆ ಆಗಬೇಕು. ಹಾದಿ ಬೀದಿಯಲ್ಲಿ ಚರ್ಚಿಸಿ ಇತ್ಯರ್ಥವಾಗುವ ವಿಚಾರ ಅಲ್ಲ. ಲೋಕಸಭೆ ಚುನಾವಣೆಯಲಿಂದಲೂ ಎರಡೂ ಪಕ್ಷಗಳ ಮೈತ್ರಿ ಇದೆ. ಅಂದಿನಿಂದಲೂ ನಮ್ಮನ್ನ ಅತ್ಯಂತ ಗೌರವದಿಂದ ನೋಡಿಕೊಂಡಿದ್ದಾರೆ ಎಂದರು.

ಮುಂದಿನ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್ ಅಲ್ಲ ಎನ್‌ಡಿಎ 140 ರಿಂದ 150 ಸ್ಥಾನ ಗೆಲ್ಲುತ್ತೆ. ನಾವು ಮೈತ್ರಿ ಧರ್ಮವನ್ನ ಪಾಲಿಸುತ್ತೇವೆ ಲೋಕಸಭೆ ಗೆದ್ದಂತೆ ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲುತ್ತೇವೆ. ಗೆದ್ದು ದಾಖಲೆಯನ್ನು ಸೃಷ್ಟಿ ಮಾಡುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನನ್ನ ಹೇಳಿಕೆ ತಿರುಚಿದ್ದಾರೆ: ಸಮಸ್ಯೆ ಉದ್ಭವ ಆಗಿರೋದು ಯಾವುದೋ ಎರಡು ಜಿಲ್ಲೆಯಲ್ಲಿ. ಅಲ್ಲಿನ ಮೂರ್ನಾಲ್ಕು ಜನ ಪ್ರಚಾರಕ್ಕಾಗಿ ಮಾತನಾಡಿದ್ದಾರೆ. ನಾವೆಲ್ಲಿಯೂ ಕೂಡ ಅಭ್ಯರ್ಥಿಗಳನ್ನು ಘೋಷಣೆ ಮಾಡಿಯೇ ಇಲ್ಲ. ಕೆ.ಆರ್. ಪೇಟೆಯಲ್ಲಿ ಮಂಜು ನೀವು ಈಗಾಗಲೇ ಶಾಸಕರಾಗಿದ್ದೀರಿ ಮತ್ತೆ ಆರಿಸಿ ಬರುವುದಕ್ಕೆ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿ ಮಂಜಣ್ಣ ಅಂತ ಹೇಳಿದ್ದೆ. ಆದ್ರೆ ನನ್ನ ಹೇಳಿಕೆಯನ್ನ ತಿರುಚಿದ್ದಾರೆ. ಅಭ್ಯರ್ಥಿಗಳನ್ನ ಘೋಷಣೆ ಮಾಡೋದಕ್ಕೆ ನಾನು ಯಾರು? ನಾನು ಜನರ ವಿಶ್ವಾಸವನ್ನು ಉಳಿಸಿಕೊಂಡು ಹೋಗಿ ಅಂತ ಹೇಳುವುದರಲ್ಲಿ ತಪ್ಪೇನಿದೆ? ಎಂದು ಹೇಳಿದರು.

ರಕ್ತ ಕೇಂದ್ರಗಳು ಎನ್‌ಕ್ಯುಎಎಸ್ ಮಾನ್ಯತೆ ಕಡ್ಡಾಯ

ಬೆಂಗಳೂರು: ರಾಜ್ಯದ ಎಲ್ಲ ರಕ್ತ ಕೇಂದ್ರಗಳು ನ್ಯಾಷನಲ್ ಅಕ್ರಿಡೇಶನ್ ಬೋರ್ಡ್ ಫರ್ ಹಾಸ್ಪಿಟಲ್ಸ್ ಆ್ಯಂಡ್ ಹೆಲ್ತ್‌ಕೇರ್ ಪ್ರೊವೈಡರ್ಸ್ (ಎನ್‌ಎಬಿಎಚ್) ಮತ್ತು ನ್ಯಾಷನಲ್ ಕ್ವಾಲಿಟಿ ಅಶ್ಯೂರೆನ್ಸ್ ಸ್ಟ್ಯಾಂಡರ್ಡ್ಸ್ (ಎನ್‌ಕ್ಯುಎಎಸ್) ಮಾನ್ಯತೆಯನ್ನು ಪಡೆಯಲು ಸರ್ಕಾರ ಆದೇಶ ಹೊರಡಿಸಿದೆ.

ಸರ್ಕಾರದ ಅಡಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳ ರಕ್ತ ಕೇಂದ್ರಗಳು ಎನ್‌ಕ್ಯುಎಎಸ್ ಅಥವಾ ಎನ್‌ಎಬಿಎಚ್ ಮಾನ್ಯತೆ, ಸರ್ಕಾರಿ ರಕ್ತ ಕೇಂದ್ರಗಳು ಎನ್‌ಕ್ಯುಎಎಸ್ ಮಾನ್ಯತೆಯನ್ನು ಪಡೆಯಬೇಕು. ಎಲ್ಲ ರಕ್ತ ಕೇಂದ್ರಗಳು, ಒಂದು ವರ್ಷದೊಳಗೆ ಮತ್ತು ಹೊಸದಾಗಿ ಪರವಾನಗಿ ಪಡೆಯುವ ರಕ್ತ ಕೇಂದ್ರಗಳು, ಪರವಾನಗಿ ಪಡೆದ ಎರಡು ವರ್ಷದೊಳಗಾಗಿ ಎನ್‌ಎಬಿಎಚ್ ಅಥವಾ ಎನ್‌ಕ್ಯುಎಎಸ್ ಮಾನ್ಯತೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಮಾನ್ಯತೆಗೆ ತಗಲುವ ವೆಚ್ಚವನ್ನು ರಕ್ತ ಕೇಂದ್ರಗಳೇ ಭರಿಸಬೇಕು. ಒಂದು ವೇಳೆ ಮಾನ್ಯತೆ ಪಡೆಯದಿದ್ದಲ್ಲಿ, ರಕ್ತ ಕೇಂದ್ರದ ಪರವಾನಗಿಯನ್ನು ತಡೆಹಿಡಿಯಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ತಿಳಿಸಿದ್ದಾರೆ.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಶ್ರಮಕ್ಕೆ ಶ್ಲಾಘನೆ

ಬೆಂಗಳೂರು: ಶಾಲಾ ಶಿಕ್ಷಣ ಇಲಾಖೆ ಕಳೆದ ಎರಡೂವರೆ ವರ್ಷಗಳ ಅವಧಿಯಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ದುರ್ಬಲವಾದ ಮಕ್ಕಳನ್ನು ಪೋಷಿಸುವ ಸರ್ಕಾರಿ ಶಾಲೆಗಳ ನಿರ್ವಹಣೆ ಮತ್ತು ಗುಣಮಟ್ಟದ ಶಿಕ್ಷಣ ನೀಡಲು ಶಾಲಾ ಶಿಕ್ಷಣ ಸಚಿವ ಮಧುಬಂಗಾರಪ್ಪ ಶ್ರಮವನ್ನು ಕನ್ನಡ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಶ್ಲಾಘಿಸಿದ್ದಾರೆ.



ಈ ಕುರಿತು ಸಿಎಂ ಅವರಿಗೆ ಪತ್ರ ಬರೆದಿರುವ ಅವರು, 15 ಖಾಲಿಯಿರುವ 15 ಸಾವಿರ ಶಿಕ್ಷಕರ ನೇಮಕಾತಿಗೆ ಪ್ರಕ್ರಿಯೆ ಆರಂಭಿಸಿರುವುದು, ಕೆಪಿಎಸ್ ಶಾಲೆಗಳನ್ನು ಪ್ರಾರಂಭಿಸುವಲ್ಲಿ ಆಸಕ್ತಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷಾ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರುವಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಶ್ರಮಿಸಿದ್ದಾರೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಈ ನಡುವೆ ಶಿಕ್ಷಣ ಇಲಾಖೆ ಬಗ್ಗೆ ಅಧ್ಯಯನ ನಡೆಸಿ, 1995 ರಿಂದ 2000 ಅವಧಿಯಲ್ಲಿ ಆರಂಭವಾದ 1468 ಶಾಲೆಗಳನ್ನು ಹಂತ-ಹಂತವಾಗಿ ಅನುದಾನಕ್ಕೊಳಪಡಿಸಬೇಕು. ಇದು ಶಿಕ್ಷಣ ಇಲಾಖೆಯ ಹಾಗೂ ಮಕ್ಕಳ ಶ್ರೇಯೋಭಿವೃದ್ಧಿಗೆ ಹೊಸ ದಿಶೆಯನ್ನು ಕಲ್ಪಿಸಿದಂತಾಗುತ್ತದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.



ಆನ್‌ಲೈನ್‌ನಲ್ಲೂ ಮಾರಾಟ ಚಿಂತನೆ

ಆನ್‌ಲೈನ್‌ನಲ್ಲೂ ಇಂತಹ ಸಂಸ್ಕರಿತ ಮೀನುಗಳನ್ನು ವ್ಯಾಕ್ಯೂಮ್ ಪ್ಯಾಕ್‌ಗಳಲ್ಲಿ ತಲುಪಿಸಲೂ ನಿಗಮ ಚಿಂತನೆ ನಡೆಸಿದ್ದು, ಆನ್‌ಲೈನ್ ಮಾರಾಟಕ್ಕಾಗಿ ತನ್ನದೇ ವೆಬ್‌ಸೈಟ್ ರೂಪಿಸಲು ನಿಗಮ ಮುಂದಾಗಿದೆ. ಇಂದು ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದರೆ ಮಾರನೇ ದಿನ ಬೆಳಗ್ಗೆ ಗ್ರಾಹಕರಿಗೆ ತಲುಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಹೇಶ್‌ಕುಮಾರ್ ತಿಳಿಸಿದರು.

ಅರ್ಧ, ಒಂದು ಕೆ.ಜಿ. ಪ್ಯಾಕ್‌ಗಳಲ್ಲಿ ಲಭ್ಯ

ಮಲ್ಪೆ ಮತ್ತಿತರ ಭಾಗಗಳಿಂದ ನೇರವಾಗಿ ಮೀನನ್ನು ಬೆಂಗಳೂರಿಗೆ ತರಿಸಿ, ಸ್ವಚ್ಛ ಮತ್ತು ಶೂನ್ಯ ಡಿಗ್ರಿ ಉಷ್ಣಾಂಶದಲ್ಲಿಟ್ಟು ವ್ಯಾಕ್ಯೂಮ್ ಪ್ಯಾಕ್ ಮಾಡಿ ನಿಗಮದ ಮಳಿಗೆಗಳ ಮೂಲಕ ತಕ್ಷಣ ಗ್ರಾಹಕರಿಗೆ ವಿತರಿಸಲಾಗುವುದು. ಅರ್ಧ ಕೆ.ಜಿ., ಒಂದು ಕೆ.ಜಿ. ತೂಕದ ಪ್ಯಾಕ್‌ಗಳಲ್ಲಿ ಲಭ್ಯವಿರಲಿವೆ. ಪ್ಯಾಕ್‌ಗಳ ಮೇಲೆ ಭಾರತೀಯ ಆಹಾರ ಸುರಕ್ಷೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ)ದಿಂದ ಅನುಮೋದನೆಗೊಂಡ ಲೇಬಲ್ ಅಂಟಿಸಲಾಗುವುದು. ಗ್ರಾಹಕರಿಗೆ ಸಂಶಯ ಬಂದರೆ ದೂರು ಸಲ್ಲಿಸಬಹುದು.

ಬೆಂಗಳೂರು: ಕಡಿಮೆ ಅವಧಿಯಲ್ಲಿ ಮೀನು ಆಹಾರ ಸಿದ್ಧಪಡಿಸಲು ಅನುಕೂಲವಾಗುವಂತೆ ರೆಡಿ ಟು ಕುಕ್ ಮಾದರಿಯಲ್ಲಿ ತಾಜಾ ಮೀನುಗಳನ್ನು ವ್ಯಾಕ್ಯೂಮ್ ಪ್ಯಾಕ್‌ಗಳಲ್ಲಿ ಒದಗಿಸಲು ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ಮುಂದಾಗಿದೆ.

ಹಸಿ ಮೀನಿನ ಮೇಲೆ ಮುದ್ರಿತ ಚಿಹ್ನೆ ಬಳಸಲು ಅವಕಾಶವಿಲ್ಲವಾದ್ದರಿಂದ ಪ್ಯಾಕ್ ಮೇಲೆ ಗುಣಮಟ್ಟ ಕಾಯ್ದುಕೊಂಡಿರುವ ಚಿಹ್ನೆ ಮುದ್ರಿಸಿ ಮಾರಾಟ ಮಾಡಲು ನಿಗಮ ನಿರ್ಧರಿಸಿದೆ. ತಮ್ಮದೇ ಆದ ಬ್ರಾಂಡಿಂಗ್ ಮಾಡಲು ಚಿಹ್ನೆಯನ್ನು ಕೂಡ ವಿನ್ಯಾಸ ಮಾಡಲು ನಿಗಮ ಮುಂದಾಗಿದ್ದು, ಮಾರ್ಚ್ ಅಥವಾ ಏಪ್ರಿಲ್ ಒಳಗಾಗಿ ರೆಡಿ ಟು ಕುಕ್ ಮೀನುಗಳನ್ನು ಮಾರುಕಟ್ಟೆಗೆ ಸರಬರಾಜು ಮಾಡಲಾಗುವುದು ಎಂದು ಎಂದು ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕ ಯು. ಮಹೇಶ್ ಕುಮಾರ್ ತಿಳಿಸಿದ್ದಾರೆ.

ಹೊಸ ದಿಗಂತದೊಂದಿಗೆ ಮಾತನಾಡಿದ ಅವರು, ಬೆಂಗಳೂರಿನಲ್ಲಿ 28 ಮೀನು ಮಾರಾಟ ಏಜೆನ್ಸಿಗಳಿವೆ. ಕೆಲವೆಡೆ ಕಡಿಮೆ ದರಕ್ಕೆ ಕಳಪೆ ಗುಣಮಟ್ಟದ ಮೀನುಗಳನ್ನು ಖರೀದಿಸಿ ನಿಗಮದ ಮೀನೆಂದು ಮಾರಾಟ ಮಾಡುತ್ತಿರುವ ಆರೋಪಗಳು ಕೇಳಿಬಂದಿವೆ. ಅಲ್ಲದೆ, ತಾಜಾ ಮೀನನ್ನು ಸಂಸ್ಕರಿಸದೆ ಮೂಲ ಸ್ವರೂಪದಲ್ಲೇ ನೀಡಿದರೆ ಅದನ್ನು ಸ್ವಚ್ಛಗೊಳಿಸಿ ಬಳಸಲು ಹೆಚ್ಚು ಸಮಯ ಬೇಕಾಗುತ್ತದೆ.

ಅಲ್ಲದೆ ಸಂಸ್ಕರಣೆ ಕಷ್ಟದ ಕೆಲಸ. ಹೀಗಾಗಿ, ನಾವೇ ಸ್ವಚ್ಛಗೊಳಿಸಿ ಸಂಸ್ಕರಣೆ ಮಾಡಿ ವ್ಯಾಕ್ಯೂಮ್ ಪ್ಯಾಕ್ ಮಾಡಿದ ಮೀನನ್ನು ತನ್ನದೇ ಬ್ರ್ಯಾಂಡ್‌ನಲ್ಲಿ ಮಾರಾಟ ಮಾಡಲು ನಿಗಮ ಉದ್ದೇಶಿಸಿದೆ ಎಂದು ಮಾಹಿತಿ ನೀಡಿದರು. ಮಾರುಕಟ್ಟೆ ಬೆಲೆಗಿಂತ 20-30 ರೂ. ಕಡಿಮೆ ಬೆಲೆಗೆ ತಾಜಾ ಸಂಸ್ಕರಿತ ಮೀನು ಒದಗಿಸಲಾಗುವುದು ಎಂದು ಮಹೇಶ್‌ಕುಮಾರ್ ತಿಳಿಸಿದರು.

ಹೊರಗುತ್ತಿಗೆ ಆಧಾರದಲ್ಲಿ ಯೋಜನೆ

ಸಂಸ್ಕರಿತ ಮೀನಿಗೆ ಬ್ರ್ಯಾಂಡ್ ಸಿಗುವವರೆಗೆ ಯಂತ್ರೋಪಕರಣಗಳಿಗಾಗಿ ಹಣ ಹೂಡಿಕೆ ಮಾಡುವುದಿಲ್ಲ. ಬದಲಿಗೆ ಬೆಂಗಳೂರಿನಲ್ಲಿ ಸಾಕಷ್ಟು ವ್ಯಾಕ್ಯೂಮ್ ಪ್ಯಾಕಿಂಗ್ ಸೆಂಟರ್‌ಗಳಿದ್ದು, ಅವುಗಳೊಂದಿಗೆ ಹೊರಗುತ್ತಿಗೆ ಆಧಾರದಲ್ಲಿ ನಾವು ಯೋಜನೆ ಆರಂಭಿಸುತ್ತೇವೆ. ಇನ್ನು ಎರಡು ತಿಂಗಳಲ್ಲಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು. ಇದಕ್ಕೆ ಅಗತ್ಯ ಸಿದ್ಧತೆಗಳನ್ನು ಇಲಾಖೆಯ ವತಿಯಿಂದ ಮಾಡಲಾಗುತ್ತಿದೆ ಎಂದು ಮಹೇಶ್‌ಕುಮಾರ್ ಹೇಳಿದರು.

“ರೆಡಿ ಟು ಕುಕ್ ಸಂಸ್ಕರಿಸಿದ ತಾಜಾ ಮೀನನ್ನು ವ್ಯಾಕ್ಯೂಮ್ ಪ್ಯಾಕ್‌ಗಳಲ್ಲಿ ವಿತರಿಸುವುದರಿಂದ ನಿಗಮದ ಕುರಿತು ಸಾರ್ವಜನಿಕರಲ್ಲಿ ವಿಶ್ವಾಸಾರ್ಹತೆ ಹೆಚ್ಚುತ್ತದೆ. ಗುಣಮಟ್ಟದ ಮೀನಿಗೆ ಉತ್ತಮ ಬ್ರ್ಯಾಂಡ್ ಕೂಡ ದೊರೆಯುತ್ತದೆ. ಜತೆಗೆ ಮೀನು ಕೃಷಿಕರಿಗೂ ಇದು ನೆರವಾಗಲಿದೆ.

ಯು. ಮಹೇಶ್ ಕುಮಾರ್, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕ

ಲಕ್ಷ ರೂಪಾಯಿ ದಾಟಿದ ಮಾದರಿ ಸರಕು ಅಡಕೆ ಬೆಲೆ


ಶಿವಮೊಗ್ಗ: ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸರಕು ಮಾದರಿಯ ಪ್ರತಿ ಕ್ವಿಂಟಾಲ್ ಅಡಕೆ ಧಾರಣೆ ಲಕ್ಷ ದಾಟಿದ್ದು, ಅಡಕೆ ಇತಿಹಾಸದಲ್ಲಿಯೇ ದಾಖಲೆ ಬೆಲೆಗೆ ಟೆಂಡರ್‌ಆಗಿದೆ. ಕಳೆದ ಒಂದೆರಡು ವರ್ಷಗಳಿಂದ ಸರಕಿನ ಬೆಲೆ ಲಕ್ಷಕ್ಕೆ ಸಮೀಪ ಬಂದು ಹೋಗುತ್ತಿತ್ತಾದರೂ ಲಕ್ಷ ದಾಟಿರಲಿಲ್ಲ. ಆದರೆ ಬುಧವಾರ ಒಂದು ಕ್ವಿಂಟಾಲ್‌ಗೆ ಗರಿಷ್ಠ 1,00, 340 ರೂ. ಆಗಿದ್ದು, ಇದು ದಾಖಲೆಯ ಬೆಲೆಯಾಗಿದೆ.

ಉಳಿದೆಲ್ಲಾ ಮಾದರಿಯ ಅಡಿಕೆಯ ಬೆಲೆ ಯಥಾಸ್ಥಿತಿಯಲ್ಲಿದ್ದು, ಸರಕಿಗೆ ಮಾತ್ರ ಹೆಚ್ಚಾಗಿದೆ. ಸರಕು ಮಾದರಿ ಅಡಕೆ ಸಂಸ್ಕರಣೆ ಮಾಡುವುದನ್ನೇ ಬೆಳೆಗಾರರು ಮರೆತಿದ್ದಾರೆ. ಚಿಗುರು ಇರುತ್ತಿದ್ದಂತೆ ಕಟಾವು ಮಾಡಿ ಕೈಯಲ್ಲಿಯೇ ಸುಲಿದು ಕತ್ತರಿಸಿ ಬೇಯಿಸಬೇಕಿದೆ. ಈ ರೀತಿಯ ಸಂಸ್ಕರಣೆಗೆ ಕೆಲಸವೂ ಹೆಚ್ಚು. ಹೀಗಾಗಿ ಬೆಳೆಗಾರರ ಸರಕು ಸಂಸ್ಕರಣೆ ಮಾಡುತ್ತಿಲ್ಲ. ಮಾರುಕಟ್ಟೆಗೆ ಬರುವ ಈ ಮಾದರಿಯ ಪ್ರಮಾಣ ಕೂಡ ಕಡಿಮೆ. ಬಹುತೇಕರು ಚೇಣಿ ಕೊಡುತ್ತಿರುವುದರಿಂದ ಚಿಗುರು (ಬಲಿಯದ) ಅಡಕೆ ತೂಕ ಬರುವುದಿಲ್ಲ. ಹೀಗಾಗಿ ಬೆಳೆಗಾರರು ಬಲಿಯದ ಅಡಕೆ ಮಾರಾಟ ಮಾಡುತ್ತಿಲ್ಲ. ಖರೀದಿ ಮಾಡುವವರೂ ಕೂಡ ಖರೀದಿಸುತ್ತಿಲ್ಲ. ಇದರಿಂದಾಗಿ ಹೆಚ್ಚಿನ ಬೆಲೆ ಬಂದಿದೆ.

ಸಂಪಾದಕೀಯ

ಹುಚ್ಚು ಉಮೇದಿನ ಅಪಘಾತಗಳು

ಅಪ್ರಾಪ್ತರು ವಾಹನಗಳನ್ನು ಚಲಾಯಿಸುವುದು, ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತವೆಸಗುವುದು ಮತ್ತು ಇತರರ ಸಾವಿಗೆ ಕಾರಣರಾಗುವುದು ಇತ್ತೀಚಿನ ದಿನಗಳಲ್ಲಿ ಪ್ರತಿದಿನವೆಂಬಂತೆ ವರದಿಯಾಗುತ್ತಲಿದೆ. ದೊಡ್ಡ ಉದ್ಯಮಿಯ ಮಗನೊಬ್ಬ ಐಷಾರಾಮಿ ಕಾರನ್ನು ಪಾದಚಾರಿಗಳ ಮೇಲೆ ಚಲಾಯಿಸಿ ಅವರು ಆಸ್ಪತ್ರೆ ಸೇರುವಂತೆ ಮಾಡಿದ ಘಟನೆ, ಇನ್ನೊಬ್ಬ ಸಿರಿವಂತನ ಅಪ್ರಾಪ್ತ ಪುತ್ರ ಅತ್ಯಂತ ದುಬಾರಿ ಕಾರನ್ನು ನಿರ್ಲಕ್ಷ್ಯದಿಂದ ಚಲಾಯಿಸಿ ಅಪಘಾತವೆಸಗಿ ಕೆಲವರ ಸಾವಿಗೆ ಕಾರಣವಾದುದು, ಮೊನ್ನೆ ಮೊನ್ನೆಯಷ್ಟೆ ದಿಲ್ಲಿಯ



ದ್ವಾರ್ಕಾ ರಸ್ತೆಯಲ್ಲಿ ಅಪ್ರಾಪ್ತನೊಬ್ಬ ರೀಲ್ಸ್ ಮಾಡುವ ಉಮೇದಿನಲ್ಲಿ ಕಾರನ್ನು ಅಜಾಗರೂಕತೆಯಿಂದ ಚಲಾಯಿಸಿ ಯುವ ಬೈಕ್ ಸವಾರನೊಬ್ಬನ ಜೀವ ತೆಗೆದುದು... ಇವೆಲ್ಲವೂ ಅಪಾಯಕಾರಿ ಬೆಳವಣಿಗೆಯನ್ನು ತೋರಿಸುತ್ತವೆ. ಕೆಲದಿನಗಳ ಹಿಂದೆ ಕರ್ನಾಟಕದಲ್ಲಿ ಕೂಡಾ ಅಪ್ರಾಪ್ತರು ವೇಗವಾಗಿ ಚಲಾಯಿಸುತ್ತಿದ್ದ ಕಾರು ಅಪಘಾತಕ್ಕೀಡಾಗಿ ಅದರಲ್ಲಿದ್ದವರೆಲ್ಲರೂ ಸಾವಿಗೀಡಾಗಿದ್ದರು. ಸಿರಿವಂತಿಕೆಯ ಮದ, ಸುಲಭದಲ್ಲಿ ಕೈಗೆ ಸಿಗುವ ಆಧುನಿಕ ವಾಹನಗಳು, ರೀಲ್ಸ್ ಮಾಡುವ ಹುಚ್ಚು, ವಾಹನ ಚಲಾವಣೆಯ ಹುಮ್ಮಸ್ಸು ಮೊದಲಾದವೆಲ್ಲ ಒಟ್ಟು ಸೇರಿ ಅಪ್ರಾಪ್ತರಿಂದ ಮತ್ತು ಯುವಕರಿಂದ ಹೆಚ್ಚೆಚ್ಚು ರಸ್ತೆ ಅಪಘಾತಗಳು ನಡೆಯಲು ಕಾರಣವಾಗುತ್ತಿವೆ.

ಅಪ್ರಾಪ್ತರು ವಾಹನ ಚಲಾಯಿಸುವುದನ್ನು ಗಂಭೀರ ಪ್ರಕರಣವಾಗಿ ಪರಿಗಣಿಸಿರುವ ಸರಕಾರವು ಇದನ್ನು ತಡೆಯಲು ದಂಡವನ್ನು ಹೆಚ್ಚಿಸಿ, ಅಪ್ರಾಪ್ತರ ಹೆತ್ತವರ ಮೇಲೆ ಕೂಡಾ ಕ್ರಮ ತೆಗೆದುಕೊಳ್ಳುವ ಕಾನೂನು ತಂದಿದ್ದರೂ ಅಪ್ರಾಪ್ತರ ವಾಹನ ಚಲಾವಣೆಯ ಹುಚ್ಚು ನಿಂತಿಲ್ಲ. ವರ್ಷ ಕಳೆದಂತೆ ವಾಹನ ಚಲಾಯಿಸಿ ದಂಡ ಕಟ್ಟುವ ಅಪ್ರಾಪ್ತರ ಸಂಖ್ಯೆ ಹೆಚ್ಚುತ್ತಲೇ ಇದೆಯೆನ್ನುವುದು ಪೊಲೀಸರ ಹೇಳಿಕೆ. ವಿಪರ್ಯಾಸವೆಂದರೆ ಬಹುತೇಕ ಸಂದರ್ಭಗಳಲ್ಲಿ ಹೆತ್ತವರೇ ಅಪ್ರಾಪ್ತರು ವಾಹನ ಚಲಾಯಿಸುವುದನ್ನು ಪ್ರೋತ್ಸಾಹಿಸುತ್ತಾರೆ. ತಮ್ಮ ಮಕ್ಕಳು ಸಣ್ಣ ವಯಸ್ಸಿನಲ್ಲೇ ವಾಹನ ಚಲಾಯಿಸುವುದು ಹೆಮ್ಮೆಯ ವಿಷಯವೆಂಬಂತೆ ಪರಿಗಣಿಸುತ್ತಾರೆ. ಐಷಾರಾಮಿ ವಾಹನಗಳನ್ನು ಅತಿವೇಗದಿಂದ ಓಡಿಸುವುದು ಕೆಲವು ಮಕ್ಕಳಿಗೆ ಶೋಕಿಯೆಂಬಂತಾಗಿದೆ ಕೂಡಾ. ಆದರೆ ಅವರಿಂದ ಎಸಗಲ್ಪಡುವ ಅವಘಡಗಳು ಇತರರ ಜೀವಹರಣಕ್ಕೆ ಕಾರಣವಾಗುವುದನ್ನು ಕ್ಷಮಿಸಲಾಗುವುದಿಲ್ಲ. ಈ ನಿಟ್ಟಿನಲ್ಲಿ ಸಂಬಂಧಿತ ಇಲಾಖೆಗಳಷ್ಟೇ ಅಲ್ಲದೆ, ಮಕ್ಕಳ ಹೆತ್ತವರು ಕೂಡಾ ಹೆಚ್ಚು ಜಾಗೃತರಾಗಬೇಕಾದ ಅಗತ್ಯವಿದೆ. ಮಕ್ಕಳ ಕೈಗೆ ವಾಹನ ಕೊಡುವುದನ್ನು ನಿಲ್ಲಿಸಬೇಕಾಗಿದೆ.

ತಮಿಳುನಾಡಿನ ಆಲೋಚನೆ ಏಕೆ ಹೀಗೆ?

ಗುರುತರ
• ಸೋಮಶೇಖರ ಸಿ.ಜಿ.
sompreethi@gmail.com



ನಾವು ಹಿಂದಿ ಒಪ್ಪಿದರೆ, ಭಾರತವನ್ನೂ ಅಪ್ಪಿಕೊಂಡಂತಾಗುತ್ತದೆ ಎಂಬುದು ತಮಿಳುನಾಡಿನ ಡಿಎಂಕೆ ಸರ್ಕಾರವೂ ಸೇರಿದಂತೆ ಇತಿಹಾಸ ಅವರಿಗೆ ಹೇಳಿಕೊಟ್ಟ ಪಾಠವೇ ಇರಬೇಕು. ಸ್ವಾತಂತ್ರ್ಯಪೂರ್ವದಿಂದಲೂ ಈ ಹಿಂದಿ ವಿರೋಧಿ ಗುಣ ಮತ್ತು ಅಪ್ರತಿಮ ತಮಿಳು ಪ್ರೀತಿ ಪ್ರತ್ಯೇಕತೆಯ ನಿಟ್ಟಿನಲ್ಲೇ ಯೋಚಿಸುವಂತೆ ಮಾಡಿತು. ಇದಕ್ಕೆ ಈ ರಾಜ್ಯಗಳ ಇತಿಹಾಸದ ನಾಯಕರು ಕಾರಣರೋ ಅಥವಾ ರಾಜಕೀಯ ಕಾರಣವೋ ಗೊತ್ತಿಲ್ಲ. ಅಲ್ಲದೆ, ಸ್ವಾತಂತ್ರ್ಯ ಬಂದಾಗಿನಿಂದಲೂ ತನಗೆ ವಿಶೇಷ ಅಥವಾ ಸ್ವಾಯತ್ತ ಅಧಿಕಾರ ಬೇಕು ಎಂಬ ನಿಟ್ಟಿನಲ್ಲಿ ಹೋರಾಟ ನಡೆಸುತ್ತಲೇ ಇದೆ. ವಿಚಿತ್ರವೆಂದರೆ, ಒಂದು ಕಾಲದಲ್ಲಿ ತಮಿಳುನಾಡಿನ ಈ ಎಲ್ಲ ಬೇಡಿಕೆಗಳಿಗೆ ಇಲ್ಲ ಎಂದು ಹೇಳುತ್ತಿದ್ದ ಕಾಂಗ್ರೆಸ್, ಇಂದು ಅದರ ಜತೆ ಸೇರಿ ಸ್ವಾಯತ್ತತೆ ಕೇಳುವುದರಲ್ಲಿ ತಪ್ಪೇನಿಲ್ಲ ಎನ್ನುತ್ತಿದೆ.

ಮತ್ತೆ ಈ ವಿಚಾರ ಸುದ್ದಿಗೆ ಬರಲು ಕಾರಣವೂ ಇದೆ. ಇತ್ತೀಚೆಗಷ್ಟೇ ತಮಿಳುನಾಡು ಸರ್ಕಾರವು ನ್ಯಾ. ಕುರಿಯನ್ ಜೋಸೆಫ್ ಅವರ ನೇತೃತ್ವದ ಸಮಿತಿಯಿಂದ ಕೇಂದ್ರ ಮತ್ತು ರಾಜ್ಯಗಳ ಸಂಬಂಧ ಸುಧಾರಣೆ ಮತ್ತು ಆಡಳಿತಾತ್ಮಕ ಸುಧಾರಣೆ ಬಗ್ಗೆ ವರದಿಯೊಂದನ್ನು ಸ್ವೀಕರಿಸಿದೆ. ಇದರಲ್ಲಿ ರಾಜ್ಯಗಳಿಗೆ ಹೆಚ್ಚು ಸ್ವಾಯತ್ತತೆ ಇರಬೇಕು, ಕೇಂದ್ರ ಕೇವಲ ಒಕ್ಕೂಟ ತತ್ವ ಅನುಸರಿಸಬೇಕು, ಕೇಂದ್ರ ಪಟ್ಟಿಯಲ್ಲಿರುವ ಕೆಲವು ಅಂಶಗಳನ್ನು ರಾಜ್ಯಕ್ಕೆ ಕಳಿಸಬೇಕು ಎಂಬುದನ್ನು ಉಲ್ಲೇಖಿಸಲಾಗಿದೆ. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ತಮ್ಮ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋವೊಂದನ್ನು ಹಾಕಿಕೊಂಡು ಸ್ವಾಯತ್ತತೆಯ ಒತ್ತಾಯವನ್ನು ಮಂಡಿಸಿದ್ದಾರೆ.

ಈಗ ಒಂದು ಚಿಂತನೆ ಮುಂದಿಟ್ಟುಕೊಂಡರೆ, ಭಾರತದಲ್ಲಿ ರಾಜ್ಯಗಳಿಗೆ ಸ್ವಾಯತ್ತತೆ ನೀಡಬಹುದೇ? ನೀಡಿದರೆ ಎಲ್ಲವೂ ಸರಿಯಾದೀತೇ? ಭಾರತ, ಅಮೆರಿಕದಂಥ ಆಡಳಿತಾತ್ಮಕ ವ್ಯವಸ್ಥೆ ಹೊಂದಿದೆಯೇ? ಈ ಎಲ್ಲ ಪ್ರಶ್ನೆಗಳನ್ನು ಮುಂದಿಟ್ಟುಕೊಂಡೇ ಆಲೋಚನೆ ನಡೆಸಬೇಕು.

ಮೂಲಕ್ಕೇ ಹೋಗಿ ಯೋಚನೆ ಮಾಡೋಣ. ಭಾರತ ಒಂದು ಫೆಡರಲ್ ವ್ಯವಸ್ಥೆಯ ದೇಶ. ಆದರೆ ಅದು ಅಮೆರಿಕದಂತೆ ರಾಜ್ಯಗಳ ಒಕ್ಕೂಟವಲ್ಲ, ಒಕ್ಕೂಟದೊಳಗಿನ ರಾಜ್ಯಗಳು ಎಂಬ ವಿಶೇಷ ವಿನ್ಯಾಸ ಹೊಂದಿದೆ. ಸಂವಿಧಾನ ರಚನೆಯಾಗುವ ವೇಳೆ ಡಾ.ಬಿ.ಆರ್. ಅಂಬೇಡ್ಕರ್ ಸೇರಿದಂತೆ ಸಂವಿಧಾನ ಸೃಷ್ಟಿಕರ್ತರು ದೇಶದ ವಿಭಜನೆಯ ಕಹಿ ಅನುಭವ, ಭಾಷಾಸಾಂಸ್ಕೃತಿಕ ವೈವಿಧ್ಯ ಮತ್ತು ಭದ್ರತಾ ಆತಂಕಗಳನ್ನು ಗಮನದಲ್ಲಿಟ್ಟುಕೊಂಡು ದಿಲ್ಲಿ ಮಟ್ಟದಲ್ಲಿ ಬಲವಾದ ಕೇಂದ್ರವನ್ನು ಆಯ್ಕೆ ಮಾಡಿದರು. ಅದರ ಫಲವಾಗಿ, ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಮಾನ ಪಟ್ಟಿ ಮೂಲಕ ಅಧಿಕಾರ ಹಂಚಿಕೆ ಮಾಡಲಾಯಿತು.

ಅಮೆರಿಕದ ಸಂವಿಧಾನದಲ್ಲಿ ರಾಜ್ಯಗಳಿಗೆ ಮೂಲಾಧಿಕಾರ ಹೆಚ್ಚು. ಆದರೆ, ಕೇಂದ್ರಕ್ಕೆ ನೀಡಿದ ಅಧಿಕಾರ ಮಾತ್ರ ಸೀಮಿತ. ಆದರೆ ಭಾರತದಲ್ಲಿ ರಾಷ್ಟ್ರೀಯ ಏಕತೆ, ಭದ್ರತೆ, ವಿದೇಶಾಂಗ, ಹಣಕಾಸು ಸ್ಥಿರತೆ ಮೊದಲಾದ ವಿಷಯಗಳಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಮುಖ ಸ್ಥಾನ ನೀಡಲಾಗಿದೆ. ಇದರ ನಡುವೆಯೂ ರಾಜ್ಯಗಳಿಗೆ ಶಿಕ್ಷಣ, ಕೃಷಿ, ಆರೋಗ್ಯ, ಸ್ಥಳೀಯ ಆಡಳಿತ ಮೊದಲಾದ ಕ್ಷೇತ್ರಗಳಲ್ಲಿ ಸಮರ್ಪಕ ಅಧಿಕಾರವಿದೆ.

ತಮಿಳುನಾಡಿನ ರಾಜಕೀಯ ಚಿಂತನೆಯ ಮೂಲವನ್ನು ದ್ರಾವಿಡ ಚಳವಳಿಯಲ್ಲಿ ಹುಡುಕಬೇಕು. 20ನೇ ಶತಮಾನದ ಆರಂಭದಲ್ಲಿ ಉಂಟಾದ ಸ್ವಾಭಿಮಾನ ಚಳವಳಿ ಮತ್ತು ನಂತರದ ದ್ರಾವಿಡ ರಾಜಕೀಯವು ಕೇಂದ್ರ ಸರ್ಕಾರದ ಮೇಲೆ ಅವಿಶ್ವಾಸವನ್ನು ಕಟ್ಟಿಕೊಂಡಿತು (ಆಗ ಕೇಂದ್ರದಲ್ಲಿ ಬಿಜೆಪಿ ಇರಲಿಲ್ಲ, ಕಾಂಗ್ರೆಸ್ ಇತ್ತು). ಹಿಂದುಳಿದ ವರ್ಗಗಳ ಪ್ರತಿನಿಧಿತ್ವ, ಹಿಂದಿ ಹೇರಿಕೆಯ ವಿರುದ್ಧದ ಹೋರಾಟ, ಉತ್ತರ ಭಾರತದ ರಾಜಕೀಯ-ಸಾಂಸ್ಕೃತಿಕ ಪ್ರಭಾವದ ಭೀತಿ ಇವುಗಳೆಲ್ಲ ಸೇರಿ 'ರಾಜ್ಯ ಹಕ್ಕುಗಳು' ಎಂಬ ಧ್ವನಿಯನ್ನು ಗಟ್ಟಿಗೊಳಿಸಿತು.

ಇತಿಹಾಸವನ್ನು ಮತ್ತಷ್ಟು ಕೆದಕಿದರೆ, 1960ರ ದಶಕದಲ್ಲಿ ಹಿಂದಿ ವಿರೋಧಿ ಚಳವಳಿಗಳು ತಮಿಳುನಾಡಿನಲ್ಲಿ ಭಾರೀ ರೂಪ ಪಡೆದವು. ಇದರಿಂದಲೇ ಕೇಂದ್ರ-ರಾಜ್ಯ ಸಂಬಂಧಗಳು ರಾಜಕೀಯವಾಗಿ ತೀವ್ರವಾದವು. 1967ರಲ್ಲಿ ದ್ರಾವಿಡ ಪಕ್ಷಗಳ ಅಧಿಕಾರ ಪ್ರವೇಶದ ಬಳಿಕ, 'ರಾಜ್ಯ ಸ್ವಾಯತ್ತತೆ' ರಾಜಕೀಯ ಘೋಷಣೆಯಾಗಿ ರೂಪುಗೊಂಡಿತು. ಒಂದು ಹಂತದಲ್ಲಿ 'ದ್ರಾವಿಡ ನಾಡು' ಬೇಡಿಕೆಯೂ ಕೇಳಿಬಂದಿತ್ತು. ನಂತರ ಅದು ಸಂವಿಧಾನಾತ್ಮಕ ಸ್ವಾಯತ್ತತೆ ಚರ್ಚೆಗೆ ಸೀಮಿತವಾಯಿತು.

ತಮಿಳುನಾಡಿನ ಭೂ ಪ್ರದೇಶವೂ ವಿಶಿಷ್ಟ ರೀತಿಯಲ್ಲಿದೆ. ಶ್ರೀಲಂಕಾದ ತಮಿಳು ಪ್ರಶ್ನೆ, ಮೀನುಗಾರರ ಸಮಸ್ಯೆ, ಕಡಲ್ ಸೀಮಾ ಭದ್ರತೆಯಂಥ ವಿಚಾರಗಳು ರಾಜ್ಯದ ರಾಜಕೀಯ ಮನೋಭಾವವನ್ನು ಪ್ರಭಾವಿಸಿದೆ. ಶ್ರೀಲಂಕಾದ ಒಳಹೋರಾಟದ ಸಂದರ್ಭದಲ್ಲಿ ತಮಿಳು ಜನಾಂಗೀಯ ಭಾವನೆ ತೀವ್ರಗೊಂಡಿತು. ಕೇಂದ್ರ ಸರ್ಕಾರದ ವಿದೇಶಾಂಗ ನೀತಿಗಳಲ್ಲಿ ರಾಜ್ಯದ ಮಾತು ಕೇಳಿಸಿಕೊಳ್ಳಬೇಕೆಂಬ ಮನೋಭಾವ ಹೆಚ್ಚಾಯಿತು. ಇದನ್ನು ಬೇಕಾದರೆ, ರಾಜೀವ್ ಗಾಂಧಿ ಅವರ ಹತ್ಯೆಯಿಂದ ಹಿಡಿದು, ಅದರ ಹಿಂದಿನ ಎಲ್‌ಟಿಟಿಇ ಹೋರಾಟ ಮತ್ತು ತಮಿಳು ರಾಜಕೀಯ ಪಕ್ಷಗಳ ಸಂಬಂಧಗಳನ್ನೂ ಓರೆಗೆ ಹಚ್ಚಬಹುದು. ಎಲ್‌ಟಿಟಿಇ ಜತೆಗೆ ಡಿಎಂಕೆ ಹೊಂದಿದ್ದ ಸಂಬಂಧ ಎಂಥದ್ದು ಎಂಬುದರ ಬಗ್ಗೆಯೂ ಯೋಚನೆ ಮಾಡಬಹುದು.

ಇದಲ್ಲದೆ, ದಕ್ಷಿಣ ರಾಜ್ಯಗಳ ಆರ್ಥಿಕ ಬೆಳವಣಿಗೆ ವೇಗವಾಗಿದ್ದು, 'ಹಣಕಾಸು ಹಂಚಿಕೆ ನ್ಯಾಯಸಮ್ಮತವೇ?' ಎಂಬ ಪ್ರಶ್ನೆಗಳನ್ನು ಏಳುವಂತೆ ಮಾಡಿದೆ. ಹಣಕಾಸು ಆಯೋಗದ ಶಿಫಾರಸುಗಳಲ್ಲಿ ಜನಸಂಖ್ಯೆ ಮಾನದಂಡದ ಬಳಕೆ, ತೆರಿಗೆ ಹಂಚಿಕೆ ಇತ್ಯಾದಿ ವಿಷಯಗಳಲ್ಲಿ ತಮಿಳುನಾಡು ಸೇರಿದಂತೆ ಕೆಲ ದಕ್ಷಿಣ ರಾಜ್ಯಗಳು ಅಸಮಾಧಾನ ವ್ಯಕ್ತಪಡಿಸಿವೆ. 'ನಾವು ಹೆಚ್ಚು ಉತ್ಪಾದಿಸುತ್ತೇವೆ; ಕಡಿಮೆ ಪಡೆಯುತ್ತೇವೆ' ಎಂಬ ರಾಜಕೀಯ ವಾದ ಇಲ್ಲಿ ರೂಪುಗೊಂಡಿದೆ. ಇದನ್ನು ಕರ್ನಾಟಕವೂ ಬಲವಾಗಿ ಪ್ರತಿಪಾದಿಸುತ್ತದೆ. ಆದರೆ, ಇಂದಿನವರೆಗೂ ಕರ್ನಾಟಕ ಸ್ವಾಯತ್ತತೆ ವಿಚಾರದತ್ತ ಹೋಗಿಲ್ಲ ಎಂಬುದನ್ನು ಮನಗಾಣಬೇಕು. ಏಕೆಂದರೆ, ಸ್ವಾತಂತ್ರ್ಯ ಬಂದಾಗಿನಿಂದಲೂ, ಕರ್ನಾಟಕ ಈ ನಿಟ್ಟಿನಲ್ಲಿ ಬೇರೆಯದ್ದೇ ರೀತಿಯ ಮನೋಭಾವ ಹೊಂದಿದೆ. ಮಧ್ಯಂತರದಲ್ಲಿ ಒಂದಷ್ಟು ವರ್ಷಗಳನ್ನು ಬಿಟ್ಟರೆ, ಕರ್ನಾಟಕದಲ್ಲಿ ಹೆಚ್ಚು ಬಾರಿ ಪ್ರಾದೇಶಿಕ ಪಕ್ಷಗಳಿಗಿಂತ ರಾಷ್ಟ್ರೀಯ ಪಕ್ಷಗಳದ್ದೇ ಆಡಳಿತವಿದೆ. ಅದರಲ್ಲೂ ಕಾಂಗ್ರೆಸ್ ಹೆಚ್ಚು ಬಾರಿ ಆಡಳಿತ ನಡೆಸಿದ್ದು, ಇಂಥ ಮನೋಭಾವಗಳು ಹುಟ್ಟುವಂತೆ ಮಾಡಿದೆ.

ಇದರ ನಡುವೆಯೇ, ಬೇರೆ ರಾಜ್ಯಗಳಿಗೆ ಇಲ್ಲದ ಸಮಸ್ಯೆ ತಮಿಳುನಾಡಿಗೆ ಮಾತ್ರ ಏಕೆ ಎಂಬ ಪ್ರಶ್ನೆಗಳೂ ಇವೆ. ಆದರೆ, ತಮಿಳುನಾಡಿನಂತೆಯೇ ಬೇರೆ ಬೇರೆ ರಾಜ್ಯಗಳೂ ಬೇರೆ ಬೇರೆ ಅವಧಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಸಿಡಿದಿವೆ. ಅದು ಈಗಿನ ಬಿಜೆಪಿ ಸರ್ಕಾರದಲ್ಲಿ ಮಾತ್ರ ಎಂತೇನಿಲ್ಲ. ಹಿಂದೆ ಕಾಂಗ್ರೆಸ್ ಇದ್ದಾಗಲೂ ಇಂಥ ಪ್ರಶ್ನೆಗಳು ಉದ್ಭವವಾಗಿವೆ.

ಅಂದರೆ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಕೇರಳ, ಪಂಜಾಬ್ ಮುಂತಾದ ರಾಜ್ಯಗಳೂ ಹಲವು ಬಾರಿ ಕೇಂದ್ರದ ವಿರುದ್ಧ ಸ್ವಾಯತ್ತತೆ ವಿಚಾರ ಎತ್ತಿವೆ. ಆದರೆ ತಮಿಳುನಾಡಿನಲ್ಲಿ ಇದು ನಿರಂತರ ರಾಜಕೀಯ ಅಜೆಂಡಾ ಆಗಿರುವುದು ದ್ರಾವಿಡ ರಾಜಕೀಯದ ವೈಶಿಷ್ಟ್ಯ. ಭಾಷಾ-ಸಾಂಸ್ಕೃತಿಕ ಹೆಮ್ಮೆ, ಪ್ರಾದೇಶಿಕ ಅಸ್ತಿತ್ವದ ಗಟ್ಟಿತನ, ಪ್ರಬಲ ಪ್ರಾದೇಶಿಕ ಪಕ್ಷಗಳು ಇವುಗಳು ಕೇಂದ್ರದ ವಿರುದ್ಧ ಧ್ವನಿಯನ್ನು ನಿರಂತರವಾಗಿ ಜೀವಂತವಾಗಿರಿಸುತ್ತವೆ. ಅಮೆರಿಕದ ಮಾದರಿಯನ್ನು ಉದಾಹರಿಸಿ ಕೆಲವರು 'ಅಲ್ಲಿ ರಾಜ್ಯಗಳಿಗೆ ಹೆಚ್ಚು ಅಧಿಕಾರವಿದೆ' ಎಂದು ಹೇಳುತ್ತಾರೆ.

ಆದರೆ ಅಮೆರಿಕದ ಇತಿಹಾಸ, ನಾಗರಿಕ ಯುದ್ಧದ ಅನುಭವ, ಎರಡು ಶತಮಾನಗಳ ರಾಜಕೀಯ ಸಂಸ್ಕೃತಿ ವಿಭಿನ್ನವಾಗಿವೆ. ಭಾರತವು ವಿಭಜನೆಯ ನೋವಿನ ಮಧ್ಯೆ ಹುಟ್ಟಿದ ರಾಷ್ಟ್ರ. ಭಾಷಾ ಆಧಾರಿತ ರಾಜ್ಯಗಳ ಮರುರಚನೆಯೂ ಏಕತೆಯನ್ನು ಉಳಿಸಿಕೊಳ್ಳಲು ನಡೆದ ಪ್ರಯತ್ನ. ಆದ್ದರಿಂದಲೇ ಭಾರತ 'ವೈವಿಧ್ಯತೆಯಲ್ಲಿ ಏಕತೆ' ಮಾದರಿಯನ್ನು ಆರಿಸಿಕೊಂಡಿತು.

ಈಗ ಎಂ.ಕೆ.ಸ್ಟಾಲಿನ್ ಅವರು ಸಂವಿಧಾನಕ್ಕೆ ತಿದ್ದುಪಡಿ ತಂದೇ ಸ್ವಾಯತ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂದಿದ್ದಾರೆ. ಹಾಗೆಯೇ, ರಾಜ್ಯಗಳ ಅಧಿಕಾರ ಹೆಚ್ಚಬೇಕು ಎಂಬ ಬೇಡಿಕೆಯನ್ನೂ ಮುಂದಿಟ್ಟಿದ್ದಾರೆ. ಈಗಲೂ ಭಾರತದ ಸಂವಿಧಾನ ತಿದ್ದುಪಡಿ ಮೂಲಕ ಅಧಿಕಾರ ಹಂಚಿಕೆಯನ್ನು ಪರಿಷ್ಕರಿಸಲು ಅವಕಾಶವಿದೆ. ಆದರೆ 'ಸ್ವಾಯತ್ತತೆ' ಎಂಬ ಪದಪ್ರಯೋಗ ಕೆಲವೊಮ್ಮೆ ರಾಷ್ಟ್ರ ಏಕತೆಯ ಮೇಲೆ ಅನುಮಾನ ಹುಟ್ಟಿಸುತ್ತದೆ. ತೆರಿಗೆ, ಭದ್ರತೆ, ವಿದೇಶಾಂಗ, ಕರೆನ್ಸಿ ಮೊದಲಾದ ವಿಷಯಗಳಲ್ಲಿ ವಿಭಜಿತ ನೀತಿಗಳು ದೇಶದ ಸಮಗ್ರತೆಯನ್ನು ದುರ್ಬಲಗೊಳಿಸಬಹುದು.

ಭಾರತದ ಒಕ್ಕೂಟ ತತ್ವ ಚಲನೆಯಲ್ಲಿರುವ ವ್ಯವಸ್ಥೆ. ಜಿಎಸ್‌ಟಿ ಮಂಡಳಿ, ಅಂತರ್ ರಾಜ್ಯ ಮಂಡಳಿ, ಹಣಕಾಸು ಆಯೋಗ ಸಹಕಾರಾತ್ಮಕ ಫೆಡರಲಿಸಂಗೆ ಉದಾಹರಣೆ. ಕೇಂದ್ರ-ರಾಜ್ಯಗಳ ನಡುವೆ ಸಂವಾದವೇ ಶಾಶ್ವತ ಪರಿಹಾರ. ಸ್ವಾಯತ್ತತೆ ಎಂದರೆ ಬೇರ್ಪಟ್ಟು ನಿಲ್ಲುವುದಲ್ಲ, ಅಧಿಕಾರ ಹಂಚಿಕೆಯ ಸಮತೋಲನ ಕಾಪಾಡಿಕೊಳ್ಳುವುದು.

ತಮಿಳುನಾಡಿನ ಸ್ವಾಯತ್ತತೆ ಚರ್ಚೆ ಇತಿಹಾಸ, ಭಾಷಾ ಅಸ್ತಿತ್ವ, ಆರ್ಥಿಕ ಹಿತಾಸಕ್ತಿಗಳು ಮತ್ತು ರಾಜಕೀಯ ತಂತ್ರಗಳ ಮಿಶ್ರಣ. ಇದು ಕೇವಲ ಭೂ-ರಾಜಕೀಯ ಪ್ರಶ್ನೆಯಲ್ಲ, ಪ್ರಾದೇಶಿಕ ಅಸ್ತಿತ್ವದ ರಾಜಕೀಯ. ಆದರೆ ದೇಶದ ಒಗ್ಗಟ್ಟು, ಸಂವಿಧಾನಾತ್ಮಕ ಚೌಕಟ್ಟು ಮತ್ತು ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡಾಗ, ಅತಿರೇಕಿ ಬೇಡಿಕೆಗಳಿಗಿಂತ ಸಹಕಾರಾತ್ಮಕ ಮಾರ್ಗವೇ ಸೂಕ್ತ. ರಾಜ್ಯಗಳ ಬಲವೇ ರಾಷ್ಟ್ರದ ಬಲ. ಆದರೆ ರಾಷ್ಟ್ರದ ಏಕತೆ ಕುಂದದಂತೆ, ರಾಜ್ಯಗಳ ಹಕ್ಕುಗಳೂ ಕುಂಠಿತವಾಗದಂತೆ ಈ ಸೂಕ್ಷ್ಮ ಸಮತೋಲನವನ್ನು ಕಾಪಾಡಿಕೊಳ್ಳಬೇಕು.

ಅಕ್ಕಿ ಮೊಳೆಯುವುದಿಲ್ಲ

ಸಂಹತಿ ಶ್ರೇಯಸೀ ಪುಂಸಾಂ ಸ್ವಕುಲೈರಲ್ಪಕೈರಪಿ।
ತುಷೇಣಾಪಿ ಪರಿಭ್ರಷ್ಟಾ ನ ಪ್ರರೋಹಂತಿ ತಂಡುಲಾಃ॥ -ಹಿತೋಪದೇಶ

ತಮ್ಮವರು ಎಷ್ಟೇ ಅಲ್ಪರಾಗಿದ್ದರೂ ಅವರೊಡನೆ ಒಟ್ಟಾಗಿರುವುದು ಮಾನವರಿಗೆ ಶ್ರೇಯಸ್ಕರ. ಹೊಟ್ಟು ಹೊರಕ್ಕೆ ಹಾಕಲ್ಪಟ್ಟ ಅಕ್ಕಿ ಮೊಳೆಯುವುದಿಲ್ಲ -ಎಂಬುದು ಶ್ಲೋಕಾರ್ಥ.

'ಮನೆಗೆ ಮಾರಿ ಊರಿಗೆ ಉಪಕಾರಿ' ಎಂಬ ನಾಣ್ಣುಡಿಯಿದೆ. ಕೆಲವರ ಗುಣ-ನಡತೆಗಳನ್ನು ಗಮನಿಸಿಯೇ ಈ ಮಾತನ್ನು ಹೇಳಿದ್ದಾರೆ. ನಾವು ಅನೇಕರನ್ನು ನೋಡುತ್ತೇವೆ. ಅವರಿಗೆ ತಮ್ಮವರು ಎಂದರೆ ಅಷ್ಟಕ್ಕಷ್ಟೇ! ತಮ್ಮವರನ್ನು ದ್ವೇಷಿಸುತ್ತಾರೆ, ನಿಂದಿಸುತ್ತಾರೆ. ಹಾಗಂತ ಇತರರಿಗೆ ಒಳ್ಳೆಯವರಾಗಿ ಕಾಣಿಸಿಕೊಳ್ಳುತ್ತಾರೆ. ಮನೆಗೆ ಉಪಕಾರಿಯಾಗದಿದ್ದರೂ ಇತರರಿಗೆ ಉಪಕಾರಿಯಾಗಿ ತೊಡಗಿ ಕೊಳ್ಳುತ್ತಾರೆ. ಇತರರಿಗೆ ಉಪಕಾರಿಯಾಗ ಬೇಕಾದದ್ದು ಮಾನವಧರ್ಮ. ತಾನು ಪ್ರಕೃತಿದತ್ತವಾದ ಎಲ್ಲ ವಸ್ತುಗಳ ಪ್ರಯೋಜನ ಪಡೆಯುತ್ತಾನೆ. ಇತರರಿಂದಲೂ ಸಹಕಾರ ಅಪೇಕ್ಷಿಸುತ್ತಾನೆ. ಹೀಗಿರುವಾಗ ತಾನು ಪರೋಪಕಾರಿಯಾಗದಿದ್ದರೆ ಹೇಗೆ? ತುಂಬಾ ಉಪಕಾರ ಮಾಡಲು ಸಾಧ್ಯವಾಗದಿದ್ದರೂ ತನ್ನ ವ್ಯಾಪ್ತಿಗೆ ಅನುಗುಣವಾಗಿ ತೊಡಗಬೇಕು. ಪರೋಪಕಾರವೇ ಪರಮ ಶ್ರೇಷ್ಠ ಧರ್ಮ.



ಹೀಗೆಂದ ಮಾತ್ರಕ್ಕೆ ತಮ್ಮವರನ್ನು, ತನ್ನ ಕುಟುಂಬವನ್ನು ಕಡೆಗಣಿಸಬಾರದು. ತನ್ನ ಕುಟುಂಬಕ್ಕೆ, ತಮ್ಮವರಿಗೆ ವೈಯಕ್ತಿಕ ನೆಲೆಯಲ್ಲಿ ಸಹಕರಿಸಬೇಕು. ಇದು ಕರ್ತವ್ಯ. 'ಅಂಗಳಕ್ಕೆ ಹಾರಿ ಆಮೇಲೆ ಆಕಾಶಕ್ಕೆ ಹಾರಬೇಕು' ಎಂಬ ಮಾತಿದೆ. ಇದನ್ನು ಮನದಟ್ಟು ಮಾಡಿಕೊಳ್ಳಬೇಕು. ಅಂಗಳಕ್ಕೇ ಹಾರಲಾರದವನು ಆಕಾಶಕ್ಕೆಂತ ಹಾರಬಲ್ಲ. ನಮ್ಮೆಲ್ಲ ನೋವು ನಲಿವುಗಳಲ್ಲಿ ಮೊದಲು ಬರಬೇಕಾದವರು ನಮ್ಮವರು. ಇವರೆಂದೂ ನಮ್ಮನ್ನು ಬಿಟ್ಟು ಹಾಕುವುದಿಲ್ಲ. ಕೊನೆಯವರೆಗೂ ನಮ್ಮೊಂದಿಗೆ ನಿಲ್ಲುವವರು ಇವರೇ. ಉಳಿದವರು ಯಾವುದೋ ಸಮಯ ಸಂದರ್ಭಗಳಲ್ಲಿ ಜೊತೆಯಾಗುತ್ತಾರೆ. ಹಾಗೆ ಸಾಗುತ್ತಾರೆ ಕೂಡ.

ನಮ್ಮವರು ಎನ್ನುವವರು ಹಾಗಲ್ಲ. ಅವರೊಂದಿಗೆ ನಮ್ಮತನವನ್ನು ಇರಿಸಿಕೊಂಡರೆ ಜೀವನ ಪೂರ್ತಿ ನಮ್ಮ ಜತೆಗಿರುತ್ತಾರೆ. ಇದಕ್ಕೆ ಕಾರಣ ಮೂಲ ಬೆಸೆದಿರುತ್ತದೆ.

ಆದ್ದರಿಂದ ನಾವು ಚೆನ್ನಾಗಿರಬೇಕು. ನಮ್ಮವರನ್ನು ಚೆನ್ನಾಗಿ ಕಾಣಬೇಕು. ಅವರೊಂದಿಗೆ ಕಲೆತು ಜೀವನ ಸಾಗಿಸಬೇಕು. ಇದನ್ನು ಪಾಲಿಸಿದವರ ಪಾಲಿಗೆ ನೆಮ್ಮದಿಯ ಕ್ಷಣಗಳು ತೆರೆದುಕೊಳ್ಳುತ್ತವೆ. ನಮ್ಮವರು ಅಲ್ಪರಾಗಲಿ, ಮಹಾನ್ ಆಗಿರಲಿ, ತಿರಸ್ಕರಿಸಬಾರದು. ಅಲ್ಪರು ಅಥವಾ ಬಡವರಾಗಿದ್ದರೆ ಹೆಚ್ಚು ಹೆಚ್ಚಾಗಿ ಒಟ್ಟಾಗಿರಬೇಕು. ಅವರಿಗಿರುವ ಪರೋಪಕಾರ ಬುದ್ಧಿ ಮಹತ್ತರವಾದದ್ದು. ನಮ್ಮವರೊಂದಿಗೆ ಒಟ್ಟಾಗಿರುವುದು ಉತ್ತಮ. ಆದ್ದರಿಂದಲೇ ಪ್ರಯೋಜನ. ಶ್ರೇಯಸ್ಕರ ಕೂಡ.

ಬತ್ತ ಮೊಳೆತು ಸಸಿಯಾಗಿ ಬೆಳೆದು ಫಲ ನೀಡುವುದಕ್ಕೆ ಯಥಾಸ್ಥಿತಿಯಲ್ಲಿರುವ ಬತ್ತವೇ ಬೇಕಾಗುತ್ತದೆ. ಬತ್ತದಿಂದ ಅಕ್ಕಿಯಾಗುತ್ತದೆ. ಆದ್ದರಿಂದ ಹೊಟ್ಟನ್ನೆಲ್ಲ ತೆಗೆದು ಅಕ್ಕಿಯನ್ನೇ ಬಿತ್ತಿ, ಅಕ್ಕಿಯನ್ನೇ ಬೆಳೆಯೋಣ ಎಂಬುದು ಅಸಾಧ್ಯವಾದ ಮಾತು. ಹೊಟ್ಟು ಹೋದ ಬತ್ತವೆಂದೂ ಮೊಳಕೆಯಾಗುವುದಿಲ್ಲ. ಹೊಟ್ಟು, ತೌಡುಗಳಿಂದ ಕೂಡಿದ ಬತ್ತವೇ ಬೆಳೆದು ಅಕ್ಕಿಯಾಗುತ್ತದೆ. ತನ್ನದಾದವುಗಳಿಂದ ಬೇರ್ಪಡದ ಬತ್ತವು ಹೇಗೆ ಅಕ್ಕಿಗೆ ಕಾರಣವೋ ಅಂತೆಯೇ ನಮ್ಮವರಿಂದೊಡಗೂಡಿದ ಜೀವನವೇ ಉನ್ನತಿಗೆ, ಒಳಿತಿಗೆ ಕಾರಣವಾಗುತ್ತದೆ. ಆದ್ದರಿಂದ ನಮ್ಮವರನ್ನು ಪ್ರೀತಿಸೋಣ. ನಮ್ಮವರೊಂದಿಗೆ ಕೂಡಿ ಬದುಕೋಣ. ತನ್ಮೂಲಕ ನೆಮ್ಮದಿಯನ್ನು ಕಾಣೋಣ.

ತಾಳಮದ್ದಲೆ: ನಿರ್ದೇಶನದ ಪ್ರಶ್ನೆ

ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ತಾಳಮದ್ದಲೆಯೊಂದು ಹೇಗೆ ಪ್ರದರ್ಶನಗೊಳ್ಳಬೇಕು, ಹೇಗೆ ಆಗಬಾರದು ಎಂಬ ಎರಡೂ ದಿಕ್ಕಿನಲ್ಲಿ ಅಭಿಪ್ರಾಯ ಭೇದಗಳಿವೆ. ಇವುಗಳಲ್ಲಿ ಹೆಚ್ಚಿನವುಗಳು ಎಂದಿಗೂ ಒಂದು ಬಿಂದುವಿನಲ್ಲಿ ಸಂಧಿಸುವ ಸಂಭವ ಇಲ್ಲವೇನೋ. ಯಾಕೆಂದರೆ ತಾಳಮದ್ದಲೆಯ ಕುರಿತು ಅನೇಕ ಮಂದಿ ಅನೇಕ ಅಭಿಪ್ರಾಯಗಳನ್ನು ಪ್ರಕಟಿಸುವುದು ಕಲೆ ಅಥವಾ ರಂಗಭೂಮಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಅಲ್ಲ. ವೈಯಕ್ತಿಕವಾಗಿ ತಮಗೆ ಬೇಕಾದ್ದು ಮತ್ತು ಬೇಡವಾದುದನ್ನು ಲಕ್ಷಿಸಿ ಬರುವ ಅಭಿಪ್ರಾಯಗಳು ಅವು. ನಾನು ಹಿಂದೆ ಹೇಳಿದ ಭಾವ ಅಥವಾ ವ್ಯಕ್ತಿನಿಷ್ಠ. ಇದರ ಹೊರತಾಗಿಯೂ ಒಟ್ಟು ರಂಗಭೂಮಿಯ ಕಾಳಜಿಯಿದ್ದವರು ಮಾತನಾಡುವಾಗಲೂ ಪರಸ್ಪರ ಹೊಂದಾಣಿಕೆಯಾಗದಷ್ಟು ಅಂತರ ಇರುತ್ತದೆ.

ಅದಕ್ಕೆ ಸೂಕ್ತ ಉದಾಹರಣೆ ಅಂದರೆ ನಿರ್ದೇಶನಕ್ಕೆ ಸಂಬಂಧಿಸಿದ್ದು.

ಇದನ್ನು ಗ್ರಹಿಸಬೇಕಾದರೆ ಒಂದು ತಾಳಮದ್ದಲೆ ಪ್ರದರ್ಶನ ಹೇಗೆ ಸಂಭವಿಸುತ್ತದೆ ಎಂದು ನೋಡಬೇಕು. ವಿಭಿನ್ನ ಶೈಲಿಯ ನಾಲ್ಕೋ ಐದೋ (ಕೆಲವು ಸಲ ಮೂರು, ಎರಡು) ಅರ್ಥಧಾರಿಗಳನ್ನು ಕರೆದು ಪಾತ್ರ ವಿತರಣೆ ಮಾಡಿ, ಬಳಿಕ ಪ್ರದರ್ಶನ ನಡೆಯುವುದು. ಇಲ್ಲಿ ಪಾತ್ರವನ್ನು ಹಂಚಿದ ಮೇಲೆ ಅರ್ಥಧಾರಿಯ ನಿರ್ವಹಣಾ ಸ್ವಾತಂತ್ರ್ಯದ ಮೇಲೆ ಉಳಿದವರ ಹಸ್ತಕ್ಷೇಪ ಇಲ್ಲ. ಅವನ ಸ್ವಾತಂತ್ರ್ಯವು ಪ್ರಸಂಗದ ಚೌಕಟ್ಟಿಗೆ ಬದ್ಧವಾಗಿರುತ್ತದೆ. ಆದರೆ ಇನ್ನೊಂದು ಪಾತ್ರ ವಹಿಸಿದವನು ಈ ಪಾತ್ರವನ್ನು ಪ್ರಭಾವಿಸುವುದು, ದಿಕ್ಕನ್ನು ಬದಲಿಸುವುದು, ಗತಿಯನ್ನು ವ್ಯತ್ಯಾಗೊಳಿಸುವುದು ಇತ್ಯಾದಿಗಳನ್ನು ಮಾಡಬಹುದು. ಅಥವಾ ನಿರುದ್ದೇಶಿತವಾಗಿ ಹಾಗೆ ಆಗಬಹುದು.

ನಾಲ್ಕೂ ಪಾತ್ರಗಳೂ ಪರಸ್ಪರ ಪ್ರಭಾವಿಸುತ್ತ, ಸ್ಪಂದಿಸುತ್ತ ನಾಟಕದಂತೆ ಕಥನವನ್ನು ಕಟ್ಟುವಾಗ, ಒಬ್ಬನಿಂದ ಆಗುವ ಪರಿಣಾಮಕ್ಕೆ ಎಲ್ಲರೂ ತಲೆ ಕೊಡಬೇಕಾಗುತ್ತದೆ. ಅದು ಹೇಗೆಂದರೆ ಒಂದು ದೊಡ್ಡ ಹೊರೆಯನ್ನು ನಾಲ್ಕು ಮಂದಿ ಹೊತ್ತು ಸಾಗಿಸುವ ಹಾಗೆ. ಅವರಲ್ಲಿ ಒಬ್ಬ ಎಡವಿದರೂ, ಜಾರಿದರೂ, ಜಾರಿಸಿದರೂ ಪರಿಣಾಮ ಉಳಿದ ಮೂವರ ಮೇಲೂ ಆಗುವಂತೆ. ಒಟ್ಟಿನಲ್ಲಿ ಹೊರೆ ಕೆಳಗೆ ಬೀಳುತ್ತದೆ. ಯಾರು ತಪ್ಪು ಮಾಡಿದರು ಅನ್ನುವುದು ಮತ್ತಿನ ಪ್ರಶ್ನೆ.

ತಾಳಮದ್ದಲೆಯ ಈ ಗುಣದಿಂದಾಗಿ ನಿರ್ದೇಶನ ಎಂಬುದನ್ನು ಅಳವಡಿಸುವಾಗ ಅಥವಾ ಅದಕ್ಕೆ ತಾಳಮದ್ದಲೆಯನ್ನು ಒಳಪಡಿಸುವಾಗ ಬಹಳ ವಿವೇಚನೆ ಬೇಕು. ನಿರ್ದೇಶಕನ ವ್ಯಾಪ್ತಿಯೂ ಖಚಿತವಿರಬೇಕು. ಮೇಲಿನ ಉದಾಹರಣೆಯನ್ನು ಸ್ವಲ್ಪ ವಿಸ್ತರಿಸೋಣ. ನಾಲ್ವರು ಹೊತ್ತಿದ್ದ ಹೊರೆ ಒಬ್ಬನ ಕಾರಣದಿಂದ ಕೆಳಗೆ ಬಿತ್ತು. ಆದರಿಂದ ಆದ ನಷ್ಟಕಷ್ಟಗಳಿಗೆ ಆ ಒಬ್ಬನನ್ನೇ ಹೊಣೆಯಾಗಿಸುವುದೋ, ಅಥವಾ 'ಹೊರೆ ಸಾಗಿಸುವ ಕೆಲಸ ನಾಲ್ವರಿಗೆ ಒಟ್ಟಾಗಿ ಕೊಟ್ಟದ್ದು, ಅದು ಸಮಾನ ಹೊಣೆ, ನಾಲ್ವರು ಮಾಡಬೇಕಾದ ಕೆಲಸ ಆಗಬೇಕಾದಂತೆ ಆಗಲಿಲ್ಲ' ಎಂದು ಎಲ್ಲರನ್ನೂ ದೂಷಿಸೋಣವೊ? ನಿರ್ದೇಶನವು ಪ್ರತಿಯೊಬ್ಬನ ಹೆಗಲ ಮೇಲೆ ಬಿದ್ದ ಹೊರೆಯ ತೂಕ, ಸಾಮರ್ಥ್ಯ, ಹೆಜ್ಜೆಯಿಡುವ ಜಾಗ, ದಾರಿಯ ಕಲ್ಲು ಮುಳ್ಳು ಇವುಗಳನ್ನು ಗಮನಿಸಿ, ಪ್ರತಿ ಹಂತದಲ್ಲೂ ನಿರ್ದೇಶನ ಕೊಡಬೇಕೋ? ಅಷ್ಟಾಗಿಯೂ ಹೊರೆ ಕೆಳಗೆ ಬಿದ್ದರೆ ನಿರ್ದೇಶಕನು ಉತ್ತರದಾಯಿಯೆ? ಕೆಲಸ ಯಶಸ್ವಿಯಾಗಿ ಪೂರ್ಣವಾದರೆ ಆಗ ಅದರ ಕೀರ್ತಿ ಯಾರಿಗೆ?

ಈ ತೊಡಕನ್ನು ಹೇಗೋ ನಿವಾರಿಸಿದ ಮೇಲೆ, ನಿರ್ದೇಶನ ಮಾಡುವುದು ಯಾರು ಎನ್ನುವುದು ಮುಖ್ಯವಾಗುತ್ತದೆ. ತಾಳಮದ್ದಲೆಗೆ ಭಾಗವತನೇ ನಿರ್ದೇಶಕನಾಗಬೇಕು ಎಂಬ ಮಾತೂ ಕೇಳಿಬರುವುದುಂಟು. ಇದರಲ್ಲಿ ಅನೇಕರು ಯಕ್ಷಗಾನದಲ್ಲಿ ಭಾಗವತನೇ ಪ್ರಧಾನವಿರುವುದರಿಂದ, ತಾಳಮದ್ದಲೆಯೂ ಹಾಗೇ ಎಂದು ಭಾವಿಸಿ ಹೇಳುವುದು ಎಂದು ತೋರುತ್ತದೆ. ಯಕ್ಷಗಾನಕ್ಕೂ ತಾಳಮದ್ದಲೆಗೂ ವ್ಯತ್ಯಾಸ ಉಂಟು ಎಂದು ಒಪ್ಪಿದರೆ ಮಾತ್ರ ನಿರ್ದೇಶನದ ಸಾಧುತ್ವ ಅಸಾಧುತ್ವಗಳನ್ನು ವಿವೇಚಿಸಬಹುದು. ಎರಡು ರಂಗಭೂಮಿಗಳ ಪ್ರತ್ಯೇಕತೆಯನ್ನೂ, ತಾಳಮದ್ದಲೆಯ ಅನನ್ಯತೆಯನ್ನೂ ಬಲ್ಲ ಭಾಗವತನು ತಾಳಮದ್ದಲೆಯ ನಿರ್ದೇಶನದ ಸೂತ್ರವನ್ನು ಹಿಡಿಯಬಹುದೋ ಏನೋ. ಅದಿಲ್ಲವಾದರೆ, ತಾಳಮದ್ದಲೆಯು ವೇಷವಿಲ್ಲದ ಆಟವಾದೀತು. ತನ್ನ ನಿರ್ವಹಣೆಯ ಗೆಲುವಿನ ಕುರಿತು ಮಾತ್ರ ಲಕ್ಷ್ಯ ವಹಿಸುವವನಾದರೆ ಆತ ತಾಳಮದ್ದಲೆಗೆ ನಿರ್ದೇಶನ ಮಾಡಲಾರ. ಯಾರು ನಿರ್ದೇಶಕನಾದರೂ, ಅರ್ಥಧಾರಿಗಳ ವರ್ಚಸ್ಸು, ಜನಪ್ರಿಯತೆಗಳು, ನಿರ್ದೇಶನವನ್ನೂ ನಿರ್ದೇಶಿಸುವಂತೆ ಆಗಬಾರದು.

ಇಷ್ಟು ಕಾಲದವರೆಗೆ ನಿರ್ದೇಶನವಿಲ್ಲದೆ ತಾಳಮದ್ದಲೆ ನಡೆದಿಲ್ಲವೆ? ಈಗ ಹೊಸದಾಗಿ ನಿರ್ದೇಶನದ ಆವಶ್ಯಕತೆಯೇನು? ಎಂಬ ವಾದವೂ ಬರುತ್ತದೆ. ಇಷ್ಟರತನಕ ಇರಲಿಲ್ಲ ಎಂಬುದರಿಂದ ಇನ್ನು ಮುಂದಕ್ಕೂ ಬೇಡ ಎನ್ನುವ ನಿಲುವನ್ನು ಒಪ್ಪುವುದು ಕಷ್ಟ. ತಾಳಮದ್ದಲೆ ರಂಗಭೂಮಿ ಪರಿವರ್ತನೆಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತಲೇ ಬಂದಿದೆ. ಆದರೆ ಈ ನಿರ್ದೇಶನ ಎಂಬುದು ನಾಟಕ ನಿರ್ದೇಶನದಂತೆ ಆಗುವುದು ಶಕ್ಯವಿಲ್ಲ. ಅಲ್ಲಿ ನಟನು ನಿರ್ದೇಶಕನ ನಿರೀಕ್ಷೆಯಂತೆ ಅಭಿನಯಿಸಬೇಕಾಗುತ್ತದೆ. ಒಂದೊಂದು ಆಂಗಿಕ ಚಲನೆಯೂ, ಸಂಭಾಷಣೆಯ ವಾಕ್ಯಗಳೂ ನಿರ್ದೇಶನದ ಸೂತ್ರಕ್ಕೆ ಬದ್ಧವಾಗಿರುತ್ತವೆ. ಅದು ನಾಟಕ ರಂಗಭೂಮಿಯ ಧರ್ಮ. ತಾಳಮದ್ದಲೆಯ ಗುಣ ಬೇರೆ. ಅಲ್ಲಿ ಪ್ರದರ್ಶನದ ನಡುವೆ ಪ್ರೇಕ್ಷಕರ ಪ್ರತಿಕ್ರಿಯೆ ಕೂಡ ಅರ್ಥಧಾರಿಯ ಮೇಲೆ ಪರಿಣಾಮ ಬೀರುತ್ತದೆ. ಆಶು ರೂಪದ ಸಂಭಾಷಣೆಯಲ್ಲಿ ಬರುವ ಆ ಕ್ಷಣದ ಹೊಳಹುಗಳಿರುತ್ತವೆ. ಭಾಗವತನ ಪದ್ಯ, ಲಯ, ರಾಗಗಳು ಮೂಡಿಸುವ ಸ್ಫೂರ್ತಿ ಇರುತ್ತದೆ. ಅಷ್ಟೇ ಏನು, ನಿರುತ್ಸಾಹಕ್ಕೆ ಕಾರಣವಾಗುವ, ಕೋಪ ಹುಟ್ಟಿಸುವ ಸಂದರ್ಭಗಳೂ ಬರಬಹುದು. ಇಲ್ಲೆಲ್ಲ ನಿರ್ದೇಶಕ ಮಧ್ಯೆ ಪ್ರವೇಶಿಸುವುದಕ್ಕಾಗುವುದಿಲ್ಲ.

ಹಾಗಾಗಿ ಒಂದು ಸ್ಥೂಲ ಮಟ್ಟಿನ, ಒಟ್ಟು ಅವಧಿಯ ಹಂಚಿಕೆ, ಪಾತ್ರ ವಿತರಣೆ, ಪ್ರಸಂಗದಲ್ಲಿ ಪ್ರಾಶಸ್ತ್ಯ ಕೊಡಬೇಕಾದ ಭಾಗ, ಪ್ರಕಟಿಸಬೇಕಾದ ಆಶಯ ಇಂತಹ ವಿಷಯಗಳಲ್ಲಿ ಸೂಚನೆಯನ್ನು ಕೊಡಬಹುದು. ಅದನ್ನು ಮೀರಿದ ನಿರ್ದೇಶನವು ಅರ್ಥಧಾರಿಯ ಪ್ರತಿಭಾ ವಿಲಾಸವನ್ನು ನಿರ್ಬಂಧಿಸಿದಂತೆ ಆದೀತು. ಕಾವ್ಯ ರಚನೆಯಲ್ಲಿ, ಕವಿಗೆ ನಿರ್ದೇಶನ ನೀಡಿದರೆ ಏನಾದೀತು? ಇದೂ ಹಾಗೆಯೇ. ತಾಳಮದ್ದಲೆಯಲ್ಲಿ ಇಂತಹ ಸೂತ್ರಗಳನ್ನೂ ಅರ್ಥಧಾರಿಗಳು ಮೀರಿ ನಡೆಯುವ ಸಂದರ್ಭಗಳಿಲ್ಲವೆ? ಇದ್ದಾವು. ಯಾಕೆಂದರೆ ಅರ್ಥಧಾರಿಯ ವೈಯಕ್ತಿಕ ಜನಪ್ರಿಯತೆಯು ಕೂಡ ತಾಳಮದ್ದಲೆಯನ್ನು ಪ್ರಭಾವಿಸುವ ಸಂಗತಿಗಳಲ್ಲಿ ಒಂದು. ಅನೌಚಿತ್ಯದ ಕಾರಣಗಳಲ್ಲಿ ಇದೂ ಉಂಟು.

ಇವೆಲ್ಲದರ ಆಚೆಗೂ ಇನ್ನೊಂದು ಪ್ರವೃತ್ತಿ ಹಲವರಲ್ಲಿ ಕಾಣಿಸಿಕೊಳ್ಳುವುದನ್ನು ಗಮನಿಸಬಹುದು. ಅದು ಹೇಗೆ ಅಂದರೆ ತಮಗೆ ಉಂಟಾದ ಒಂದೋ ಎರಡೋ ಅನುಭವಗಳನ್ನು ಮಾತ್ರ ಆಧರಿಸಿ ಈ ಕ್ಷೇತ್ರವೇ ಪ್ರಯೋಜನವಿಲ್ಲದ್ದು ಅಥವಾ ಎಂದಿಗೂ ದುರಸ್ತಿಯಾಗದ ಸಂಗತಿ ಎಂದು ನಿರ್ಣಯಿಸಿ ಅದರಿಂದ ಶಾಶ್ವತವಾಗಿ ದೂರವಾಗುವವರು. ಅದಕ್ಕೆ ದೃಷ್ಟಾಂತವಾಗಿ ಒಂದು ಸಂದರ್ಭವನ್ನು ನೋಡಿ.

ಒಂದು ಕಡೆ ಒಂದು ತಾಳಮದ್ದಲೆ ನಡೆಯಿತು. ಆ ಊರು ಕೂಡ ತಾಳಮದ್ದಲೆ ಆಸಕ್ತರಿಗೆ ಪ್ರಸಿದ್ಧಿ. ಒಳ್ಳೆಯ ಹಿಮ್ಮೇಳ, ಸುಪ್ರಸಿದ್ಧ ಅರ್ಥಧಾರಿಗಳು. ದೊಡ್ಡ ಸಂಖ್ಯೆಯ ಶ್ರೋತೃಗಳು. ನಾಲ್ಕು ಪಾತ್ರಗಳಲ್ಲಿ ಇಬ್ಬರ ನಡುವೆ ವಾದ ಬೆಳೆದು ವಿಪರೀತಕ್ಕೆ ಹೋಯಿತು. ತಾಳಮದ್ದಲೆ ಒಮ್ಮೆ ಮುಗಿದರೆ ಸಾಕು ಅನಿಸುವಷ್ಟಾಯಿತು. ಉಳಿದ ಇಬ್ಬರು ಅರ್ಥಧಾರಿಗಳು ಚೆನ್ನಾಗಿಯೇ ಅರ್ಥ ಹೇಳಿದ್ದರು. ಆದರೆ ಮಾಡಿಸಿದವರು, 'ಇನ್ನು ತಾಳಮದ್ದಲೆ ಸುದ್ದಿಯೇ ಬೇಡ' ಎಂಬ ನಿರ್ಧಾರಕ್ಕೆ ಬಂದು ಇದರಿಂದ ದೂರವಾದರು. ಏಳು ಮಂದಿ ಕಲಾವಿದರಲ್ಲಿ ಇಬ್ಬರು ಮಾತ್ರ ಕೆಡಿಸಿದವರು. ಉಳಿದವರ ಅಪರಾಧವೇನೂ ಇಲ್ಲ. ಆದರೆ ನಷ್ಟ ಎಲ್ಲರಿಗೂ ಆಯಿತು. ಈ ದೃಷ್ಟಿಕೋನ ಸರಿ ಎನ್ನುವುದು ಹೇಗೆ?

ಇಂತಹ ಸಂದರ್ಭಗಳಲ್ಲಿ ಅನೌಚಿತ್ಯಕ್ಕೆ ಕಾರಣರಾದವರನ್ನು ಮಾತ್ರವೇ ಪ್ರತ್ಯೇಕಿಸುವ ಹಾಗಿದ್ದರೆ ಒಳ್ಳೆಯದಿತ್ತು. ಅದೂ ಸಾಧ್ಯವಿಲ್ಲದ ಸಂರಚನೆಯಾಗಿ ತಾಳಮದ್ದಲೆಯಿದೆ.

ಅನೇಕ ದಶಕಗಳ ಹಿಂದೆ ತಾಳಮದ್ದಲೆಗೆ ಒಬ್ಬರು ಅಧ್ಯಕ್ಷರನ್ನು ನಿಯೋಜಿಸುವ ಪದ್ಧತಿಯಿತ್ತು ಎಂದು ಕೇಳಿದ್ದೇನೆ. ಅವರು ಸಮಗ್ರ ತಾಳಮದ್ದಲೆಯನ್ನು ಕೇಳಿ ಅವಲೋಕನ ಮಾಡುತ್ತಿದ್ದರಂತೆ. ನಡುವೆ ವಿವಾದಗಳಾದರೆ ಪರಿಹಾರ ಹೇಳುತ್ತಿದ್ದರಂತೆ. ಅಂತಹ ಅಧ್ಯಕ್ಷತೆಯ ಪೀಠವೇರುವ ದಕ್ಷರನ್ನೂ, ಅವರ ತೀರ್ಮಾನಗಳಿಗೆ ಬಾಗಿ ನಡೆಯುವ ಕಲಾವಿದರನ್ನೂ ಒಟ್ಟು ಸೇರಿಸಿದರೆ ಆದೀತೋ ಏನೋ? ಅಂತಹವರನ್ನು ಎಲ್ಲಿ ಹುಡುಕೋಣ?

ರಾಹುಲ್ ವರ್ತನೆ ವಿಪಕ್ಷ ನಾಯಕನಿಗೆ ತಕ್ಕುದಾದುದಲ್ಲ

▸ ರಾಮ್ ಮಾಧವ್

ಸರಕಾರದ ನಿರ್ಧಾರಗಳನ್ನು ಪ್ರಶ್ನಿಸುವ ಎಲ್ಲಾ ಹಕ್ಕು ವಿರೋಧ ಪಕ್ಷಗಳಿಗಿದೆ. ಪ್ರಧಾನಿ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಟ್ರಂಪ್ ನಡುವಿನ ಮಾತುಕತೆಯ ಬಳಿಕ ರೂಪುಗೊಂಡ ಭಾರತ-ಅಮೆರಿಕ ವ್ಯಾಪಾರ ಒಪ್ಪಂದದ ಕುರಿತೂ ಪ್ರಶ್ನಿಸುವ ಅಧಿಕಾರ ವಿಪಕ್ಷಗಳಿಗೆ ಇದೆ. ಆದರೆ ವಿರೋಧ ಪಕ್ಷಗಳು ವ್ಯಾಪಾರ ಒಪ್ಪಂದದ ಕುರಿತಂತೆ ಸಂಸತ್ತಿನಲ್ಲಿ ಅರ್ಥಪೂರ್ಣ ಚರ್ಚೆ ನಡೆಸುವ ಬದಲಾಗಿ ಸಂಸತ್ತಿನ ಕಲಾಪಗಳನ್ನು ಸ್ಥಗಿತಗೊಳಿಸುವುದಕ್ಕೇ ಹೆಚ್ಚು ಆದ್ಯತೆ ನೀಡಿದವು. ಸರಕಾರದ ವಿರುದ್ಧ ನಿರಾಧಾರಿತ ಆರೋಪಗಳನ್ನು ಹೊರಿಸಿದವು. ಸರಕಾರವು ಸಂಸತ್ತಿನ ಒಳಗೂ, ಹೊರಗೂ ಈ ಕುರಿತಂತೆ ಸ್ಪಷ್ಟನೆ ಗಳನ್ನು ನೀಡಿತು. ವ್ಯಾಪಾರ ಸಚಿವರು ಕೂಡಾ ಮಾಧ್ಯಮಗಳ ಮುಂದೆ ಈ ಆರೋಪಗಳು ನಿರಾಧಾರಿತ ಎಂದು ಹೇಳಿಕೊಂಡರು.

ಹಿಂದೆ ದ್ವಿಪಕ್ಷೀಯ ಒಪ್ಪಂದವೊಂದು ಈ ಬಗೆಯ ಕಾವು ಸೃಷ್ಟಿಸಿದ್ದೆಂದರೆ ಅದು ಎರಡು ದಶಕಗಳ ಹಿಂದೆ ಯುಪಿಎ ಸರಕಾರದಡಿಯಲ್ಲಿ ರೂಪುಗೊಂಡ ಒಪ್ಪಂದ. 2005ರಲ್ಲಿ ಆಗಿನ ಮನಮೋಹನ ಸಿಂಗ್ ನೇತೃತ್ವದ ಸರಕಾರವು ಅಮೆರಿಕದೊಂದಿಗೆ ಪರಮಾಣು ಒಪ್ಪಂದ ಮಾಡಿಕೊಂಡಿತ್ತು. ಈ ಕುರಿತಂತೆ ಸಂಸತ್ತಿನಲ್ಲಿ ಹಾಗೂ ಸಂಸತ್ತಿನ ಹೊರಗೆ ಖಾರವಾದ ಚರ್ಚೆ ನಡೆದಿತ್ತು. ಇದರಿಂದಾಗಿ ಒಪ್ಪಂದವು ಅಂತಿಮಗೊಳ್ಳುವುದಕ್ಕೆ ಮೂರು ವರ್ಷ ಬೇಕಾಗಿತ್ತು. ಈ ಅವಧಿಯಲ್ಲಿ ನಡೆದ ಸಂಸತ್ ಕಲಾಪಗಳಲ್ಲಿ ಪ್ರಧಾನ ವಿಪಕ್ಷ ಬಿಜೆಪಿಯಷ್ಟೇ ಅಲ್ಲದೆ ಕಾಂಗ್ರೆಸಿಗೆ ಬೆಂಬಲ ನೀಡುತ್ತಿದ್ದ ಎಡಪಕ್ಷಗಳೂ ಒಪ್ಪಂದವನ್ನು ವಿರೋಧಿಸಿ ಮಾತನಾಡಿದ್ದವು. ಅಂತಿಮವಾಗಿ ಎಡಪಕ್ಷಗಳು ಸರಕಾರಕ್ಕೆ ನೀಡಿದ್ದ ಬೆಂಬಲ ಹಿಂತೆಗೆದುಕೊಂಡಿದ್ದವು. ಇದರಿಂದಾಗಿ ಮನಮೋಹನ ಸಿಂಗ್ ಸರಕಾರವು ವಿಶ್ವಾಸಮತ ಗೊತ್ತುವಳಿ ಮಂಡಿಸಬೇಕಾಗಿತ್ತು.

ಭಾರತ-ಅಮೆರಿಕ ಪರಮಾಣು ಒಪ್ಪಂದದ ಕುರಿತಂತೆ ಸಂಸತ್ತಿನಲ್ಲಿ ನಡೆದ ಚರ್ಚೆಗಳು ರಚನಾತ್ಮಕವಾಗಿದ್ದವು. ಅವು ನಿರ್ದಿಷ್ಟ ವಿಷಯವನ್ನೇ ಕೇಂದ್ರೀಕರಿಸಿದ್ದವು. ಸಂಸತ್ತಿನ ಹೊರಗೆ ಕೂಡಾ ಈ ಕುರಿತಂತೆ ರಚನಾತ್ಮಕ ಟೀಕೆಗಳು ನಡೆದಿದ್ದವು. ಎಲ್.ಕೆ. ಆಡ್ವಾಣಿ, ಯಶವಂತ ಸಿನ್ಹಾ, ಅರುಣ್ ಶೌರಿ, ಎಡಪಕ್ಷಗಳ ಸೀತಾರಾಂ ಯೆಚೂರಿ, ಗುರುದಾಸ್ ದಾಸ್ ಗುಪ್ತ, ಖ್ಯಾತ ಪರಮಾಣು ವಿಜ್ಞಾನಿಗಳಾದ ಎ.ಎನ್. ಪ್ರಸಾದ್, ಪಿ.ಕೆ. ಅಯ್ಯಂಗಾರ್ ಮೊದಲಾದವರು ಪರಮಾಣು ಒಪ್ಪಂದದ ಕುರಿತಾದ ಲೋಪಗಳನ್ನು ಎತ್ತಿ ತೋರಿದ್ದರು.

ದುರದೃಷ್ಟವೆಂದರೆ ಅಂತಹ ಪ್ರಬುದ್ಧ ಚರ್ಚೆ ಸಂಸತ್ತಿನಲ್ಲಿ ಈಗ ಕಂಡುಬರುವುದಿಲ್ಲ. ಮೊನ್ನೆ ಸಂಸತ್ತಿನಲ್ಲಿ ವಿರೋಧ ಪಕ್ಷಗಳು ರಚನಾತ್ಮಕ ಚರ್ಚೆಗಿಂತಲೂ ಕೋಲಾಹಲ ಸೃಷ್ಟಿಸುವುದಕ್ಕೆ ಆದ್ಯತೆ ಕೊಟ್ಟವು. ವಿಪಕ್ಷ ನಾಯಕ ರಾಹುಲ್‌ಗಾಂಧಿಯಂತೂ ವೈಯಕ್ತಿಕ ನೆಲೆಯಲ್ಲಿ ಪ್ರಧಾನಿಯನ್ನು ತೆಗಳುವುದನ್ನೇ ತಮ್ಮ ಕಾಯಕವನ್ನಾಗಿಸಿಕೊಂಡರು. ಸರಕಾರವು ಭಾರತಮಾತೆಯನ್ನು ಮಾರುತ್ತಿದೆ ಎಂದು ಅವರು ಆರೋಪಿಸಿದರು. ಸದನದ ಹೊರಗೆ ಕೂಡಾ ಅವರ ಟೀಕೆಗಳು ಬಾಲಿಶವಾಗಿದ್ದವು ಹಾಗೂ ಪ್ರಬುದ್ಧತೆಯ ಕೊರತೆ ಹೊಂದಿದ್ದವು. ಎಪ್‌ಸ್ಟೈನ್ ಫೈಲುಗಳು, ಅಂಬಾನಿ ಮತ್ತು ಅದಾನಿಯವರ ಹೆಸರುಗಳನ್ನೂ ಎಳೆದು ತಂದರು. "ಮೋದಿಯವರು ಒತ್ತಡಕ್ಕೊಳಗಾಗಿ ಒಪ್ಪಂದ ರೂಪಿಸಿದ್ದಾರೆ, ಅಮೆರಿಕದ ಎದುರು ಶರಣಾಗತರಾಗಿದ್ದಾರೆ" ಮುಂತಾಗಿ ಆರೋಪಿಸಿದರು. ಅವರ ಮಾತುಗಳು ಅದೆಷ್ಟು ಬಾಲಿಶವಾಗಿದ್ದವೆಂದರೆ "ಅವರು ಪ್ರಧಾನಿಯ ಕತ್ತು ಹಿಸುಕುತ್ತಿದ್ದಾರೆ. ಹಾಗೆ ಮಾಡುವಾಗ ಕಣ್ಣಿನಲ್ಲಿ ಭೀತಿ ಎದ್ದು ಕಾಣುತ್ತದೆ. ಪ್ರಧಾನಿಯ ಕಣ್ಣಲ್ಲೂ ಅದನ್ನು ಕಾಣಬಹುದಾಗಿದೆ" ಎಂದು ರಾಹುಲ್ ಬಣ್ಣಿಸಿದರು.

ಅಮೆರಿಕ ಮತ್ತು ಭಾರತ ನಡುವೆ ವ್ಯಾಪಾರ ಒಪ್ಪಂದವು ಅಭೂತಪೂರ್ವ ಜಾಗತಿಕ ಸನ್ನಿವೇಶದಲ್ಲಿ ನಡೆಯುತ್ತಿದೆ ಎಂಬುದಾಗಿ ಹಲವಾರು ಪರಿಣತರು ವಿಪಕ್ಷಗಳಿಗೆ ತಿಳಿಹೇಳಲು ಯತ್ನಿಸಿದರು. ಹಿಂದಿನ ದ್ವಿಪಕ್ಷೀಯ ಒಪ್ಪಂದಗಳೆಲ್ಲವೂ ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ)ಯ ರಕ್ಷಣಾ ಕೊಡೆಯಡಿ ನಡೆದಿದ್ದವು. ದುರಾದೃಷ್ಟವೆಂದರೆ ಟ್ರಂಪ್‌ರಿಂದಾಗಿ ಈಗ ಜಗತ್ತಿನಲ್ಲಿ ಕೋಲಾಹಲ ಹಾಗೂ ಅರಾಜಕತೆ ಉಂಟಾಗಿದೆ. ಡಬ್ಲ್ಯುಟಿಒ ಅಪ್ರಸ್ತುತವಾಗಿದೆ. ಒಂದೊಂದಾಗಿ ದೇಶಗಳು ಟ್ರಂಪ್‌ರ ಬೇಡಿಕೆಗಳಿಗೆ ಹಾಗೂ ಒತ್ತಡಗಳಿಗೆ ಮಣಿದಿವೆ. ಆದರೆ ಭಾರತ ಮಾತ್ರ ಕಳೆದೊಂದು ವರ್ಷದಿಂದ ಅದನ್ನು ತಾಳಿಕೊಂಡು ಬಂದಿತ್ತು. ಅಂತಿಮವಾಗಿ ಎರಡೂ ದೇಶಗಳಿಗೆ ತೃಪ್ತಿಕರವಾಗುವ ರೀತಿಯಲ್ಲೇ ಒಪ್ಪಂದ ರೂಪಿಸಲು ಸಫಲವಾಗಿದೆ. ಖ್ಯಾತ ಅರ್ಥ ಶಾಸ್ತ್ರಜ್ಞ ಜೆಫ್ರಿ ಸ್ಯಾಚ್ ಕೂಡಾ ಈ ಒಪ್ಪಂದದಲ್ಲಿ ಅಮೆರಿಕವೇ ಹಿನ್ನಡೆ ಕಂಡಿದೆ ಎಂದು ಹೇಳುತ್ತಾರೆ. "ಪ್ರಧಾನಿ ಮೋದಿಯವರು ಉತ್ತಮ ಕೆಲಸ ಮಾಡಿದ್ದಾರೆ. ಶಾಂತವಾಗಿದ್ದುಕೊಂಡೇ ಪರಿಸ್ಥಿತಿಯನ್ನು ಬುದ್ಧಿವಂತಿಕೆಯಿಂದ ನಿಭಾಯಿಸಿದ್ದಾರೆ" ಎಂದು ಅವರು ಶ್ಲಾಘಿಸುತ್ತಾರೆ. ಯಾವುದೇ ಒಪ್ಪಂದವು ಏಕಮುಖವಾಗಿರುವುದಿಲ್ಲ. ಆದರೆ ಲಭ್ಯವಿರುವ ಮಾಹಿತಿಗಳ ಪ್ರಕಾರ ಈಗಿನ ವ್ಯಾಪಾರ ಒಪ್ಪಂದದಲ್ಲಿ ಭಾರತಕ್ಕೆ ಹೆಚ್ಚು ಪ್ರಯೋಜನವಿದೆ. ವಿರೋಧ ಪಕ್ಷಗಳು ಆರೋಪಿಸುತ್ತಿರುವಂತೆ ಕೃಷಿ ವಲಯದಲ್ಲಿ ರಾಜಿ ಮಾಡಲಾಗಿಲ್ಲ. ನಮ್ಮ ರೈತರ ಹಿತಾಸಕ್ತಿಗಳನ್ನು ರಕ್ಷಿಸಲಾಗಿದೆ. ಕೇವಲ ಅಮೆರಿಕದೊಂದಿಗಷ್ಟೇ ಅಲ್ಲದೇ ಆಸ್ಟ್ರೇಲಿಯಾ, ಐರೋಪ್ಯ ಒಕ್ಕೂಟ ಮತ್ತು ನ್ಯೂಜಿಲಾಂಡ್ ಜೊತೆಗೆ ನಡೆಸಿದ ಒಪ್ಪಂದಗಳಲ್ಲೂ ಭಾರತದ ಕೃಷಿ ಕ್ಷೇತ್ರದ ಸಂರಕ್ಷಣೆಗೆ ಆದ್ಯತೆ ಕೊಡಲಾಗಿದೆ. ದ್ವಿದಳ ದಾನ್ಯಗಳು, ಹೈನೋತ್ಪನ್ನಗಳು ಮತ್ತು ಪ್ರಾಣಿಜನ್ಯ ಉತ್ಪನ್ನಗಳನ್ನು ಆಮದು ಸುಂಕದಿಂದ ರದ್ದುಗೊಳಿಸಲಾಗಿಲ್ಲ.

> ರಾಹುಲ್ ಗಾಂಧಿ ಅಪ್ರಬುದ್ಧ ವರ್ತನೆಗಳು ವಿಪಕ್ಷ ನಾಯಕನ ಸ್ಥಾನಕ್ಕೆ ಆಗೌರವ ತರುವಂತಿದೆ.

ಅಮೆರಿಕದ ಒತ್ತಡದಿಂದ ಒಪ್ಪಂದ ವಿಳಂಬವಾಯಿತು ಹಾಗೂ ಮೋದಿ- ಟ್ರಂಪ್ ಮಾತುಕತೆಯ ಫೋನ್ ಕರೆಯ ಬಳಿಕ ಒಪ್ಪಂದ ಅಂತಿಮವಾಯಿತು ಎಂದು ವಿಪಕ್ಷಗಳು ತಪ್ಪಾಗಿ ಗ್ರಹಿಸಿವೆ. ಒಪ್ಪಂದದ ಬಹು ಪ್ರಮುಖ ಅಂಶಗಳನ್ನು ಭಾರತದ ವಾಣಿಜ್ಯ ಸಚಿವಾಲಯ ಮತ್ತು ಅಮೆರಿಕದ ವಾಣಿಜ್ಯ ಇಲಾಖೆಗಳು ಕೆಲವು ತಿಂಗಳ ಹಿಂದೆಯೆ ರೂಪುಗೊಳಿಸಿರುವುದು. ವ್ಯಾಪಾರವನ್ನು ಭೌರಾಜಕೀಯದೊಂದಿಗೆ ತಳುಕು ಹಾಕಲು ಟ್ರಂಪ್ ನಡೆಸಿದ ಯತ್ನದಿಂದಾಗಿಯೇ ಇದು ವಿಳಂಬಗೊಂಡಿತು. ಭಾರತ- ಪಾಕ್ ಸಂಘರ್ಷವನ್ನು ಅವರು ಪದೇಪದೇ ಉಲ್ಲೇಖಿಸಿದ್ದು ಕೂಡಾ ಭಾರತವು ಒಪ್ಪಂದಕ್ಕೆ ಕೂಡಲೇ ಬರದಿರಲು ಕಾರಣವಾಯಿತು. ಇಂತಹ ಪ್ರಯತ್ನ ನಡೆಯುವ ತನಕ ಭಾರತವು ಒಪ್ಪಂದಕ್ಕೆ ಸಹಿ ಹಾಕುವುದಿಲ್ಲಎಂದುಸ್ಪಷ್ಟಪಡಿಸಲಾಯಿತು. ಅಮೆರಿಕವುಭಾರತದ ಆಗ್ರಹಕ್ಕೆ ಮಣಿದ ಬಳಿಕವೇ ಉಭಯ ದೇಶಗಳ ಮುಖಂಡರು ಮಾತುಕತೆಯಾಡಿದ್ದು ಹಾಗೂ ಒಪ್ಪಂದವನ್ನು ಪ್ರಕಟಿಸಿದ್ದು. ಅಂತಿಮವಾಗಿ ವ್ಯಾಪಾರ ಒಪ್ಪಂದವನ್ನು ಭೌರಾಜಕೀಯದೊಂದಿಗೆ ಮತ್ತು ನೊಬೆಲ್ ಪ್ರಶಸ್ತಿಯೊಂದಿಗೆ ತಳುಕು ಹಾಕುವುದನ್ನು ಬಿಡಬೇಕೆಂಬ ಭಾರತದ ಆಗ್ರಹವು ಫಲ ನೀಡಿತು.

ರಾಹುಲ್ ಗಾಂಧಿಯವರು ಸಂಸತ್ತಿನ ಕಲಾಪದ ವೇಳೆ ಪ್ರಧಾನಿ ಮೋದಿಯವರ ವರ್ಚಸ್ಸು ಕುಂದಿಸಲು ಯತ್ನಿಸಿದರು. ಆದರೆ ಅವರು ಪ್ರಧಾನಿಯನ್ನು ಹೇಡಿ, ವೋಟ್ ಚೋರ್ ಮುಂತಾಗಿ ಟೀಕಿಸಿದಾಗ ಅದನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಇದೇವೇಳೆ, ಬಿಜೆಪಿ ರಾಹುಲ್‌ರ ಅಪ್ರಬುದ್ಧತೆ ಮತ್ತು ಬಾಲಿಶತನವನ್ನು ಟೀಕಿಸಿದಾಗ ಅದು ಎಲ್ಲರನ್ನು ತಟ್ಟಿತು. ಸಂಸತ್ತಿನಲ್ಲಿ ರಾಹುಲ್‌ರ ವರ್ತನೆಯು ಅವರದೇ ವರ್ಚಸ್ಸನ್ನು ಇನ್ನಷ್ಟು ಕುಂದಿಸಿತಷ್ಟೆ.

ಭಾರತ ಎಐ ಇಂಪ್ಯಾಕ್ಟ್ ಶೃಂಗಕ್ಕೆ ಇಂದು ಚಾಲನೆ

ವಿಶ್ವನಾಯಕರಿಗೆ ಪ್ರಧಾನಿ ಮೋದಿ ಆತ್ಮೀಯ ಸ್ವಾಗತ



ಹೊಸದಿಲ್ಲಿ: ಇಲ್ಲಿನ ಭಾರತ ಮಂಟಪ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯುತ್ತಿರುವ ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಭಾಗಿಯಾಗುತ್ತಿರುವ ವಿಶ್ವನಾಯಕರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಆತ್ಮೀಯ ಸ್ವಾಗತ ಕೋರಿದರು. ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರು, ಈ ಎಐ ಸಮ್ಮೇಳನಕ್ಕೆ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ. ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಮತ್ತು ಅಂತರಾಷ್ಟ್ರೀಯ ಹಣಕಾಸು ನಿಧಿಯ ಮುಖ್ಯಸ್ಥೆ ಕ್ರಿಸ್ಟಾಲಿನಾ ಜಾರ್ಜಿಯೇವಾ ಸೇರಿದಂತೆ ಅನೇಕ ಗಣ್ಯರು ಸಮಾವೇಶಕ್ಕೆ ಆಗಮಿಸಿದ್ದಾರೆ. ಈಗಾಗಲೇ ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಭಾರತಕ್ಕೆ ಆಗಮಿಸಿದ್ದಾರೆ. ಶ್ರೀಲಂಕಾ ಅಧ್ಯಕ್ಷ ಅನುಷಾ ಕುಮಾರ ದಿಸನಾಯಕೆ, ಭೂತಾನ್ ಪ್ರಧಾನಿ ಥೇರಿಂಗ್ ಟೋಬ್ಗೇ ಸೇರಿದಂತೆ ಅತಿಥಿಗಳನ್ನು ನಾದಸ್ವರ, ತಬಲಾ ಮತ್ತು ತಾಂಪುರಾದ ಸಾಂಪ್ರದಾಯಿಕ ಸಂಗೀತದ ಮೇಳದಲ್ಲಿ ಮೋದಿ ಆತ್ಮೀಯವಾಗಿ ಸ್ವಾಗತಿಸಿದರು. ಭಾರೀ ಅಲಂಕಾರಗೊಂಡ ವೇದಿಕೆಯಲ್ಲಿ ಸಭೆ ಆರಂಭವಾಯಿತು.

ಮಾರಿಷಸ್ ಪ್ರಧಾನಿ ನವೀಂಚಂದ್ರ ರಾಮಗೂಲಾಮ್, ಕ್ರೊಯೇಶಿಯಾ ಪ್ರಧಾನಿ ಆಂದ್ರೇಜ್ ಪ್ಲೆಂಕೋವಿಕ್, ಸರ್ಬಿಯಾ ಅಧ್ಯಕ್ಷ ಅಲೆಕ್ಸಾಂಡರ್ ವುಸಿಕ್, ಸೆಶೆಲ್ಸ್ ಉಪಾಧ್ಯಕ್ಷ ಸೆಬಾಸ್ಟಿಯನ್ ಪಿಲ್ಲೇ, ಎಸ್ಟೋನಿಯಾ ಅಧ್ಯಕ್ಷ ಅಲಾರ್ ಕಾರಿಸ್ ಹಾಗೂ ಫಿನ್ಲೆಂಡ್ ಪ್ರಧಾನಿ ಪೆಟೆರಿ ಓರ್ಪೋ ಅವರಿಗೂ ಮೋದಿ ಸ್ವಾಗತ ಕೋರಿದರು.

ಇದೇ ವೇಳೆ, ಗ್ರೀಸ್ ಪ್ರಧಾನಿ ಕ್ಯಾರಿಯಾಕೋಸ್ ಮಿಟ್ಸೋಟಾಕಿಸ್ ಮತ್ತು ಗಯಾನಾ ಉಪಾಧ್ಯಕ್ಷ ಬರೆದ್ ಜಗ್ಗದೇವ್ ಕೂಡ ಸಮಾವೇಶದಲ್ಲಿ ಭಾಗಿಯಾಗಿದ್ದಾರೆ.

ಫೆ.16ರಿಂದ 20ರವರೆಗೆ ನಡೆಯುವ ಈ ಶೃಂಗಸಭೆಯಲ್ಲಿ 500ಕ್ಕೂ ಹೆಚ್ಚು ಜಾಗತಿಕ ಎಐ ನಾಯಕರು, 150 ವಿಜ್ಞಾನಿಗಳು, ಸಂಶೋಧಕರು ಮತ್ತು 400ಕ್ಕೂ ಹೆಚ್ಚು ಜಾಗತಿಕ ಕಂಪನಿಗಳ ಅಧಿಕಾರಿಗಳು ಭಾಗವಹಿಸುತ್ತಿದ್ದಾರೆ. ಸುಮಾರು 20 ದೇಶಗಳ ಅಧ್ಯಕ್ಷರು ಮತ್ತು ಪ್ರಧಾನಿಗಳು, 60ಕ್ಕೂ ಹೆಚ್ಚು ಮಂತ್ರಿಗಳು ಮತ್ತು ಸರಕಾರದ 100ಕ್ಕೂ ಹೆಚ್ಚು ಪ್ರತಿನಿಧಿಗಳ ಉಪಸ್ಥಿತಿ ಸಮಾವೇಶಕ್ಕೆ ಅಂತಾರಾಷ್ಟ್ರೀಯ ತೂಕ ನೀಡಿದೆ ಎಂದು ಆಯೋಜಕರು ತಿಳಿಸಿದ್ದಾರೆ.


ಪ್ರಧಾನಿ ಮೋದಿ ಚಾಲನೆ

ಕೃತಕ ಬುದ್ಧಿಮತ್ತೆ(ಎಐ) ಕ್ಷೇತ್ರದಲ್ಲಿ ಭಾರತವನ್ನು ಜಾಗತಿಕ ನಾಯಕನಾಗಿ ಸ್ಥಾಪಿಸುವ ಉದ್ದೇಶದೊಂದಿಗೆ ಆಯೋಜಿಸಲಾಗುತ್ತಿರುವ ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆ 2026ಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಚಾಲನೆ ನೀಡಲಿದ್ದಾರೆ. ಪ್ರಧಾನಿ ಕಚೇರಿ ಬುಧವಾರ ಬಿಡುಗಡೆ ಮಾಡಿದ ಅಧಿಕೃತ ಪ್ರಕಟಣೆಯ ಪ್ರಕಾರ, ಶೃಂಗಸಭೆ ವೇದಿಕೆಯಲ್ಲಿ ಭಾಗವಹಿಸುವ ದೇಶಗಳ ನಾಯಕರಿಗೆ ಪ್ರಧಾನಿ ಮೋದಿ ಸ್ವಾಗತ ಕೋರಲಿದ್ದಾರೆ. ಕಾರ್ಯಕ್ರಮಗಳು ಭಾರತ ಮಂಟಪಂನಲ್ಲಿ ನಡೆಯಲಿವೆ. ಉದ್ಘಾಟನಾ ಸಮಾರಂಭದಲ್ಲಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್, ವಿಶ್ವಸಂಸ್ಥೆ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಹಾಗೂ ಜಾಗತಿಕ ಉದ್ಯಮ ಕ್ಷೇತ್ರದ ಪ್ರಮುಖ ನಾಯಕರು ಭಾಷಣ ಮಾಡಲಿದ್ದಾರೆ. ಬಳಿಕ, ವಿವಿಧ ದೇಶಗಳ ಪೆವಿಲಿಯನ್‌ಗಳನ್ನು ಒಳಗೊಂಡ ಭಾರತ ಎಐ ಇಂಪ್ಯಾಕ್ಟ್ ಎಕ್ಸ್‌ಪೋ 2026ಗೆ ನಾಯಕರು ಭೇಟಿ ನೀಡಲಿದ್ದಾರೆ.

ಸಿಂಧೂ ನದಿ ನಂತರ ಭಾರತದಿಂದ ರಾವಿ ಹರಿವಿಗೆ ಕಡಿವಾಣ?

ಪಾಕ್‌ಗೆ 2ನೇ ಜಲ ಪೆಟ್ಟು!

- ಮಾ.31ರೊಳಗೆ ಪೂರ್ಣಗೊಳ್ಳಲಿದೆ ಶಾಹ್ಪುರ್ ಕಂಡಿ ಅಣೆಕಟ್ಟು
- ಪಾಕಿಸ್ತಾನಕ್ಕೆ ಹರಿಯುವ ಹೆಚ್ಚುವರಿ ರಾವಿ ನೀರು ನಿಲ್ಲುವ ಸಾಧ್ಯತೆ
- ಯೋಜನೆಯ ವೆಚ್ಚ: 3,394.49 ಕೋಟಿ ರೂ.
- 206 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ
- ಸುಮಾರು 92,000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ



ವಿಳಂಬವಾಗಿದ್ದ ಶಾಹ್ಪುರ್ ಕಂಡಿ ಅಣೆಕಟ್ಟು ಪೂರ್ಣಗೊಳ್ಳುವ ಹಂತದಲ್ಲಿರುವುದರಿಂದ ರಾವಿ ನದಿಯಿಂದ ಪಾಕಿಸ್ತಾನಕ್ಕೆ ಹರಿದು ಹೋಗುತ್ತಿರುವ ಹೆಚ್ಚುವರಿ ನೀರನ್ನು ತಡೆಯಲು ಭಾರತ ಸಜ್ಜಾಗಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಹೊಸದಿಲ್ಲಿ ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಿದ ಕೆಲವು ತಿಂಗಳ ನಂತರ ಈ ಕ್ರಮಕ್ಕೆ ಮುಂದಾಗಿದೆ. ಇದು ಜಲ ಹಂಚಿಕೆಯ ವಿಷಯದಲ್ಲಿ ಉದ್ವಿಗ್ನತೆ ಹೆಚ್ಚಿಸಿದೆ. ಬೇಸಿಗೆ ಸಮೀಪಿಸುತ್ತಿರುವುದರಿಂದ ಮತ್ತು ನೀರಿನ ಮಟ್ಟ ಈಗಾಗಲೇ ಕಡಿಮೆಯಾಗಿರುವುದರಿಂದ ಈ ನಿರ್ಧಾರ ಪಾಕಿಸ್ತಾನದಲ್ಲಿ, ವಿಶೇಷವಾಗಿ ಈಗಾಗಲೇ ನೀರಿನ ಅಭಾವ ಎದುರಿಸುತ್ತಿರುವ ಪಂಜಾಬ್ ಪ್ರಾಂತ್ಯಕ್ಕೆ ಎಚ್ಚರಿಕೆಯಾಗಿದೆ. ಅಂತೆಯೇ ಭಯೋತ್ಪಾದಕರನ್ನು ಪೋಷಿಸುತ್ತಿರುವ ಪಾಕ್‌ಗೆ ಭಾರತದ ಜಲ ಪಾಠವಾಗಿದೆ.

ಹೆಚ್ಚುತ್ತಿರುವ ಉದ್ವಿಗ್ನತೆ

26 ಜನರ ಸಾವಿಗೆ ಕಾರಣವಾದ ಪಹಲ್ಗಾಮ್ ದಾಳಿಯ ನಂತರ 1960ರಲ್ಲಿ ಸಹಿ ಹಾಕಲಾದ ಸಿಂಧೂ ಜಲ ಒಪ್ಪಂದವನ್ನು ಭಾರತ ಅಮಾನತುಗೊಳಿಸಿತ್ತು. ಆ ಒಪ್ಪಂದ, ಸಿಂಧೂ, ಝೇಲಂ ಮತ್ತು ಚೆನಾಬ್ ನದಿಗಳ ನೀರಿನ ಹಕ್ಕನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಟ್ಟಿತ್ತು. ಆದರೆ ಭಾರತ, ರಾವಿ, ಬಿಯಾಸ್ ಮತ್ತು ಸಟ್ಲೆಜ್ ನದಿಗಳ ಮೇಲಿನ ಹಕ್ಕನ್ನು ಉಳಿಸಿಕೊಂಡಿತ್ತು. ಅದರ ತನ್ನ ಜಿಡಿಪಿಯ ಕಾಲು ಭಾಗದಷ್ಟು ಕೊಡುಗೆ ನೀಡುವ ಕೃಷಿಗೆ ಪಾಕಿಸ್ತಾನ ಸಿಂಧೂ ನದಿ ವ್ಯವಸ್ಥೆಯನ್ನು ಹೆಚ್ಚು ಅವಲಂಬಿಸಿದೆ. ಇಸ್ಲಾಮಾಬಾದ್, ಭಾರತದ ಕ್ರಮಗಳನ್ನು ಜಲ ಯುದ್ಧ ಎಂದು ಕರೆದಿದೆ ಮತ್ತು ವಿಶ್ವಸಂಸ್ಥೆ ಸೇರಿದಂತೆ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಈ ವಿಷಯವನ್ನು ಎತ್ತಿದೆ. ನೀರಿನ ಶಸ್ತ್ರೀಕರಣವನ್ನು ಆರೋಪಿಸಿ ಅದು ಹೇಗ್‌ನಲ್ಲಿರುವ ಮಧ್ಯಸ್ಥಿಕೆ ನ್ಯಾಯಾಲಯವನ್ನೂ ಸಂಪರ್ಕಿಸಿದೆ. ಆದರೆ, ಈ ಹೇಳಿಕೆಯನ್ನು ಭಾರತ ತಿರಸ್ಕರಿಸಿದೆ. ಭಾರತ ತಾನು ಪೂರ್ವದ ನದಿಗಳ ಮೇಲೆ ತನ್ನ ಹಕ್ಕಿನೊಳಗೆ ಕಾರ್ಯನಿರ್ವಹಿಸುತ್ತಿರುವುದಾಗಿ ಪ್ರತಿಪಾದಿಸಿದೆ. ಅಲ್ಲದೆ, ರಾಷ್ಟ್ರೀಯ ಭದ್ರತೆಯ ಕಾಳಜಿಯನ್ನು ನಿರ್ಲಕ್ಷಿಸಲಾಗುವುದಿಲ್ಲ ಎಂದು ಕಟ್ಟುನಿಟ್ಟಾಗಿ ಹೇಳಿದೆ.

ಶಾಹ್ಪುರ್ ಕಂಡಿ ಅಣೆಕಟ್ಟು

ಪಂಜಾಬ್-ಜಮ್ಮು ಮತ್ತು ಕಾಶ್ಮೀರ ಗಡಿಯ ಉದ್ದಕ್ಕೂ ರಾವಿ ನದಿಯ ಮೇಲೆ ಕಟ್ಟಲಾಗಿರುವ ಶಾಹ್ಪುರ್ ಕಂಡಿ ಅಣೆಕಟ್ಟು ಮಾರ್ಚ್ 31ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ಯೋಜನೆಯನ್ನು ಮೊದಲು 1979ರಲ್ಲಿ ವಿನ್ಯಾಸಪಡಿಸಿ, 1982ರಲ್ಲಿ ಉದ್ಘಾಟಿಸಲಾಯಿತು. 2008ರಲ್ಲಿ ರಾಷ್ಟ್ರೀಯ ಯೋಜನೆಯಾಗಿ ಘೋಷಿಸುವ ಮೊದಲು, ಪಂಜಾಬ್ ಮತ್ತು ಜಮ್ಮು ಕಾಶ್ಮೀರದ ನಡುವಿನ ವಿವಾದಗಳಿಂದಾಗಿ ಈ ಯೋಜನೆ ದಶಕಗಳ ವಿಳಂಬ ಎದುರಿಸಿತು. 3,394.49 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ 55.5 ಮೀಟರ್ ಎತ್ತರದ ಅಣೆಕಟ್ಟು, 7.7 ಕಿಮೀ ಜಲವಿದ್ಯುತ್ ಚಾನಲ್ ಹೊಂದಿದೆ. ಉಳಿದ ವೆಚ್ಚವನ್ನು ಪಂಜಾಬ್ ಭರಿಸಿದೆ. ಜಮ್ಮು ಮತ್ತು ಕಾಶ್ಮೀರದ ಸಚಿವ ಜಾವೇದ್ ಅಹ್ಮದ್ ರಾಣಾ, ಈ ಯೋಜನೆ ರಾವಿ ನದಿಯಿಂದ ಹೆಚ್ಚುವರಿ ನೀರು ಇನ್ನು ಮುಂದೆ ಪಾಕಿಸ್ತಾನಕ್ಕೆ ಹರಿಯುವುದಿಲ್ಲ ಎಂಬುದನ್ನು ಖಾತ್ರಿಪಡಿಸುತ್ತದೆ ಎಂದು ಹೇಳಿದ್ದಾರೆ.

ಪಾಕಿಸ್ತಾನಕ್ಕೆ ನೀರು ಪೂರೈಕೆ ಸ್ಥಗಿತ?

ದಶಕಗಳಿಂದ ರಾವಿ ನದಿಯ ಹೆಚ್ಚುವರಿ ನೀರು ಮಾಧೋಪುರದ ಮೂಲಕ ಪಾಕಿಸ್ತಾನಕ್ಕೆ ಹರಿಯುತ್ತಿತ್ತು. ಅಣೆಕಟ್ಟು ಆ ನೀರನ್ನು ಗೃಹ ಬಳಕೆಗಾಗಿ ತಡೆಹಿಡಿಯುವುದರಿಂದ, ಕೆಳಮುಖದ ಹರಿವು ತೀವ್ರವಾಗಿ ಕಡಿಮೆಯಾಗುವ ಸಾಧ್ಯತೆಯಿದೆ.

ಭಾರತಕ್ಕೆ ಏನು ಪ್ರಯೋಜನ?

ಬರಪೀಡಿತ ಕಥುವಾ ಮತ್ತು ಸಾಂಬಾ ಜಿಲ್ಲೆಗಳಿಗೆ ಈ ಅಣೆಕಟ್ಟು ನಿರ್ಣಾಯಕವಾಗಿದೆ ಎನ್ನಲಾಗುತ್ತಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದ ನಂತರ, ಹೆಚ್ಚುವರಿ 91,856 ಎಕರೆ ಕೃಷಿ ಭೂಮಿಗೆ ನೀರಾವರಿ ಒದಗಿಸುವ ನಿರೀಕ್ಷೆಯಿದ್ದು, ಇದು ಪಂಜಾಬ್ ಮತ್ತು ಜಮ್ಮು ಮತ್ತು ಕಾಶ್ಮೀರಕ್ಕೆ ಪ್ರಯೋಜನ ನೀಡಲಿದೆ. ಇದು 206 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಿದೆ ಮತ್ತು ಈ ಪ್ರದೇಶದಲ್ಲಿ ಪ್ರವಾಸೋದ್ಯಮ ಮತ್ತು ಜಲ ಕ್ರೀಡೆಗಳನ್ನು ಉತ್ತೇಜಿಸುವ ನಿರೀಕ್ಷೆಯಿದೆ.

ಲಾಹೋರ್‌ಗೆ ಹೊಡೆತ

ಪಾಕಿಸ್ತಾನದ ಎರಡನೇ ಅತಿದೊಡ್ಡ ನಗರ ಲಾಹೋರ್ ಅಂತರ್ಜಲ ಮರುಪೂರಣಕ್ಕಾಗಿ ರಾವಿ ನದಿಯನ್ನು ಹೆಚ್ಚು ಅವಲಂಬಿಸಿದೆ. ನದಿಯ ಹರಿವಿನ ನಿರಂತರ ಕಡಿತ ನಗರದಲ್ಲಿ ನೀರಿನ ಕೊರತೆಯನ್ನು ಇನ್ನಷ್ಟು ಹೆಚ್ಚಿಸಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ. ಕೆಲವು ವಿಶ್ಲೇಷಕರು ಸಂಭಾವ್ಯ ಸನ್ನಿವೇಶವನ್ನು ಕೇಪ್ ಟೌನ್‌ನ ತೀವ್ರ ನೀರಿನ ಬಿಕ್ಕಟ್ಟಿಗೆ ಹೋಲಿಸಿದ್ದಾರೆ. ಅಲ್ಲಿ ನಿವಾಸಿಗಳು ಕುಡಿಯುವ ನೀರಿಗಾಗಿ ಕಟ್ಟುನಿಟ್ಟಾದ ಪಡಿತರ ವ್ಯವಸ್ಥೆಗೆ ಅನುಗುಣವಾಗಿ ಸರತಿಯಲ್ಲಿ ಕಾಯಬೇಕಾದ ಪರಿಸ್ಥಿತಿ ಇದೆ. ನದಿಯ ಮಟ್ಟ ಮತ್ತಷ್ಟು ಕುಸಿದರೆ ಲಾಹೋರ್‌ನಲ್ಲಿ ರಾವಿ ನದಿಯ ಉದ್ದಕ್ಕೂ ಕೈಗೊಂಡಿರುವ ನಗರ ಅಭಿವೃದ್ಧಿ ಯೋಜನೆಗಳು ಹಿನ್ನಡೆ ಎದುರಿಸಬಹುದು. ಪಾಕಿಸ್ತಾನವು ಈಗಾಗಲೇ ಕುಸಿಯುತ್ತಿರುವ ಮಳೆ ಮತ್ತು ಹೆಚ್ಚುತ್ತಿರುವ ತಾಪಮಾನವನ್ನು ಎದುರಿಸುತ್ತಿರುವ ಸಮಯದಲ್ಲಿ ಈ ಕ್ರಮ ನುಂಗಲಾರದ ತುತ್ತಾಗಿದೆ.



ಗಲ್ಗೋಟಿಯಾಸ್ ಮಳಿಗೆ ತೆರವು

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಮೇಲಿನ ಕೇಸಿನ ಅರ್ಜಿದಾರರ ಅತ್ತೆ ದಿವಂಗತ ಕೆ.ಆರ್. ರಾಮಕ್ಕ ಇವರು **ದಿನಾಂಕ:10.08.1990ರಂದು** ಯು. ಚೆಂಬು ಗ್ರಾಮದಲ್ಲಿರುವ ಅರ್ಜಿದಾರರ ನಿವಾಸದಲ್ಲಿ ಮರಣ ಹೊಂದಿದ್ದು ಅವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇದಕ್ಕೆ ಯಾರದೇ ಆಕ್ಷೇಪಣೆ ಇದ್ದಲ್ಲಿ **ದಿನಾಂಕ: 04.04.2026 ರಂದು ಬೆಳಿಗ್ಗೆ 11.00 ಗಂಟೆಗೆ** ಸದರಿ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಆಕ್ಷೇಪಣೆಗಳು ಸಲ್ಲಿಸದಿದ್ದಲ್ಲಿ ಈ ಮೇಲಿನ ಅರ್ಜಿಯನ್ನು ಕಾನೂನು ರೀತಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಡಿಕೇರಿ, ಕೊಡಗು ಜಿಲ್ಲೆ
ಸಹಿ/- ಕೆ.ಎಸ್. ಚಂದ್ರಶೇಖರ್
ಅರ್ಜಿದಾರರ ಪರ ವಕೀಲರು
ಮಡಿಕೇರಿ,
12.02.2026

ಕರ್ನಾಟಕ ಸರ್ಕಾರ
ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ ಇವರ ಕಛೇರಿಗೆ ಒಬ್ಬರು ಡಿ.ಇ.ಓ./ಕಂಪ್ಯೂಟರ್ ಆಪರೇಟರ್ ಹಾಗೂ ಒಬ್ಬರು 'ಡಿ' ದರ್ಜೆ ನೌಕರರ ಸೇವೆಯನ್ನು ಹೊರ ಸಂಪನ್ಮೂಲ ಸೇವೆ ನೀಡುವ ಸಂಸ್ಥೆಗಳಿಂದ ಒಂದು ವರ್ಷದ ಅವಧಿಗೆ ಪಡೆಯುವ ಬಗ್ಗೆ:

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಕಛೇರಿ, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ ಕಚೇರಿಗೆ ಅಗತ್ಯವಿರುವ ಒಬ್ಬರು ಡಿ.ಇ.ಓ/ ಕಂಪ್ಯೂಟರ್ ಆಪರೇಟರ್ ಹಾಗೂ ಒಬ್ಬರು 'ಡಿ' ದರ್ಜೆ ನೌಕರರ ಸೇವೆಯನ್ನು ಹೊರ ಸಂಪನ್ಮೂಲದಡಿ ಒಂದು ವರ್ಷದ ಅವಧಿಗೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ಮತ್ತು ನಿಯಮಗಳು 2000 ರನ್ವಯ ಅರ್ಹ ಸಂಸ್ಥೆಗಳಿಂದ ಇ-ಪ್ರೊಕ್ಯೂರ್ ಮೆಂಟ್ (https://eproc.karnataka.gov.in) ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಈ ಟೆಂಡರ್ ಆಧರಿಸಿದ ವಿವರಗಳು ಈ ಕೆಳಕಂಡಂತಿರುತ್ತವೆ.

ಆನ್‌ಲೈನ್ ಟೆಂಡರ್ ಪ್ರಕಟಣೆ ದಿನಾಂಕ	19-02-2026
ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	6,00,000/-
ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ/ವೇಳೆ	03-03-2026ರ ಸಂಜೆ 3.00 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಉಪ ಕಾರ್ಯದರ್ಶಿ ಕಛೇರಿ, ಕೊಡಗು ಜಿಲ್ಲಾ ಪಂಚಾಯತ್ ದಿ:09.03.2026ರ ಪೂರ್ವಾಹ್ನ 11.00 ಗಂಟೆಗೆ
ಹಣಕಾಸಿನ ಬಿಡ್ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಉಪ ಕಾರ್ಯದರ್ಶಿ ಕಛೇರಿ, ಕೊಡಗು ಜಿಲ್ಲಾ ಪಂಚಾಯತ್ ದಿ:11-03-2026ರ ಅಪರಾಹ್ನ 3.00 ಗಂಟೆಗೆ
ಆನ್‌ಲೈನ್ ಮೂಲಕ ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ	ರೂ. 14,700/- ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿ

ಈ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ

ಪ್ರಗತಿಪರ ಕೃಷಿಕ, ಸಂಶೋಧಕ ನಿಟಿಲೆ ಮಹಾಬಲೇಶ್ವರ ಭಟ್ ನಿಧನ



ವಿಟ್ಲ : ವಿಟ್ಲಪಡ್ನೂರು ಗ್ರಾಮದ ಕೋಡಪದವು ನಿಟಿಲೆ ನಿವಾಸಿ, ಪ್ರಗತಿಪರ ಕೃಷಿಕ, ಸಂಶೋಧಕ, ಮೊಕ್ತೇಸರ ನಿಟಿಲೆ ಮಹಾಬಲೇಶ್ವರ ಭಟ್ (70) ಅವರು ಫೆ.18ರಂದು ದೇರಳಕಟ್ಟೆ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಕೋಡಪದವು ಶ್ರೀ ವೀರಾಂಜನೇಯ ಕ್ಷೇತ್ರದ ಮೊಕ್ತೇಸರರಾಗಿದ್ದ ಅವರು ಕಾಳುಮೆಣಸು ಬಿಡಿಸುವ ಯಂತ್ರವನ್ನು ಸಂಶೋಧನೆ ಮಾಡಿದ್ದರು. ಕೃಷಿಕರಿಗೆ ಬೇಕಾದ ಹಲವು ಯಂತ್ರ, ಶ್ರಮ ಉಳಿಸುವ ಉಪಕರಣಗಳ ಸರಣಿಯನ್ನೇ ಕೊಟ್ಟ ಸಂಶೋಧಕ ನಿಟಿಲೆ ಮಹಾಬಲೇಶ್ವರ ಭಟ್ ಅವರು ತಮ್ಮ ಕೃಷಿ ಭೂಮಿಯಲ್ಲಿ ಅವಶ್ಯವಿರುವ ಸೇತುವೆಯನ್ನು ಸಿಮೆಂಟ್ ಪೈಪ್ ಆಧಾರಿತ ಸೇತುವೆಯಾಗಿ, ತಡೆಗಟ್ಟವಾಗಿ ನಿರ್ಮಿಸಿದ್ದು ಆಕರ್ಷಕ ಮತ್ತು ಉಪಯುಕ್ತವಾಗಿತ್ತು. ಕಾಸರಗೋಡು ಜಿಲ್ಲೆಯ ಸಣ್ಣ ನೀರಾವರಿ ಇಲಾಖೆ ಮೆಚ್ಚಿಕೊಂಡು, ಅದನ್ನು ಅನುಸರಿಸಿ, ಕಾಸರಗೋಡಿನಲ್ಲಿ ನೂರಾರು ಪೈಪುಗಟ್ಟಗಳ ರಚನೆ ಸಾಧ್ಯವಾಗಿದೆ.

ಅವರು 2007ರಲ್ಲಿ ಕಾಳುಮೆಣಸು ಆಯುವ ಯಂತ್ರ, 2012ರಲ್ಲಿ ಕೊಕ್ಕೋ ಬೀಜ ಪ್ರತ್ಯೇಕಿಸುವ ಯಂತ್ರ, 2013ರಲ್ಲಿ ಅಡಿಕೆ ಸುಲಿಯುವ ಯಂತ್ರವನ್ನು ಅಭಿವೃದ್ಧಿ ಪಡಿಸಿದ್ದರು. ಕೇರಳ ಸರಕಾರದ ಖ್ಯಾತ ಕೃಷಿ ವಸ್ತುಪ್ರದರ್ಶನ 'ವೈಗಾ'ಕ್ಕಾಗಿಯೇ ಇವರು ತಯಾರಿಸಿದ ಎಲ್ಲ ಯಂತ್ರೋಪಕರಣಗಳ ಮಳಿಗೆ ಇಟ್ಟಿದ್ದರು.

ಇವರಿಗೆ 2007ರಲ್ಲಿ ಕೃಷಿ ಪಂಡಿತ ಪ್ರಶಸ್ತಿ, 2012ರಲ್ಲಿ ಸಮೃದ್ಧಿ ಪ್ರಶಸ್ತಿ, 2015ರಲ್ಲಿ ದ.ಕ.ಜಿ.ಕಸಾಪ ಪ್ರಶಸ್ತಿ, 2018ರಲ್ಲಿ ಹವ್ಯಕ ರತ್ನ ಪ್ರಶಸ್ತಿ, 2019ರಲ್ಲಿ ಕ್ಯಾಂಪ್ಕೋ ಪ್ರಶಸ್ತಿ ದೊರಕಿದ್ದು, ಮತ್ತು ಹಲವು ಸಂಘ ಸಂಸ್ಥೆಗಳು ಗೌರವಿಸಿ ಸಮ್ಮಾನಿಸಿವೆ.

ತೋಟಗಾರಿಕೆ ಇಲಾಖೆ
ತೋಟಗಾರಿಕೆ ಉಪನಿರ್ದೇಶಕರು, ಮಾವು ಅಭಿವೃದ್ಧಿ ಕೇಂದ್ರ & ಸಂಸ್ಕರಣೆ ಪ್ರಾತ್ಯಕ್ಷಿಕ ಘಟಕ, ಕುಂಭಾಪೂರ ತೋಟಗಾರಿಕೆ ಕ್ಷೇತ್ರ, ಧಾರವಾಡ. ಇ-ಮೇಲ್ : pocoevegdwd@yahoo.in
ಸಂಖ್ಯೆ : K.S.M.D. & M.C.L./MD/D.D.H./DWD-01/2025-26
ದಿನಾಂಕ : 16-02-2026

ಟೆಂಡರ್ ಪ್ರಕಟಣೆ

2025-26 ನೇ ಸಾಲಿನಲ್ಲಿ ತರಕಾರಿ ಬೆಳೆಗಳ ಉತ್ಕೃಷ್ಟ ಕೇಂದ್ರ, ಕುಂಬಾಪುರ ಕ್ಷೇತ್ರ, ಧಾರವಾಡದಲ್ಲಿ ಮಾವು ಅಭಿವೃದ್ಧಿ ಕೇಂದ್ರದಲ್ಲಿ ಮೂಲ ಉಪಕರಣ ತಯಾರಕರಿಂದ (Original Equipment Manufacturers) Mango Primary and Secondary Processing Facility (Handling Facility With Hot Water Treatment, Grading, Sorting & Packaging Units) ಘಟಕ ಸ್ಥಾಪನೆ ಮತ್ತು ಕಾರ್ಯಗತಗೊಳಿಸುವಿಕೆಗಾಗಿ ಇ-ಟೆಂಡರ್ ವೇದಿಕೆಯ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲು ಪತ್ರಿಕಾ ಪ್ರಕಟಣೆಯನ್ನು ಹೊರಡಿಸುವ ಕುರಿತು.

1) ಟೆಂಡರ್‌ನ ಒಟ್ಟು ಅಂದಾಜು ಮೊತ್ತ : ರೂ. 202.30 ಲಕ್ಷಗಳು, 2) ಟೆಂಡರ್ ಫಾರ್ಮ್ ಬೆಲೆ : ಇ-ಅಡಳಿತದನ್ವಯ, 3) ಇ-ಟೆಂಡರ್ ಸಲ್ಲಿಸುವ ಪ್ರಾರಂಭಿಕ ದಿನಾಂಕ ಮತ್ತು ವೇಳೆ : 17-02-2026 ರ ಬೆಳಿಗ್ಗೆ 10.00 ಗಂಟೆಯಿಂದ, 4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 26-02-2026 ರ ಸಂಜೆ 5.30 ಗಂಟೆವರೆಗೆ, 5) ಪ್ರೀ-ಬಿಡ್ ಸಭೆಯ ದಿನಾಂಕ : 23-02-2026, 6) ಇ-ಸಂಗ್ರಹಣ ವೇದಿಕೆಯ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 27-02-2026 ರ ಸಂಜೆ 5.30 ಗಂಟೆಗೆ, 7) ತಾಂತ್ರಿಕ ಬಿಡ್ಡಿನಲ್ಲಿ ಅನುಮೋದನೆಗೊಂಡ ಟೆಂಡರ್‌ದಾರರ ಆರ್ಥಿಕ ಬಿಡ್ಡು ತೆರೆಯುವ ದಿನಾಂಕ ಮತ್ತು ವೇಳೆ : 02-03-2026 ರ ಬೆಳಿಗ್ಗೆ 11.00 ಗಂಟೆಗೆ, 8) ಟೆಂಡರ್ ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ : ರೂ. 3,03,450/- (ರೂ. ಮೂರು ಲಕ್ಷದ ಮೂರು ಸಾವಿರದ ನಾಲ್ಕುನೂರಾ ಐವತ್ತು ಮಾತ್ರ), 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : ಯೋಜನಾಧಿಕಾರಿಗಳು (ತೋಟಗಾರಿಕೆ ಉಪ ನಿರ್ದೇಶಕರು) ತರಕಾರಿ ಬೆಳೆಗಳ ಉತ್ಕೃಷ್ಟ ಕೇಂದ್ರ, ಕುಂಬಾಪುರ ಕ್ಷೇತ್ರ, ಧಾರವಾಡ, ದೂರವಾಣಿ ಸಂಖ್ಯೆ : 97397 00181.

ಹೆಚ್ಚಿನ ವಿವರಗಳನ್ನು https://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/- ತೋಟಗಾರಿಕೆ ಉಪನಿರ್ದೇಶಕರು,
ಮಾವು ಅಭಿವೃದ್ಧಿ ಕೇಂದ್ರ & ಸಂಸ್ಕರಣೆ ಪ್ರಾತ್ಯಕ್ಷಿಕ ಘಟಕ,
ಕುಂಬಾಪುರ ಕ್ಷೇತ್ರ, ಧಾರವಾಡ.
ಡಿಐಪಿಆರ್/ಧಾರವಾಡ/1251/ಮಣಿಹಾಲ್/2025-26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080-22265383, website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-82/2084/2025-26 ದಿನಾಂಕ: 18.02.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : 1) ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಸಾರಥಿ ಕುರುಬರಹಳ್ಳಿ 1ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಬೀದಿ ದೀಪಗಳ ಸೌಕರ್ಯ ಒದಗಿಸುವ ಕಾಮಗಾರಿ. (2ನೇ ಕರೆ).

2) ತುಮಕೂರು ತಾಲ್ಲೂಕು ಮತ್ತು ಜಿಲ್ಲೆ, ವಸಂತನರಸಾಪುರ ಕೈಗಾರಿಕಾ ಪ್ರದೇಶದ ಜಪಾನೀಸ್ ಕೈಗಾರಿಕಾ ಪಾರ್ಕ್‌ನ ಆವರಣದಲ್ಲಿ ಹಾದುಹೋಗುವ ಹಾಲಿ 66ಕೆವಿ ಕೋರಾ-ತೋವಿನಕೆರೆ ಎಸ್‌ಸಿ ಮಾರ್ಗವನ್ನು ಸ್ಥಳಾಂತರಿಸುವ ಕಾಮಗಾರಿ.

3) ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ವೈ ಜಂಕ್ಷನ್‌ನಿಂದ ಬೈಕಂಪಾಡಿ ಕೈಗಾರಿಕಾ ಪ್ರದೇಶವನ್ನು ಸಂಪರ್ಕಿಸುವ ಸಂಪರ್ಕ ರಸ್ತೆ (ಒಡಿಸಿ ರಸ್ತೆ) ಸುಧಾರಣೆ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 05.03.2026 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು, ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು
DIPR/CP/5725/Zen/2025-26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ-75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ-563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ-ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152-200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/2680/2025-26/ ದಿನಾಂಕ:13.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:29/2025-26/ ದಿನಾಂಕ: 13.02.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ-4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 02 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಹಾಗೂ ಕನಿಷ್ಠ ಮೊತ್ತ ರೂ.300.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ-ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ-ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ **ದಿನಾಂಕ: 13.02.2026ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯನ್ನು ದಿನಾಂಕ: 18.02.2026 ರಂದು ಬೆಳಗ್ಗೆ 11.30 ಗಂಟೆಗೆ** ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ-75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ-563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇಲ್ಲಿ ಆಯೋಜಿಸಲಾಗಿರುತ್ತದೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ **(Upload) ಕೊನೆಯ ದಿನಾಂಕ: 23.02.2026 ಸಂಜೆ 04:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 24.02.2026ರ ಸಂಜೆ 04:30 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:500/ಕೆಎಸ್‌ಎಂಸಿಎ/2025-26

ಕಿರು ಸುದ್ದಿ

ಫೆ.20: ಎಂಐಆರ್ ನೆಟ್ ಝೀರೋ ವಿಷನ್ 2047 ಸಮ್ಮೇಳನ

• **ಮಂಗಳೂರು:** ಎಂಐಆರ್ ನೆಟ್ ಝೀರೋ ವಿಷನ್ 2047 ಸಮ್ಮೇಳನ ಫೆ. 20 ರಂದು ನಗರದ ಟಿಎಂಎ ಪೈ ಅಂತಾರಾಷ್ಟ್ರೀಯ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಲಿದೆ. ಬೆಳಗ್ಗೆ 9ರಿಂದ ನೋಂದಣಿ ನಡೆಯಲಿದೆ. ಬೆಳಗ್ಗೆ 10.15ಕ್ಕೆ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದ್ದು, ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಹ್ಲಾದ್ ಜೋಶಿ, ವಿದ್ಯುತ್ ಮತ್ತು ನವ ಮತ್ತು ನವೀಕರಿಸಬಹುದಾದ ಇಂಧನ ರಾಜ್ಯ ಸಚಿವ ಶ್ರೀಪಾದ್ ನಾಯಕ್, ರಾಜ್ಯ ಇಂಧನ ಸಚಿವ ಕೆ. ಜೆ. ಜಾರ್ಜ್, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಸಚಿವ ದಿನೇಶ್ ಗುಂಡೂರಾವ್, ಕೆಆರ್‌ಇಡಿಎಲ್ ಅಧ್ಯಕ್ಷ ಟಿ.ಡಿ. ರಾಜೇಗೌಡ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ.ಭಾಗವಹಿಸಲಿದ್ದಾರೆ ಎಂದು ಎಂಐಆರ್ ಗ್ರೂಪ್ ಯುಎಇ, ಇಂಡಿಯಾ ಕಮರ್ಷಿಯಲ್ ಡೈರೆಕ್ಟರ್ ನಿತಿಕ್ ರತ್ನಾಕರ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಿನವಿಡೀ ನಡೆಯುವ ಸಮ್ಮೇಳನದಲ್ಲಿ ಹಲವಾರು ಅಧಿವೇಶನಗಳು ನಡೆಯಲಿವೆ. ನಿವೃತ್ತ ಐಎಎಸ್ ಅಧಿಕಾರಿ ಬಿ. ಲಕ್ಷ್ಮಿ ಕಾಂತಮ್, ಆಂಬಿಟ್ ಗ್ಲೋಬಲ್ ಕ್ಯಾಪಿಟಲ್‌ನ ಕಾರ್ಯನಿರ್ವಾಹಕ ನಿರ್ದೇಶಕ ಸತೀಶ್ ನಾರಾಯಣನ್, ಆಕ್ಷನ್ ಇಎಸ್‌ಜಿಯ ಸ್ಥಾಪಕಿ ಮತ್ತು ವ್ಯವಸ್ಥಾಪಕ ನಿರ್ದೇಶಕಿ ನಮಿತಾ ವಿಕಾಸ್ ಭಾಗವಹಿಸುವರು ಎಂದರು. ಎಂಐಆರ್ ಗ್ರೂಪ್ ಸಸ್ಟೈನೆಬಿಲಿಟಿ ಹೆಡ್ ಸಾಯಿ ಚಂದು, ಆಲ್ಫಾ ಸಾಫ್ಟ್ ಸಿಇಒ ಆ್ಯಂಡ್ರಿಯಾ ಐವಲ್ಲೊ, ಎಂಐಆರ್ ಪ್ರಾಜೆಕ್ಟ್ ಮ್ಯಾನೇಜರ್ ಇಲೆನೊರಾ ಡಿ ಆ್ಯಂಗೆಲಿಸ್, ಗೌರವ್ ಹೆಗ್ಡೆ ಮತ್ತಿತರರು ಉಪಸ್ಥಿತರಿದ್ದರು.

ಫೆ. 21ರಂದು ಎಂಎಸ್‌ಇಜೆಡ್‌ನಲ್ಲಿ ಭೂಮಿಪೂಜೆ

ಇಟಲಿ ಮೂಲದ ಎಂಐಆರ್ ಗ್ರೂಪ್ ಮಂಗಳೂರಿನಲ್ಲಿ ಬಿಲ್ಡಿಂಗ್ ಇಂಟಿಗ್ರೇಟೆಡ್ ಫೋಟೊವೋಲ್ಟಾಯಿಕ್ (ಬಿಐಪಿವಿ) ಪ್ಯಾನೆಲ್‌ಗಳು, ಉಷ್ಣನಿರೋಧಕ ವಸ್ತುಗಳು ಮತ್ತು ಸೋಡಿಯಂ-ಐಯಾನ್ ಬ್ಯಾಟರಿಗಳಂತಹ ಇಂಧನ ಸಮರ್ಥ ಕಟ್ಟಡ ಸಾಮಗ್ರಿಗಳ ಉತ್ಪಾದನೆಗಾಗಿ ತನ್ನ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಸುಮಾರು 20 ಮಿಲಿಯನ್ ಹೂಡಿಕೆ ಮಾಡಲು ಯೋಜಿಸುತ್ತಿದೆ. ಫೆಬ್ರವರಿ 2027 ರ ವೇಳೆಗೆ ಘಟಕವು ಕಾರ್ಯಾಚರಣೆಗೆ ಸಿದ್ಧವಾಗಲಿದೆ ಎಂದು ಎಂಐಆರ್ ಗ್ರೂಪ್ ಎಸ್‌ಆರ್‌ಎಲ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಫೆಲ್ ಮರಾರ್ಝೊ ತಿಳಿಸಿದರು. ಈ ಘಟಕಕ್ಕೆ ಫೆ. 21ರಂದು ಎಂಎಸ್‌ಇಜೆಡ್‌ನಲ್ಲಿ ಭೂಮಿಪೂಜೆ ನಡೆಯಲಿದೆ.

ನಿಧನ ಸುದ್ದಿ

ಎಚ್.ಗೋಪಾಲಕೃಷ್ಣ ಶೆಟ್ಟಿ



ಕಾಸರಗೋಡು: ನಿವೃತ್ತ ಡೆಪ್ಯೂಟಿ ಕಲೆಕ್ಟರ್, ಕಾಸರಗೋಡು ಜಿಲ್ಲಾ ಕ್ರಿಕೆಟ್ ಅಸೋಸಿಯೇಶನ್‌ನ ಸ್ಥಾಪಕ ಅಧ್ಯಕ್ಷ, ರಾಜ್ಯ ಕಾರ್ಯದರ್ಶಿ, ಕೇರಳ ಕ್ರಿಕೆಟ್ ಅಸೋಸಿಯೇಶನ್‌ನ ಸೆಲೆಕ್ಷನ್ ಸಮಿತಿ ಸದಸ್ಯರೂ ಆಗಿದ್ದ ಎಚ್.ಗೋಪಾಲಕೃಷ್ಣ ಶೆಟ್ಟಿ ಯಾನೆ ಜಿ.ಕೆ.ಶೆಟ್ಟಿ (80) ಅಲ್ಪಕಾಲದ ಅನಾರೋಗ್ಯದಿಂದ ಕಾಸರಗೋಡು ಕೇಳುಗುಡ್ಡೆಯ ಗಿರಿಜಾ ನಿವಾಸದಲ್ಲಿ ನಿಧನ ಹೊಂದಿದರು. ಅವರು ಕಾಸರಗೋಡು ಯವನಿಕಾ ಸಂಸ್ಥೆಯ ಅಧ್ಯಕ್ಷ, ಬಂಟ್ಸ್ ಸಂಘದ ಕಾಸರಗೋಡು ಜಿಲ್ಲಾಧ್ಯಕ್ಷ, ಕಾರ್ಯದರ್ಶಿ, ಆಲಪ್ಪುಳ, ಇಡುಕ್ಕಿ ಜಿಲ್ಲೆಗಳಲ್ಲಿ ಡೆಪ್ಯೂಟಿ ಕಲೆಕ್ಟರ್ ಆಗಿ ಕಾರ್ಯನಿರ್ವಹಿಸಿದ್ದರು. ಮೃತರು ಮಕ್ಕಳಾದ ಗಣೇಶ್ ಶೆಟ್ಟಿ, ಚಿತ್ರಲೇಖಾ ಎಸ್.ಆಳ್ವ ಅವರನ್ನು ಅಗಲಿದ್ದಾರೆ.

ಕೃಷ್ಣನ್ ಮಣಿಯಾಣಿ




ಕಾಸರಗೋಡು: ಮುಳಿಯಾರಿನ ಪ್ರಮುಖ ಕೃಷಿಕ, ಪುತ್ಯಮೂಲದ ಕೃಷ್ಣನ್ ಮಣಿಯಾಣಿ (77) ನಿಧನರಾದರು. ಮೃತರು ಪತ್ನಿ ಸುಮತಿ, ಮಕ್ಕಳಾದ ಸುಮೇಶ್, ಶ್ಯಾಮ್ ಜಿಜಿತ್ ಅವರನ್ನು ಅಗಲಿದ್ದಾರೆ.

ಶೀನ ಆಚಾರಿ



ಕುಂದಾಪುರ : ಅಂಪಾರು ಗ್ರಾಮದ ನೆಲ್ಲಿಕಟ್ಟೆ ನಿವಾಸಿ ಶೀನ ಆಚಾರಿ (95) ಫೆ. 17ರಂದು ನಿಧನ ಹೊಂದಿದರು. ಮೃತರು ಸುಮಾರು 50 ವರ್ಷ ಕಾಲ ಕಬ್ಬಿಣದ ಬಡಿಗ ವೃತ್ತಿ ಹೊಂದಿ ಜನಪ್ರಿಯರಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

ತಿಮ್ಮಪ್ಪ ನಾಯ್ಕ



ಬೆಳ್ತಂಗಡಿ: ಉಜಿರೆ ಗ್ರಾಮದ ಮಾಚಾರುಬೆಟ್ಟು ನಿವಾಸಿ, ಮರಾಠಿ ಸಮಾಜದ ಮಾಚಾರು ವಲಯದ ಗುರಿಕಾರಾಗಿ ಸೇವೆ ಸಲ್ಲಿಸಿದ್ದ ನಾಟಿ ಪಂಡಿತ ತಿಮ್ಮಪ್ಪ ನಾಯ್ಕ (90) ಅಲ್ಪಕಾಲದ ಅನಾರೋಗ್ಯದಿಂದ ಫೆ. 5 ರಂದು ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ನಾಲ್ವರು ಗಂಡು, ಮೂವರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.



ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ಪಂಚಮಹಲ್ ಶ್ರೀ ಸದಾಶಿವ ದೇವಸ್ಥಾನಕ್ಕೆ ಸುಮಾರು 1.5 ಲಕ್ಷ ರೂ ಮೌಲ್ಯದ ಅಡುಗೆ ಸಾಮಗ್ರಿಗಳನ್ನು ಉದ್ಯಮಿ ದಾನಿ ಕಿಶೋರ್ ಶೆಟ್ಟಿ ಮುಂಬೈ ಸಮರ್ಪಣೆ ಮಾಡಿದರು. ಈ ಸಂದರ್ಭ ಕ್ಷೇತ್ರದ ಅರ್ಚಕ ಶ್ರೀನಾಥ್ ಭಟ್, ಕಸಾಪ ಮಾಜೀ ರಾಜ್ಯಾಧ್ಯಕ್ಷ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ರಮೇಶ್ ಮಯ್ಯ, ಯುಗಪುರುಷ ಸಂಪಾದಕ ಭುವನಾಭಿರಾಮ ಉಡುಪ, ನಿವೃತ್ತ ಬ್ಯಾಂಕ್ ಪ್ರಬಂಧಕ ಸತೀಶ್ ಭಂಡಾರಿ, ರಾಘವೇಂದ್ರ ಭಟ್ ಬಪ್ಪನಾಡು, ರಾಮದಾಸ್ ಕಾಮತ್, ತಾರನಾಥ್ ದೇವಾಡಿಗ, ಹರೀಶ್ ದೇವಾಡಿಗ, ಲಕ್ಷ್ಮಿ ಕಾಂತ್ ಭಟ್, ಸುಂದರ ಪುನರೂರು ಮತ್ತಿತರರು ಉಪಸ್ಥಿತರಿದ್ದರು

ಫೆ.22: ಕೊಂಡೆವೂರು ಯೋಗಾಶ್ರಮದಲ್ಲಿ ಪ್ರತಿಷ್ಠಾ ವರ್ಧಂತ್ಯುತ್ಸವ ನಿಧಿ ಸಮರ್ಪಣೆ

• **ಉಪ್ಪಳ:** ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮದಲ್ಲಿ ವೇದಮಾತೆ ಶ್ರೀ ಗಾಯತ್ರಿ ದೇವಿಯ ಹಾಗೂ ಭಗವಾನ್ ಶ್ರೀ ನಿತ್ಯಾನಂದ ಗುರುದೇವರ ಪ್ರತಿಷ್ಠಾ ವರ್ಧಂತ್ಯುತ್ಸವ ನವ ಚಂಡಿಕಾಯಾಗ, ಗಾಯತ್ರೀ ದೇವಿಯ ನೂತನ ಗರ್ಭಗೃಹಕ್ಕೆ ನಿಧಿ ಸಮರ್ಪಣೆ ಹಾಗೂ 20ನೇ ವರ್ಷದ ಅಖಂಡ ಭಜನಾ ಸಪ್ತಾಹ ಕಾರ್ಯಕ್ರಮವು ಫೆ.22ರಂದು ಜರಗಲಿದೆ. ಬೆಳಗ್ಗೆ 7ರಿಂದ ಪ್ರಾರ್ಥನೆ, ಪುಣ್ಯಾಹ, ಗಣಯಾಗ, ವಿವಿಧ ವೈದಿಕ ಕಾರ್ಯಕ್ರಮಗಳು, 7.30ಕ್ಕೆ ಚಂಡಿಕಾಯಾಗ ಪ್ರಾರಂಭ, 10.30ಕ್ಕೆ ಪೂರ್ಣಾಹುತಿ, ಪೂರ್ವಾಹ್ನ 11ಕ್ಕೆ ನಡೆಯುವ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮದ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಆಶೀರ್ವಚನ ನೀಡುವರು. ಕಟೀಲು ಕ್ಷೇತ್ರದ ಆನುವಂಶಿಕ ಪ್ರಧಾನ ಅರ್ಚಕ ಬ್ರಹ್ಮಶ್ರೀ ಅನಂತಪದ್ಮನಾಭ ಅಸ್ರಣ್ಣ ಅವರ ಉಪಸ್ಥಿತಿಯಲ್ಲಿ ನಡೆಯುವ ಸಭೆಯಲ್ಲಿ ಬೆಂಗಳೂರು ಮಾಜಿ ರಾಜ್ಯಸಭಾ ಸದಸ್ಯ ಡಾ.ಕೆ.ಸಿ.ರಾಮಮೂರ್ತಿ ಅಧ್ಯಕ್ಷತೆ ವಹಿಸುವರು. ಡಾ.ಎಸ್.ಎಸ್.ವಿ.ಎಲ್.ನರಸಿಂಹ ರಾಜು ಬೆಂಗಳೂರು ಅವರು ನಿಧಿ ಸಮರ್ಪಣೆಗೆ ಚಾಲನೆ ನೀಡುವರು.



ಪದ್ಮಶ್ರೀ ಪುರಸ್ಕೃತ ಎಸ್.ಜಿ.ಸುಶೀಲಮ್ಮ ಅವರನ್ನು ಸನ್ಮಾನಿಸಲಾಗುವುದು. ಕೆ.ನಾರಾಯಣ ಬೆಂಗಳೂರು, ಸದಾಶಿವ ಶೆಟ್ಟಿ ಕುಳೂರು ಕನ್ಯಾನ, ಕೆ.ಕೆ ಶೆಟ್ಟಿ, ರಘುರಾಮ್ ಕೆ.ಶೆಟ್ಟಿ ಕುಳೂರು ಕನ್ಯಾನ, ಡಾ.ಜಿ ರಮೇಶ್, ಬಿ.ನಾಗರಾಜ್, ಚಂದ್ರಶೇಖರ್ ಶೆಟ್ಟಿ ಮುಂಡ್ಕೂರು, ಜಯ ಕೆ.ಶೆಟ್ಟಿ, ಇ.ಎಸ್.ರಾಮ್ ಭಟ್ ಬೆಂಗಳೂರು, ಎ.ಜೆ. ಶೇಖರ್, ಮೋಹನ ಶೆಟ್ಟಿ ಮಜ್ಜಾರು, ಶಶಿಧರ ಶೆಟ್ಟಿ ಗ್ರಾಮಚಾವಡಿ, ಲಕ್ಷ್ಮಣ ರಾವ್ ಬೆಂಗಳೂರು, ರಾಜೇಶ್ ಕೆ.ರೈ ಉಪಸ್ಥಿತರಿರುವರು. ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಸಂಜೆ 6.30ಕ್ಕೆ ನಕ್ಷತ್ರ ವನದಲ್ಲಿ ನವಗ್ರಹ ಪೂಜೆ, ದೀಪೋತ್ಸವ, ರಾತ್ರಿ 9ಕ್ಕೆ ರಾತ್ರಿ ಪೂಜೆ, ಪ್ರಸಾದ ವಿತರಣೆ ನಡೆಯಲಿದೆ. ಸಂಜೆ 6.37ಕ್ಕೆ ಅಖಂಡ ಭಜನಾ ಸಪ್ತಾಹವನ್ನು ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ದೀಪ ಪ್ರಜ್ವಲನೆಗೊಳಿಸುವ ಮೂಲಕ ಭಜನೆ ಪ್ರಾರಂಭಗೊಳ್ಳಲಿದೆ. ಮಾ.1ರಂದು ಸಂಜೆ 6.38ಕ್ಕೆ ಭಜನಾ ಮಂಗಲಾಚರಣೆ ನಡೆಯಲಿದೆ.

ವರ್ಷಪೂರ್ತಿ ಜೇನುನೊಣಗಳಿಗೆ ಸೂಕ್ತವಾದ ಸಸ್ಯಗಳನ್ನು ಬೆಳೆಸುವತ್ತ ಯೋಜನೆ

ಹೆದ್ದಾರಿ ಬದಿಯಲ್ಲಿ ಜೇನು ಕಾರಿಡಾರ್!

• **ತಿರುವನಂತಪುರ:** ರಾಷ್ಟ್ರೀಯ ಹೆದ್ದಾರಿಗಳ ಬದಿಗಳಲ್ಲಿ ಜೇನು ಕಾರಿಡಾರ್‌ಗಳನ್ನು ನಿರ್ಮಿಸಲಾಗುವುದು. ಕೇರಳ ಸೇರಿದಂತೆ ಅಭಿವೃದ್ಧಿಪಡಿಸಲಾಗುತ್ತಿರುವ ರಾಷ್ಟ್ರೀಯ ಹೆದ್ದಾರಿಗಳ ಬದಿಗಳಲ್ಲಿ ಜೇನು ಕಾರಿಡಾರ್‌ಗಳನ್ನು ಸ್ಥಾಪಿಸಲು ಸಿದ್ಧತೆಗಳು ಭರದಿಂದ ಸಾಗುತ್ತಿದೆ.

ಈ ಪ್ರಮುಖ ನಿರ್ಧಾರವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತೆಗೆದುಕೊಂಡಿದೆ. ಜೇನುನೊಣಗಳ ಆವಾಸಸ್ಥಾನವನ್ನು ಪ್ರಯಾಣಿಕರು ಮತ್ತು ವಾಹನಗಳಿಗೆ ಹಾನಿಕಾರಕವಲ್ಲದ ರೀತಿಯಲ್ಲಿ ನಿರ್ಮಿಸಲಾಗುತ್ತದೆ.

ದೇಶಕ್ಕೆ ವಿದೇಶಿ ವಿನಿಮಯ

ಜೇನು ಕಾರಿಡಾರ್‌ಗಳ ಸ್ಥಾಪನೆಯು ಜೇನುತುಪ್ಪದ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ರಫ್ತಿಗೆ ದಾರಿ ಮಾಡಿಕೊಡುವ ಗುರಿಯನ್ನು ಹೊಂದಿದೆ. ವಿದೇಶಗಳಲ್ಲಿ ಭಾರತೀಯ ಜೇನುತುಪ್ಪಕ್ಕೆ ಭಾರಿ ಬೇಡಿಕೆಯಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ಇರುವ ಜೇನು ಕಾರಿಡಾರ್‌ಗಳು ದೇಶಕ್ಕೆ ವಿದೇಶಿ ವಿನಿಮಯವನ್ನು ಗಳಿಸುವ ಗಣಿಯಾಗಲಿದೆ.


ಪರಾಗಗಳ ಲಭ್ಯತೆ ಖಚಿತ

ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ಥಾಪಿಸಲಾಗುವ 'ಜೇನು ಕಾರಿಡಾರ್' ವರ್ಷವಿಡೀ ಜೇನುನೊಣಗಳಿಗೆ ಸೂಕ್ತವಾದ ಸಸ್ಯಗಳನ್ನು ಬೆಳೆಸುತ್ತದೆ. ಹೂ ಬಿಡುವ ಮರಗಳು ಮತ್ತು ಸಸ್ಯಗಳನ್ನು ಒಳಗೊಂಡಿರುವ ಈ ಸ್ಥಳಗಳು ವರ್ಷವಿಡೀ ಹೂವುಗಳು ಮತ್ತು ಪರಾಗಗಳ ಲಭ್ಯತೆಯನ್ನು ಖಚಿತಪಡಿಸಲಾಗುತ್ತದೆ.









ಕಾರಿಡಾರ್‌ನಿಂದ ಕೃಷಿ ಮತ್ತು ತೋಟಗಾರಿಕಾ ಉತ್ಪಾದನೆ ಮತ್ತು ಪರಿಸರ ಸಮತೋಲನೆ

ಈ ಕಾರಿಡಾರ್‌ನಲ್ಲಿ ಪರಾಗಸ್ಪರ್ಶ ಮತ್ತು ಜೇನುನೊಣಗಳನ್ನು ರಕ್ಷಿಸಲಾಗುತ್ತದೆ. ಪರಾಗಸ್ಪರ್ಶ ಸೇವೆಗಳು, ಕೃಷಿ ಮತ್ತು ತೋಟಗಾರಿಕಾ ಉತ್ಪಾದನೆ ಮತ್ತು ಪರಿಸರ ಸಮತೋಲನವನ್ನು ಗಣನೆಗೆ ತೆಗೆದುಕೊಂಡು ಜೇನುನೊಣ ಕಾರಿಡಾರ್‌ಗಳನ್ನು ಸಿದ್ಧಪಡಿಸಲಾಗುತ್ತದೆ. ಈ ಉಪಕ್ರಮವು ಜೇನುನೊಣಗಳು ಮತ್ತು ಇತರ ಪರಾಗಸ್ಪರ್ಶಕಗಳು ಎದುರಿಸುವ ಪರಿಸರ ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಕೃಷಿ – ಹವಾಮಾನ ಪರಿಸ್ಥಿತಿಗಳು ಮತ್ತು ಸ್ಥಳೀಯ ಸೂಕ್ತತೆಯನ್ನು ಅವಲಂಬಿಸಿ ಅಂತಹ ಕಾರಿಡಾರ್‌ಗಳನ್ನು ರಾಷ್ಟ್ರೀಯ ಹೆದ್ದಾರಿಗಳು ಮತ್ತು ಇತರ ಖಾಲಿ ಭೂಮಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ.

ಜೇನುನೊಣಗಳು ಮತ್ತು ಕಾಡು ಜೇನುನೊಣಗಳ ಸರಾಸರಿ ಆಹಾರ ಹುಡುಕುವ ದೂರಕ್ಕೆ ಅನುಗುಣವಾಗಿ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು 500 ಮೀಟರ್‌ನಿಂದ ಒಂದು ಕಿಲೋಮೀಟರ್ ಅಂತರದಲ್ಲಿ ಹೂಬಿಡುವ ಸಸ್ಯಗಳ ಸಮೂಹಗಳನ್ನು ನೆಡಬಹುದಾದ ಪ್ರದೇಶಗಳನ್ನು ಗುರುತಿಸಲಾಗುವುದು.

ಹೆದ್ದಾರಿಯಲ್ಲಿ ಉದ್ಯಾನ

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು 'ಜೇನುನೊಣ ಕಾರಿಡಾರ್'ಗಳನ್ನು ರಚಿಸಲು ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ಉದ್ಯಾನಗಳನ್ನು ನಿರ್ಮಿಸಲಾಗುವುದು.

ಸಸ್ಯಗಳ ಪಾಲನೆ

ಪರಾಗ ಮತ್ತು ಪರಾಗದಿಂದ ಸಮೃದ್ಧವಾಗಿರುವ ಸಸ್ಯಗಳನ್ನು ನೆಡುವ ಮೂಲಕ ಹೂಬಿಡುವ ಕಳೆಗಳು ಬೆಳೆಯಲು ಅನುವು ಮಾಡಿಕೊಡುವ ಮೂಲಕ ಮತ್ತು ಪರಾಗಸ್ಪರ್ಶಕಗಳಿಗೆ ಪ್ರಯೋಜನಕಾರಿಯಾದ ಸತ್ತ ಮತ್ತು ಟೊಳ್ಳಾದ ಮರದ ಕಾಂಡಗಳನ್ನು ನಿರ್ವಹಿಸುವ ಮೂಲಕ ಜೇನುನೊಣ ಕಾರಿಡಾರ್‌ಗಳನ್ನು ರಚಿಸಲಾಗುತ್ತದೆ. ಇದು ಮರಗಳು, ಪೊದೆಗಳು, ಗಿಡಮೂಲಿಕೆಗಳು ಮತ್ತು ಹುಲ್ಲುಗಳ ವಿಶಿಷ್ಟ ಉಪಕ್ರಮವಾಗಿದೆ.

ವಿವಿಧ ಋತುಗಳಲ್ಲಿ ಹೂಬಿಡುವ ಸಸ್ಯ

ವರ್ಷವಿಡೀ ನಿರಂತರ ಹೂಬಿಡುವ ಆವಾಸ ಸ್ಥಾನವನ್ನು ಕಾಪಾಡಿಕೊಳ್ಳಲು, ವಿವಿಧ ಋತುಗಳಲ್ಲಿ ಮಧ್ಯಂತರವಾಗಿ ಹೂಬಿಡುವ ಸಸ್ಯಗಳನ್ನು ಜೇನುನೊಣ ಕಾರಿಡಾರ್‌ಗಳಲ್ಲಿ ನೆಡಲಾಗುತ್ತದೆ. ಬೇವು, ಪಾಲಾಶ ಹಾಗೂ ಇತರ ಸ್ಥಳೀಯ ಮರಗಳು ಮತ್ತು ಸಸ್ಯಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ನೆಡಲಾಗುವುದು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಪ್ರೇಮ ಹೆಗ್ಡೆ, ಪರ್ಲಾಂಡ ಹೌಸ್, ಕರಂಬಾರು, ಆಳದಂಗಡಿ, ಬೆಳ್ತಂಗಡಿ (ತಾ).
2. ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಮಿಯ್ಯಾರು, ಕಾರ್ಕಳ (ತಾ).
3. ಶಕುಂತಲಾ ಪ್ರಕಾಶ್ ಮತ್ತು ಫ್ಯಾಮಿಲಿ, 'ಗುರುಪ್ರಕಾಶ್', ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಬಳಿ, ಕುಳಾಯಿ.
4. ಕಂಕನಾಡಿ ವಲಯ ಬಂಟರ ಸಂಘ, ಕಾವೂ ಪಂಚಲಿಂಗೇಶ್ವರ ದೇವಸ್ಥಾನ ವಠಾರ ವಯಾ ಪಡೀಲ್.
5. ಶಂಭೂರು ಗ್ರಾಮದ ಬೊಂಡಾಲ ರಸ್ತೆ ಬದಿ ಹತ್ತು ಸಮಸ್ತರು, ಬಂಟ್ವಾಳ (ತಾ).
6. ಜಿ. ಭಾಸ್ಕರ ಭಟ್, 'ಮಂಗಳಾ', ಅಳಕೆ, ಗಂಜಿಮಠ, ಮಂಗಳೂರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ಹತ್ತು ಸಮಸ್ತರು, ಯಕ್ಷಗಾನ ಸೇವಾ ಸಮಿತಿ, ಮೇಲ್ಕಾರು, ಪೆರ್ಮುದೆ, ವಯಾ ಬಜಪೆ.

ಶ್ರೀ ಧರ್ಮಸ್ಥಳ ಮೇಳ
ಹೆದ್ದೂರು ಹೊಸಳ್ಳಿಯಲ್ಲಿ
ಶ್ರೀ ವಿನಾಯಕ ಗೆಳೆಯರ ಬಳಗ, ಹೆದ್ದೂರು, ಕುಂಚೇರಿ

ಶ್ರೀ ಸಾಲಿಗ್ರಾಮ ಮೇಳ
ಆರಗಾದಲ್ಲಿ ಬಯಲಾಟ - ಸ್ವಪ್ನ ಮಂಟಪ

ಶ್ರೀ ಪೆರ್ಡೂರು ಮೇಳ
ಹೆಂಡಿಗದ್ದೆಯಲ್ಲಿ- ಚದುರಂಗ

ಶ್ರೀ ಹನುಮಗಿರಿ ಮೇಳ
ಈಶ್ವರಮಂಗಲದಲ್ಲಿ

ಶ್ರೀ ಪಾವಂಜೆ ಮೇಳ
ಶ್ರೀ ಮಾರಿಕಾಂಬಾ ದೇವಸ್ಥಾನ, ತೀರ್ಥಹಳ್ಳಿಯಲ್ಲಿ
-ಸಂಪೂರ್ಣ ಶ್ರೀ ದೇವಿ ಮಹಾತ್ಮೆ

ಮಕ್ಕಳಿಲ್ಲದ ಹಿರಿಯ ದಂಪತಿಗೆ ಆಸರೆಯಾದ ಸಂತೋಷ್ ಕುಮಾರ್ ರೈ ಬೋಳಿಯಾರ್

ಫೆ.25ರಂದು 'ನಮೋ ಕುಟೀರ-6' ಗೃಹಪ್ರವೇಶ

▸ ಸತೀಶ್ ನಡುಪದವು

• **ಕೊಣಾಜೆ:** ಗಾಳಿ ಮಳೆಗೆ ಕುಸಿಯುವ ಹಂತದ ಜೋಪಡಿಯೊಳಗೆ ಉಸಿರುಗಟ್ಟಿ ಜೀವನ ನಡೆಸುತ್ತಿದ್ದ ವೃದ್ಧ ದಂಪತಿಗೆ ಬದುಕಿನ ಭರವಸೆಯಿರಲಿಲ್ಲ. ಒಂದೆಡೆ ಮಕ್ಕಳಿಲ್ಲದ ಕೊರಗಾದರೆ ಇನ್ನೊಂದೆಡೆ ಕುಸಿದ ಮನೆಯಲ್ಲಿ ನರಕಯಾತನೆಯ ಬದುಕು. ಈ ಸಂಕಷ್ಟದ ನಡುವೆ ಇವರ ಕತ್ತಲೆಯ ಬದುಕಿಗೆ ಬೆಳಕಾದವರು ಮೈಸೂರು ಇಲೆಕ್ಟ್ರಿಕಲ್ ಇಂಡಸ್ಟ್ರೀಸ್ ಇದರ ನಿಕಟಪೂರ್ವ ಅಧ್ಯಕ್ಷ, ಬಿಜೆಪಿ ಮುಖಂಡರಾಗಿರುವ ಸಂತೋಷ್ ಕುಮಾರ್ ರೈ ಬೋಳಿಯಾರ್. ಹಿರಿಯರಾದ ರುಕ್ಮಯ ಮೂಲ್ಯ – ವಿಜಯ ದಂಪತಿಗೆ 'ನಮೋ-6'. ಕುಟೀರವನ್ನು ತಮ್ಮ ಸ್ವಂತ ಖರ್ಚಿನಲ್ಲೇ ನಿರ್ಮಾಣ ಮಾಡಿ, ಫೆ.25 ರಂದು ಗೃಹಪ್ರವೇಶದೊಂದಿಗೆ ಮನೆಯ ಕೀಲಿ ಕೈ ಹಸ್ತಾಂತರ ಮಾಡಲಿದ್ದಾರೆ.

ಕುರ್ನಾಡು ಗ್ರಾಮದ ಅಬೆಮಾರು ಎಂಬಲ್ಲಿ ರುಕ್ಮಯ ಮೂಲ್ಯ ಹಾಗೂ ವಿಜಯ ದಂಪತಿ ಹಲವಾರು ವರ್ಷದಿಂದ ಅರ್ಧ ಕುಸಿದು ಹೋಗಿರುವ ಜೋಪಡಿಯಂತಹ ಮನೆಯಲ್ಲಿ ವಾಸವಾಗಿದ್ದು, ಕೂಲಿ ಕೆಲಸಕ್ಕೂ ಹೋಗಲಾಗದೆ ಸಂಕಷ್ಟದ ಜೀವನ ಸಾಗಿಸುತ್ತಿದ್ದರು. ಕಳೆದ ಮಳೆಗಾಲದಲ್ಲಿ ಈ ಮನೆಯನ್ನು ಕುರ್ನಾಡು ಪಂಚಾಯತ್ ಅಪಾಯಕಾರಿ ಮನೆಯೆಂದು ಘೋಷಿಸಿ ಬೇರೆಡೆಗೆ ಸ್ಥಳಾಂತರಗೊಳ್ಳಲು ತಿಳಿಸಿತ್ತು. ಆದರೆ ದಿಕ್ಕು ಕಾಣದ ಕುಟುಂಬ ಅಲ್ಲೇ ವಾಸವಾಗಿತ್ತು. ಈ ಕುರಿತು ಹೊಸದಿಗಂತ ವರದಿ ಪ್ರಕಟಿಸಿತ್ತು. ಹಿರಿಯ ದಂಪತಿಯ ಸಂಕಷ್ಟವನ್ನು ಅರಿತ ಜನಶಿಕ್ಷಣ ಟ್ರಸ್ಟ್ ಶೀನ ಶೆಟ್ಟಿ ಮತ್ತು ಕೃಷ್ಣ ಮೂಲ್ಯ ಹಾಗೂ ಸಂತೋಷ್ ಬೋಳಿಯಾರ್ ಅವರು ರುಕ್ಮಯ ಮೂಲ್ಯ ಅವರ ಕುಸಿಯುವ ಹಂತದಲ್ಲಿದ್ದ ಮನೆಗೆ ಬಂದಿದ್ದರು. ಈ ಸಂದರ್ಭದಲ್ಲಿ ಹಿರಿಯ ಜೀವಿಗಳ ಸಂಕಷ್ಟಮಯ ಬದುಕನ್ನು ಅರ್ಥ ಮಾಡಿಕೊಂಡ ಸಂತೋಷ್ ಕುಮಾರ್ ರೈ ಬೋಳಿಯಾರ್ ಅವರು ಸೂರು ನಿರ್ಮಿಸಿ ಹಿರಿಯರ ಬದುಕಿಗೆ ಆಸರೆಯಾಗುವ ಭರವಸೆ ನೀಡಿದ್ದರು. ಇದರಂತೆ ಮಳೆಗಾಲ ಕಳೆದು ಕೆಲಸ ಆರಂಭಿಸಿದ ಮೂರು ತಿಂಗಳಲ್ಲೇ ಮನೆಯ ಕೆಲಸ ಪೂರ್ಣಗೊಂಡಿದೆ.





ಆರನೇ ಮನೆ

ಸಂತೋಷ್ ಕುಮಾರ್ ಬೋಳಿಯಾರ್ ಅವರು ರಾಜಕೀಯರಂಗದಲ್ಲಿ ಗುರುತಿಸಿಕೊಂಡಿದ್ದರೂ ಸಮಾಜ ಸೇವೆಯ ಮೂಲಕ ಸಮಾಜದ ಅಶಕ್ತರಿಗೆ, ಬಡವರಿಗೆ ನೆರವಾಗುತ್ತಾ ಬಂದಿದ್ದಾರೆ. ಈಗಾಗಲೇ ಸಮಾಜದಲ್ಲಿ ತೀರ ಹಿಂದುಳಿದ ಐದು ಕುಟುಂಬಗಳಿಗೆ ನರೇಂದ್ರ ಮೋದಿಯವರ ಹೆಸರಿನಲ್ಲಿ ನಮೋ ಕುಟೀರವನ್ನು ನಿರ್ಮಿಸಿಕೊಟ್ಟಿದ್ದು, ಇದೀಗ ಆರನೇ ಮನೆಯನ್ನು ರುಕ್ಮಯ ಮೂಲ್ಯ ದಂಪತಿಗೆ ನಿರ್ಮಿಸಿಕೊಟ್ಟು ಗೃಹ ಪ್ರವೇಶದ ಖರ್ಚನ್ನೂ ತಾವೇ ಭರಿಸಲಿದ್ದಾರೆ.



"ಕುರ್ನಾಡುವಿನ ಅಬೆಮಾರ್‌ನಲ್ಲಿ ಮಕ್ಕಳಿಲ್ಲದ ವೃದ್ಧ ದಂಪತಿ ಮನೆಯಿಲ್ಲದೆ ಸಂಕಷ್ಟದಲ್ಲಿರುವ ಬಗ್ಗೆ ಅಲವತ್ತುಕೊಂಡಿದ್ದರು. ಇದಕ್ಕಾಗಿ ನರೇಂದ್ರ ಮೋದಿಜಿಯವರ ಹೆಸರಿನಲ್ಲಿ ಅವರಿಗೆ 'ನಮೋ ಕುಟೀರ-6 ಕ್ಕೆ ಮೂರು ತಿಂಗಳ ಹಿಂದೆಯಷ್ಟೇ ಶಿಲಾನ್ಯಾಸ ನಡೆಸಿದ್ದು ಇದೀಗ ಕಾಮಗಾರಿ ಪೂರ್ಣಗೊಂಡಿದ್ದು ಫೆ.25 ಕ್ಕೆ ಕೀ ಹಸ್ತಾಂತರ ಮಾಡಲಿದ್ದೇನೆ. ಒಂದು ರೂಮ್ , ಹಾಲ್ , ಕಿಚನ್, ಸಿಟೌಟ್ ಸೇರಿದಂತೆ ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಹಿರಿಯ ದಂಪತಿ ನೂತನ ಮನೆಯಲ್ಲಿ ನೆಮ್ಮದಿಯಿಂದ ಬದುಕುವಂತಾಗಲಿ. ಇನ್ನಷ್ಟು ಮನೆಯನ್ನು ಕಟ್ಟಿಕೊಡುವ ಶಕ್ತಿಯನ್ನು ದೇವರು ಕರುಣಿಸಲಿ.

■ ಸಂತೋಷ್ ಕುಮಾರ್ ರೈ ಬೋಳಿಯಾರ್

ಕರ್ಣಾಟಕ ಬ್ಯಾಂಕ್ ಸಂಸ್ಥಾಪಕರ ದಿನಾಚರಣೆ | ವಿಕಸಿತ್ ಭಾರತ್ ಕುರಿತು ಉಪನ್ಯಾಸ | ಪ್ರೇಕ್ಷಕರ ಮನಸೂರೆಗೊಂಡ ಸಂಗೀತ ಕಛೇರಿ

ಈಗ ದೇಶದ ಆರ್ಥಿಕ ಚಿತ್ರಣ ಬದಲಾಗಿದೆ: ದೇಬಾಶೀಷ್ ಪಾಂಡಾ

ಮಂಗಳೂರು: ಯಾರ ಊಹೆಗೂ ನಿಲುಕದಂತೆ ಭಾರತ ಬಹುದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ಇಷ್ಟು ಬೇಗ ಭಾರತ ವಿಶ್ವದ ನಾಲ್ಕನೇ ಆರ್ಥಿಕ ಶಕ್ತಿಯಾಗಿ ತನ್ನ ಸಾಮರ್ಥ್ಯ ಪ್ರದರ್ಶಿಸಬಲ್ಲುದು ಎಂಬುದನ್ನು ಯಾರೂ ಊಹಿಸಿರಲಿಲ್ಲ. ಕೆಲವೇ ವರ್ಷಗಳಲ್ಲಿ ದೇಶದ ಚಿತ್ರಣ ಬದಲಾಗಿದೆ. ಕೇಂದ್ರ ಸರ್ಕಾರದ ವಿಕಸಿತ್ ಭಾರತ ಪರಿಕಲ್ಪನೆಯನ್ನು ಸಾಕಾರಗೊಳಿಸುವುದು ದೇಶದ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಮಾಜಿ ಐಎಎಸ್ ಅಧಿಕಾರಿ, ನೀತಿ ಸುಧಾರಕ ದೇಬಾಶೀಷ್ ಪಾಂಡ ಹೇಳಿದರು.

ಮಂಗಳೂರಿನ ಕರ್ಣಾಟಕ ಬ್ಯಾಂಕ್‌ನ ಪ್ರಧಾನ ಕಚೇರಿಯಲ್ಲಿ ಬುಧವಾರ ಬ್ಯಾಂಕಿನ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ 'ವಿಕಸಿತ್ ಭಾರತ್– 2047: ಹಣಕಾಸು ಸೇವೆಗಳ ಪಾತ್ರ' ಎಂಬ ವಿಚಾರದ ಕುರಿತು ಪ್ರಧಾನ ಉಪನ್ಯಾಸ ನೀಡಿದ ಅವರು, ವಿಕಸಿತ್ ಭಾರತ್ ಸಾಕಾರಕ್ಕೆ ಸಂಘ ಸಂಸ್ಥೆಗಳು, ಉದ್ಯಮ ಕ್ಷೇತ್ರ, ಅಧಿಕಾರಿಗಳು ಮಾತ್ರವಲ್ಲದೆ, ಪ್ರತಿಯೊಬ್ಬ ನಾಗರಿಕನೂ ಸಾಥ್ ನೀಡಬೇಕು ಎಂದರು.

ಬ್ಯಾಂಕ್‌ಗಳ ಪಾತ್ರವೂ ಇದೆ

'ವಿಕಸಿತ್ ಭಾರತ್– 2047' ಪರಿಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಬ್ಯಾಂಕ್‌ಗಳ ಪಾತ್ರವೂ ಮಹತ್ತರವಾದುದು. ಮುಂದಿನ ಎರಡು ದಶಕಗಳ ಕಾಲ ಭಾರತದ ಆರ್ಥಿಕತೆಯು ಬಲಿಷ್ಠವಾಗಿರಬೇಕಾದರೆ ದೇಶದ ಬ್ಯಾಂಕುಗಳು ತಯಾರಿಕಾ ವಲಯ, ಇಂಧನ ಪರಿವರ್ತನೆ ಮತ್ತು ಡಿಜಿಟಲ್ ಉದ್ಯಮಶೀಲತೆಗೆ ಹೆಚ್ಚಿನ ಹಣಕಾಸು ಒದಗಿಸಬೇಕಾದ ಅನಿವಾರ್ಯತೆ ಇದೆ. ಜಾಗತಿಕ ಮಟ್ಟದ ಸವಾಲುಗಳನ್ನು ಎದುರಿಸಬಲ್ಲ ಬಲಿಷ್ಠ ಬ್ಯಾಂಕಿಂಗ್ ವ್ಯವಸ್ಥೆಯು ಭಾರತಕ್ಕೆ ಇಂದು ಅತ್ಯಗತ್ಯ ಎಂದರು.

ಬ್ಯಾಂಕ್‌ಗಳು ಕೇವಲ ಲಾಭ ಗಳಿಸುವ ಜತೆಗೆ ತನ್ನ ಮೂಲ ತತ್ವವಾದ ಸಾಮಾಜಿಕ ಪರಿವರ್ತನೆಯ ಭಾಗವೂ ಆಗಬೇಕಿವೆ. ದೇಶದ ಬೆಳವಣಿಗೆ ಮತ್ತು ಆರ್ಥಿಕ ಸ್ಥಿರತೆಯ ಆಧಾರ ಸ್ತಂಭಗಳಾದ ಈ ಹಣಕಾಸು ಸಂಸ್ಥೆಗಳು ಈ ನಿಟ್ಟಿನಲ್ಲಿ ತಮ್ಮ ಆದ್ಯತೆ ನೀಡಬೇಕು. ಏಕರೂಪದ ಕಾರ್ಯ ವಿಧಾನವನ್ನು ಪರಿವರ್ತಿಸಿ, ಫೈನಾನ್ಸಿಂಗ್‌ನ ವಿವಿಧ ಮಾದರಿಗಳ ಅನುಷ್ಠಾನಕ್ಕೆ ಮುಂದಾಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ಪ್ರಸ್ತುತ ಕಾಲಘಟ್ಟದಲ್ಲಿ ತಂತ್ರಜ್ಞಾನ ಅನಿವಾರ್ಯವಾಗಿದೆ. ಅದಕ್ಕೆ ಹೊಂದಿಕೊಳ್ಳುವುದು ನಮ್ಮ ಕರ್ತವ್ಯ. ಇಂದಿನ ಡಿಜಿಟಲ್ ಯುಗದಲ್ಲಿ ಚೆಕ್ ಬುಕ್ ಎಂಬುದು ಬಹುತೇಕ ಇತಿಹಾಸ ಪುಟ ಸೇರಿದೆ. ಟೆಲಿಫೋನ್ ಡಯಲ್ ಮಾಡುವ ಕಾಲದಿಂದ ಇಂದಿನ ಮೊಬೈಲ್ ಮತ್ತು ವೀಡಿಯೊ ಸಂವಹನದ ಯುಗದವರೆಗೆ ತಲೆಮಾರುಗಳ ಪರಿವರ್ತನೆಗೆ ಸಾಕ್ಷಿಯಾಗಿದ್ದೇವೆ ಎಂದವರು ಹೇಳಿದರು.



ಪ್ರೇರಣಾದಾಯಕ

ಕರ್ಣಾಟಕ ಬ್ಯಾಂಕ್‌ನ ಕಳೆದ 102 ವರ್ಷಗಳ ಪಯಣ, ಮೈಲುಗಲ್ಲುಗಳು, ಬದಲಾವಣೆಗಳು ಇವೆಲ್ಲವೂ ಪ್ರೇರಣಾದಾಯಕವಾಗಿವೆ. ಸಂಸ್ಥಾಪಕರ ದಿನವನ್ನು ನಾನು ಕೇವಲ ಒಂದು ಆಚರಣಾತ್ಮಕ ಮೈಲುಗಲ್ಲು ಎಂದು ನೋಡುವುದಿಲ್ಲ. ಇದು ಸಂಸ್ಥೆಯ 'ಪಾಸ್ ಪಾಯಿಂಟ್'– ಅಂದರೆ ಕ್ಷಣಕಾಲ ನಿಂತು ಚಿಂತನೆ ಮಾಡುವ ದಿನ ಎಂದು ದೇಬಾಶೀಷ್ ಪಾಂಡಾ ಹೇಳಿದರು.

ಕರ್ಣಾಟಕ ಬ್ಯಾಂಕ್ ಅಧ್ಯಕ್ಷ ಪಿ. ಪ್ರದೀಪ್ ಕುಮಾರ್ ಮಾತನಾಡಿ, ವಿಕಸಿತ್ ಭಾರತ್ ದೃಷ್ಟಿಕೋನವು ಬ್ಯಾಂಕ್‌ಗಳಿಗೆ ಅನೇಕ ಅವಕಾಶಗಳನ್ನು ಸೃಷ್ಟಿಸಲಿದೆ. ಈ ಬೆಳವಣಿಗೆಯಲ್ಲಿ ಕೈಜೋಡಿಸುವ ನಿಟ್ಟಿನಲ್ಲಿ ಕರ್ಣಾಟಕ ಬ್ಯಾಂಕ್ ಬದ್ಧತೆಯಿಂದ ಕಾರ್ಯ ನಿರ್ವಹಿಸಲಿದೆ. ಬ್ಯಾಂಕಿನ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವ ಜತೆಗೆ ವಿಕಸಿತ್ ಭಾರತ್ ಕಾರ್ಯ ಸಾಧನೆಯಲ್ಲಿ ಸಕ್ರಿಯ ಪಾತ್ರ ವಹಿಸಲಿದ್ದೇವೆ ಎಂದು ಹೇಳಿದರು.

ಬ್ಯಾಂಕ್‌ನ ಎಂಡಿ ಮತ್ತು ಸಿಇಒ ರಾಘವೇಂದ್ರ ಎಸ್. ಭಟ್ ಮಾತನಾಡಿ, ಕರ್ಣಾಟಕ ಬ್ಯಾಂಕ್ ಆರ್ಥಿಕ ಸ್ಥಿರತೆ ಮತ್ತು ಅಭಿವೃದ್ಧಿಯಲ್ಲಿ ಉನ್ನತ ಸ್ಥಾನಕ್ಕೇರಿದ್ದು, ಇದಕ್ಕೆ ಬ್ಯಾಂಕ್‌ನ ಸಂಸ್ಥಾಪಕರ ದೂರದೃಷ್ಟಿ ಮತ್ತು ಕಾರ್ಯಕ್ಷಮತೆ ಕಾರಣ. ಮುಂದಿನ ದಿನಗಳಲ್ಲಿ ತಂತ್ರಜ್ಞಾನದ ಹೊಸ ಆವಿಷ್ಕಾರಗಳನ್ನು ಅಳವಡಿಸಿಕೊಂಡು ಮುಂದುವರಿಯುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದೇವೆ ಎಂದು ಹೇಳಿದರು.

ಇದೇ ಸಂದರ್ಭ ದೇಬಾಶೀಷ್ ಪಾಂಡ ಅವರನ್ನು ಪಿ. ಪ್ರದೀಪ್ ಕುಮಾರ್ ಸನ್ಮಾನಿಸಿದರು. ಕಾರ್ಯಕ್ರಮದ ಬಳಿಕ ಮಹಿಳಾ ಕಲಾವಿದರಿಂದ 'ನಾರಿ ನಾದ ತರಂಗಿಣಿ' ಸಂಗೀತ ಕಛೇರಿ ಪ್ರೇಕ್ಷಕರ ಮನಸೂರೆಗೊಳಿಸಿತು.

ಇಂದಿನ ಪಂದ್ಯಗಳು

ವಿಂಡೀಸ್ VS ಇಟಲಿ
ಬೆಳಗ್ಗೆ 11 (ಕೋಲ್ಕತ್ತಾ)

ಶ್ರೀಲಂಕಾ VS ಜಿಂಬಾಬ್ವೆ
ಮಧ್ಯಾಹ್ನ 3 (ಕೊಲಂಬೋ)

ಅಫ್ಘಾನಿಸ್ತಾನ VS ಕೆನಡಾ
ಸಂಜೆ 7 (ಚೆನ್ನೈ)

ಕಿರುಸುದ್ದಿ

ಟಾಪ್ 10ರಲ್ಲಿ ಕಿಶನ್

ದುಬೈ: ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವ ಕ್ರಿಕೆಟ್‌ನಲ್ಲಿ ಹೊಸ ಛಾಪು ಮೂಡಿಸುತ್ತಿರುವ ಇಶಾನ್ ಕಿಶನ್ ಐಸಿಸಿ ಶ್ರೇಯಾಂಕದಲ್ಲಿ ಟಾಪ್ ಹತ್ತಕ್ಕೆ ಲಗ್ಗೆ ಹಾಕಿದ್ದಾರೆ. ಜನವರಿವರೆಗೂ ಅಂತಾರಾಷ್ಟ್ರೀಯ ಕ್ರಿಕೆಟ್ ಅಂಗಳದಲ್ಲಿ ಹೆಸರೇ ಇರದ ಕಿಶನ್ ದೇಶಿ ಕ್ರಿಕೆಟ್‌ನಲ್ಲಿ ಅಬ್ಬರಿಸಿ ವಿಶ್ವಕಪ್‌ನಲ್ಲಿ ಅವಕಾಶ ಪಡೆದರು. ಇದಕ್ಕೂ ಮುನ್ನ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ತಮ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಭಾರತೀಯರ ಮನೆ ಮಾತಾದರು. ಈಗ ವಿಶ್ವಕಪ್‌ನಲ್ಲಿ ಎದುರಾದ ತಂಡಗಳನ್ನು ದಂಡಿಸಿ ಮೆರೆದಾಡುತ್ತಿರುವ ಅವರು ಬುಧವಾರ ಪ್ರಕಟಗೊಂಡ ಶ್ರೇಯಾಂಕ ಪಟ್ಟಿಯಲ್ಲಿ ಎಂಟನೇ ಸ್ಥಾನಕ್ಕೇರಿದ್ದಾರೆ. 732 ರೇಟಿಂಗ್ ಅಂಕಗಳನ್ನು ಹೊಂದಿದ್ದಾರೆ. ಆರಂಭಿಕ ಅಭಿಷೇಕ್ ಶರ್ಮ ಮೊದಲನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ. ತಿಲಕ್ ವರ್ಮಾ ಮತ್ತು ಸೂರ್ಯಕುಮಾರ್ ಯಾದವ್ ಟಾಪ್ ಹತ್ತರಲ್ಲೇ ಕಾಣಿಸಿಕೊಂಡಿದ್ದಾರೆ. ಖುಷಿ ಪಡುವ ವಿಚಾರದಲ್ಲಿ ಹಾರ್ದಿಕ್ ಪಾಂಡ್ಯ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ 3ನೇ ಸ್ಥಾನಕ್ಕೇರಿದ್ದಾರೆ.

ಬೆಂಗಳೂರು ಓಪನ್: ಶ್ರೀವಲ್ಲಿಗೆ ಮುನ್ನಡೆ

ಬೆಂಗಳೂರು: ಮಹಿಳೆಯರ ಬೆಂಗಳೂರು ಓಪನ್ ಪಂದ್ಯಾವಳಿಯ ಮೊದಲ ಸುತ್ತಿನ ಪಂದ್ಯದಲ್ಲಿ, ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಪ್ರೀಕ್ವಾರ್ಟರ್ ಪ್ರವೇಶಿಸಿದ್ದಾರೆ. ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನ ರೋಚಕ ಪೈಪೋಟಿಯಲ್ಲಿ ಅವರು ಮಾಲ್ಟಾದ ಫ್ರಾನ್ಸೆಸ್ಕಾ ಕುರ್ಮಿ ವಿರುದ್ಧ 7-6(6), 6-4 ಅಂತರದಲ್ಲಿ ಗೆಲುವು ಸಾಧಿಸಿದರು. ಪಂದ್ಯದ ಆರಂಭದಲ್ಲೇ ಇಬ್ಬರೂ ಆಟಗಾರ್ತಿಯರು ಕಠಿಣ ಪೈಪೋಟಿ ನೀಡಿದರು. ಭಮಿಡಿಪಾಟಿ ಮೊದಲ ಗೇಮ್‌ನಲ್ಲಿ ಏಸ್ಗಳನ್ನು ಸಿಡಿಸಿ ಸರ್ವ್ ಉಳಿಸಿಕೊಂಡರು. ಮೂರನೇ ಗೇಮ್‌ನಲ್ಲಿ ಕುರ್ಮಿ ಬ್ರೇಕ್ ಪಡೆದು ದೀರ್ಘ ಬೇಸ್‌ಲೈನ್ ರ್‍ಯಾಲಿಗಳ ಮೂಲಕ ಮುನ್ನಡೆ ಸಾಧಿಸಿದರು.



ಆದರೆ ಭಮಿಡಿಪಾಟಿ ತಕ್ಷಣ ಪ್ರತಿಬ್ರೇಕ್ ಮಾಡಿ ಸೆಟ್ ಸಮಬಲಕ್ಕೆ ತಂದರು. ಇಬ್ಬರೂ ಆಟಗಾರ್ತಿಯರು ದೀರ್ಘ ರ್‍ಯಾಲಿಗಳಲ್ಲಿ ತೊಡಗಿದ ಕಾರಣ ಸೆಟ್ ಟೈಬ್ರೇಕ್‌ಗೆ ತಲುಪಿತು. ಒಂದು ಸೆಟ್ ಪಾಯಿಂಟ್ ತಪ್ಪಿಸಿದರೂ ಭಮಿಡಿಪಾಟಿ ತಾಳ್ಮೆ ಕಾಪಾಡಿಕೊಂಡು ಬಲಿಷ್ಠ ಏಸ್ನೊಂದಿಗೆ ಮೊದಲ ಸೆಟ್ ತಮ್ಮದಾಗಿಸಿಕೊಂಡರು. ಎರಡನೇ ಸೆಟ್‌ನಲ್ಲಿ ಭಮಿಡಿಪಾಟಿ ಆರಂಭದಲ್ಲೇ ಬ್ರೇಕ್ ಪಡೆದು ಮುನ್ನಡೆ ಸಾಧಿಸಿದರು. ಪಂದ್ಯ ಮುಂದುವರಿದಂತೆ ಕುರ್ಮಿ ಆಯಾಸಗೊಂಡಂತೆ ಕಾಣಿಸಿಕೊಂಡರು. ಏಳನೇ ಗೇಮ್‌ನಲ್ಲಿ ಮತ್ತೊಮ್ಮೆ ಬ್ರೇಕ್ ಪಡೆದ ಭಮಿಡಿಪಾಟಿ 6-4ರಿಂದ ಸೆಟ್ ಮುಕ್ತಾಯಗೊಳಿಸಿ ಜಯ ಖಚಿತಪಡಿಸಿಕೊಂಡರು. ಇದಕ್ಕೂ ಮೊದಲು ಮಾಯಾ ರಾಜೇಶ್ವರನ್ ರೇವತಿ ಐದನೇ ಶ್ರೇಯಾಂಕಿತ ಪೋಲಿನಾ ಇಯಾತ್ಸೆಂಕೊ ವಿರುದ್ಧ 1-6, 6-1, 0-6 ಅಂತರದಲ್ಲಿ ಸೋತರು. ಮೊದಲ ಶ್ರೇಯಾಂಕಿತ ತಾಲಿಯಾ ಗಿಬ್ಸನ್ ವೈದೇಹಿ ಚೌಧರಿ ವಿರುದ್ಧ 6-4, 6-0 ಜಯ ಸಾಧಿಸಿದರು. ಮೂರನೇ ಶ್ರೇಯಾಂಕಿತ ಹ್ಯಾನ್ನೆ ವಾಂಡೆವಿಂಕಲ್ ಯಾ-ಹ್ಸುಯಾನ್ ಲೀ ಅವರನ್ನು 6-1, 6-2 ಅಂತರದಲ್ಲಿ ಸೋಲಿಸಿದರು. ಎರಡನೇ ಶ್ರೇಯಾಂಕಿತ ಲ್ಯಾನಾ ತರರೂಡೆ ವಿಕ್ಟೋರಿಯಾ ಮಿಲೋವಾನೋವಾ ವಿರುದ್ಧ 6-1, 6-4 ಜಯಿಸಿದರು. ಏಳನೇ ಶ್ರೇಯಾಂಕಿತ ಎಲೆನಾ ಪ್ರಿಡಾಂಕಿನಾ ಎರಿ ಶಿಮಿಜು ವಿರುದ್ಧ 7-6(5), 6-4 ಅಂತರದಲ್ಲಿ ಗೆಲುವು ದಾಖಲಿಸಿದರು.

ಭಾರತ ಮಹಿಳೆಯರಿಗೆ ಆಸೀಸ್ ಎದುರಾಳಿ

ಕ್ಯಾನ್ಬೇರಾ: ಮೊದಲ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿರುವ ಭಾರತೀಯ ಮಹಿಳೆಯರ ತಂಡವು ತನ್ನ ಎರಡನೇ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಗುರುವಾರದಂದು ಎದುರಿಸಲಿದೆ. ಎರಡು ಪಂದ್ಯಗಳ ಈ ಸರಣಿಯಲ್ಲಿ ಮುನ್ನಡೆ ಸಾಧಿಸಿರುವ ಭಾರತೀಯರು ಪಂದ್ಯದೊಂದಿಗೆ ಸರಣಿ ಗೆಲ್ಲುವುದಕ್ಕೆ ಸಜ್ಜಾಗಿದ್ದಾರೆ. ಈ ಹಿಂದೆ ನಡೆದಿರುವ ಮೊದಲ ಪಂದ್ಯದಲ್ಲಿ ಗೆದ್ದ ನಂತರ ಎರಡನೇ ಪಂದ್ಯ ಕ್ಯಾನ್ಬೇರಾದಲ್ಲಿ ನಡೆಯಲಿದೆ. ಭಾರತ ಗೆದ್ದರೆ ಸರಣಿ ಟ್ರೋಫಿ ತೆಗೆದುಕೊಂಡು ಬರಲಿದೆ. ಆಸೀಸ್ ಗೆದ್ದರೆ ಸರಣಿ ಟೈಗೊಳ್ಳಲಿದೆ.

ಭಾರತಕ್ಕೆ ಕಾಲಿಡಲಿದೆಯೇ ಬಿಗ್ ಬ್ಯಾಷ್ ಲೀಗ್?

ಚೆನ್ನೈ: ಭಾರತ ಕ್ರಿಕೆಟ್ ಅಭಿಮಾನಗಳನ್ನು ಮತ್ತು ಅವರಲ್ಲಿರುವ ಅಭಿಮಾನವನ್ನು ಮೆಚ್ಚಿರುವ ಆಸ್ಟ್ರೇಲಿಯಾ ಕ್ರಿಕೆಟ್ ಸಂಸ್ಥೆ ತನ್ನದೂ ಪಂದ್ಯಾವಳಿಯನ್ನು ಭಾರತದಲ್ಲಿ ಆಯೋಜಿಸಿ ಪ್ರಚಾರ ಪಡೆಯುವ ಪ್ಲಾನ್ ಒಂದನ್ನು ಮಾಡಿಕೊಂಡಿದೆ. ಆಸ್ಟ್ರೇಲಿಯಾ ಸೇರಿದಂತೆ ವಿವಿಧ ದೇಶಗಳಲ್ಲಿ ನಡೆಯುವ ಬಿಗ್ ಬ್ಯಾಷ್ ಲೀಗ್ ಪಂದ್ಯಾವಳಿಯ ಇದೇ ಮೊಟ್ಟ ಮೊದಲ ಬಾರಿಗೆ ಭಾರತದಲ್ಲಿ ಆಯೋಜಿಸುವ ಆಸೆ ವ್ಯಕ್ತಪಡಿಸಿದ್ದು, ಚೆನ್ನೈನಲ್ಲಿ ಬಿಬಿಎಲ್ ಪಂದ್ಯಗಳನ್ನು ಆಯೋಜಿಸುವುದಕ್ಕೆ ಕ್ರಿಕೆಟ್ ಆಸ್ಟ್ರೇಲಿಯಾ ಮನವಿ ಸಲ್ಲಿಸಿದೆ. ಫ್ರಾಂಚೈಸಿ ಮಟ್ಟದ ಕೂಟದಲ್ಲಿ ಐಪಿಎಲ್ ಬಿಟ್ಟರೆ ಆಸ್ಟ್ರೇಲಿಯಾದ ಬಿಗ್ ಬ್ಯಾಷ್ ಲೀಗ್ ದೊಡ್ಡ ಮಟ್ಟದಲ್ಲಿ ನಡೆಯುತ್ತದೆ. ಅದಕ್ಕೆ ಐಪಿಎಲ್‌ನಷ್ಟು ಕ್ರೇಜ್ ಇಲ್ಲದಿದ್ದರೂ ದೊಡ್ಡ ಕೂಟ ಎನಿಸುಬಲ್ಲ ಪ್ರಚಾರ ಹೊಂದಿದೆ. ಚೆನ್ನೈನಲ್ಲಿ ನಡೆಯುವ ಕ್ರಿಕೆಟ್ ಪಂದ್ಯಗಳಿಗೆ ವಿಶ್ವ ಕ್ರಿಕೆಟ್‌ನಲ್ಲಿ ವಿಶೇಷ ಹೆಸರಿದೆ. ಅಲ್ಲಿಯ ವಾತಾವರಣ, ಅಲ್ಲಿಯ ವಿಶೇಷ ಪಿಚ್ ಕ್ರೀಡಾಂಗಣದ ಹವಮಾನ ಮತ್ತು ವಿಶೇಷವಾಗಿ ಚೆನ್ನೈ ತುಂಬಾ ಇರುವ ಕ್ರಿಕೆಟ್ ಅಭಿಮಾನಿಗಳು. ಯಾವುದೇ ಪಂದ್ಯವನ್ನು ಇನ್ನಷ್ಟು ಚೆಂದವಾಗಿ ನಡೆಸಿಕೊಡುತ್ತದೆ ಚೆನ್ನೈ. ಅಭಿಮಾನಿಗಳು ಮನರಂಜನೆ ಪಡೆಯುತ್ತಾ ಆಟಗಾರರಿಗೆ ಎಲ್ಲಿಲ್ಲದ ಹುರುಪು ತುಂಬುತ್ತಾರೆ. ಈ ವಿಚಾರ ಗಮನಿಸಿರುವ ಬಿಬಿಎಲ್ ಆಯೋಜಿಸುವ ಮನವಿ ಸಲ್ಲಿಸಿದೆ.

ಸೋಲಿಲ್ಲದ ತಂಡವಾಗೇ ಸೂಪರ್-8ಕ್ಕೆ ಭಾರತ | ವರುಣ್ ಆರ್ಭಟ, ಮಿಂಚಿದ ಪಾಂಡ್ಯ

ಶಿವಂ ಸಿಕ್ಸರ್‌ಗಳಿಗೆ ನಲುಗಿದ ನೆದರ್ಲೆಂಡ್ಸ್

ಅಹಮದಾಬಾದ್: ಶಿವಂ ದುಬೆ ಅವರ ಸಿಕ್ಸರ್‌ಗಳ ಅಬ್ಬರಕ್ಕೆ ತತ್ತರಿಸಿದ ನಂತರ ವರುಣ್ ಚಕ್ರವ್ಯೂಹದಲ್ಲಿ ಸಿಲುಕೊಂಡ ನೆದರ್ಲೆಂಡ್ಸ್ ತಂಡವು ಸೋಲಿನೊಂದಿಗೆ ವಿಶ್ವಕಪ್ ಅಭಿಯಾನ ಮುಗಿಸಿತು. ಔಪಚಾರಿಕ ಪಂದ್ಯದಲ್ಲಿ 52 ರನ್‌ಗಳ ಗೆಲುವು ಸಾಧಿಸಿದ ಭಾರತ ಎಂದಿನಂತೆ ಟಾಪ್ ತಂಡವಾಗೇ ಸೂಪರ್-8ಕ್ಕೆ ಲಗ್ಗೆ ಹಾಕಿತು. ಮುಂದಿನ ಸುತ್ತಿಗೆ ವಿಶ್ವಾಸ ಹೆಚ್ಚಿಸಿಕೊಂಡಿತು.

ಅಹಮದಾಬಾದ್ ಅಂಗಳದಲ್ಲಿ ಟಾಸ್ ಗೆಲುವಿನೊಂದಿಗೆ ಬ್ಯಾಟಿಂಗ್‌ಗಿಳಿದ ಭಾರತ ಆರಂಭಿಕ ಆಘಾತ ಎದುರಿಸಿದರೂ ಶಿವಂ ದುಬೆ ಆಸರೆ ಪಡೆಯಿತು. ಸೆಟ್ ಆಗುವ ಔಪಚಾರಿಕತೆ ಮುಗಿಸುವ ತನಕ ನಿಧಾನವಾಗೇ ಆಡಿದ ದುಬೆ ನಂತರ ಬಾನಿನೆತ್ತರದ ಸಿಕ್ಸರ್‌ಗಳನ್ನು ಬಾರಿಸತೊಡಗಿದರು. ಅವರ ಆಟಕ್ಕೆ ಪಾಂಡ್ಯ, ಸೂರ್ಯ ಮತ್ತು ತಿಲಕ್ ರನ್‌ಗಳು ಕೂಡಿದ ಮೇಲೆ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿತು. ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ ವರಣ್ ದಾಳಿಗೆ ತತ್ತರಿಸಿತು. 176 ರನ್‌ಗಳಿಗೆ ಸುಸ್ತಾಯಿತು.

ಸಾಮಾನ್ಯವಾಗಿ ಚಿಕ್ಕ ಇಂನ್ನಿಂಗ್ಸ್‌ಗಳ ಮೂಲಕ ದೊಡ್ಡ ಇಂಪ್ಯಾಕ್ಟ್ ನೀಡುವ ದುಬೆ ಈ ಬಾರಿ ದೊಡ್ಡ ಇನ್ನಿಂಗ್ಸ್‌ನೊಂದಿಗೆ ಗೆಲುವಿನ ರೂವಾರಿ ಎನಿಸಿದರು. ಒತ್ತಡದ ಸಮಯದಲ್ಲಿ ಜವಾಬ್ದಾರಿ ಮೈಗೆತ್ತಿಕೊಂಡ ಅವರು, ಪಂದ್ಯಶ್ರೇಷ್ಠ ಆಟಗಾರ ಎನಿಸಿದರು. ಇತ್ತ ವರುಣ್ ಚಕ್ರವರ್ತಿ ಕೂಡ ಮಾರಕ ಬೌಲಿಂಗ್‌ಗೊಂದಿಗೆ ನೆದರ್ಲೆಂಡ್ಸ್ ಬೌಲರ್‌ಗಳನ್ನು ಬಲೆಗೆ ಕೆಡವಿಕೊಂಡರು. ಬೆಸ್ಟ್ ಬೌಲರ್ ಎನಿಸಿಕೊಂಡರು.

ಗಮನ ಸೆಳೆದ ದತ್ತ: ಮೊದಲ ಓವರ್‌ನಿಂದಲೂ ಭಾರತೀಯ ಬ್ಯಾಟಿಗರನ್ನು ಕಾಡಿದ ನೆದರ್ಲೆಂಡ್ಸ್ ತಂಡದ ಯರ್ನ್ ದತ್ತ ಉತ್ತಮ ತಮ್ಮ ಸ್ಪಿನ್‌ನೊಂದಿಗೆ ಮೋಡಿ ಮಾಡಿದರು. ಭಾರತದ ಡೇಂಜರಸ್ ಬ್ಯಾಟರ್‌ಗಳೆಂದೇ ಖ್ಯಾತರಾದ ಅಭಿಷೇಕ್ ಶರ್ಮ, ಇಶಾನ್ ಕಿಶನ್ ವಿಕೆಟ್ ಕಿತ್ತಿ ಮಿಂಚಿದರು. ವಿಕೆಟ್ ಕಮ್ಮಿ ಪಡೆದರೂ ಅವರ ಮನಮೋಹಕ ಕಡಿಮೆ ಎಕನಾಮಿಯ ಬೌಲಿಂಗ್ ಗಮನ ಸೆಳೆಯಿತು.



ಸಂಕ್ಷಿಪ್ತ ಸ್ಕೋರ್

ಭಾರತ 20 ಓವರ್‌ಗಳಲ್ಲಿ 193/6: ದುಬೆ 66, ಸೂರ್ಯ 34; ದತ್ತ 19/2
ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 176/7: ಲೀಡೆ 33, ಲೆವಿಟ್ 24; ವರುಣ್ 14/3

ಶಿವಂ ದುಬೆ ಅಬ್ಬರ

ಸಾಮಾನ್ಯವಾಗಿ 25-35 ರನ್‌ಗಳೊಂದಿಗೆ ತಂಡಕ್ಕೆ ಆಸರೆಯಾಗಿ ಪಂದ್ಯದ ಮೇಲೆ ಪರಿಣಾಮ ಬೀರಿಸುವ ಶಿವಂ ದುಬೆ ಈ ಬಾರಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 35ರ ಗಡಿ ದಾಟಿದರು. ಬಾನಿನೆತ್ತರದ ಸಿಕ್ಸರ್‌ಗಳನ್ನು ಬಾರಿಸುತ್ತಾ ಪಂದ್ಯ ನೋಡಲು ಬಂದವರಿಗೆ ಕ್ಯಾಚ್ ಅಭ್ಯಾಸ ಮಾಡಿಸಿದರು. ಒಂದು ಹಂತದಲ್ಲಿ 11 ಬಾಲ್‌ಗಳಲ್ಲಿ 6 ರನ್ ಮಾತ್ರವೇ ಗಳಿಸಿದರು. ಅಲ್ಲಿಂದ ಬೇರೆ ಆಟವೇ ಆಡಿದರು. ಸ್ಪಿನ್ನರ್‌ಗಳಿಗೆ ಮಾತ್ರ ಬೀಸುತ್ತಾರೆ ಎಂಬ ಅಭಿಪ್ರಾಯಗಳನ್ನು ಸುಟ್ಟುಹಾಕಿದರು, ಬಂದ ಬೌಲರ್‌ಗಳನ್ನೆಲ್ಲ ದಂಡಿಸಿದರು. ಮುಂದಿನ 20 ಬಾಲ್‌ಗಳಲ್ಲಿ ಬರೋಬ್ಬರಿ 60 ರನ್ ಚಚ್ಚಿದರು. ಇದರ ಪೈಕಿ 52 ರನ್‌ಗಳು ಬೌಂಡರಿ ಮೂಲಕ ಬಂದವು. ಆದರಲ್ಲಿ 4 ಫೋರ್ ಹಾಗೂ 6 ಸಿಕ್ಸರ್ ಸೇರಿವೆ.

ಅಭಿಷೇಕ್ ಮೂರನೇ ಶೂನ್ಯ

ಟಿ20ಯ ನಂಬರ್ 1 ಬ್ಯಾಟರ್, ವಿಶ್ವಕಪ್‌ನಲ್ಲಿ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದ ಅಭಿಷೇಕ್ ಶರ್ಮ ಮೂರನೇ ಶೂನ್ಯ ಸುತ್ತಿದರು. ಮೊದಲ ಪಂದ್ಯದಲ್ಲಿ ಒಂದಿಷ್ಟು ರನ್ ಜೋಡಿಸಿದ ಅವರು, ಎರಡನೇ ಮೂರನೇ ಹಾಗೂ ನಾಲ್ಕನೇ ಪಂದ್ಯದಲ್ಲಿ ಶೂನ್ಯ ಸುತ್ತಿದ್ದು, ಬೇಡವಾದ ದಾಖಲೆಯೊಂದನ್ನು ಮಾಡಿದ್ದಾರೆ.

ಭಾರತ ನಿಧಾನ ಆರಂಭ: ನೆದರ್ಲೆಂಡ್ಸ್ ವಿರುದ್ಧದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ಮೂರನೇ ಬಾಲ್‌ನಲ್ಲೇ ಅಭಿ ವಿಕೆಟ್ ಕಳೆದುಕೊಂಡಿತು. ತಿಲಕ್ ವರ್ಮಾ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆ ಮುಗಿಸುವಷ್ಟರಲ್ಲಿ 31 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇಶಾನ್ ಕಿಶನ್ 18 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಸೂರ್ಯ ಆಸರೆಯಾದರೂ ಸ್ಫೋಟಕ ಬ್ಯಾಟಿಂಗ್ ಮಾಡಲಾಗಲಿಲ್ಲ. 34 ರನ್‌ಗಳಿಸಿದ ಅವರು, 28 ಬಾಲ್ ತೆಗೆದುಕೊಂಡರು. ಅಲ್ಲಿಂದ ಶಿವಂ ದುಬೆ ತಮ್ಮ ಆರ್ಭಟ ಆರಂಭಿಸಿದರು. ಇತ್ತ ಒತ್ತಡವನ್ನೆಲ್ಲಾ ಮೈಗೆತ್ತಿಕೊಂಡು ಅಬ್ಬರಿಸಿದರು. ಅವರಿಗೆ ಹಾರ್ದಿಕ್ ಪಾಂಡ್ಯ ಅವರ 30 ರನ್‌ಗಳ ಸಾಥ್ ಕೂಡ ಸಿಕ್ಕಿತು.

ವರುಣ್ ದಾಳಿಗೆ ತತ್ತರಿಸಿದ ನೆದರ್ಲೆಂಡ್ಸ್

ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ ಎಲ್ಲ ವಿಕೆಟ್‌ಗಳನ್ನು ಬೇಗನೇ ಕಳೆದುಕೊಳ್ಳದೇ ಇದ್ದರೂ ಮೊದಲ ಮೂವರು 24, 20, 33 ರನ್ ಗಳಿಸಿ ಪಂದ್ಯಕ್ಕೆ ಜೀವ ತುಂಬಿದರು. ಆದರೆ ಮುಂದಿನ ಬ್ಯಾಟರ್‌ಗಳು ವರುಣ್ ದಾಳಿಗೆ ನಲುಗಿ ಹೋದರು. ಮಧ್ಯಮ ಕ್ರಮಾಂಕದ ಬ್ಯಾಟಿಗರು ಕೈಕೊಟ್ಟರೂ ಕೊನೆಯಲ್ಲಿ ನೋಹ್, ಜ್ಯಾಕ್ ಉತ್ತಮ ಬ್ಯಾಟಿಂಗ್‌ನೊಂದಿಗೆ ಸರ್ವಪತನವಾಗದಂತೆ ಕಾಯ್ದರು. ಭಾರತ ಪರ ವರುಣ್ 3, ದುಬೆ 2 ವಿಕೆಟ್ ಪಡೆದುಕೊಂಡರೆ, ಬೂಮ್ರಾ ಮತ್ತು ಪಾಂಡ್ಯ ತಲಾ ಒಂದು ವಿಕೆಟ್ ಕಿತ್ತರು.



ಐತಿಹಾಸಿಕ ಫೈನಲ್‌ಗೆ ಜಮ್ಮು-ಕಾಶ್ಮೀರ



ಲಖನೌ: ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ನೆನಪಿಡಬೇಕಾದ ಸಾಧನೆ ಜಮ್ಮು-ಕಾಶ್ಮೀರದವರು ಮಾಡಿದ್ದಾರೆ. ಶಮಿ, ಈಶ್ವರನ್ ಅಂತಹ ಪ್ರತಿಭಾನ್ವಿತ ಅಂತಾರಾಷ್ಟ್ರೀಯ ಆಟಗಾರರಿದ್ದ ಬಂಗಾಳ ತಂಡವನ್ನು ರೋಮಾಂಚನಕಾರಿ ಸೆಮಿಫೈನಲ್ ಪಂದ್ಯದಲ್ಲಿ ಸೋಲಿಸಿ ಫೈನಲ್‌ಗೇರಿದ್ದಾರೆ. ಮೊದಲು ಬ್ಯಾಟಿಂಗ್ ಮಾಡಿದ್ದ ಬಂಗಾಳ ಮೊದಲಿಗೆ 328 ರನ್ ಗಳಿಸಿ ಸವಾಲಿಗೆ ಆಹ್ವಾನಿಸಿತು. ಬೆನ್ನತ್ತಿದ ಜಮ್ಮು ಕರಾರುವಾಕ್ಕಾಗಿ 302 ರನ್ ಗಳಿಸಿ ಸವಾಲಿಗೆ ಸೈ ಎಂದಿತ್ತು. ಎರಡನೇ ಇನ್ನಿಂಗ್ಸ್‌ನಲ್ಲಿ ಮುನ್ನಡೆಯಂಬ ವಿಶ್ವಾಸದೊಂದಿಗೆ ಬ್ಯಾಟಿಂಗ್‌ಗಿಳಿದಿದ್ದ ಬಂಗಾಳ ಗಳಿಸಿದ್ದು 99 ರನ್ ಮಾತ್ರ. ದೊಡ್ಡ ದೊಡ್ಡ ಬ್ಯಾಟಿಗರನ್ನು ಆರಾಮಾಗೇ ಆಡಿಸಿಕೊಂಡ ಜಮ್ಮು ಅಲ್ಲೇ ಶೇ.70 ರಷ್ಟು ಪಂದ್ಯವನ್ನು ಗೆದ್ದಿತು. ಬೇಕಾಗಿದ್ದ 126 ರನ್‌ಗಳಲ್ಲಿ 4ನೇ ದಿನವೇ 41 ರನ್ ಗಳಿಸಿದ್ದ ಜಮ್ಮು-ಕಾಶ್ಮೀರ ಕೊನೆಯ ದಿನ ಮಿಕ್ಕಿದ ರನ್‌ಗಳನ್ನು ಯಾವುದೇ ಸಮಸ್ಯೆ ಎದುರಿಸದೆ ಬಾರಿಸಿತು. ಸಂಜೆ ಹೊತ್ತಿಗಾಗಲೇ ವಿಷಯ ಹೊರಬಿದ್ದಂತೆ ಕ್ರಿಕೆಟ್ ಅಭಿಮಾನಿಗಳಿಗೆ ರೋಮಾಂಚನಗೊಳಿಸಿತು. ಜಮ್ಮು-ಕಾಶ್ಮೀರ ದೊಡ್ಡ ಇತಿಹಾಸ ನಿರ್ಮಿಸಿತು.

ಎರಡನೇ ಇನ್ನಿಂಗ್ಸ್‌ನಲ್ಲಿ 4 ವಿಕೆಟ್ ಕಿತ್ತ ನಬಿ, ಮೊದಲ ಇನ್ನಿಂಗ್ಸ್‌ನಲ್ಲಿ 5 ವಿಕೆಟ್ ಕಿತ್ತಿದ್ದರು. ಪಂದ್ಯಶ್ರೇಷ್ಠ ಗೆದ್ದರು. ಪಂದ್ಯದ ಹೀರೋ ಎನಿಸಿದರು. ಮೊದಲನೇ ಇನ್ನಿಂಗ್ಸ್‌ನಲ್ಲಿ 8 ವಿಕೆಟ್ ಕಿತ್ತ ಶಮಿ ಬಂಗಾಳ ಪರ ಪ್ರತಿರೋಧ ತೋರಿದವ ರಾದರು. **ಇತಿಹಾಸ ನಿರ್ಮಿಸಿದ ಜಮ್ಮು:** ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಜಮ್ಮು-ಕಾಶ್ಮೀರ ತಂಡ ಫೈನಲ್‌ಗೆ ಪ್ರವೇಶಿಸಿದೆ. ಕಳೆದ 67 ವರ್ಷಗಳಿಂದ ರಣಜಿ ಪಂದ್ಯವಾಡುತ್ತಿರುವ ಜಮ್ಮು-ಕಾಶ್ಮೀರ ತಂಡವು ಈ ಹಿಂದೆ ಹಲವು ಬಾರಿ ಕ್ವಾರ್ಟರ್-ಫೈನಲ್‌ಗೆ ಪ್ರವೇಶಿಸಿದ್ದರೂ ಸೆಮಿಫೈನಲ್ ಎಂಬುದು ಮರೀಚಿಕೆಯಾಗಿತ್ತು. ಆದರೆ ಈ ಬಾರಿ ಆಖಿಬ್ ನಬಿಯ ಮಾರಕ ದಾಳಿ ನೆರವಿನೊಂದಿಗೆ ಕಾಶ್ಮೀರಿ ಪಡೆ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತ್ತು.

ಹುಬ್ಬಳ್ಳಿಯಲ್ಲಿ ಫೈನಲ್: ರಣಜಿ ಫೈನಲ್ ಪಂದ್ಯ ಹುಬ್ಬಳ್ಳಿಯಲ್ಲಿ ನಡೆಯುವುದಾಗಿ ಕೆಎಸ್‌ಸಿಎ ತಿಳಿಸಿದೆ. ಈ ಬಗ್ಗೆ ಪಿಟಿಐನೊಂದಿಗೆ ಕರ್ನಾಟಕ ಕ್ರಿಕೆಟ್ ಸಂಸ್ಥೆ ಅಧಿಕಾರಿಗಳು ಮಾತನಾಡಿ, ಫೆಬ್ರವರಿ 24 ರಂದು ಫೈನಲ್ ಪಂದ್ಯ ನಡೆಯಲಿದ್ದು, ಹುಬ್ಬಳ್ಳಿ ಆತಿಥ್ಯ ವಹಿಸಲಿದೆ ಎಂದಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಜಮ್ಮು-ಕಾಶ್ಮೀರ - ಬಂಗಾಳ(2ನೇ ಇನ್ನಿಂಗ್ಸ್)
ಬಂಗಾಳ 25.1 ಓವರ್‌ಗಳಲ್ಲಿ 99/10
ಜಮ್ಮು: 34.4 ಓವರ್‌ಗಳಲ್ಲಿ 126/4
ವಂಶರಾಜ್ 43★, ಸಮದ್ 30★
ಕರ್ನಾಟಕ-ಉತ್ತರಾಖಂಡ(2 ನೇ ಇನ್ನಿಂಗ್ಸ್)
ಉತ್ತರಾಖಂಡ 88.5 ಓವರ್‌ಗಳಲ್ಲಿ 233/10
ಆದಿತ್ಯ 45★, ವಿದ್ಯಾಧರ್ 43/3
ಕರ್ನಾಟಕ 63.5 ಓವರ್‌ಗಳಲ್ಲಿ 299/6
ಸ್ಮರಣ್ 127, ರಾಹುಲ್ 70★, ನಾಗಿ 53/2

ಫೈನಲ್ ಹೊಸ್ತಿಲಲ್ಲಿ ಕರ್ನಾಟಕ

ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ ರಣಜಿ ಇತಿಹಾಸದ ದೊಡ್ಡ ಗುರಿ ನಿರ್ಮಿಸುವತ್ತ ಸಾಗಿದೆ. ಮೊದಲನೇ ಇನ್ನಿಂಗ್ಸ್‌ನಲ್ಲಿ ಒಬ್ಬರು ಶತಕ, ಇಬ್ಬರು ಶತಕ ಬಾರಿಸಿದ್ದರು. ಕರ್ನಾಟಕ 736 ರನ್ ಗಳಿಸಿತ್ತು. ಉತ್ತರಾಖಂಡವನ್ನು 233 ರನ್‌ಗಳಿಗೆ ಆಲೌಟ್ ಮಾಡಿದ ಕರ್ನಾಟಕ ಎರಡನೇ ಇನ್ನಿಂಗ್ಸ್‌ನಲ್ಲೂ ತನ್ನ ಅತ್ಯುತ್ತಮ ಬ್ಯಾಟಿಂಗ್ ವಿಸ್ತರಿಸಿದೆ. 63.5 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡಿರುವ ಕರ್ನಾಟಕ 299 ರನ್ ಗಳಿಸಿದೆ. ಐದನೇ ದಿನವೂ ಬ್ಯಾಟಿಂಗ್ ಮಾಡಲಿದೆ. ಇದರೊಂದಿಗೆ ಈಗಾಗಲೇ 802 ರನ್ ಮುನ್ನಡೆಯಲ್ಲಿರುವ ಕರ್ನಾಟಕ ಗೆಲುವು ಸಾಧಿಸಿದಂತಿದೆ. ಫೈನಲ್‌ಗೇರಿದಂತಿದೆ. ಒಂದು ವೇಳೆ ಡಿಕ್ಲೇರ್ ನೀಡಿ ಆಲೌಟ್ ಮಾಡಿದರೆ ಗೆಲುವಿನ ಫೈನಲ್. ಪಂದ್ಯ ಮುಗಿಯದೇ ಹೋದರೆ ಮೊದಲ ಇನ್ನಿಂಗ್ಸ್ ಮುನ್ನಡೆಯ ಫೈನಲ್.

ಸ್ಮರಣ್ ಶತಕ: ಎರಡನೇ ಇನ್ನಿಂಗ್ಸ್‌ನಲ್ಲಿ ಸ್ಮರಣ್ ರವಿಚಂದ್ರನ್ ಶತಕ ಬಾರಿಸಿದರು. ಕೃತಿಕ್ 52 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಮಧ್ಯಮ ಕ್ರಮಾಂಕದಲ್ಲಿ ಮಿಂಚಿದ ಅವರು, 149 ಬಾಲ್‌ಗಳಲಲಿ 127 ರನ್‌ಗಳ ದೊಡ್ಡ ಇನ್ನಿಂಗ್ಸ್ ಆಡಿದರು. ರಾಹುಲ್ ಕೂಡ ಅಷ್ಟೇ ಅಚುಕಟ್ಟಾದ ಬ್ಯಾಟಿಂಗ್ ಮಾಡಿದ್ದು, 5 ಸಿಕ್ಸರ್ ಹಾಗೂ 3 ಬೌಂಡರಿಗಳೊಂದಿಗೆ 70 ರನ್ ಗಳಿಸಿದ್ದಾರೆ. ಇನ್ನೂ ಬ್ಯಾಟಿಂಗ್ ಉಳಿಸಿಕೊಂಡಿದ್ದಾರೆ.

ನಮೀಬಿಯಾ ಸೋಲಿಸಿ ಸೂಪರ್-8ಕ್ಕೆ ಪಾಕ್

ಕೊಲಂಬೋ: ನೂರು ರನ್ ಕೂಡ ಬಾರಿಸಲಾಗದೆ ಪರದಾಟ ನಡೆಸಿರುವ ನಮೀಬಿಯಾ ತಂಡವು ನಾಲ್ಕಕ್ಕೆ ನಾಲ್ಕೂ ಪಂದ್ಯವನ್ನು ಸೋತು ವಿಶ್ವಕಪ್‌ನಿಂದ ಹೊರಬಿದ್ದಿದೆ. ಸೂಪರ್-8 ಪ್ರವೇಶಕ್ಕೆ ಗೆಲ್ಲಲೇಬೇಕಿದ್ದ ಪಂದ್ಯವನ್ನು ಪಾಕಿಸ್ತಾನ 102 ರನ್‌ಗಳ ಪ್ರಾಬಲ್ಯ ಸಾಧಿಸಿತು. ಸೂಪರ್-8ಕ್ಕೆ ಲಗ್ಗೆ ಹಾಕಿತು.

ದಿನದ ಮತ್ತೊಂದು ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಯುಎಇ ಮೇಲೆ 6 ವಿಕೆಟ್‌ಗಳ ಗೆಲುವು ಸಾಧಿಸಿದ ನಂತರ ಸೂಪರ್-8ಕ್ಕೆ ಬಂದ ಎಲ್ಲ ತಂಡಗಳ ಪಟ್ಟಿ ಸಿಕ್ಕಿದೆ. ನಿರೀಕ್ಷೆಗಳು ಹೆಚ್ಚಾಗಿವೆ. ಜಿಂಬಾಬ್ವೆ ತಂಡ ಈ ಬಾರಿ ಸೂಪರ್-8 ಪಂದ್ಯಗಳನ್ನಾಡಲಿರುವುದು ವಿಶೇಷ. ಆಸ್ಟ್ರೇಲಿಯಾ ಹೊರಬಿದ್ದಿರುವುದು ಆಶ್ಚರ್ಯ. ಮಿಕ್ಕಿರುವ ಲೀಗ್ ಹಂತದ ಪಂದ್ಯಗಳು ಶುಕ್ರವಾರ ಮುಗಿಯಲಿವೆ. ಶನಿವಾರದಿಂದ ಮುಂದಿನ ಹಂತದ ಪಂದ್ಯಗಳು ಶುರುವಾಗಲಿವೆ. ಬುಧವಾರದ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಪ್ರಾಬಲ್ಯ ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿ 199 ರನ್ ಗಳಿಸಿತು. ಫರ್ಹಾನ್ ಶತಕ ಬಾರಿಸಿ ದಾಖಲೆ ಮಾಡಿದರು. ನೆದರ್ಲೆಂಡ್ಸ್ 17.3 ಓವರ್‌ಗಳಲ್ಲಿ 97 ರನ್‌ಗಳಿಗೆ ಆಲೌಟ್ ಆಯಿತು. ಉಸ್ಮಾನ್ ತಾರಿಕ್ ಗೆಲುವಿನ ದಡ ಸೇರಿಸಿದರು. ಎರಡನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಯುಎಇ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 122 ರನ್ ಗಳಿಸಿತು. ಗುರಿ ಬೆನ್ನತ್ತಿದ 13.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 123 ರನ್ ಬಾರಿಸಿ ಗೆದ್ದಿತು. ಯಾರೊಬ್ಬರೂ 50 ರನ್‌ಗಡಿ ದಾಟದ ಪಂದ್ಯದಲ್ಲಿ 45 ರನ್ ಬ್ಯಾಟರ್ ಒಬ್ಬ ಗಳಿಸಿದ ಹೆಚ್ಚಿನ ಸ್ಕೋರ್ ಆಗಿತ್ತು. ಒಟ್ಟು 10 ವಿಕೆಟ್ ಬಿದ್ದವು. ಕಾರ್ಬಿನ್ ಬಾಷ್ ಇದರಲ್ಲಿ 3 ವಿಕೆಟ್ ಪಡೆದುಕೊಂಡರು.



ಪಾಕ್‌ಗೆ ಸೂಪರ್ ಗೆಲುವು: ಸೂಪರ್-ಕ್ಕೆ ಪ್ರವೇಶ ಪಡೆಯಬೇಕಾದಲ್ಲಿ ನಮೀಬಿಯಾ ಪಂದ್ಯವನ್ನು ಗೆಲ್ಲಲೇಬೇಕಿತ್ತು ಪಾಕ್. ಎರಡನೇ ಸ್ಥಾನದಲ್ಲಿ ಯುಎಸ್‌ಎ ಇತ್ತು. ಗೆಲ್ಲದೇ ಹೋದರೆ ಪಾಕ್ ಮೂರನೇ ಸ್ಥಾನದಲ್ಲೇ ಉಳಿಯುತ್ತಿತ್ತು. ಆದರೆ ಹಾಗಾಗಲಿಲ್ಲ. ಫರ್ಹಾನ್ ಅವರ ಆಸರೆಯೊಂದಿಗೆ 199 ರನ್ ಗಳಿಸಿತು. ಮಧ್ಯಮ ಕ್ರಮಾಂಕದಲ್ಲಿ ಅವರಿಗೆ ಆಘಾ ಮತ್ತು ಶಾದಬ್ ಖಾನ್ ಸಾಥ್ ಸಿಕ್ಕಿತು. ಔಟಾಗದೆ ಉಳಿದ ಫರ್ಹಾನ್ ಒಟ್ಟು 58 ಎಸೆತದಲ್ಲಿ 100 ರನ್ ಗಳಿಸಿದರು. ನಮೀಬಿಯಾ ಪರ ಸ್ಟೀಕಾಂಪ್ ಗಳಿಸಿದ್ದ 22 ರನ್ ತಂಡದಲ್ಲಿ ಬ್ಯಾಟರ್ ಗಳಿಸಿದ ಹೆಚ್ಚಿನ ಸ್ಕೋರ್ ಆಗಿತ್ತು.

ಯಾರ್‍ಯಾರಿಗೆ 8ರ ಟಿಕೆಟ್?: ಗುಂಪು 1: ಭಾರತ, ಜಿಂಬಾಬ್ವೆ, ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ.

ಗುಂಪು 2: ಪಾಕಿಸ್ತಾನ, ಶ್ರೀಲಂಕಾ, ಇಂಗ್ಲೆಂಡ್, ನ್ಯೂಜಿಲೆಂಡ್.

ಸಂಕ್ಷಿಪ್ತ ಸ್ಕೋರ್

ಪಾಕಿಸ್ತಾನ-ನಮೀಬಿಯಾ
ಪಾಕಿಸ್ತಾನ 20 ಓವರ್‌ಗಳಲ್ಲಿ 199/3: ಫರ್ಹಾನ್ 100★, ಶಾದಬ್ 36★, ಜ್ಯಾಕ್ 48/2
ನಮೀಬಿಯಾ 17.3 ಓವರ್‌ಗಳಲ್ಲಿ 97/10: ಸ್ಟೀಕಾಂಪ್ 23, ತಾರಿಕ್ 16/4, ಶಾದಬ್ 19/3
ದ.ಆಫ್ರಿಕಾ-ಯುಎಇ
ಯುಎಇ 20 ಓವರ್‌ಗಳಲ್ಲಿ 122/6: ಅಲಿಶಾನ್ 45, ಬಾಷ್ 12/3
ದ.ಆಫ್ರಿಕಾ 13.2 ಓವರ್‌ಗಳಲ್ಲಿ 124/4: ಬ್ರೇವಿಸ್ , ರ್‍ಯಾನ್ 30. ಅಫ್ಘಾನ್ 16/1

▸ ನಮೀಬಿಯಾಗೆ ಸೋಲಿನ ವಿದಾಯ
▸ ದ.ಆಫ್ರಿಕಾಗೆ ಗೆಲುವು

ಕೆಎಸ್‌ಎಲ್‌ಟಿಎಗೆ ಐಟಿಎಫ್ ಅಧಿಕಾರಿ ಭೇಟಿ

ಬೆಂಗಳೂರು: ಐಟಿಎಫ್ ಮಹಿಳಾ ಓಪನ್ 100 ಬೆಂಗಳೂರು 2026 ಟೂರ್ನಿಯ ನಿಮಿತ್ತ ಬೆಂಗಳೂರಿಗೆ ಆಗಮಿಸಿದ್ದ (ಐಟಿಎಫ್) ವಿಶ್ವ ಟೆನ್ನಿಸ್ ಸಂಸ್ಥೆಯ ಟೂರ್ ಮತ್ತು ಡೇಟಾ ರೈಟ್ಸ್ ಕಾರ್ಯನಿರ್ವಾಹಕ ನಿರ್ದೇಶಕ ಆ್ಯಂಡ್ರಿವ್ ಮಾಸ್, ಭಾರತದಲ್ಲಿ ಟೆನ್ನಿಸ್ ಭವಿಷ್ಯದ ಬಗ್ಗೆ ಭರವಸೆ ವ್ಯಕ್ತಪಡಿಸಿದರು.

ಭಾರತ ದೊಡ್ಡ ದೇಶ. ಇಲ್ಲಿ ಟೆನ್ನಿಸ್‌ಗೆ ಶ್ರೀಮಂತ ಇತಿಹಾಸವಿದೆ. ಆಟಗಾರರಲ್ಲಿ ಅಪಾರ ಪ್ರತಿಭೆಯಿದೆ. ಆಲ್ ಇಂಡಿಯಾ ಟೆನ್ನಿಸ್ ಅಸೋಸಿಯೇಶನ್ ಮತ್ತು ರಾಜ್ಯ ಸಂಘಟನೆಗಳೊಂದಿಗೆ ಕೈಜೋಡಿಸಿ ಆಟವನ್ನು ಇನ್ನಷ್ಟು ವಿಸ್ತರಿಸುವ ಯೋಜನೆಗಳಿವೆ. ಈ ಸಾಮರ್ಥ್ಯವನ್ನು ವಾಸ್ತವಕ್ಕೆ ತರುವುದೇ ನಮ್ಮ ಉದ್ದೇಶ, ಎಂದು ಮಾಸ್ ಹೇಳಿದರು.

ಈ ವೇಳೆ ಅವರು ಕೆಎಸ್‌ಎಲ್‌ಟಿಎ ಅಧಿಕಾರಿಗಳನ್ನು ಭೇಟಿಯಾಗಿ, ಬೆಂಗಳೂರಿನಲ್ಲಿ ಇನ್ನಷ್ಟು ಐಟಿಎಫ್ ವರ್ಲ್ಡ್ ಟೆನ್ನಿಸ್ ಟೂರ್ ಟೂರ್ನಿಗಳನ್ನು ಆಯೋಜಿಸುವ ಬಗ್ಗೆ ಚರ್ಚಿಸಿದರು. ಭಾರತೀಯ ಆಟಗಾರರಿಗೆ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸುವುದು ಮತ್ತು ರಾಜ್ಯದ ಟೆನ್ನಿಸ್ ಮೂಲಸೌಕರ್ಯವನ್ನು ಬಲಪಡಿಸುವುದೇ ಮುಖ್ಯ ಉದ್ದೇಶ ಎಂದು ತಿಳಿಸಿದರು.



ಬೆಂಗಳೂರಿನ ಎಸ್.ಎಂ ಕೃಷ್ಣ ಕ್ರೀಡಾಂಗಣ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಇದು ನನ್ನ ಎರಡನೇ ಭೇಟಿ. ಇಲ್ಲಿ ಸೌಲಭ್ಯಗಳು ಅತ್ಯುತ್ತಮ. ಆಟಗಾರರಿಂದಲೂ ಉತ್ತಮ ಪ್ರತಿಕ್ರಿಯೆ ಬಂದಿದೆ. ಈ ವಾರದ ಟೂರ್ನಿಯನ್ನು ಕಾತರದಿಂದ ಎದುರು ನೋಡುತ್ತಿದ್ದೇನೆ, ಎಂದರು. ವಿಶ್ವ ಟೆನ್ನಿಸ್ ಟೂರ್‌ನ ಮಹತ್ವವನ್ನು ವಿವರಿಸಿದ ಮಾಸ್, ಪ್ರತಿ ವರ್ಷ 75 ದೇಶಗಳಲ್ಲಿ ಸುಮಾರು 1,200 ಟೂರ್ನಿಗಳು ನಡೆಯುತ್ತಿವೆ. ಜೂನಿಯರ್ ಹಾಗೂ ಎಂಟ್ರಿ-ಲೆವೆಲ್ ಸ್ಪರ್ಧೆಗಳಿಂದ ವೃತ್ತಿಪರ ಹಂತದವರೆಗೆ ಸಾಗುವ ವ್ಯವಸ್ಥಿತ ಮಾರ್ಗವನ್ನು ಇದು ಒದಗಿಸುತ್ತದೆ. ಹೆಚ್ಚಿನ ದೇಶಗಳಲ್ಲಿ ಟೂರ್ನಿಗಳನ್ನು ಆಯೋಜಿಸುವುದು ಅತ್ಯಂತ ಮುಖ್ಯ, ಎಂದು ಹೇಳಿದರು.

ಹೊಸ ಸೈಲಿಂಗ್ ಲೀಗ್ ಮಾ.27ಕ್ಕೆ


ಹೊಸದಿಲ್ಲಿ: ಪ್ರವಾಸಿಗಳ ಮನಸೆಳೆಯುವ ಸಮುದ್ರ ತೀರಗಳು ವಿಶೇಷ ಕ್ರೀಡೆಯ ಪಟುಗಳಿಗೆ ಮೈದಾನವಾಗಲಿವೆ. ಸುಮುದ್ರದ ಎತ್ತರದ ಅಲೆಗಳು ಇತಿಹಾಸಕ್ಕೆ ಸಾಕ್ಷಿಯಾಗಲಿವೆ.

ಸೈಲಿಂಗ್ ಎಂಬ ಕ್ರೀಡೆಯಲ್ಲಿ ಅತಿ ಎತ್ತರಕ್ಕೆ ಹೋಗಿ ದಾಖಲೆಗಳನ್ನು ಮಾಡಿರುವ ಭಾರತೀಯ ಆಸಕ್ತ ಸೈಲಿಂಗ್ ಪಟುಗಳಿಗೆ ಹೊಸದೊಂದು ಹುರುಪು ನೀಡುವುದಕ್ಕಾಗಿ. ಹೊಸ ಲೀಗ್ ಬರುವುದಕ್ಕೆ ಸಜ್ಜಾಗಿದೆ. ಭಾರತೀಯ ಸೈಲಿಂಗ್ ಸಂಸ್ಥೆ ಹೊಸ ಮೈಲಿಗಲ್ಲಿನಲ್ಲಿ ಇದೇ ಮೊದಲ ಬಾರಿಗೆ ಇಂಡಿಯನ್ ಸೈಲಿಂಗ್ ಲೀಗ್ ಎಂಬ ಕೂಟವನ್ನು ಆಯೋಜಿಸುವುದಕ್ಕೆ ಸಜ್ಜಾಗಿದೆ. ಮಾರ್ಚ್ 27ರಿಂದ 30ರವರೆಗೆ ಈ ಕೂಟ ನಡೆಯಲಿದೆ. ಸಮುದ್ರದ ತೀರದಲ್ಲಿ ಒಂದು ಸ್ಕೇಟ್ ಆಕಾರದ ಉಪಕರಣದೊಂದಿಗೆ ಅಲೆ ಜತೆ ಆಟವಾಡುವ ವಿಶೇಷ ಕ್ರೀಡೆಯ ಹೆಸರೇ ಸೈಲಿಂಗ್. ಶಿಲ್ಲಾಂಗ್‌ನ ಉಮೈಮ್ ಸೈಲಿಂಗ್ ಕ್ಲಬ್ ಈ ಹೊಸ ಕೂಟವನ್ನು ಆಯೋಜಿಸಲಿದೆ ಎಂದು ಘೋಷಣೆಯಾಗಿದೆ.

ಕೂಟ ಫ್ರಾಂಚೈಸಿ ಮಾದರಿಯಲ್ಲಿ ನೆಡಯಲಿದೆ. 13 ತಂಡಗಳು ಪೈಪೋಟಿ ನಡೆಸಲಿದ್ದು, 200 ಸೈಲರ್‌ಗಳು ಭಾಗವಹಿಸುವ ನಿರೀಕ್ಷೆಯಿದೆ. ನಿರಿನೊಂದಿಗಿನ ಈ ಆಟಕ್ಕೆ ಕಣ ಸಿದ್ಧವಾಗಿದೆ. ಕೂಟ ಭಾರತಕ್ಕಷ್ಟೇ ಸೀಮಿತವಾಗಿರದೆ ರಷ್ಯಾ, ಕೋರಿಯಾ, ತೈವಾನ್, ಹಾಂಗ್‌ಕಾಂಗ್, ಮಲೇಷ್ಯಾ ಮತ್ತು ಶ್ರೀಲಂಕಾವರೆಗೂ ವಿಸ್ತರಿಸಿವುದು ಕೂಟಕ್ಕೆ ಕುತೂಹಲ ತುಂಬಿದೆ. ಕಳೆದ ವರ್ಷ ತಮಿಳುನಾಡು ಸೈಲಿಂಗ್ ಸಂಸ್ಥೆ ಅಧೀನದಲ್ಲಿ ನಡೆದಿದ್ದ ಯುತ್ ಚಾಂಪಿಯನ್‌ಶಿಪ್ ಪಂದ್ಯಾವಳಿಯ ಯಶಸ್ಸಿನ ಪ್ರತಿಫಲ ಈ ಕ್ರೀಡಾಕೂಟ. ಸ್ಪರ್ಧೆಯು ಐಎಲ್‌ಸಿಎ 4 ಬಾಲಕರು ಮತ್ತು ಹುಡುಗಿಯರು, ಐಎಲ್‌ಸಿಎ 6 ಮತ್ತು 7, 420, ಆಪ್ಟಿಮಿಸ್ಟ್, ಟೆಕ್ನೋ 293 ಮತ್ತು ಒಲಿಂಪಿಕ್ ತರಗತಿಗಳನ್ನು ಒಳಗೊಂಡಿರುತ್ತದೆ. ಚೀನಾ, ಹಾಂಗ್‌ಕಾಂಗ್‌ನ ಸೇಲಿಂಗ್ ಫೆಡರೇಶನ್‌ನ ಅರವತ್ತು ವರ್ಷದ ಡೇವಿಡ್ ಫ್ಯಾನ್, ಗೋವಾ ಮ್ಯಾರಿನರ್ಸ್‌ಗಾಗಿ ಐಎಲ್‌ಸಿಎ 7 ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಫ್ಲೀಟ್‌ನಲ್ಲಿರುವ ಅತ್ಯಂತ ಹಿರಿಯ ಸೈಲರ್‌ಗಳಲ್ಲಿ ಒಬ್ಬರಾಗಲಿದ್ದಾರೆ. ಅವರೊಂದಿಗೆ ಆಪ್ಟಿಮಿಸ್ಟ್ ಬಾಲಕರ ವಿಭಾಗದಲ್ಲಿ ನಿರುಡು ಬದ್ರಿನಾಥ್ ಮತ್ತು 6 ಮಹಿಳಾ ವಿಭಾಗದಲ್ಲಿ ಮಿಲಾನಾ ಡೆಡೆರಿಚ್ ಭಾಗವಹಿಸಲಿದ್ದಾರೆ.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5900

ಎಡದಿಂದ ಬಲಕ್ಕೆ
1.ಮೃಗಗಳನ್ನು ಒಂದೆಡೆ ಇಡುವ ಸ್ಥಳ (7)
3.ಹೋಮ-ಹವನಾದಿಗಳಿಗೆ ಬಳಸುವ ಹುಲ್ಲು (2)
4.ಕತ್ತೆಗೆ ಬಿದ್ದ ಹೊಡೆತ (2)
5.ಆಕಾಶವಿಲ್ಲಿ ಉಲ್ಟಾ ಕಾಣುತ್ತಿದೆ (3)
7.ಇದು ಶಿವನಿಗೆ ಸಂಬಂಧಿಸಿದ್ದು (3)
10.ಗೀತ-ನೃತ್ಯ-ನಾಟಕ ಈ ಮೂರರ ಮೇಳ (4)
11.ಅಭ್ಯಾಸ ಮಾಡು-ಅನುಭವದಿಂದ ತಿಳಿದುಕೊ (4)
12.ಕಲೆಯ ನಡುವಿನ ಚಣಕ (3)
13.ಅಪಹಾಸ್ಯವನ್ನು ತಿರುಗಿ ಮಾಡುತ್ತಿದ್ದಾರೆ (3)
15.ಒಂಬತ್ತು ಎಂಬ ಹೊಸತಾದುದು (2)
16.ಅಬ್ಬರದಿಂದ ಕೂಡಿದ ಆಡಂಬರ (2)
17.ಗಣೇಶ-ಅಮೂಲ್ಯ ಅಭಿನಯದ ಚಲನಚಿತ್ರ (7)

ಮೇಲಿನಿಂದ ಕೆಳಕ್ಕೆ
1.ವಿಷವನ್ನು ಹೀಗೆ ತಿನ್ನಿಸುವುದು (3)
2.ವರ್ತುಲವಾದುದು ತಲೆಕೆಳಗಾಗಿದೆ (3)
6.ಕಾವ್ಯಗಾಯನ ಮಾಡುವ ವಿದ್ಯೆ (5)
7.ನೆಮ್ಮದಿಯನ್ನು ಕಾಪಾಡಲು ನಿಯುಕ್ತನಾದವನು (5)
8.ವಾಸ ಮೊದಲಿರುವ ಮಲ್ಲಿಗೆಯ ಬಗೆ (3)
9.ನೋವಿನ ನಂತರ ಬರಬಹುದಾದ ಸಂತಸ (3)
12.ಕೇಳುವವನು ತಲೆಕೆಳಗಾಗಿದ್ದಾನೆ (3)
14.ಆಡವಿ ಇದು (3)

5899 ಉತ್ತರ

ಎಡದಿಂದ ಬಲಕ್ಕೆ:
2.ವಿಚಾರವಂತ 4.ಪದಬಂಧ
6.ವಂದ್ಯ 7.ಅನುಪಾನ
8.ಮಾಸ 11.ಸಂಕ
13.ಪಾಠದೋಷ 14.ಮಂದ
15.ಸಹಕಾರ 17.ಕನಕಾಚಲ

ಮೇಲಿನಿಂದ ಕೆಳಕ್ಕೆ :
1.ಅಂದ 2.ವಿಧ
3.ಮಾನವಂತ 4.ಪರಿವ್ರಾಜಕ
5.ಬಂಡುಕೋರ
10.ಲತಾಗೃಹ
9.ಸಮರಾಕರ
12.ಸಂಪಾದಕ 15.ಸಲ
16.ಕಾಳಿ

ಕಿರುಸುದ್ದಿ

ಪರೀಕ್ಷಾ ಸಮಯದಲ್ಲಿ ಲೋಡ್ ಶೆಡ್ಡಿಂಗ್ ಬೇಡ: ಯಶ್‌ಪಾಲ್ ಸುವರ್ಣ ಮನವಿ

ಉಡುಪಿ: ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷದ ಅಂತಿಮ ಹಂತದ ಪರೀಕ್ಷೆಗಳ ಸಂದರ್ಭದಲ್ಲಿ ವಿದ್ಯುತ್ ಲೋಡ್ ಶೆಡ್ಡಿಂಗ್ ಮಾಡದಂತೆ ಇಂಧನ ಇಲಾಖೆ ಸಚಿವರಾದ ಕೆ. ಜೆ. ಜಾರ್ಜ್ ಅವರಿಗೆ ಉಡುಪಿ ಶಾಸಕ ಯಶ್ ಪಾಲ್ ಸುವರ್ಣ ಪತ್ರ ಬರೆದು ಮನವಿ ಮಾಡಿದ್ದಾರೆ.



ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಾರ್ಷಿಕ ಪರೀಕ್ಷಾ ಪೂರ್ವ ಸಿದ್ಧತೆಗಳು ನಡೆಯುತ್ತಿದ್ದು, ಎಸ್.ಎಸ್.ಎಲ್.ಸಿ. ಅಂತಿಮ ಪರೀಕ್ಷೆ, ಪದವಿ ಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪರೀಕ್ಷೆಗಳು ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ನಡೆಯಲಿದೆ. ಅಂತಿಮ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ತಯಾರಿ ನಡೆಸುತ್ತಿದ್ದು, ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕಲಿಕೆ ಹಾಗೂ ಅಭ್ಯಾಸಕ್ಕೆ ಅನುಕೂಲವಾಗಲು ವಿದ್ಯುತ್ ಲೋಡ್ ಶೆಡ್ಡಿಂಗ್ ಮಾಡದಂತೆ ಸೂಕ್ತ ನಿರ್ದೇಶನ ನೀಡಲು ಇಂಧನ ಇಲಾಖೆಯ ಸಚಿವರಾದ ಕೆ.ಜೆ ಜಾರ್ಜ್ ರವರಿಗೆ, ಜಿಲ್ಲಾಧಿಕಾರಿಗಳಿಗೆ ಹಾಗೂ ಮೆಸ್ಕಾಂ ಅಧಿಕಾರಿಗಳಿಗೆ ಶಾಸಕ ಯಶ್ ಪಾಲ್ ಸುವರ್ಣ ಮನವಿ ಮಾಡಿದ್ದಾರೆ.

ವಾಹನಗಳಲ್ಲಿ ಸಾಗಿಸುತ್ತಿದ್ದ 345.6 ಲೀ. ಗೋವಾ ಮದ್ಯ ವಶ: ಮೂವರ ವಿರುದ್ಧ ಕೇಸು

ಕಾಸರಗೋಡು: ಎರಡು ವಾಹನಗಳಲ್ಲಾಗಿ ಅಕ್ರಮವಾಗಿ ಸಾಗಿಸುತ್ತಿದ್ದ 345.6 ಲೀಟರ್ ಗೋವಾ ನಿರ್ಮಿತ ಮದ್ಯವನ್ನು ಕಾಸರಗೋಡು ಎಕ್ಸೈಸ್ ಎನ್‌ಫೋರ್ಸ್‌ಮೆಂಟ್ ಆ್ಯಂಡ್ ಆ್ಯಂಟಿ ನಾರ್ಕೋಟಿಕ್ಸ್ ಸ್ಪೆಷಲ್ ಸ್ಕ್ವಾಡ್ ವಶಪಡಿಸಿಕೊಂಡಿದೆ. ಮಂಗಳವಾರ ರಾತ್ರಿ ಬೇಳ ದೊಡ್ಡಡ್ಕದಲ್ಲಿ ಈ ಕಾರ್ಯಾಚರಣೆ ನಡೆದಿದೆ. ಮಾಲು ಸಾಗಿಸಲು ಬಳಸಲಾದ ಎರಡು ವಾಹನಗಳನ್ನು ಅಬಕಾರಿ ತಂಡ ವಶಕ್ಕೆ ತೆಗೆದುಕೊಂಡಿದೆ. ಇದಕ್ಕೆ ಸಂಬಂಧಿಸಿ ದಿಲೀಪ್ ಡಿಸೋಜಾ ಕೆ., ರಾಜೇಶ್ ಕೆ. ಮತ್ತು ನಿತೇಶ್ ಕೆ. ಎಂಬವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸ್ಪೆಷಲ್ ಸ್ಕ್ವಾಡ್ ಅಬಕಾರಿ ಅಧಿಕಾರಿ ವಿಷ್ಣುಪ್ರಕಾಶ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿದೆ.

ನಿವೃತ್ತ ಯೋಧ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆ

ಕಾಸರಗೋಡು: ಆಹಾರ ಸೇವಿಸಿ ಮಂಗಳವಾರ ರಾತ್ರಿ ನಿದ್ರಿಸಿದ್ದ ನಿವೃತ್ತ ಯೋಧ ಬುಧವಾರ ಬೆಳಗ್ಗೆ ಮನೆ ಸಮೀಪದ ಮರದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಬದಿಯಡ್ಕ ಪೊಲೀಸ್ ಠಾಣೆ ವ್ಯಾಪ್ತಿಯ ನೆಕ್ರಾಜೆ ಪುಂಡೂರು ರಾಮ್‌ನಿವಾಸ್‌ನ ದಿ.ರಾಮನ್-ಚಿಟ್ಟೇಯಿ ದಂಪತಿಯ ಪುತ್ರ ಗೋಪಾಲನ್ (64) ಮೃತಪಟ್ಟ ವ್ಯಕ್ತಿ. ಮಂಗಳವಾರ ರಾತ್ರಿ ಊಟ ಮಾಡಿ ನಿದ್ರಿಸಿದ್ದ ಅವರು ಬುಧವಾರ ಮುಂಜಾನೆ ನಾಪತ್ತೆಯಾಗಿರುವುದರಿಂದ ಶೋಧ ನಡೆಸುತ್ತಿದ್ದಂತೆ ಮನೆ ಪಕ್ಕದ ಮರದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಬದಿಯಡ್ಕ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸಾವಿಗೆ ಕಾರಣ ತಿಳಿದುಬಂದಿಲ್ಲ. ಮೃತರು ಪತ್ನಿ ಶೈಲಜಾ, ಮಕ್ಕಳಾದ ದಿವ್ಯಾ, ದೀಪಕ್ ಅವರನ್ನು ಅಗಲಿದ್ದಾರೆ.

ಯೂಟ್ಯೂಬರ್ ಸಂತೋಷ್ ಮರ್ದಾಳ ಪೊಲೀಸ್ ವಶಕ್ಕೆ

ಕಡಬ: ಕೋರ್ಟ್ ಆದೇಶ ಉಲ್ಲಂಘನೆ ಪ್ರಕರಣ ಸಂಬಂಧ 30 ದಿನಗಳ ಕಾಲ ಜೈಲು ಶಿಕ್ಷೆ ವಿಧಿಸಿದ ಹಿನ್ನಲೆಯಲ್ಲಿ ಬೆಂಗಳೂರು ಪೊಲೀಸರು ಸಂಚಾರಿ ಸ್ಟುಡಿಯೋ ಯೂಟ್ಯೂಬರ್ ಸಂತೋಷ್ ಮರ್ಧಾಳ ಎಂಬಾತನನ್ನು ಬುಧವಾರ ಬಂಧಿಸಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಮತ್ತೆ ಮತ್ತೆ ಸಂಚಾರಿ ಸ್ಟುಡಿಯೋ ಯೂಟ್ಯೂಬ್ ಮೂಲಕ ಅವಹೇಳನಕಾರಿಯಾಗಿ ವಿಡಿಯೋ ಮಾಡಿ ಪ್ರಸಾರ ಮಾಡಿದ ಪ್ರಕರಣ ಸಂಬಂಧ ನೋಟಿಸ್ ಜಾರಿಯಾಗಿದ್ದರೂ ಕೂಡ ಮತ್ತೆ ವಿಡಿಯೋ ಪ್ರಸಾರ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ 30 ದಿನಗಳ ಕಾಲ ಜೈಲು ಶಿಕ್ಷೆ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಕೋರ್ಟ್ ಸಿಬ್ಬಂದಿ ಜೊತೆಯಲ್ಲಿ ಬೆಂಗಳೂರು ಪೊಲೀಸರು ಕಡಬ ಪೊಲೀಸರ ಸಹಕಾರದೊಂದಿಗೆ ಕಡಬಕ್ಕೆ ಆಗಮಿಸಿ ಸಂತೋಷ್‌ನನ್ನು ಮರ್ದಾಳದ ಆತನ ಶಾಪ್‌ನಿಂದ ವಶಕ್ಕೆ ಪಡೆದುಕೊಂಡು ಹೋಗಿದ್ದಾರೆ. ಪೊಲೀಸರು ಬೆಂಗಳೂರು ನ್ಯಾಯಾಲಯಕ್ಕೆ ಹಾಜರುಪಡಿಸಿ ಬಳಿಕ ಜೈಲಿಗೆ ಕಳುಹಿಸಲಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಪರವಾಗಿ ವಕೀಲರಾದ ರಾಜಶೇಖರ್ ಹಿಲಿಯಾರು ವಾದ ಮಂಡಿಸಿದ್ದರು.



ಕಾಸರಗೋಡು ಜಿಲ್ಲೆಯ ಪೂರ್ವ ಪ್ರಾಥಮಿಕ ಶಿಕ್ಷಣ ಪದ್ಧತಿ ಇನ್ನಾಗಲಿದೆ ವರ್ಣಮಯ

57 ಶಾಲೆಗಳಲ್ಲಿ ಬಣ್ಣದ ಬಣ್ಣದ ಟೆಂಟ್!

ದಿಗಂತ ವಿಶೇಷ

ಕಾಸರಗೋಡು: ಜಿಲ್ಲೆಯಲ್ಲಿ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಇನ್ನು ಮುಂದೆ ವರ್ಣಮಯಗೊಳಿಸುವ ಉದ್ದೇಶ ಹೊಂದಲಾಗಿದೆ. ಈ ನಿಟ್ಟಿನಲ್ಲಿ ಕಾಸರಗೋಡು ಜಿಲ್ಲೆಯ ಆಯ್ದ 57 ಶಾಲೆಗಳಲ್ಲಿ ಬಣ್ಣದ ಟೆಂಟ್ ಸ್ಥಾಪಿಸುವಯೋಜನೆಯುಕಾರ್ಯಗತಗೊಂಡಿದೆ. ಜಿಲ್ಲೆಯ 61 ಪೂರ್ವ ಪ್ರಾಥಮಿಕ ಶಾಲೆಗಳ ಪೈಕಿ 57 ಶಾಲೆಗಳಲ್ಲಿ ಅತ್ಯಾಧುನಿಕ ಮಾದರಿಯ ಕಲಿಕಾ ಸೌಲಭ್ಯಗಳನ್ನು ಹೊಂದಿರುವ ವರ್ಣ ಕುಡಾರಂ ಎಂಬ ಹೆಸರಿನಲ್ಲಿ ಬಣ್ಣದ ಟೆಂಟ್ ಅಳವಡಿಸಲಾಗಿದೆ.



ಮಕ್ಕಳ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಹೆಚ್ಚು ಆನಂದದಾಯಕ ಮತ್ತು ಶ್ರೀಮಂತಗೊಳಿಸುವ ಉದ್ದೇಶದೊಂದಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ನೇತೃತ್ವದಲ್ಲಿ ಸಮಗ್ರ ಶಿಕ್ಷಾ ಕೇರಳ (ಎಸ್‌ಎಸ್‌ಕೆ) ಜಾರಿಗೆ ತಂದಿರುವ ವರ್ಣ ಕುಡಾರಂ ಯೋಜನೆಯು ಜಿಲ್ಲೆಯಲ್ಲಿ ಪ್ರಗತಿಯಲ್ಲಿದೆ. ಆಯ್ಕೆ ಮಾಡಲಾದ ಶಾಲೆಗಳನ್ನು ಹೊರತುಪಡಿಸಿ ಉಳಿದ ಶಾಲೆಗಳಲ್ಲಿ ಕೂಡಾ ಈ ಯೋಜನೆಯನ್ನು ಮುಂದಿನ ಹಂತಗಳಲ್ಲಿ ಅನುಷ್ಠಾನಕ್ಕೆ ತರುವ ಗುರಿ ಇರಿಸಿಕೊಳ್ಳಲಾಗಿದೆ.

ಮಹತ್ವಾಕಾಂಕ್ಷೆಯ ಈ ಯೋಜನೆಯಡಿ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತಂದಿರುವ ಮೊದಲ ಎರಡು ಶಾಲೆಗಳಿಗೆ ತಲಾ 15 ಲಕ್ಷ ರೂ. ಮತ್ತು ಉಳಿದ ಶಾಲೆಗಳಿಗೆ ತಲಾ 10 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ. ಇದರ ಜೊತೆಗೆ ಶಾಲೆಗಳ ಸ್ವಂತ ಹಣವನ್ನು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಕಲಿಕಾ ಸಾಮಗ್ರಿಗಳನ್ನು ಒದಗಿಸಲು ಬಳಸಲಾಗುತ್ತಿದೆ. ಜ್ಞಾನವನ್ನು ಮಾತ್ರ ಹೇರುವ ವಿಧಾನದಿಂದ ದೂರ ಸರಿದು ವರ್ಣ ಕುಡಾರಂ ಯೋಜನೆಯಂತೆ ಮಕ್ಕಳು ಆಟ, ಕಲೆ ಮತ್ತು ಓದುವ ಮೂಲಕ ಸ್ವಾಭಾವಿಕ ವಿಧಾನದಲ್ಲಿ ಸಾಮಾಜಿಕ ಜ್ಞಾನವನ್ನು ಪಡೆಯುವ ವಾತಾವರಣವನ್ನು ಸೃಷ್ಟಿಸಲಾಗುತ್ತದೆ.


ಮಕ್ಕಳ ಸೃಜನಶೀಲತೆ, ಬೌದ್ಧಿಕ ಬೆಳವಣಿಗೆ ಮತ್ತು ವೈಜ್ಞಾನಿಕ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಬೆಳೆಸುವ ನಿಟ್ಟಿನಲ್ಲಿ ಹದಿಮೂರು ರೀತಿಯ ಕಲಿಕಾ ಸ್ಥಳಗಳನ್ನು ಸ್ಥಾಪಿಸಲಾಗುತ್ತಿದೆ. ಬರವಣಿಗೆಯನ್ನು ಅಭ್ಯಾಸ ಮಾಡುವ ಅಂಗವಾಗಿ ಬರೆಯುವ ಸ್ಥಳಗಳು, ಚಿತ್ರ ಬಿಡಿಸಲು ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ಚಿತ್ರ ಬಿಡಿಸುವ ಸ್ಥಳಗಳು, ಮಕ್ಕಳು ಪ್ರದರ್ಶನ ನೀಡಲು ಆಟದ ಪ್ರದೇಶಗಳು, ಸಂಗೀತವನ್ನು ಪರಿಚಯಿಸಲು ಸಂಗೀತ ಸ್ಥಳ, ಹೊರಾಂಗಣ ಆಟದ ಉಪಕರಣಗಳು, ಓದುವ ಪ್ರದೇಶಗಳು, ಗಣಿತ ಮತ್ತು ವಿಜ್ಞಾನ ಕಲಿಕಾ ಕೇಂದ್ರಗಳು ಮತ್ತು ಆಟಿಕೆ ಪ್ರದೇಶಗಳು ಭಾಷಾ ಕೌಶಲ್ಯ ಹಾಗೂ ಸಾಮಾಜಿಕ ಸಂವಹನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಒದಗಿಸಲಾಗುವುದು.

ಭಿತ್ತಿಚಿತ್ರಗಳು ಮತ್ತು ಸುಂದರವಾದ ಉದ್ಯಾನಗಳು ವರ್ಣ ಕುಡಾರಂ ಯೋಜನೆಯ ಭಾಗವಾಗಿದ್ದು, ಇದು ಶಾಲೆಯ ಮುಖಛಾಯೆಯನ್ನೇ ಪರಿವರ್ತಿಸುತ್ತಿದೆ. ಕಾರಡ್ಕ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ 1.5 ಕೋಟಿ ರೂ. ವೆಚ್ಚದಲ್ಲಿ ಮಾದರಿ ಪೂರ್ವ ಪ್ರಾಥಮಿಕ ಶಾಲೆಗಾಗಿ ಕಟ್ಟಡ ನಿರ್ಮಾಣಕ್ಕೆ ಎಸ್‌ಎಸ್‌ಕೆಯಿಂದ ಅನುಮತಿ ಕೂಡಾ ಲಭಿಸಿದೆ.

> **ಕಲಿಕಾ ಸಾಮಗ್ರಿಗಳ ವೈಜ್ಞಾನಿಕ ಬಳಕೆ ಗುರಿ**
>
> 2021-22ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಲಾದ ಈ ಯೋಜನೆಯು ಬಾಲ್ಯದ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಕಟ್ಟಡಗಳ ಆಕರ್ಷಕ ವಿನ್ಯಾಸದ ಜೊತೆಗೆ ಶಿಕ್ಷಕರ ತರಬೇತಿ ಮತ್ತು ಕಲಿಕಾ ಸಾಮಗ್ರಿಗಳ ವೈಜ್ಞಾನಿಕ ಬಳಕೆಯನ್ನು ಸಹ ಯೋಜನೆಯ ಭಾಗವಾಗಿ ಖಾತರಿಪಡಿಸಲಾಗಿದೆ. ಬಣ್ಣದ ಟೆಂಟ್ ಮೂಲಕ ಸಂತೋಷದ ಕಲಿಕಾ ವಾತಾವರಣವನ್ನು ವ್ಯವಸ್ಥೆಗೊಳಿಸುವ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯ ಪೂರ್ವ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಯನ್ನು ಸೃಷ್ಟಿಸಲಾಗುತ್ತಿದೆ.
>
> ■ **ವಿ.ಎಸ್. ಬಿಜುರಾಜ್,** ಎಸ್‌ಎಸ್‌ಕೆ ಜಿಲ್ಲಾ ಯೋಜನಾ ಸಂಯೋಜಕ

ಸುಳ್ಯದಲ್ಲಿ ಅಗ್ನಿಅವಘಡ: ಇಂಡಸ್ಟ್ರೀ, ಗ್ಯಾರೇಜ್‌ನ ಸೊತ್ತುಗಳು ಸುಟ್ಟು ಭಸ್ಮ

ಸುಳ್ಯ: ಸುಳ್ಯ ನಗರದಿಂದ ಕೊಡಿಯಾಳಬೈಲು ಪ್ರಥಮ ದರ್ಜೆ ಕಾಲೇಜಿಗೆ ತೆರಳುವ ರಸ್ತೆಯ ಜಟ್ಟಿಪಳ್ಳ ಎಂಬಲ್ಲಿ ಕಾರ್ಯಚರಿಸುತ್ತಿರುವ ಧೂಮಾವತಿ ಇಂಡಸ್ಟ್ರೀಸ್‌ನಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಇಡೀ ಕಟ್ಟಡಕ್ಕೆ ಬೆಂಕಿ ವ್ಯಾಪಿಸಿ ಪಕ್ಕದ ಪ್ರವೀಣ್ ಗ್ಯಾರೇಜ್‌ಗೂ ಬೆಂಕಿ ತಗುಲಿ ಅಪಾರ ಪ್ರಮಾಣದ ಸಾಮಾಗ್ರಿಗಳು ಭಸ್ಮವಾದ ಘಟನೆ ಮಂಗಳವಾರ ರಾತ್ರಿ ನಡೆದಿದೆ.



ರಾತ್ರಿ ಸುಮಾರು 11.30ರ ವೇಳೆಗೆ ಘಟನೆ ಸಂಭವಿಸಿರುವುದಾಗಿ ಅಂದಾಜಿಸಲಾಗಿದ್ದು ಅಲ್ಪ ಪ್ರಮಾಣದಲ್ಲಿ ಬೆಂಕಿ ಕಾಣಿಸಿಕೊಂಡಾಗ ಪರಿಸರ ವಾಸಿಗಳು ಅಗ್ನಿಶಾಮಕ ಕಚೇರಿಗೆ ಘಟನೆ ಕುರಿತು ಮಾಹಿತಿ ನೀಡಿದರು. ತಕ್ಷಣವೇ ಸ್ಪಂದಿಸಿದ ಅಗ್ನಿಶಾಮಕ ಸಿಬ್ಬಂದಿಗಳು ಸ್ಥಳಕ್ಕಾಗಿಮಿಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದರು. ಅಷ್ಟೊತ್ತಿಗಾಗಲೇ ಲಕ್ಷಾಂತರ ರೂಪಾಯಿಗಳ ಸಾಮಾಗ್ರಿಗಳು ಮತ್ತು ದಾಖಲೆ ಪತ್ರಗಳು ಬೆಂಕಿಯ ಕೆನ್ನಾಲಿಗೆ ಸುಟ್ಟು ಭಸ್ಮವಾಗಿದೆ ಹೇಳಲಾಗಿದೆ. ಧೂಮಾವತಿ ಇಂಡಸ್ಟ್ರೀಸ್‌ನಲ್ಲಿ ಸುಮಾರು ರೂ.13 ಲಕ್ಷ ಮತ್ತು ಪ್ರವೀಣ್ ಗ್ಯಾರೇಜ್‌ನಲ್ಲಿ ಸುಮಾರು ರೂ.10 ಲಕ್ಷ ಮೊತ್ತದ ಸಾಮಾಗ್ರಿಗಳು ಬೆಂಕಿಗಾಹುತಿಯಾಗಿ ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ.

ಮೀನುಗಾರಿಕೆ ವೇಳೆ ದೋಣಿಯ ಇಂಜಿನ್ ಹಾನಿ
ಶಿರಿಯ: ಸಮುದ್ರ ಮಧ್ಯೆ ಸಿಲುಕಿಕೊಂಡ ದೋಣಿಯಲ್ಲಿದ್ದ ಮೀನುಗಾರರ ರಕ್ಷಣೆ

ಕಾಸರಗೋಡು: ಇಂಜಿನ್ ಹಾನಿಗೀಡಾದ ಹಿನ್ನೆಲೆಯಲ್ಲಿ ಸಮುದ್ರದ ಮಧ್ಯೆ ಸಿಲುಕಿಕೊಂಡ ದೋಣಿಯಲ್ಲಿದ್ದ ಮೀನು ಕಾರ್ಮಿಕರನ್ನು ಕುಂಬಳೆ ಪೊಲೀಸರು ಮತ್ತು ನಾಗರಿಕರು ಸೇರಿ ಸುರಕ್ಷಿತವಾಗಿ ದಡಕ್ಕೆ ತಲುಪಿಸಿ ಅಪಾಯದಿಂದ ಪಾರು ಮಾಡಿದ ಘಟನೆ ನಡೆದಿದೆ.



ತಮಿಳುನಾಡು ನಿವಾಸಿ ಮೈಕಲ್ (31) ಮತ್ತು ಕರ್ನಾಟಕ ನಿವಾಸಿ ಸತೀಶ್ (39) ಎಂಬವರನ್ನು ಅಪಾಯದಿಂದ ಪಾರು ಮಾಡಲಾಗಿದ್ದು, ಅವರು ಮಂಗಳೂರಿನ ಶಾಹುಲ್ ಹಮೀದ್ ಎಂಬವರ ಮಾಲಕತ್ವದ ದೋಣಿಯಲ್ಲಿ ಕಾರ್ಮಿಕರಾಗಿದ್ದಾರೆ.

ಮೀನುಗಾರಿಕೆ ನಡೆಸುತ್ತಿದ್ದಾಗ ದೋಣಿಯ ಇಂಜಿನ್ ಇದ್ದಕ್ಕಿದ್ದಂತೆ ಹಾನಿಕೊಳಗಾದಾಗ ಕಾಸರಗೋಡು ಭಾಗಕ್ಕೆ ಸಾಗತೊಡಗಿದ್ದ ದೋಣಿಯನ್ನು ನಿಯಂತ್ರಿಸಲು ಕಾರ್ಮಿಕರಿಗೆ ಸಾಧ್ಯವಾಗಲಿಲ್ಲ. ಮಂಗಳವಾರ ರಾತ್ರಿ ದೋಣಿಯು ಕುಂಬಳೆ ಸಮೀಪದ ಶಿರಿಯ ಸಮುದ್ರದಲ್ಲಿ ತೇಲುತ್ತಾ ಸಾಗುತ್ತಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಇತರ ದೋಣಿಗಳಲ್ಲಿದ್ದ ಮೀನು ಕಾರ್ಮಿಕರು ಕೂಡಲೇ ವಿಷಯವನ್ನು ಪೊಲೀಸರಿಗೆ ತಿಳಿಸಿದ್ದಾರೆ.

ಅದರಂತೆ ಕುಂಬಳೆ ಪೊಲೀಸರು ಇತರ ಮೀನು ಕಾರ್ಮಿಕರ ಸಹಾಯದೊಂದಿಗೆ ಬೇರೆ ದೋಣಿ ಮೂಲಕ ಸಮುದ್ರಕ್ಕೆ ತೆರಳಿ ಹಾನಿಗೀಡಾದ ದೋಣಿಯಿಂದ ಕಾರ್ಮಿಕರನ್ನು ದಡಕ್ಕೆ ತಲುಪಿಸುವಲ್ಲಿ ಯಶಸ್ವಿಯಾದರು. ಬಳಿಕ ಅವರನ್ನು ವಾಹನದಲ್ಲಿ ಊರಿಗೆ ಕಳುಹಿಸಲಾಯಿತು. ಕುಂಬಳೆ ಪೊಲೀಸ್ ಠಾಣೆಯ ಎಸ್ಐಗಳಾದ ಆರ್.ಪಿ.ಅನೂಪ್, ಸುರೇಂದ್ರನ್, ಸೀನಿಯರ್ ಸಿವಿಲ್ ಪೊಲೀಸ್ ಆಫೀಸರ್‌ಗಳಾದ ಸತೀಶ್, ಪ್ರಸೋನ್ ಮುಂತಾದವರು ಕಾರ್ಯಾಚರಣೆಗೆ ನೇತೃತ್ವ ವಹಿಸಿದ್ದರು.

31 ಪ್ರಕರಣಗಳ ಆರೋಪಿ 9 ವರ್ಷಗಳ ಬಳಿಕ ಬಂಧನ!

ಮಂಗಳೂರು: ಕಳೆದ 9 ವರ್ಷಗಳಿಂದ ತಲೆಮರೆಸಿಕೊಂಡಿದ್ದ ರೌಡಿಶೀಟರ್‌ನನ್ನು ಮಂಗಳೂರು ಪೊಲೀಸರು ಬಂಧಿಸಿದ್ದಾರೆ.

ಹಳೆಯಂಗಡಿಯ ಕೊಪ್ಪಳ ಹೌಸ್‌ನ ಸಫ್ವಾನ್ ಹುಸೈನ್ (42) ಬಂಧಿತ.



ಈತ ನಗರ ಪೊಲೀಸ್ ಕಮಿಷನರೇಟ್ ಮತ್ತು ಉಡುಪಿ, ದ.ಕ. ಜಿಲ್ಲಾವ್ಯಾಪ್ತಿಯಲ್ಲಿ ವಿವಿಧ 31 ಪ್ರಕರಣಗಳಲ್ಲಿ ಆರೋಪಿಯಾಗಿದ್ದಾನೆ. 2 ಕೊಲೆ, 4 ಕೊಲೆಯತ್ನ, ಗ್ಯಾಂಗ್‌ರೇಪ್, 17 ದರೋಡೆ, ಅಪಹರಣ, ಸುಲಿಗೆ, ಪೊಲೀಸ್ ಅಧಿಕಾರಿಗಳ ಮೇಲೆ ಹಲ್ಲೆ, ಕಳ್ಳತನ, ಸರಗಳ್ಳತನ, ಹಲ್ಲೆ, ಜೈಲಿನಲ್ಲಿ ಸಹ ಕೈದಿಗಳ ಮೇಲೆ ಹಲ್ಲೆ, ಅಕ್ರಮ ಕೂಟ ಸೇರಿ ಹಲ್ಲೆ, ಕೊಲೆ ಬೆದರಿಕೆ, ಕರ್ತವ್ಯಕ್ಕೆ ಅಡ್ಡಿ, ದರೋಡೆಗೆ ಸಂಚು ಇತ್ಯಾದಿ ಪ್ರಕರಣಗಳಿಗೆ ಸಂಬಂಧಿಸಿದಂತೆ 31 ಪ್ರಕರಣಗಳಲ್ಲಿ ಈತ ಭಾಗಿಯಾಗಿದ್ದ ಎಂದು ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಈತನ ವಿರದ್ಧ ಮೂಲ್ಕಿ ಠಾಣಾ ವ್ಯಾಪ್ತಿಯಲ್ಲಿ 2008ರಲ್ಲಿ ದಾಖಲಾಗಿದ್ದ ಪ್ರವೀಣ್ ಎಂಬವರ ಅಪಹರಣ, ದರೋಡೆ, ಕೊಲೆ ಪ್ರಕರಣಕ್ಕೆ ಸಂಬಂಧಿಸಿ 2020ರಲ್ಲಿ ಹೈಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿತ್ತು. ಕಾರ್ಕಳ ಠಾಣಾ ವ್ಯಾಪ್ತಿಯಲ್ಲಿ 2008ರಲ್ಲಿ ನಡೆದ ದರೋಡೆ ಪ್ರಕರಣಕ್ಕೆ ಸಂಬಂಧಿಸಿ 3 ವರ್ಷ ವಿಧಿಸಲಾಗಿತ್ತು.

ಈತನ ವಿರುದ್ಧ 13 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ ಎಂದವರು ತಿಳಿಸಿದ್ದಾರೆ.

2017ರಲ್ಲಿ ಸುರತ್ಕಲ್ ಠಾಣಾ ವ್ಯಾಪ್ತಿಯಲ್ಲಿ ಲೆಫ್ಟಿ ಸಫ್ವಾನ್ ಎಂಬಾತನನ್ನು ಅಪಹರಿಸಿ ಹಲ್ಲೆ ನಡೆಸಿ ಕೊಲೆ ಮಾಡಿ ಆಗುಂಬೆ ಘಾಟಿಯಲ್ಲಿ ಎಸೆದ ಪ್ರಕರಣದಲ್ಲಿ ನೇರ ಭಾಗಿಯಾಗಿ ತಲೆಮರೆಸಿಕೊಂಡಿದ್ದ.

ಆರೋಪಿ ಸಫ್ವಾನ್ ಹುಸೈನ್‌ನನ್ನು ಆಂಧ್ರಪ್ರದೇಶದ ರಾಯಚೋಟಿಯಿಂದ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಆರೋಪಿ ಮೇಲಿನ ಎರಡು ಪ್ರಕರಣಗಳಲ್ಲಿ ಈಗಾಗಲೇ ಶಿಕ್ಷೆಯಾಗಿದೆ. ಮುಲ್ಕಿ ಪ್ರವೀಣ್ ಕೊಲೆ ಪ್ರಕರಣದಲ್ಲಿ ಈತನಿಗೆ ಹೈಕೋರ್ಟ್‌ನಲ್ಲಿ ಶಿಕ್ಷೆಯಾಗಿ ಏಳು ವರ್ಷಗಳ ಸಜೆಯಾಗಿದೆ. ಉಡುಪಿ ಡಕಾಯಿತಿ ಪ್ರಕರಣದಲ್ಲಿಯೂ ಮೂರು ವರ್ಷ ಶಿಕ್ಷೆಯಾಗಿದೆ. ಈ ಶಿಕ್ಷೆಗೆ ಒಳಪಡದೆ ಈತ ತಪ್ಪಿಸಿಕೊಂಡಿದ್ದ. ಈತನ ವಿರುದ್ಧ ಇನ್ನೂ 13 ಪ್ರಕರಣಗಳು ವಿಚಾರಣೆಗೆ ಬಾಕಿ ಇದೆ. ಇದಲ್ಲದೆ ಬೇರೆ ರಾಜ್ಯಕ್ಕೆ ತೆರಳಿ ನಕಲಿ ಗುರುತಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿದ ಬಗ್ಗೆಯೂ ಪ್ರಕರಣ ದಾಖಲಿಸಲಾಗುತ್ತಿದೆ. ಈ ಎಲ್ಲಾ ಪ್ರಕರಣಗಳ ತನಿಖೆ ನಡೆದು ಕ್ರಮ ಆಗಲಿದೆ ಎಂದು ಅವರು ಹೇಳಿದರು.

> **ಹೆಸರು ಬದಲಿಸಿಕೊಂಡಿದ್ದ**
>
> ಪೊಲೀಸರಿಂದ ತಪ್ಪಿಸಿಕೊಂಡಿದ್ದ ಆರೋಪಿ ಸಫ್ವಾನ್ ಹುಸೇನ್ ಆಂಧ್ರಪ್ರದೇಶಕ್ಕೆ ತೆರಳಿ ಅಲ್ಲಿಂದ ತನ್ನ ಹೆಸರನ್ನು ಉಮ್ಮರ್ ಮುಹಮ್ಮದ್ ನಾಸಿರ್ ಎಂದು ಬದಲಾಯಿಸಿ ನಕಲಿ ಹೆಸರಿನಲ್ಲಿ ಆಧಾರ್, ಪಾಸ್‌ಪೋರ್ಟ್ ಮಾಡಿಸಿಕೊಂಡಿದ್ದ. ಅಲ್ಲದೆ 2016ರಲ್ಲಿ ವಿದೇಶಕ್ಕೆ ಪರಾರಿಯಾಗಿದ್ದ. ಸೌದಿ ಅರೇಬಿಯಾದಲ್ಲಿದ್ದು, ಮಂಗಳೂರು ಮೂಲದ ವ್ಯಾಪಾರಿಗಳಿಗೆ ಹಣಕ್ಕಾಗಿ ಬೆದರಿಸಿದ ಬಗ್ಗೆ ದೂರುಗಳಿವೆ ಎಂದು ಕಮಿಷನರ್ ತಿಳಿಸಿದ್ದಾರೆ.

> **ವಿಚಾರಣೆ ಆರಂಭ**
>
> ದೇರಳಕಟ್ಟೆಯಲ್ಲಿ ವೈದ್ಯಕೀಯ ವಿದ್ಯಾರ್ಥಿನಿ ಮೇಲಿನ ಗುಂಪು ಅತ್ಯಾಚಾರ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ ಸಫ್ವಾನ್ ಹುಸೇನ್ ತಲೆ ಮರೆಸಿಕೊಂಡಿದ್ದ. ಆ ಪ್ರಕರಣದ ಇತರ ಆರೋಪಿಗಳ ವಿಚಾರಣೆ ಕೊನೆ ಹಂತಕ್ಕೆ ಬಂದಿದೆ. ಇದೀಗ ಈ ಆರೋಪಿ ಸಿಕ್ಕಿದ್ದು, ಈ ಈತನ ವಿಚಾರಣೆ ಆರಂಭವಾಗಲಿದೆ.

ಒಂಟಿ ವೃದ್ಧೆಯ ಮನೆಗೆ ನುಗ್ಗಿದಾತ ಪೊಲೀಸ್ ವಶ

ಉಪ್ಪಿನಂಗಡಿ: ರಾತ್ರಿ ವೇಳೆ ಬಜತ್ತೂರು ಗ್ರಾಮದ ಕಾಂಚನ ಮುಕ್ವೆ ಎಂಬಲ್ಲಿ ಒಂಟಿ ವೃದ್ಧೆಯ ಮನೆಗೆ ಬಂದು ಸಂಶಯಾಸ್ಪದ ವರ್ತನೆ ತೋರಿದ ವಿಟ್ಲ ಪಡ್ನೂರು ಗ್ರಾಮದ ನಿವಾಸಿ ಮಹಮ್ಮದ್ ಮೋಹಾದ್ ಎಸ್. (33) ಎಂಬಾತನನ್ನು ಸ್ಥಳೀಯರು ಪೊಲೀಸರಿಗೊಪ್ಪಿಸಿದ ಘಟನೆ ಮಂಗಳವಾರ ರಾತ್ರಿ ನಡೆದಿದೆ.



ಆರೋಪಿ ಬಂಟ್ವಾಳ ತಾಲೂಕು ವಿಟ್ಲ ಪಡ್ನೂರು ಗ್ರಾಮದ ನಿವಾಸಿಯಾಗಿದ್ದು, ಕಾಂಚನ ಮುಕ್ವೆ ಪರಿಸರದಲ್ಲಿ ಮಂಗಳವಾರ ರಾತ್ರಿ ಕಾಣಿಸಿಕೊಂಡ ಈತ ಒಂಟಿ ವೃದ್ಧೆಯ ಮನೆಗೆ ಹೋಗಿ ನಾನಿಲ್ಲಿ ಜಗಲಿಯಲ್ಲಿ ಕುಳಿತುಕೊಳ್ಳಬಹುದೇ ಎಂದು ಕೇಳಿದ್ದಾನೆ. ಅಪರಿಚಿತ ವ್ಯಕ್ತಿಯಾದ ಕಾರಣಕ್ಕೆ ವೃದ್ಧೆ ಒಪ್ಪಿಗೆ ಸೂಚಿಸದೆ ಅಲ್ಲಿಂದ ಹೊರಡುವಂತೆ ತಿಳಿಸಿದ್ದಾರೆ. ಆದರೆ, ಅಕ್ಕಪಕ್ಕದಲ್ಲಿ ಬೇರಾವ ಮನೆಗಳಿವೆ ಎಂದೆಲ್ಲಾ ಪ್ರಶ್ನಿಸಿ ಅನುಮಾನಾಸ್ಪದವಾಗಿ ವರ್ತಿಸಿದಾಗ ವೃದ್ಧೆ ಸ್ಥಳೀಯ ಯುವಕರಿಗೆ ಫೋನ್ ಮಾಡಿ ಮಾಹಿತಿ ನೀಡಿದ್ದಾರೆ. ಧಾವಿಸಿ ಬಂದ ಯುವಕರು ಆತನನ್ನು ಪ್ರಶ್ನಿಸಿದಾಗ ಧಿಮಾಕಿನ ಉತ್ತರ ನೀಡಿದ್ದಾನೆ. ಈತನ ವರ್ತನೆಯ ಬಗ್ಗೆ ಸಂಶಯ ತಾಳಿದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿ ಆತನನ್ನು ಪೊಲೀಸರಿಗೊಪ್ಪಿಸಿದ್ದಾರೆ.

ಮಾದಕ ದ್ರವ್ಯ ಸೇವನೆ

ವಶಕ್ಕೆ ಪಡೆದ ಆರೋಪಿಯನ್ನು ಉಪ್ಪಿನಂಗಡಿ ಪೊಲೀಸರು ವಿಚಾರಿಸಿದಾಗ ಆತ ತಾನು ಸಿಗರೇಟು ಸೇದಲು ಅಲ್ಲಿಗೆ ಹೋಗಿರುವುದಾಗಿ ತಿಳಿಸಿದ್ದಾನೆಂದೂ, ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ ಆತ ಮಾದಕ ದ್ರವ್ಯ ಸೇವಿಸಿರುವುದು ದೃಢಪಟ್ಟಿರುವುದಾಗಿಯೂ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪುತ್ತೂರು ನಗರದ ಬಪ್ಪಳಿಗೆಯಲ್ಲಿ ಕಾಣಿಸುತ್ತಿದೆ ಪ್ರಚಾರ ರಹಿತ ಮೂಕ ಜೀವಿಗಳ ಮೇಲಿನ ಕಾಳಜಿ

ಪ್ರಾಣಿ ಪಕ್ಷಿಗಳ ಪಾಲಿಗೆ ಭಗವಂತ ಈ ಅನಾಮಿಕ!

ಪುತ್ತೂರು: ಫೆಬ್ರವರಿ ತಿಂಗಳು ಅಡಿಯಿರಿಸುತ್ತಿರುವಂತೆಯೇ ಬಿಸಿಲಿನ ತಾಪಮಾನ ಏರತೊಡಗಿದೆ. ಎಲ್ಲೆಡೆ ನೀರಿನ ಅಭಾವ ನಿಧಾನವಾಗಿ ಕಾಣಿಸುತ್ತಿದೆ. ನೀರಿನ ಕೊರತೆಯಾದಾಗ ಕೆರೆ, ಬಾವಿ, ಅಣೆಕಟ್ಟು ಮೂಲಕ ಸಾರ್ವಜನಿಕರಿಗೇನೋ ಪೂರೈಕೆ ಆಗುತ್ತದೆ. ಆದರೆ, ಬೇಸಿಗೆಯಲ್ಲಿ ನೀರಿಗಾಗಿ ಹಪಹಪಿಸುವ ಅದೆಷ್ಟೋ ಪ್ರಾಣಿ ಪಕ್ಷಿಗಳ ಪರಿಸ್ಥಿತಿ?

ವಿವಿಧ ಶಿಕ್ಷಣ ಸಂಸ್ಥೆ, ಸಂಘ ಸಂಸ್ಥೆಗಳು ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರು ಒದಗಿಸುವ ಕಾರ್ಯಕ್ರಮ ಹಮ್ಮಿಕೊಂಡು ತಮ್ಮ ಈ ಕಾರ್ಯಗಳನ್ನು ಪ್ರಚುರಪಡಿಸುವ ನಡುವೆ ಇಲ್ಲೊಬ್ಬ 'ಅನಾಮಿಕ' ಮಾತ್ರ ರಸ್ತೆಯ ಬದಿಯಲ್ಲಿ ಹೊಂಡವನ್ನು ಮಾಡಿ ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರನ್ನು ಒದಗಿಸುವ ಸದ್ದಿಲ್ಲದ ಅಳಿಲ ಸೇವೆಯನ್ನು ನಡೆಸುತ್ತಿದ್ದಾರೆ!



ರಸ್ತೆ ಬದಿಯಲ್ಲಿ ಕಿರಿದಾದ ಕೊಳ ರಚನೆ

ಪುತ್ತೂರು ನಗರದ ಬಪ್ಪಳಿಗೆ ಎಂಬಲ್ಲಿ ಸ್ಥಳೀಯ ವ್ಯಕ್ತಿಗಳು ರಸ್ತೆ ಬದಿಯಲ್ಲಿ ಕಿರಿದಾದ ಕೊಳವನ್ನು ಮಾಡಿದ್ದಾರೆ. ಬೇಸಿಗೆಯ ಬಿಸಿ ತಟ್ಟುತ್ತಿರುವಂತೆಯೇ ಈ ಪುಟ್ಟ ಕೊಳಕ್ಕೆ ಪ್ರಾಣಿ, ಪಕ್ಷಿಗಳಿಗೆ ಕುಡಿಯಲು ನೀರನ್ನು ತಂದು ಹಾಕುತ್ತಾರೆ. ಉರಿ ಬಿಸಿಲ ಬೇಗೆಯಿಂದ ಬಳಲಿ ಬೆಂಡಾಗುವ ಮೂಕ ಪ್ರಾಣಿ, ಪಕ್ಷಿಗಳಿಗೆ ಇದು ಮಾತ್ರ ಮರುಭೂಮಿಯ ಓಯಸೀಸ್‌ನಂತೆ ವರದಾನವಾಗಿ ಪರಿಣಮಿಸಿದೆ.

ಕಳೆದ ವರ್ಷವೂ ಇದೇ ರೀತಿ ಇತ್ತು

ಕಳೆದ ವರ್ಷ ವೂ ಇದೇ ಪ್ರದೇಶದ ಅನತಿ ದೂರದಲ್ಲಿ ವ್ಯಕ್ತಿಯೊಬ್ಬರು ಪುಟ್ಟ ಹೊಂಡವೊಂದನ್ನು ಮಾಡಿ ಪ್ರಾಣಿ, ಪಕ್ಷಿಗಳಿಗೆ ನೀರುಣಿಸಿ ಧನ್ಯರಾಗಿದ್ದರು ಎಂದು ಪರಿಸರ ಪ್ರೇಮಿಯ ಗುಟ್ಟು ಬಿಟ್ಟು ಕೊಡದ ಸ್ಥಳೀಯರ ಅಭಿಮಾನದ ಮಾತುಗಳು. ಮರಗಳಲ್ಲಿ ಪುಟ್ಟ ಕುಡಿಕೆಗಳಲ್ಲಿ ನೀರನ್ನಿಟ್ಟು ಪಕ್ಷಿಗಳ ಬಾಯಾರಿಕೆ ತಣಿಸುವ ಸೇವೆಯಂತೆ ಪುತ್ತೂರು ಬಪ್ಪಳಿಗೆಯ ಪರಿಸರದಲ್ಲಿ ಹೊಂಡದಲ್ಲಿ ನೀರು ತುಂಬಿ ಪ್ರಾಣಿ, ಪಕ್ಷಿಗಳ ಮೇಲಣ ಕಾಳಜಿ ತೋರ್ಪಡಿಸಿರುವ ಪರಿಸರ ಪ್ರೇಮಿಯ ಈ ಅಳಿಲ ಸೇವೆ ಅದೆಷ್ಟೋ ಜೀವ ಸಂಕುಲಗಳಿಗೆ ಜೀವ ಸೆಲೆಯಾಗಿದೆ.

> **ಸೂಚನಾ ಫಲಕ ಇದೆ**
>
> ಈ ಪುಟ್ಟ ನೀರಿನ ಹೊಂಡದ ಬಳಿ ಸೂಚನಾ ಫಲಕವನ್ನೂ ಅಳವಡಿಸಿದ್ದಾರೆ. ಇದರಲ್ಲಿ 'ಪ್ರಾಣಿಗಳು ಕುಡಿಯುವ ನೀರು, ಕಸ ಹಾಕಬೇಡಿ' ಎಂದು ಕೈಯಲ್ಲೇ ಬರೆದು ಅದರಲ್ಲಿ ಪ್ರಾಣಿಗಳು ನೀರು ಕುಡಿಯುವ ಚಿತ್ರ ಮತ್ತು ಕಸ ಹಾಕದಂತೆ ಎಚ್ಚರದ ಚಿತ್ರಗಳನ್ನೂ ಬಿಡಿಸಿದ್ದಾರೆ. ಸುಡು ಬೇಸಿಗೆಯಲ್ಲಿ ನೀರಿಗಾಗಿ ಹಾಹಾಕಾರ ಉಂಟಾಗುವ ಸಂದರ್ಭದಲ್ಲಿ ಈ ಮಹಾನುಭಾವರ ಪರಿಸರ ಕಾಳಜಿಯ ಕುರಿತು ಶ್ಲಾಘನೆಯ ಮಾತುಗಳು ಕೇಳಿ ಬರುತ್ತಿವೆ.

ಬಂದ್ಯೋಡು ಬಳಿ ಸರಣಿ ಅಪಘಾತ: ಓರ್ವನ ಸಾವು, ಇನ್ನೋರ್ವ ಗಂಭೀರ

ಕುಂಬಳೆ: ರಾಷ್ಟ್ರೀಯ ಹೆದ್ದಾರಿಯ ಬಂದ್ಯೋಡು ಸಮೀಪ ಸರ್ವೀಸ್ ರಸ್ತೆಯಲ್ಲಿ ಬುಧವಾರ ಮುಂಜಾನೆ 12.40ರ ವೇಳೆ ಸಂಭವಿಸಿದ ಸರಣಿ ವಾಹನ ಅಪಘಾತದಲ್ಲಿ ಓರ್ವ ಮೃತಪಟ್ಟು ಇನ್ನೋರ್ವ ಗಂಭೀರ ಗಾಯಗೊಂಡು ಮಂಗಳೂರಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಬಳಿಯ ಪಡ್ಡಡ್ಕ ಏನೆಕಲ್ಲು ನಿವಾಸಿ ಸುರೇಶ್ ರೈ ಎಂಬವರ ಪುತ್ರ ನಿರಂಜನ್ ಕೆ. (24) ಮೃತಪಟ್ಟವರು. ಮಂಗಳೂರು ಶಕ್ತಿನಗರ ನೀತಿನಗರದ ಬೆನ್ನಿ ಎಂ.ಜೆ. ಎಂಬವರ ಪುತ್ರ ಕೃತಿಕ್ ಬೆನ್ನಿ (23) ಗಂಭೀರ ಗಾಯಗೊಂಡವರು.



ಮಂಗಳೂರಿನಿಂದ ಕಾಸರಗೋಡು ಭಾಗಕ್ಕೆ ಪ್ರವಾಸಕ್ಕಾಗಿ ಬಂದವರು ಐದು ಬೈಕ್‌ಗಳಲ್ಲಿ ಮರಳುತ್ತಿದ್ದರು. ಈ ಸಂದರ್ಭದಲ್ಲಿ ಎರಡು ಬೈಕ್‌ಗಳು ಪಿಕ್‌ಅಪ್‌ಗೆ ಢಿಕ್ಕಿ ಹೊಡೆದಿದೆ. ಇದರಿಂದ ನಿರಂಜನ್ ಹಾಗೂ ಕೃತಿಕ್ ಬೆನ್ನಿ ಗಂಭೀರ ಗಾಯಗೊಂಡರು. ಅವರನ್ನು ಮೊದಲು ಬಂದ್ಯೋಡಿನ ಖಾಸಗಿ ಆಸ್ಪತ್ರೆಗೆ ತಲುಪಿಸಲಾಗಿತ್ತು. ಆದರೆ ಗಾಯ ಗಂಭೀರವಾಗಿರುವುದರಿಂದ ಅವರನ್ನು ಮಂಗಳೂರಿನ ಆಸ್ಪತ್ರೆಗೆ ಸಾಗಿಸುವಂತೆ ಆಸ್ಪತ್ರೆ ಅಧಿಕಾರಿಗಳು ಸೂಚಿಸಿದರು. ಅದರಂತೆ ಮಂಗಳೂರಿನ ಆಸ್ಪತ್ರೆಗೆ ತಲುಪಿಸಿ ತುರ್ತು ಚಿಕಿತ್ಸೆ ನೀಡಿದರೂ ನಿರಂಜನ್‌ರ ಜೀವ ರಕ್ಷಿಸಲು ಸಾಧ್ಯವಾಗಲಿಲ್ಲ. ಕುಂಬಳೆ ಪೊಲೀಸರು ಸ್ಥಳಕ್ಕಾಗಮಿಸಿ ತನಿಖೆ ಕೈಗೊಂಡಿದ್ದಾರೆ.

> ▸▸ ದ.ಕ.ಜಿಲ್ಲೆಯ ಸುಳ್ಯ ಬಳಿಯ ಪಡ್ಡಡ್ಕ ಏನೆಕಲ್ಲು ನಿವಾಸಿ ಸುರೇಶ್ ರೈ ಎಂಬವರ ಪುತ್ರ ನಿರಂಜನ್ ಕೆ. (24) ಮೃತಪಟ್ಟವರು.
>
> ▸▸ ಮಂಗಳೂರಿನಿಂದ ಕಾಸರಗೋಡು ಭಾಗಕ್ಕೆ ಪ್ರವಾಸಕ್ಕಾಗಿ ಬಂದವರು ಐದು ಬೈಕ್‌ಗಳಲ್ಲಿ ಮರಳುತ್ತಿದ್ದರು. ಈ ಸಂದರ್ಭದಲ್ಲಿ ಎರಡು ಬೈಕ್‌ಗಳು ಪಿಕ್ ಅಪ್‌ಗೆ ಢಿಕ್ಕಿ ಹೊಡೆದಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಗುರುವಾರ 19, ಫೆಬ್ರವರಿ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ
ದಕ್ಷಿಣ ಕನ್ನಡ 34° 22°
ಉಡುಪಿ 31° 23°


ಪುಟ 2
ಸರ್ಕಾರಿ ಶಾಲೆಯ ಬಳಿಯೇ ಸೊಳ್ಳೆ ಉತ್ಪಾದನಾ ಕೇಂದ್ರ!


ಪುಟ 4
ಮುನಿಯಾಲಿಗೆ ಹತ್ತಕ್ಕೂ ಅಧಿಕ ನಾಗಾಸಾಧುಗಳ ದಿಢೀರ್ ಭೇಟಿ

ಸುದ್ದಿ ಅಪ್‌ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಉಡುಪಿ ಜಿಲ್ಲೆಗೆ ಸಿಐಎಸ್‌ಎಫ್‌ನ 'ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್-2026' ಅದ್ದೂರಿ ಪ್ರವೇಶ



ಸಿಐಎಸ್‌ಎಫ್‌ನ 'ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್-2026' ಜಾಥಾ ಉಡುಪಿ ಜಿಲ್ಲೆ ಪ್ರವೇಶಿಸಿದ್ದು, ಬುಧವಾರ ತ್ರಾಸಿ ಬೀಚ್ ಸಮೀಪ ಜಿಲ್ಲಾಡಳಿತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಅದ್ದೂರಿಯಾಗಿ ಸ್ವಾಗತಿಸಲಾಯಿತು. 35 ಮಹಿಳಾ ಸಿಐಎಸ್‌ಎಫ್ ಮಹಿಳಾ ಯೋಧರು ಸೇರಿದಂತೆ ಒಟ್ಟು 100 ಮಂದಿ ಸಿಐಎಸ್‌ಎಫ್ ಯೋಧರು ಈ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದಾರೆ.

ಗಡಿ ಗ್ರಾಮ ಸಂಪಾಜೆಯಲ್ಲಿ ವರ್ಷ 'ಧಾರೆ'
ಇಳೆಗೆ ತಂಪೆರೆದ ಮಳೆ!
ಅಂಗಳದ ಕೃಷಿ ಫಸಲಿಗೆ ಅಕಾಲಿಕ ಸಂಕಷ್ಟ

ಸುಳ್ಯ: ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯ ಗಡಿ ಗ್ರಾಮ ಸಂಪಾಜೆ ಹಾಗೂ ಸುತ್ತಮುತ್ತ ಬುಧವಾರ ಸಂಜೆ ಬಳಿಕ ಈ ವರ್ಷದ ಮೊದಲ ಮಳೆ ಬಿದ್ದಿದೆ.

ಸಂಪಾಜೆ ಕಲ್ಲುಗುಂಡಿ ವ್ಯಾಪ್ತಿಯಲ್ಲಿ ಸುರಿದ ಅಕಾಲಿಕ ಮಳೆಗೆ ಅಂಗಳಗಳಲ್ಲಿ ಒಣಗಲು ಹಾಕಲಾಗಿದ್ದ ಅಡಿಕೆ, ಇತರ ಕೃಷಿ ಉತ್ಪನ್ನ ಒದ್ದೆಯಾಗಿದೆ. »ಪುಟ 6



ಸಂಪಾಜೆ ಭಾಗದ ವಿವಿಧೆಡೆಗೆ ಈ ವರ್ಷದ ಮೊದಲ ಮಳೆ ಸಿಂಚನವಾಯಿತು.

ಸದ್ಯಕ್ಕಿಲ್ಲ ಮಳೆ

ಕರಾವಳಿ ಭಾಗದಲ್ಲಿ ಒಣಹವೆ ಮುಂದುವರಿಯಲಿದ್ದು, ಮುಂದಿನ ಕೆಲವು ದಿನಗಳಕಾಲ ಯಾವುದೇ ಭಾರೀ ಮಳೆಯ ಸಾಧ್ಯತೆ ಇಲ್ಲ ಎಂದು ಕೇಂದ್ರ ಹವಾಮಾನ ಇಲಾಖೆ ವರದಿಯಲ್ಲಿ ಹೇಳಿದೆ.

ಎಐಕ್ಯೂ ಸೂಚ್ಯಂಕದಲ್ಲಿ ಕಂಡಿದೆ 77
ಕೊಡಗಿಗೂ ಕಾಡಿದ ಶುದ್ಧ ಗಾಳಿ ಅಭಾವ
ಇವತ್ತು ಪ್ರಕೃತಿ ಮಡಿಲಿಗೂ ಆಪತ್ತು

ಮಡಿಕೇರಿ: ಪ್ರಕೃತಿ ಸೌಂದರ್ಯಕ್ಕೆ ಹೆಸರಾದ ಕೊಡಗಿಗೆ ಏರ್ ಕ್ವಾಲಿಟಿ ಇಂಡೆಕ್ಸ್ ಬುಧವಾರ ಅಕ್ಷರಶಃ ಸಖತ್ ಶಾಕ್ ನೀಡಿದೆ.

ಗುಣಮಟ್ಟದ ಗಾಳಿಗೆ ಹೆಸರಾಗಿದ್ದ ಜಿಲ್ಲೆಯಲ್ಲಿ ಬುಧವಾರ ಎಕ್ಯೂಐ 77ಕ್ಕೆ ತಲುಪಿದ್ದು ಇದು ಗಾಳಿಯ ಗುಣಮಟ್ಟ ಅತ್ಯಂತ ಕಳಪೆ ಮಟ್ಟಕ್ಕೆ ಇಳಿದಿರುವುದಕ್ಕೆ ಸಾಕ್ಷಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚಿನ ವಾಯುಮಾಲಿನ್ಯಕ್ಕೆ ಕೊಡಗು ಜಿಲ್ಲೆ ಸಾಕ್ಷಿಯಾಗುತ್ತಿದೆ. »ಪುಟ 6



ವಾಯುಮಾಲಿನ್ಯ ನೀಡಿದೆ ಪ್ರವಾಸೋದ್ಯಮಕ್ಕೂ ಕುತ್ತು

ಸುತ್ತಮುತ್ತ

ಕರಾವಳಿಯ ಜಿಲ್ಲೆಗಳಲ್ಲಿ ಮುಂದುವರಿದ ಚಳಿ, ಸೆಕೆ

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಸೆಕೆ ಮುಂದುವರಿದಿದೆ. ಬುಧವಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗರಿಷ್ಠ 35, ಉಡುಪಿಯಲ್ಲಿ 32 ಹಾಗೂ ಕಾಸರಗೋಡಿನಲ್ಲಿ 33 ಡಿಗ್ರಿ ಸೆಲ್ಸಿಯೆಸ್ ತಾಪಮಾನ ದಾಖಲಾಗಿತ್ತು. ರಾತ್ರಿಯ ವೇಳೆ ತಾಪಮಾನ ಕುಸಿತವಾಗಿತ್ತು.

ಸುಳ್ಯದ ಮರ್ಕಂಜ ಕೃಷಿ ಭೂಮಿಗೆ ಕಾಡಿದ ಕಾಡಾನೆ!

ಸುಳ್ಯ: ತಾಲೂಕಿನ ಮರ್ಕಂಜ ಗ್ರಾಮದಲ್ಲಿ ಕಾಡಾನೆಗಳು ಕೃಷಿ ಭೂಮಿಗೆ ದಾಳಿ ನಡೆಸಿವೆ. ಇಲ್ಲಿನ ತೋಟಗಳಿಗೆ ರಾತ್ರಿ ವೇಳೆ ನುಗ್ಗಿದ ಕಾಡಾನೆ ಅಪಾರ ಪ್ರಮಾಣದಲ್ಲಿ ಕೃಷಿ ಬೆಳೆಗಳಿಗೆ ಹಾನಿ ಉಂಟುಮಾಡಿದೆ. ಎಂದು ಸ್ಥಳೀಯರು ತಿಳಿಸಿದ್ದಾರೆ.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಗುರುವಾರ 19, ಫೆಬ್ರವರಿ 2026

ಸುತ್ತಮುತ್ತ

ಫೆ.20: ಮಾರಿ ಪೂಜೆ

ಕಿನ್ನಿಗೋಳಿ: ಕಿನ್ನಿಗೋಳಿ ಸಮೀಪದ ಎಳತ್ತೂರು ಪಡ್ಲಕ್ಯಾರು ಶ್ರೀ ಮಹಾಮ್ಮಾಯೀ ಮಾರಿಗುಡಿ ದೇವಸ್ಥಾನದ ವರ್ಷಾವಧಿ ಮಾರಿ ಪೂಜೆಯು ಫೆ.20 ರಂದು ನಡೆಯಲಿದೆ. ಬೆಳಿಗ್ಗೆ ಗಣಹೋಮ , ಗದ್ದಿಗೆ ಪೂಜೆ , ರಾಶಿ ಇಡುವುದು, ಹೂವಿನ ಪೂಜೆ, ದೇವಿ ದರ್ಶನ ಸೇವೆ ನಡೆಯಲಿದೆ.

ಫೆ.21: ಜೀರ್ಣೋದ್ಧಾರ, ಅಭಿವೃದ್ಧಿಗೆ ಶಿಲಾನ್ಯಾಸ

ಪುತ್ತೂರು: ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ರಾಜಾಂಗಣದ 5 ಕಟ್ಟೆಗಳು, ಅಯ್ಯಪ್ಪಗುಡಿ, ಸಭಾಭವನ, ಕೆರೆ ಜೀರ್ಣೋದ್ಧಾರ, ಅಶ್ವತ್ಥ ಕಟ್ಟೆ ಮೊದಲಾದ ಅಭಿವೃದ್ಧಿ ಕಾರ್ಯಗಳಿಗೆ ಫೆ.21ರ ಶನಿವಾರ ಬೆಳಗ್ಗೆ ಗಂಟೆ 8.45ರಿಂದ ಶಂಕುಸ್ಥಾಪನೆ, ಶಿಲಾನ್ಯಾಸ ಧಾರ್ಮಿಕ ಕಾರ್ಯಕ್ರಮಗಳು ಕ್ಷೇತ್ರದ ತಂತ್ರಿ ಕುಂಟಾರು ರವೀಶ ತಂತ್ರಿ, ವಾಸ್ತುಶಿಲ್ಪಿ ಎಸ್.ಎಂ. ಪ್ರಸಾದ್ ಮುನಿಯಂಗಳ ಅವರ ನೇತೃತ್ವದಲ್ಲಿ ನಡೆಯಲಿದೆ. ಅನಂತರ ಶಾಸಕ ಅಶೋಕ್ ಕುಮಾರ್ ರೈ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಹಾಗೂ ಕಾರ್ಯ ನಿರ್ವಹಣಾಧಿಕಾರಿ ಕೆ.ವಿ. ಶ್ರೀನಿವಾಸ್ ತಿಳಿಸಿದ್ದಾರೆ.

ಫೆ.22,23: ಎಳತ್ತೂರು ದೈವಸ್ಥಾನದಲ್ಲಿ ನೇಮ

ಕಿನ್ನಿಗೋಳಿ: ಕಿನ್ನಿಗೋಳಿ ಸಮೀಪದ ಎಳತ್ತೂರು ಪಡ್ಲಕ್ಯಾರ್ ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ಶ್ರೀ ಕೊರ್ದಬ್ಬು ತನ್ನಿಮಾನಿಗ, ಜುಮಾದಿ ಬಂಟ ದೈವಗಳ ಪಡ್ಲಕ್ಯಾರ್ ನೇಮೋತ್ಸವ ಫೆ.22, 23ಕ್ಕೆ ನಡೆಯಲಿದೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಜನಾ ಮಂಗಲೋತ್ಸವ

ಕಿನ್ನಿಗೋಳಿ: ಕಿನ್ನಿಗೋಳಿ ಕಮ್ಮಾಜೆ ನೇಕಾರ ಕಾಲನಿ ಶ್ರೀ ದುರ್ಗಾ ಭಜನಾ ಮಂದಿರದಲ್ಲಿ ಅಹೋರಾತ್ರಿ ಭಜನೆ ಹಾಗೂ 11ನೇ ವರ್ಷದ ಭಜನಾ ಮಂಗಲೋತ್ಸವ ಫೆ. 21ಕ್ಕೆ ಸೋರ್ಯೋದಯದಿಂದ 22 ಬೆಳಿಗ್ಗೆ ಸೊರ್ಯೋದಯದ ತನಕ ನಡೆಯಲಿದೆ. ಫೆ.20ಕ್ಕೆ ಸಂಜೆ ಮಂದಿರದಲ್ಲಿ ದುರ್ಗಾನಮಸ್ಕಾರ ಪೂಜೆ , ಕುಣಿತ ಭಜನೆ ಅನ್ನಸಂತರ್ಪಣೆ ನಡೆಯಲಿದೆ. ಫೆ.21ಕ್ಕೆ ಬೆಳಿಗ್ಗೆ ಕಟೀಲು ದೇವಸ್ಥಾನ ಅರ್ಚಕ ಹರಿನಾರಾಯಣದಾಸ ಆಸ್ರಣ್ಣ ದೀಪ ಬೆಳಗಿಸಿ ಭಜನಾ ಮಂಗಲೋತ್ಸವಕ್ಕೆ ಚಾಲನೆ ನೀಡಲಿದ್ದಾರೆ ಎಂದು ಮಂದಿರದ ಅಧ್ಯಕ್ಷ ಚೇತನ್ ಶೆಟ್ಟಿಗಾರ್ ತಿಳಿಸಿದ್ದಾರೆ.

ಫೆ.21,22: ಮಂಜಲಕಟ್ಟೆ ಕೋರ್ದಬ್ಬು ದೈವಸ್ಥಾನದ ವಾರ್ಷಿಕ ನೇಮ

ಮಂಗಳೂರು: ಕಾವೂರು ಮಂಜಲಕಟ್ಟೆ ಕೋರ್ದಬ್ಬು ನೇಮೋತ್ಸವ ಫೆ. 21, 22ಕ್ಕೆ ಜರುಗಲಿದೆ. ಫೆ.21ಕ್ಕೆ ಬೆಳಗ್ಗೆ ಗಂಟೆ 9ಕ್ಕೆ ಭಂಡಾರ ಏರುವುದು. ರಾತ್ರಿ 7ಕ್ಕೆ ಅನ್ನಸಂತರ್ಪಣೆ ನಂತರ ಕೋರ್ದಬ್ಬು, ತನ್ನಿಮಾನಿಗ ದೈವಗಳ ನೇಮ ಜರಗಲಿದೆ. ಫೆ.22ಕ್ಕೆ ಮಧ್ಯಾಹ್ನ 12ಕ್ಕೆ ರಾಹು ಗುಳಿಗ ದೈವಕ್ಕೆ ಎಣ್ಣೆಬೂಲ್ಯ, 1ಕ್ಕೆ ಗಗ್ಗರ ಸೇವೆ, ರಾತ್ರಿ 8ಕ್ಕೆ ಗುಳಿಗ ಪಂಜುರ್ಲಿ ದೈವದ ನೇಮ ನಂತರ ಗಡು ಜಾಗಕ್ಕೆ ಮಾರಿಬಲಿ ಹೊರಡಲಿದೆ. ಫೆ.24ರಂದು ಮಧ್ಯಾಹ್ನ 12ಕ್ಕೆ ರಾಹುಗುಳಿಗ ದೈವಕ್ಕೆ ಹರಕೆಯ ಗಗ್ಗರ ಸೇವೆ ಜರಗಲಿದೆ ಎಂದು ದೈವಸ್ಥಾನದ ಪ್ರಕಟಣೆ ತಿಳಿಸಿದೆ.

ಫೆ.20-22: ಹರಿಹರ ಕ್ಷೇತ್ರದಲ್ಲಿ ಜಾತ್ರೆ

ಸುಬ್ರಹ್ಮಣ್ಯ: ಹರಿಹರ ಪಲ್ಲತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ಫೆ.20ರಿಂದ ಫೆ.22ರವರೆಗೆ ಬ್ರಹ್ಮಶ್ರೀ ನೀಲೇಶ್ವರ ಪದ್ಮನಾಭ ತಂತ್ರಿ ಉಚ್ಚಿಲ ಅವರ ನೇತೃತ್ವದಲ್ಲಿ ಶ್ರೀ ಹರಿಹರೇಶ್ವರ ದೇವರ ಪ್ರತಿಷ್ಠಾ ವಾರ್ಷಿಕೋತ್ಸವ ಮತ್ತು ಜಾತ್ರಾ ಮಹೋತ್ಸವವು ವೈಭವದಿಂದ ನಡೆಯಲಿದೆ ಎಂದು ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು ತಿಳಿಸಿದ್ದಾರೆ. ಫೆ.20ರಂದು ಹಸಿರು ಕಾಣಿಕೆ ಪ್ರಾರಂಭ, ಮದ್ಯಾಹ್ನ ಮಹಾಪೂಜೆ, ಸಂಜೆ ತಂತ್ರಿಗಳ ಆಗಮನ, ರಾತ್ರಿ ಮಹಾಪೂಜೆ ನೆರವೇರಲಿದೆ. ಫೆ.21ಕ್ಕೆ ಬೆಳಗ್ಗೆ ಗಣಪತಿ ಹವನ, ಕಲಶಪೂಜೆ, ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ, ಸಂಜೆ ದೀಪಾರಾಧನೆ, ಚೆಂಡೆವಾದನ, ರಾತ್ರಿ ಮಹಾಪೂಜೆ, ದೇವರ ಬಲಿ ಉತ್ಸವ ಹೊರಟು ವಸಂತ ಕಟ್ಟೆ ಪೂಜೆ, ಬಟ್ಟಲು ಕಾಣಿಕೆ ಮತ್ತು ರಾಜಾಂಗಣ ಪ್ರಸಾದ ನಡೆಯಲಿದೆ. ಫೆ.22ಕ್ಕೆ ಉಳ್ಳಾಗುಳು ಮತ್ತು ಪರಿವಾರ ದೈವಗಳ ನೇಮೋತ್ಸವ ನೆರವೇರಲಿದೆ.

ಫೆ.20ರಂದು ಸ್ಥಳೀಯ ಅಂಗನವಾಡಿ ಹಾಗೂ ಪ್ರಾಥಮಿಕ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಕಪಿಲೇಶ್ವರ ಮ್ಯೂಸಿಕ್ ತಂಡದವರಿಂದ ಪಿಟೀಲು, ಕೊಳಲು ಮತ್ತು ಚೆಂಡೆ ವಾದನ, ಊರು ಕೂಡುಕಟ್ಟಿನ ಮಕ್ಕಳಿಂದ ಮತ್ತು ಸಂಘ-ಸಂಸ್ಥೆಗಳ ಸದಸ್ಯರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಫೆ.21ರಂದು ಬೆಳಗ್ಗೆಯಿಂದ ಸಂಜೆ ತನಕ ಅರ್ಧ ಏಕಾಹ ಭಜನೆ ನೆರವೇರಲಿದೆ ಬಳಿಕ ಬಾಲಚಂದ್ರ ಪೆರಾಜೆ ಇವರಿಂದ ಸ್ಯಾಕ್ಸೋಫೋನ್ ವಾದನ, ಹರಿಹರ ಪಳ್ಳತ್ತಡ್ಕದ ಹರಿಹರೇಶ್ವರ ಯಕ್ಷಗಾನ ಕಲಾ ಸಂಘದಿಂದ ಯಕ್ಷಗಾನ ಬಯಲಾಟ ನಡೆಯಲಿದೆ.

ಫೆ.20ಕ್ಕೆ ರಾತ್ರಿ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ರಾಮಕೃಷ್ಣ ಕುದ್ಕುಳಿ, ಡಾ. ಚಂದ್ರಶೇಖರ ಕಿರಿಭಾಗ, ಕಿಶೋರ್ ಕುಮಾರ್ ಕೂಜುಗೋಡು, ಬ್ರಹ್ಮಕಲಶೋತ್ಸವ ನಿಧಿ ಸಂಗ್ರಾಹಕ ಸಮಿತಿಯ ಅಧ್ಯಕ್ಷ ಭವಾನಿಶಂಕರ ಪಿಂಡಿಮನೆ, ಸುಬ್ರಹ್ಮಣ್ಯ ಮೆಸ್ಕಾಂನ ಹಿರಿಯ ಪವರ್‌ಮ್ಯಾನ್ ದೇವಪ್ಪ ಅಂಜೇರಿ, ಹರಿಹರ ಪಳ್ಳತ್ತಡ್ಕ ಮೆಸ್ಕಾಂನ ವಿಜಯ ಕುಮಾರ್, ಪ್ರಶಾಂತ್ ಪೂಜಾರಿ ಹಾಗೂ ಕೊಲ್ಲಮೊಗ್ರು ಮೆಸ್ಕಾಂನ ನಿತ್ಯಾನಂದ ವೈ. ಅವರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಉಪ್ಪಿನಂಗಡಿ ರಾಜಕಾಲುವೆಯಲ್ಲಿ ಕೊಳಚೆ ನೀರು ಸಂಗ್ರಹ | ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ ಮಕ್ಕಳು

ಸರ್ಕಾರಿ ಶಾಲೆಯ ಬಳಿಯೇ ಸೊಳ್ಳೆ ಉತ್ಪಾದನಾ ಕೇಂದ್ರ!

ಉಪ್ಪಿನಂಗಡಿ: ಸುಮಾರು 500ಕ್ಕೂ ಮಿಕ್ಕಿದ ವಿದ್ಯಾರ್ಥಿಗಳಿರುವ ವಿದ್ಯಾಸಂಸ್ಥೆಯ ಬಳಿ ಚರಂಡಿ ತ್ಯಾಜ್ಯ ನೀರು ಸಂಗ್ರಹಣೆಗೊಂಡು ಸೊಳ್ಳೆಗಳ ಉತ್ಪಾದನಾ ಕೇಂದ್ರವಾಗಿ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳುತ್ತಿದ್ದು, ಸಮಸ್ಯೆ ನಿವಾರಣೆಗೆ ಸಂಬಂಧಿಸಿ ಮಾಡಲಾದ ಸತತ ಮನವಿಗಳು ನಿರ್ಲಕ್ಷ್ಯಕ್ಕೆ ಒಳಗಾದ ಬಗ್ಗೆ ವಿದ್ಯಾರ್ಥಿಗಳ ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

190 ವರ್ಷಗಳ ಇತಿಹಾಸವನ್ನು ಹೊಂದಿರುವ ಉಪ್ಪಿನಂಗಡಿ ಸರಕಾರಿ ಮಾದರಿ ಶಾಲಾ ಪಾರ್ಶ್ವದಲ್ಲಿ ಹರಿಯುತ್ತಿರುವ ಪೇಟೆಯ ಮುಖ್ಯ ಚರಂಡಿಯಲ್ಲಿ ಕೊಳಚೆ ನೀರು ಸರಾಗವಾಗಿ ಹರಿಯದೆ ಶಾಲಾ ಬಳಿಯಲ್ಲಿಯೇ ಸಂಗ್ರಹಣೆಗೊಂಡು ದುರ್ನಾತ ಬೀರುತ್ತಿದೆ. ಮಾತ್ರವಲ್ಲದೆ ವಿಪರೀತ ಪ್ರಮಾಣದಲ್ಲಿ ಸೊಳ್ಳೆ ಉತ್ಪತ್ತಿಗೊಂಡು ಶಾಲಾ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಲು ಕಾರಣವಾಗಿದೆ. ಉಪ್ಪಿನಂಗಡಿಯ ರಾಜ ಕಾಲುವೆಯು ಕಳೆದ ನಾಲ್ಕು ದಶಕಗಳಿಂದ ಸಮಸ್ಯೆಯ ಕೂಪವಾಗಿ ಕಾಡುತ್ತಿದ್ದ ಸಮಯದಲ್ಲಿ





ಪುತ್ತೂರು ಸಹಾಯಕ ಕಮಿಷನರ್ ಆಗಿದ್ದ ಜುಬಿನ್ ಮೊಹಪಾತ್ರ ಅವರು ಹೆದ್ದಾರಿ ಕಾಮಗಾರಿ ನಿರತ ಸಂಸ್ಥೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಉಪ್ಪಿನಂಗಡಿ ಸಂಪರ್ಕ ರಸ್ತೆಯಲ್ಲಿನ ಕಿರಿದಾದ ಮೋರಿಯನ್ನು ತೆರವುಗೊಳಿಸಿ ಚೌಕಾಕಾರದ 5 ಅಡಿ ವ್ಯಾಸದ ಕಾಂಕ್ರೀಟ್ ಮೋರಿಯನ್ನು ಅಳವಡಿಸುವ ಮೂಲಕ ಹೆದ್ದಾರಿಯಿಂದ ಉಪ್ಪಿನಂಗಡಿ ಸಂಪರ್ಕ ಸಾಧಿಸುವ ರಸ್ತೆಯ ಬಳಿ ಉಂಟಾಗಿದ್ದ ಸುದೀರ್ಘ ಕಾಲದ ಸಮಸ್ಯೆ ನಿವಾರಣೆಯಾದಂತಾಗಿತ್ತು. ಆದರೆ, ಅಲ್ಲಿಂದ ಸರಾಗವಾಗಿ ಹರಿದು ಬಂದ ಚರಂಡಿ ನೀರು ಶಾಲೆಯ ಬಳಿ ಅವೈಜ್ಞಾನಿಕ ಕಾಮಗಾರಿಯಿಂದಾಗಿ ಹೆದ್ದಾರಿಗೆ ಅಡ್ಡವಾಗಿ ಹೊಸದಾಗಿ ನಿರ್ಮಿಸಲಾದ ಚರಂಡಿಯಲ್ಲಿ ನೀರು ಹರಿಯದೆ ಹಳೇ ಕಿರಿದಾದ ಚರಂಡಿಯಲ್ಲಿಯೇ ಹರಿಯುವಂತಾಗಿತ್ತು. ಇದರಿಂದಾಗಿ ಈ ಭಾಗದಲ್ಲಿ ನೀರಿನ ಸರಾಗ ಹರಿಯುವಿಕೆಗೆ ಇಲ್ಲಿ ಅಡೆತಡೆ ಉಂಟಾಗಿತ್ತು.

ಆರೋಗ್ಯ ಭಾಗ್ಯ ನೀಡಿ

ಎಲ್ಲೆಡೆ ಸರಕಾರಿ ಶಾಲೆ ಮುಚ್ಚುತ್ತಿದ್ದರೆ ಉಪ್ಪಿನಂಗಡಿಯ ಸರಕಾರಿ ಶಾಲೆ ದಿನೇ ದಿನೇ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಾ ಗಮನ ಸೆಳೆಯುತ್ತಿದೆ. ಆದರೆ, ನಮ್ಮ ಶಾಲಾ ಬಳಿಯ ಚರಡಿಯಲ್ಲಿ ಮಲಿನ ನೀರು ಶೇಖರಣೆಗೊಂಡು ರೋಗಾಣುಗಳು ಉತ್ಪತ್ತಿಯಾಗಿ ಶಾಲಾ ಮಕ್ಕಳು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ ಎಂದು ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಅಬ್ದುಲ್ ಮಜೀದ್ ಎಚ್ಚರಿಸಿದ್ದಾರೆ.

ಬಿಗಡಾಯಿಸಿದ ಸಮಸ್ಯೆ

ಹೆದ್ದಾರಿ ಗಡ್ಡವಾಗಿ ನಿರ್ಮಿಸಲಾದ ಚರಂಡಿಯು ನೀರು ಹರಿಯುವ ಪ್ರಾಕೃತಿಕ ಮಟ್ಟದಿಂದ ಎತ್ತರವಿದ್ದ ಕಾರಣ ಚರಂಡಿ ನೀರು ಹೊಸದಾದ ಚರಂಡಿಯಲ್ಲಿ ಹರಿಯದೆ ಹಳೆಯ ಕಿರಿದಾದ ಚರಂಡಿಯಲ್ಲಿ ಹರಿಯುತ್ತಿತ್ತಾದರೂ ತಕ್ಕ ಮಟ್ಟಿಗೆ ಸಮಾಧಾನ ತಂದಿತ್ತು. ಆದರೆ, ಹೆದ್ದಾರಿ ಅಗಲೀಕರಣದ ಕಾಮಗಾರಿ ನಿರತ ಮಂದಿ ಕಾಮಗಾರಿಯಲ್ಲಿ ಉಳಿಕೆ ಕಾಂಕ್ರೀಟ್ ಮಿಶ್ರಣವನ್ನು ವಿಲೇವಾರಿ ಮಾಡಲು ಸುಲಭವಾಗುತ್ತದೆ ಎಂಬ ಕಾರಣಕ್ಕೆ ಹೆದ್ದಾರಿ ಬದಿಯ ಚರಂಡಿಗೆ ಸುರಿದ ಕಾರಣ ಮಂದ ಗತಿಯಲ್ಲಿ ಹರಿದು ಹೋಗುತ್ತಿದ್ದ ತ್ಯಾಜ್ಯ ನೀರು ಇದೀಗ ಚರಂಡಿಯಲ್ಲಿಯೇ ಸಂಗ್ರಹಗೊಂಡು ದುರ್ನಾತ ಹಾಗೂ ಸೊಳ್ಳೆಗಳ ಉತ್ಪಾದನೆಗೆ ಕಾರಣವಾಗಿದೆ.

> ಇಲ್ಲಿ 500ಕ್ಕೂ ಹೆಚ್ಚಿನ ಮಕ್ಕಳು ಕಲಿಯುತ್ತಿದ್ದರೂ ಶಾಲಾ ಪರಿಸರದ ಸನಿಹದಲ್ಲೇ ರೋಗಕಾರಕ ಚರಂಡಿ ಸಮಸ್ಯೆ ಸುದೀರ್ಘ ಸಮಯದಿಂದ ಜೀವಂತವಾಗಿರುವುದು ಖೇದಕರ. ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ದೂರು, ಮನವಿ ಕೊಟ್ಟರೂ ಯಾರೊಬ್ಬರಿಗೂ ಸಮಸ್ಯೆಯ ಗಂಭೀರತೆ ಅರ್ಥವಾಗದಿರುವುದು ಪ್ರಶ್ನಾರ್ಹವಾಗಿದೆ.
>
> ● ವಿಜಯ ಕುಮಾರ್ ಕಲ್ಲಳಿಕೆ, ಶಾಲಾ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ

ಉಳ್ಳಾಲ ನಗರಸಭೆಯ ಬಜೆಟ್ ಮಂಡನೆ ಹಿನ್ನಲೆಯಲ್ಲಿ ಪೂರ್ವಭಾವಿ ಸಭೆ

ವಾರ್ಡ್‌ಗಳ ಪ್ರಮುಖ ಸಮಸ್ಯೆಗೆ ಆದ್ಯತೆ: ಡಿಸಿ

ಉಳ್ಳಾಲ: ಪೂರ್ವ ಭಾವಿ ಸಭೆಗಳಲ್ಲಿ ಅಭಿವೃದ್ಧಿ ಬಗ್ಗೆ ಚರ್ಚೆ ನಡೆದು ಆ ಮೂಲಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಕಾರ್ಯಗಳಾಗಬೇಕು. ನಿಮ್ಮ ವಾರ್ಡ್ ಗಳ ಪ್ರಮುಖ ಸಮಸ್ಯೆಗಳ ಮಾಹಿತಿ ನೀಡಿದಲ್ಲಿ ಅದಕ್ಕೆ ಶೀಘ್ರ ಪರಿಹಾರ ಕಲ್ಪಿಸಲಾಗುವುದೆಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಹಾಗೂ ಉಳ್ಳಾಲ ನಗರಸಭೆಯ ಆಡಳಿತಾಧಿಕಾರಿ ದರ್ಶನ್ ಎಚ್.ವಿ ಹೇಳಿದರು.

ಉಳ್ಳಾಲ ನಗರಸಭೆಯ ಸಭಾಂಗಣದಲ್ಲಿ ಬುಧವಾರದಂದು ನಡೆದ ನಗರ ಸಭೆಯ 2026-27 ಸಾಲಿನ ಬಜೆಟ್ ಮಂಡನೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಭೆಯಲ್ಲಿ ಉಳ್ಳಾಲಬೈಲ್, ಸುಭಾಷ್ ನಗರ, ಚೆಂಬುಗುಡ್ಡೆ, ಕೃಷ್ಣ ನಗರ ಮೊದಲಾದ ಪ್ರದೇಶಗಳಲ್ಲಿ ಚರಂಡಿಗಳಿಂದ ಆಗುವ ಅವಾಂತರಗಳ ಬಗ್ಗೆ ಜನಸಾಮಾನ್ಯರು ಜಿಲ್ಲಾಧಿಕಾರಿಯ ಗಮನ ಸೆಳೆದರು. ಜನನ-ಮರಣ ಪ್ರಮಾಣ ಪತ್ರ ದಾಖಲೆಗಳು ಅಂತರ್ಜಾಲಗಳಲ್ಲಿ ಸಿಗುವ ವ್ಯವಸ್ಥೆ ನಮ್ಮ ರಾಜ್ಯದಲ್ಲೂ ಆಗಬೇಕೆಂಬ ಆಗ್ರಹ ವ್ಯಕ್ತವಾಯಿತು.

ನಾಡದೋಣಿ ಮೀನುಗಾರರ ಸಂಘದ ಅಧ್ಯಕ್ಷ ಹನೀಫ್ ಮಾತನಾಡಿ, ಮೀನುಗಾರಿಕೆ ನಡೆಸುವ ಪ್ರದೇಶದಲ್ಲಿ ಬೀದಿ ನಾಯಿಗಳ ಕಾಟ ಜಾಸ್ತಿಯಾಗಿದ್ದು ಇದಕ್ಕೆ ಪರಿಹಾರವೇನೆಂದು ಕೇಳಿದರು. ಇದಕ್ಕುತ್ತರಿಸಿದ ಜಿಲ್ಲಾಧಿಕಾರಿ ದರ್ಶನ್ ಅವರು ನಾಯಿಗಳಿಗೆ ಶೆಡ್ ನಿರ್ಮಾಣ ಮಾಡಲು ಸರ್ಕಾರದ ಆದೇಶ ಇದೆ. ಬೀದಿ ನಾಯಿಗಳಿಂದ ಜನ ಸಾಮಾನ್ಯರಿಗೆ ಬಹಳ ತೊಂದರೆಯಾಗುತ್ತಿರುವ ನಿಟ್ಟಿನಲ್ಲಿ ಶೆಡ್ ನಿರ್ಮಾಣ ಮಾಡಲಾಗುವುದು. ರಸ್ತೆಗಳಲ್ಲಿ ಯಾರೂ ಕೂಡ ಬೀದಿ ನಾಯಿಗಳಿಗೆ ಆಹಾರ ಹಾಕಬಾರದೆಂದು ಸೂಚಿಸಿದರು. ಅಕ್ಕರೆ ಕೆರೆಯಲ್ಲಿ ಮಳೆ ನೀರು ಮನೆಗಳಿಗೆ ನುಗ್ಗುತ್ತಿದೆ. ಈ ಪ್ರದೇಶಕ್ಕೆ ಸಮರ್ಪಕ ಚರಂಡಿ ವ್ಯವಸ್ಥೆ ಮಾಡಿ ಪರಿಹಾರ ಒದಗಿಸಿ ಎಂದು ಮಹಿಳೆಯೊಬ್ಬರು ಜಿಲ್ಲಾಧಿಕಾರಿಯಲ್ಲಿ ಮನವಿ ಮಾಡಿದರು.

ಕುಡಿಯುವ ನೀರು ಮತ್ತು ತೆರಿಗೆ ಬಿಲ್ ಬಾಕಿ ಉಳಿಯುತ್ತಿದೆ. ಸುಭಾಷ್ ನಗರ ವಾರ್ಡ್‌ನಲ್ಲಿ ಚರಂಡಿ ಇಲ್ಲದೇ ತುಂಬಾ ಮನೆಗಳಿಗೆ ಹಾನಿಯಾಗುತ್ತಿದೆ. ಕೈಕೋದಲ್ಲಿ ಅಂಗನವಾಡಿ ನಿರ್ಮಾಣಕ್ಕೆ ಬೇಡಿಕೆಯಿದ್ದು ಅರ್ಜಿ ಹಾಕಿ ಮೂರು ವರ್ಷಗಳಾದರೂ ಇದುವರೆಗೂ ಅಂಗನವಾಡಿ ಆಗಿಲ್ಲವೆಂದು ಮಾಜಿ ನಗರ ಸದಸ್ಯ ಅಬ್ದುಲ್ ಬಶೀರ್ ಜಿಲ್ಲಾಧಿಕಾರಿಗಳಿಗೆ ಮನವರಿಸಿದರು.

ಉಳಿಯದಲ್ಲಿ ಜಲಸಿರಿ ಯೋಜನೆಯಡಿ ಕೆಲ ಮನೆಗಳಿಗೆ ಪೈಪ್‌ಲೈನ್ ಜೋಡಣೆ ಕಾಮಗಾರಿ ನಡೆದಿಲ್ಲ. ಇದರಿಂದ ಬಹಳಷ್ಟು ಕುಟುಂಬಗಳಿಗೆ ಸಮಸ್ಯೆಯಾಗುತ್ತಿದ್ದು ಇದನ್ನ ಇತ್ಯರ್ಥ ಪಡಿಸಬೇಕೆಂದು ಮಾಜಿ ನಗರ ಸದಸ್ಯೆ ವೀಣಾ ಶಾಂತಿ ಡಿಸೋಜ ಅವರು ಡಿಸಿಯವರ ಗಮನ ಸೆಳೆದರು.

ಜಲಸಿರಿ ಯೋಜನೆಯಿಂದ ರಸ್ತೆಗಳನ್ನೆಲ್ಲಾ ಅಗೆದುಹಾಕಿದ್ದು ಕೇಬಲ್ ಸಂಪರ್ಕಗಳನ್ನೂ ಕಟ್ ಮಾಡಿ ಹೋಗಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರಾದ ನಿಝಾಮ್ ಆಗ್ರಹಿಸಿದರು. ನಗರಸಭೆಯ ಪೌರಾಯುಕ್ತ ಸಂತೋಷ್ ಡಿ., ಲೆಕ್ಕಾಧಿಕಾರಿ ವಾಸುದೇವ ಉಪಸ್ಥಿತರಿದ್ದರು.



> ಬಡವರು ಮನೆ ತೆರಿಗೆಗಳನ್ನು ಸಮಯಕ್ಕೆ ಸರಿಯಾಗಿ ಪಾವತಿ ಮಾಡುತ್ತಾರೆ. ಬಲಾಢ್ಯರೇ ನಗರಸಭೆಗೆ ತೆರಿಗೆ ಪಾವತಿ ಮಾಡದೆ ಬಾಕಿ ಉಳಿಸುತ್ತಾರೆ. ಇಂತವರ ವಿರುದ್ಧ ಸೂಕ್ತ ಕ್ರಮ ಜರಗಿಸಬೇಕು. ಅಲ್ಲದೇ ರಾಜ ಕಾಲುವೆ ಒತ್ತುವರಿ ಹಾಗೂ ಹೂಳಿನ ಸಮಸ್ಯೆ ಇತ್ಯರ್ಥ ಪಡಿಸಬೇಕಿದೆ.
>
> ● ಆಯೂಬ್ ಮಂಚಿಲ, ಮಾಜಿ ಉಪಾಧ್ಯಕ್ಷ, ಉಳ್ಳಾಲ ನಗರಸಭೆ

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜನೆ

ಫೆ.21: ಜಿಲ್ಲಾ ಮಟ್ಟದ ಉದ್ಯೋಗ ಮೇಳ

ಪುತ್ತೂರು: ದಕ್ಷಿಣ ಕನ್ನಡ ಜಿಲ್ಲಾಡಳಿತ, ದ.ಕ. ಜಿಲ್ಲಾ ಪಂಚಾಯತ್, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ ಇಲಾಖೆ ಮತ್ತು ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ-2026 ನಗರದ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಆವಣದಲ್ಲಿ ಫೆ.21ಕ್ಕೆ ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ.

ಮಾಹಿತಿ ತಂತ್ರಜ್ಞಾನ ಮತ್ತು ಸಾಫ್ಟ್‌ವೇರ್, ಉತ್ಪಾದನೆ, ಆಟೋ ಮೊಬೈಲ್, ಬ್ಯಾಂಕಿಂಗ್, ಹಣಕಾಸು, ವಿಮಾ ವಲಯ, ರಿಟೇಲ್ ಮತ್ತು ಗ್ರಾಹಕ ಸೇವಾಲಯ, ನಿರ್ಮಾಣ ಮತ್ತು ರಿಯಲ್ ಎಸ್ಟೇಟ್, ಶಿಕ್ಷಣ, ಆರೋಗ್ಯ ಕ್ಷೇತ್ರ, ಹಾಸ್ಪಿಟಾಲಿಟಿ, ಹೊರ ಗುತ್ತಿಗೆ, ಜೀವ ವಿಜ್ಞಾನ, ಆಹಾರ ತಂತ್ರಜ್ಞಾನ ಹೀಗೆ ವಿವಿಧ ವಲಯಗಳ 125ಕ್ಕೂ ಮಿಕ್ಕಿ ಕಂಪೆನಿಗಳು ಇದರಲ್ಲಿ ಪಾಲ್ಗೊಳ್ಳಲಿವೆ. ಎಸ್ಸೆಸ್ಸೆಲ್ಸಿಯಿಂದ ಸ್ನಾತಕೋತ್ತರ ಪದವಿಯವರೆಗೆ ವಿದ್ಯಾರ್ಹತೆಯನ್ನು ಹೊಂದಿರುವ ಉದ್ಯೋಗಾಕಾಂಕ್ಷಿಗಳು ಇದರಲ್ಲಿ ಭಾಗವಹಿಸಿ ತಮ್ಮ ಜೀವನವನ್ನು ರೂಪುಗೊಳಿಸಬಹುದು. 5000ಕ್ಕೂ ಮಿಕ್ಕಿ ಉದ್ಯೋಗ ಆಕಾಂಕ್ಷಿಗಳು ಇದರಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದ್ದು ಈಗಾಗಲೇ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ಆ ದಿನ ಸ್ಥಳದಲ್ಲೇ ಹೆಸರನ್ನು ನೋಂದಾಯಿಸಲು ವ್ಯವಸ್ಥೆಯೂ ಇರುತ್ತದೆ. ಕಂಪೆನಿಗಳ ಆವಶ್ಯಕತೆಗೆ ತಕ್ಕಂತೆ ಕೊಠಡಿಗಳನ್ನು ಸಜ್ಜುಗೊಳಿಲಾಗುತ್ತಿದ್ದು, ಪೂರಕ ವ್ಯವಸ್ಥೆಗಳನ್ನು ಮಾಡುವ ಕಾರ್ಯ ಭರದಿಂದ ಸಾಗುತ್ತಿದೆ.

ಎಲ್ಲಾ ಉದ್ಯೋಗಾಕಾಂಕ್ಷಿಗಳು ಬೆಳಗ್ಗೆ 9 ಗಂಟೆಗೆ ಮುಂಚಿತವಾಗಿ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಹಾಜರಿದ್ದು ತಮ್ಮ ಪಾಲ್ಗೊಳ್ಳುವಿಕೆಯನ್ನು ಖಚಿತ ಪಡಿಸಿಕೊಳ್ಳುವ ಜತೆಗೆ ತಮ್ಮ ಆಯ್ಕೆಯ ಕಂಪೆನಿಗಳ ಸಂದರ್ಶನ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಪ್ರಯೋಜನ ಪಡೆದುಕೊಳ್ಳುವಂತೆ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್ ಪ್ರಕಟನೆಯಲ್ಲಿ ವಿನಂತಿಸಿದ್ದಾರೆ.



ಉದ್ಘಾಟನಾ ಸಮಾರಂಭ

ಫೆ.21ರಂದು ಬೆಳಗ್ಗೆ ಸಾವರ್ಕರ್ ಸಭಾಭವನದಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದ್ದು, ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಸ್ಪೀಕರ್ ಯು.ಟಿ. ಖಾದರ್ ಉಪಸ್ಥಿತಿಯಲ್ಲಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಚಿವ ಡಾ. ಶರಣ ಪ್ರಕಾಶ ಆರ್. ಪಾಟೀಲ್ ಗೌರವ ಉಪಸ್ಥಿತಿಯಲ್ಲಿ ಸಮಾರಂಭ ನಡೆಯಲಿದೆ. ಶಾಸಕ ಅಶೋಕ್ ಕುಮಾರ್ ರೈ ಅಧ್ಯಕ್ಷತೆ ವಹಿಸಲಿದ್ದಾರೆ. ದ.ಕ. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ರಾಜ್ಯಸಭೆಯ ಸಂಸದ ಡಾ. ವೀರೇಂದ್ರ ಹೆಗ್ಗಡೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು, ದಕ್ಷಿಣ ಕನ್ನಡದ ವಿವಿಧ ಕ್ಷೇತ್ರಗಳ ಶಾಸಕರು ಮತ್ತು ವಿಧಾನ ಪರಿಷತ್ತಿನ ಸದಸ್ಯರು ಹಾಗೂ ವಿವಿಧ ಅಕಾಡೆಮಿ ಅಧ್ಯಕ್ಷರು ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿರುತ್ತಾರೆ.

ಕಡೇಶಿವಾಲಯ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ಕ್ಷೇತ್ರ: ಧಾರ್ಮಿಕ ಕಾರ್ಯಕ್ರಮ



ಮಂಗಳೂರು: ಬಂಟ್ವಾಳ ತಾಲೂಕಿನ ಕಡೇಶಿವಾಲಯ ಮಹಾತೋಬಾರ ಶ್ರೀ ಚಿಂತಾಮಣಿಯ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಭಾನುವಾರ ಶಿವರಾತ್ರಿ ಪ್ರಯುಕ್ತ ನೀಲೇಶ್ವರ ಬ್ರಹ್ಮಶ್ರೀ ಉಚ್ಚಿಲಾಂತಾಯ ಪದ್ಮನಾಭ ತಂತ್ರಿಗಳ ಮಾರ್ಗದರ್ಶನದಲ್ಲಿ, ಗಣಪತಿ ಹೋಮ, ಶತ ರುದ್ರಾಭಿಷೇಕ, ರುದ್ರ ಹೋಮ, ರಾತ್ರಿ ಸಣ್ಣ ರಂಗಪೂಜೆ ನೆರವೇರಿತು.

ಶತ ರುದ್ರಾಭಿಷೇಕ, ಹಾಗೂ ರುದ್ರ ಹೋಮದ ವಿಧಿ ವಿಧಾನವನ್ನು ನೀಲೇಶ್ವರ ಉಚ್ಚಿಲಾಂತಾಯ ಪದ್ಮನಾಭ ತಂತ್ರಿಯವರ ನೇತೃತ್ವದ ವೈದಿಕ ತಂಡ ನಿರ್ವಹಿಸಿದ್ದರು.

ಸಣ್ಣ ರಂಗ ಪೂಜೆಯ ವಿಧಿ ವಿಧಾನಗಳನ್ನು ಕ್ಷೇತ್ರದ ತಂತ್ರಿ ಸುಬ್ರಮಣ್ಯ ಭಟ್ ಮುಂಗೂರು, ಹರಿಪ್ರಸಾದ್ ಭಟ್, ಅನಂತ ಪದ್ಮನಾಭ ಭಟ್ ಅವರ ವೈದಿಕ ತಂಡ ನೆರವೇರಿಸಿದರು. ಕಮಲಾ ಬಾಬು ನಾಯ್ಕ ಕುರುಂಬುಲಾಜೆ ಅವರಿಂದ ಸಮಾರಾಧನಾ ಸೇವೆ ಜರಗಿತು.

ಈ ಸಂದರ್ಭ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಪುರುಷೋತ್ತಮ್ ಶೆಟ್ಟಿ ನುಳಿಯಲು, ಸಮಿತಿಯ ಸದಸ್ಯ ಈಶ್ವರ ಪೂಜಾರಿ ಹಿರ್ತಡ್ಕ, ಚಿದಾನಂದ ಕಡೇಶಿವಾಲಯ, ಸತೀಶಚಂದ್ರ ಶೆಟ್ಟಿ ಬಾವಾಗುತ್ತು, ಡಿ. ಸಂಜೀವ ಪೂಜಾರಿ ದಾಸಕೋಡಿ, ಶೀನ ನಾಯ್ಕ ನೆಕ್ಕಿಲಾಡಿ ಶ್ರುತಿ ಹರೀಶ್ಚಂದ್ರ ಕಾಡಬೆಟ್ಟು, ಪ್ರೇಮಾ ಶಿವಪ್ರಸಾದ್ ಶೆಟ್ಟಿ ಮಿತ್ತಿಮಾರು, ಪ್ರಮುಖರಾದ ಹರಿಶ್ಚಂದ್ರ ಕಾಡಬೆಟ್ಟು, ನವೀನ್ ನಾಯ್ಕ ನೆಕ್ಕಿಲಾಡಿ, ಪ್ರದೀಪ್ ಕುಮಾರ್ ಶೆಟ್ಟಿ ಆಮೇಯಿ, ಕೂಸಪ್ಪ ಪೂಜಾರಿ ಪುನುಕೇದಡಿ, ನವೀನ್ ಶೆಟ್ಟಿ, ತಿರುಮಲೇಶ್ವರ ಭಟ್ ಕೈಂತಾಜೆ, ಸಾಂತಪ್ಪ ಪೂಜಾರಿ ಪಚ್ಚಡಿಬೈಲು, ವಿದ್ಯಾದರ್ ರೈ ಪೆರ್ಲಪು, ಬ್ರಿಜೇಶ್ ಜೈನ್, ಕೇಶವ ಸಪಲ್ಯ ಮತ್ತಿತರರು ಇದ್ದರು.

ಯೋಗ, ಪ್ರಾಣಾಯಾಮಗಳಿಂದ ರೋಗ ನಿಯಂತ್ರಣ: ಡಾ. ಶಾಂತಿಪ್ರಸಾದ್



ಬೆಳ್ತಂಗಡಿ: ಕಸ್ತೂರ ಬಾ ಮೆಡಿಕಲ್ ಕಾಲೇಜು, ಜ್ಯೋತಿ ಮಂಗಳೂರು (ಕೆಎಂಸಿ) ಇವರ ನುರಿತ ವೈದ್ಯರ ತಂಡದಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವು ಗುಂಡೂರಿಯ ಶ್ರೀ ಸತ್ಯನಾರಾಯಣ ಭಜನಾ ಮಂದಿರದಲ್ಲಿ ನಡೆಯಿತು.

ವೇಣೂರಿನ ವೈದ್ಯ ಡಾ. ಶಾಂತಿ ಪ್ರಸಾದ್ ಶಿಬಿರ ಉದ್ಘಾಟಿಸಿ, ಇದೊಂದು ಸಮಾಜಮುಖಿ ಕಾರ್ಯವಾಗಿದ್ದು, ಗ್ರಾಮೀಣ ಭಾಗದ ಜನತೆಗೆ ವರದಾನವಾಗಿದೆ. ಯೋಗ, ಪ್ರಾಣಾಯಾಮಗಳ ಹವ್ಯಾಸದಿಂದ ರೋಗಗಳನ್ನು ನಿಯಂತ್ರಿಸಲು ಸಾಧ್ಯವಿದೆ ಎಂದರು.

ಗುಂಡೂರಿ ಹಾಲು ಉತ್ಪಾದಕರ ಸಹಕಾರಿ ಸಂಘ ಹಾಗೂ ಶ್ರೀ ಸತ್ಯನಾರಾಯಣ ಭಜನಾ ಮಂದಿರದ ಅಧ್ಯಕ್ಷ ಪಿ. ರಮೇಶ್ ಪೂಜಾರಿ ಪಡ್ಡಾಯಿಮಜಲು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆರಂಬೋಡಿ ಗ್ರಾ.ಪಂ. ಅಧ್ಯಕ್ಷ ಪ್ರವೀಣ್ ಚಂದ್ರ ಜೈನ್, ಯುವ ಸೇವಾ ಸಂಗಮ ಸೇವಾ ಟ್ರಸ್ಟ್ ಅಧ್ಯಕ್ಷ ಕೆ. ವಿಜಯ ಗೌಡ, ವೇಣೂರು ಲಯನ್ಸ್ ಕ್ಲಬ್ ಅಧ್ಯಕ್ಷ ಸುಂಧೀರ್ ಭಂಡಾರಿ, ರೋಟರಿ ಕ್ಲಬ್ ಸಿದ್ದಕಟ್ಟೆ ಫಲ್ಗುಣಿ ಇದರ ಅಧ್ಯಕ್ಷ ದುರ್ಗಾದಾಸ್ ಶೆಟ್ಟಿ, ಗುಂಡೂರಿ ಹಾಲು ಉತ್ಪಾದಕರ ಸಹಕಾರಿ ಸಂಘದ ಮಾಜಿ ಅಧ್ಯಕ್ಷ ಕುಮಾರು ಹೆಗ್ಡೆ, ಒಕ್ಕೂಟದ ಅಧ್ಯಕ್ಷ ಸದಾನಂದ ಪೂಜಾರಿ, ಕೆಎಂಸಿ ಆಸ್ಪತ್ರೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಆರ್ಬರ್ಟ್ ಡಿಸೋಜ, ಸೇವಾಪ್ರತಿನಿಧಿ ಹರೀಶ್ ಪೂಜಾರಿ ಬಾಡಾರು, ಗುಂಡೂರಿ ಹಾಲು ಉತ್ಪಾದಕರ ಸಹಕಾರಿ ಸಂಘದ ಕಾರ್ಯದರ್ಶಿ ರಾಜು ಪೂಜಾರಿ ಉಪಸ್ಥಿತರಿದ್ದರು. ಹರೀಶ್ ಕುಮಾರ್ ಪೊಕ್ಕಿ ಸ್ವಾಗತಿಸಿ, ಪಿಡಿಒ ಗಣೇಶ್ ಶೆಟ್ಟಿ ನಿರೂಪಿಸಿ, ವಂದಿಸಿದರು. ಶಿಬಿರದಲ್ಲಿ ವಿಶೇಷವಾಗಿ ಕಣ್ಣು ಪರೀಕ್ಷೆ, ಕಿವಿ, ಮೂಗು, ಗಂಟಲು ಪರೀಕ್ಷೆ, ಮೂಳೆ ತಪಾಸಣೆ ಹಾಗೂ ಸಾಮಾನ್ಯ ರೋಗಗಳ ಜೊತೆ ಬಿಪಿ, ಶುಗರ್ ತಪಾಸಣೆ ನಡೆಸಿದರು.

ಆಮಂತ್ರಣ ಪತ್ರಿಕೆ ಬಿಡುಗಡೆ



ಬೆಳ್ತಂಗಡಿ: ತಾಲೂಕು ಕಣಿಯೂರು ಗ್ರಾಮದ ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದ ಬ್ರಹ್ಮಕಲದ ಆಮಂತ್ರಣ ಪತ್ರಿಕೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು ಗುರುವಾರ ಬಿಡುಗಡೆಗೊಳಿಸಿದರು.

ಈ ಸಂದರ್ಭ ಅನುವಂಶಿಯ ಮೊಕ್ತೇಸರ ಚಿದಾನಂದ ರಾವ್ ಕೊಲ್ಲಾಜೆ, ಆಡಳಿತ ಮಂಡಳಿ ಅಧ್ಯಕ್ಷ ಸದಾನಂದ ಮೇಲಾಂಟ ಮೊಗರೋಡಿ, ಆಡಳಿತ ಮಂಡಳಿ ಕಾರ್ಯದರ್ಶಿ ಜಿತೇಶ್ ಜೈನ್ ಅಡೆಂಜ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ರಘುಪತಿ ಭಟ್ ಅನಾಬೆ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಶಿವಶಂಕರ್ ನಾಯಕ್ ಮಾರುತಿಪುರ, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಪ್ರಫುಲ್ಲಚಂದ್ರ ಅಡ್ಯಂತಾಯ ಮೊಗರೋಡಿ, ಬ್ರಹ್ಮ ಕಲಶೋತ್ಸವ ಸಮಿತಿ ಕಾರ್ಯಧ್ಯಕ್ಷ ನಾರಾಯಣ ಗೌಡ ಮುಚ್ಚೂರು, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಿಠ್ಠಲ ಶೆಟ್ಟಿ ಕೊಲ್ಲೊಟ್ಟು, ಬ್ರಹ್ಮ ಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ದಿನೇಶ್ ಶೆಟ್ಟಿ ಮಲೆಂಗಲ್ಲು ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಫೆ.24: ನಾವೂರು ದೇವಳದಲ್ಲಿ ಬ್ರಹ್ಮರಥೋತ್ಸವ

ಬಂಟ್ವಾಳ: ನಾವೂರು ಗ್ರಾಮದ ಅಗ್ರಹಾರ ಬೀದಿ ಶ್ರೀ ಗೋಪಾಲಕೃಷ್ಣ ದೇವಳದ ಬ್ರಹ್ಮರಥೋತ್ಸವ ಫೆ.24ಕ್ಕೆ ನಡೆಯಲಿದೆ ಎಂದು ದೇವಳದ ಪ್ರಧಾನ ಅರ್ಚಕ ವೇ.ಮೂ. ಸುದರ್ಶನ್ ಬಲ್ಲಾಳ್ ತಿಳಿಸಿದ್ದಾರೆ. ರಥೋತ್ಸವದ ಪ್ರಯುಕ್ತ ಸಂಜೆ ಭಜನಾ ಸಂಕೀರ್ತನೆ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ರಾತ್ರಿ ನಾಟಕ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದ್ದಾರೆ.

ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲೋತ್ಸವದ ಪೂರ್ವಸಿದ್ಧತಾ ಸಭೆ

ಸಾರ್ಥಕ ಬ್ರಹ್ಮಕಲಶೋತ್ಸವಕ್ಕೆ ಅಣಿಯಾಗಲಿ: ಶಾಸಕ ಹರೀಶ್ ಪೂಂಜ

ಬೆಳ್ತಂಗಡಿ: ಮಾರ್ಚ್ 1ರಿಂದ 6ರವರೆಗೆ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳು, ಡಾ.ಡಿ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದೊಂದಿಗೆ ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ದೈವ, ಜನ, ಧನ ಬಲದೊಂದಿಗೆ ನಾವೆಲ್ಲರೂ ಒಗ್ಗೂಡಿ ನಮ್ಮೂರಿನ ದೇಗುಲದ ಉತ್ಸವನ್ನು ಯಶಸ್ವಿಗೊಳಿಸುವ ಮೂಲಕ ಸಾರ್ಥಕ ಬ್ರಹ್ಮಕಲಶೋತ್ಸವನ್ನು ನಡೆಸೋಣ ಎಂದು ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಶಾಸಕ ಹರೀಶ್ ಪೂಂಜ ಹೇಳಿದರು.

ಅವರು ಪದ್ಮುಂಜ ಸಿ.ಎ.ಬ್ಯಾಂಕ್ ಸಭಾಭವನದಲ್ಲಿ ಫೆ.14ರಂದು ನಡೆದ ಮಲೆಂಗಲ್ಲು ಶ್ರೀ ಉಮಾ ಮಹೇಶ್ವರ ದೇವಸ್ಥಾನದ ಬ್ರಹ್ಮಕಲೋತ್ಸವದ ಪೂರ್ವಸಿದ್ಧತಾ ಸಭೆಯಲ್ಲಿ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದರು.

ಭವ್ಯ ಹೊರೆಕಾಣಿಕೆ ಸಮರ್ಪಣೆಯೊಂದಿಗೆ, ನಗರ ಅಲಂಕಾರವು ಪತಾಕೆ, ದೀಪಾಲಂಕರ ಮೂಲಕ ಮಲೆಗಂಲ್ಲು ಜಗಮಗಗೊಂಡು ಆಕರ್ಷಿಸಬೇಕು. ಹಿರಿಯರಿಗೆ, ಮಹಿಳೆಯರಿಗೆ, ಅಶಕ್ತರಿಗೆ ಕುಳಿತು ಕೊಂಡು ಭೋಜನ ಸೇವನೆಗೆ ವ್ಯವಸ್ಥೆ ಕಲ್ಪಿಸಬೇಕು. ಆರು ದಿವಸವು ಒಂದೊಂದು ಬಗೆಯ ಹಣ್ಣಿನ ತಂಪು ಪಾನೀಯ, ಸ್ವಚ್ಛತೆಗೆ ಆದ್ಯತೆ ನೀಡುವ ಮೂಲಕ ಉತ್ಸವದ ರೂಪರೇಷೆಗಳನ್ನು ಅವರು ವಿವರಿಸಿದರು.



ಆಡಳಿತ ಮಂಡಳಿ ಅಧ್ಯಕ್ಷ ಸದಾನಂದ ಮೇಲಾಂಟ ಮೊಗರೋ ಮಾತನಾಡಿ, ಬ್ರಹ್ಮಕಲಶೋತ್ಸವಕ್ಕೆ ಇನ್ನೇನೂ 14 ದಿವಸಗಳಿವೆ ಅಷ್ಟರಲ್ಲಿ ನಮ್ಮ ಕೆಲಸಗಳು ವೇಗ ಪಡೆದುಕೊಳ್ಳಬೇಕು, ಆದ್ದರಿಂದ ನಾವೆಲ್ಲರೂ ಒಗ್ಗೂಡಿ ಕೆಲಸ ಮಾಡೋಣ ಎಂದರು.

ಕೊರಿಂಜ ಪಂಚಲಿಂಗೇಶ್ವರ ದೇವಸ್ಥಾನದ ಆಡಳಿತ ಮೊಕ್ತೆಸ ಯೋಗೀಶ್ ಪೂಜಾರಿ ಕಡ್ತಿಲ ಮಾತನಾಡಿ, ಮಲೆಂಗಲ್ಲು ಬ್ರಹ್ಮಕಲಶೋತ್ಸವ ನಡೆಯಲು ಶ್ರಮಿಸೋಣ ಎಂದು ಹೇಳಿದರು. ಅನುವಂಶೀಯ ಮೊಕ್ತೇಸರರು ಚಿದಾನಂದ ರಾವ್, ಜಿರ್ಣೋದ್ಧಾರ ಸಮಿತಿ ಅಧ್ಯಕ್ಷ ಶಿವಶಂಕರ್ ನಾಯಕ್, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಿಠಲ ಶೆಟ್ಟಿ ಕೊಲ್ಲೊಟ್ಟು, ಕೊರಿಂಜ ಪಂಚಲಿಂಗೇಶ್ವರ ದೇವಸ್ಥಾನದ ಆಡಳಿತ ಸಮಿತಿ ಮೊಕ್ತೇಸರ ಯೋಗೀಶ್ ಪೂಜಾರಿ ಕಡ್ತಿಲ, ಆಡಳಿತ ಮಂಡಳಿ ಕಾರ್ಯದರ್ಶಿ ಜಿತೇಶ್ ಜೈನ್ ಅಡೆಂಜ, ಜೀರ್ಣದ್ಧಾರ ಸಮಿತಿ ಕಾರ್ಯದರ್ಶಿ ಪ್ರವುಲ್ಲಚಂದ್ರ ಅಡ್ಯಂತಾಯ ಮೊಗರೋಡಿ, ಸಮಿತಿ ಪ್ರಧಾನ ಸಂಚಾಲಕ ಹರ್ಷ ಮೇಲಾಂಟ ಮೊಗರೋಡಿ, ಆಡಳಿತ ಮಂಡಳಿ ಕೋಶಾಕಾರಿ ರಕ್ಷಿತ್ ಪಣೆಕ್ಕರ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ನಾರಾಯಣ ಗೌಡ ಮುಚ್ಚೂರು, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ದಿನೇಶ್ ಶೆಟ್ಟಿ ಮಲೆಂಗಲ್ಲು, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ರಘುಪತಿ ಭಟ್, ಕೋಶಾಧಿ ಕಾರಿ ಉದಯ ಕುಮಾರ್ ಮೇಲಾಂಟ, ಕಣಿಯೂರು ಗ್ರಾಮ ಪಂಚಾಯತ್ ನಿಕಟಪೂರ್ವ ಅಧ್ಯಕ್ಷ ಸೀತರಾಮ ಮಡಿವಾಳ, ಕಣಿಯೂರು ವಲಯ ಒಕ್ಕೂಟದ ಅಧ್ಯಕ್ಷ ರಮಾನಂದ ಪೂಜಾರಿ ಸಹಿತ ಮತ್ತಿತರರು ಉಪಸ್ಥಿತರಿದ್ದರು.

ಸುತ್ತಮುತ್ತ

ಸಬಳೂರು ಶಾಲೆಯಲ್ಲಿ ಮೆಟ್ರಿಕ್ ಮೇಳ

ಆಲಂಕಾರು: ಕ್ಯೊಲ ಗ್ರಾಮದ ಸಬಳೂರು ಸರ್ಕಾರಿ ಉನ್ನತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗುರುವಾರ ಮೆಟ್ರಿಕ್ ಮೇಳ ನಡೆಯಿತು. ಕ್ಯೊಲ ಗ್ರಾಮ ಪಂಚಾಯತ್ ಅಧ್ಯಕ್ಷೆ ಪುಷ್ಪಾ ಸುಭಾಷ್ ಶೆಟ್ಟಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ಶೇಖರ ಗೌಡ ಕೊಲ್ಯ, ಉಪಾಧ್ಯಕ್ಷೆ ರಮಿತಾ ಚೆಕ್ಕಿತ್ತಡ್ಕ ಮತ್ತಿತರರು ಉಪಸ್ಥಿತರಿದ್ದರು. ಶಾಲಾ ಮುಖ್ಯ ಗುರು ವಾರಿಜಾ ಬಿ. ಸ್ವಾಗತಿಸಿ, ಶಿಕ್ಷಕಿ ಅಂಜನ ವಂದಿಸಿದರು. ಶಿಕ್ಷಕ ಶೇಖರ ಬಲ್ಯ ಕಾರ್ಯಕ್ರಮ ನಿರ್ವಹಿಸಿದರು. ಶಾಲೆಯಲ್ಲಿ ಪಠ್ಯೇತರ ಚಟುವಟಿಕೆಯ ಭಾಗವಾಗಿ ವಿದ್ಯಾರ್ಥಿಗಳಲ್ಲಿ ವ್ಯಾವಹಾರಿಕ ಜ್ಞಾನ ವೃದ್ಧಿಸಲು ಆಯೋಜಿಸಿದ ಮೆಟ್ರಿಕ್ ಮೇಳದಲ್ಲಿ ವಿದ್ಯಾರ್ಥಿಗಳು ಮನೆಯಿಂದ ತಂದ ತರಕಾರಿ, ಹಣ್ಣು ಹಂಪಲು, ಮನೆ ಉಪಯೋಗಿ ವಸ್ತುಗಳು, ತಂಪು ಪಾನಿಯಗಳು, ಉಪ್ಪಿನಕಾಯಿ, ತೆಂಗಿನಕಾಯಿ, ವೀಳ್ಯದೇಲೆ ಮೊದಲಾದುವುಗಳನ್ನು ಮಾರಾಟ ಮಾಡಿದರು. ಪೋಷಕರು, ಸ್ಥಳಿಯರು, ಶಿಕ್ಷಕರು ಗ್ರಾಹಕರಾಗಿದ್ದರು. ಶಾಲಾ ಆವರಣದಲ್ಲಿ ವ್ಯಾಪಾರ ಕೇಂದ್ರಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು.

ಕುಕ್ಕೆಯಲ್ಲಿ ಲಯನ್ ಅವಳಿ ಕ್ಲಬ್‌ಗಳ ಸ್ನೇಹ ಸಮ್ಮಿಲನ

ಸುಬ್ರಹ್ಮಣ್ಯ:ಸುಬ್ರಹ್ಮಣ್ಯ ಗ್ರಾ.ಪಂ. ಸಭಾಂಗಣದಲ್ಲಿ ಷಲಯನ್ಸ್ ಕ್ಲಬ್ ಕುಕ್ಕೆ ಸುಬ್ರಹ್ಮಣ್ಯ ಹಾಗೂ ಲಯನ್ಸ್ ಕ್ಲಬ್ ದೊಡ್ಡಬಳ್ಳಾಪುರದ ಸ್ನೇಹ ಸಮ್ಮಿಲನ ಟ್ವಿನ್ನಿಂಗ್ ಕಾರ್ಯಕ್ರಮ ನಡೆಯಿತು. ಲಯನ್ಸ್ ಕ್ಲಬ್‌ನ ಪ್ರಾಂತೀಯ ಅಧ್ಯಕ್ಷ ಪ್ರೊ. ರಂಗಯ್ಯ ಶೆಟ್ಟಿಗಾರ್ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ದೊಡ್ಡಬಳ್ಳಾಪುರ ಲಯನ್ಸ್ ಅಧ್ಯಕ್ಷ ಎಸ್.ವಿ. ನಂಜುಡೇಶ್ವರ ಸ್ವಾಮಿ, ಕಾರ್ಯದರ್ಶಿ ಹುಲಿಕಲ್ ನಟರಾಜ್, ಕೋಶಾಧಿಕಾರಿ ಎನ್. ಜಗದೀಶ್, ಕ್ಲಬ್‌ನ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಕೆ.ಎಂ. ಹನುಮಂತರಾಯಪ್ಪ ಮುಖ್ಯ ಅತಿಥಿಗಳಾಗಿದ್ದರು. ಲಯನ್ ಜಿಲ್ಲಾಧ್ಯಕ್ಷ ಎಂ.ಸಿ. ವೆಂಕಟೇಶ್, ಜಿಲ್ಲಾ ಪದಾಧಿಕಾರಿಗಳಾದ ಆರ್.ಎಸ್. ಮಂಜುನಾಥ್, ಸಿ.ಎಸ್. ರಾಜಶೇಖರ್, ಕುಕ್ಕೆ ಸುಬ್ರಹ್ಮಣ್ಯ ಲಯನ್ಸ್ ಅಧ್ಯಕ್ಷೆ ವಿಮಲಾ ರಂಗಯ್ಯ, ಕೋಶಾಧಿಕಾರಿ ಭಾರತಿ ದಿನೇಶ್, ಲಯನ್ಸ್ ಪದಾಧಿಕಾರಿಗಳಾದ ಮೋಹನ್ ದಾಸ್ ರೈ, ಪ್ರಕಾಶ್ ಶೆಟ್ಟಿ ಕುಂದಾಪುರ, ದಿನೇಶ್ ಮೊಗ್ರ, ದಿನೇಶ್ ಎಂ.ಪಿ. ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಲಯನ್ಸ್ ಪ್ರಾಂತೀಯ ಅಧ್ಯಕ್ಷ ಪ್ರೊ. ಕೆ. ರಂಗಯ್ಯ ಶೆಟ್ಟಿಗಾರ್, ಸುಬ್ರಹ್ಮಣ್ಯ ಲಯನ್ಸ್ ಅಧ್ಯಕ್ಷೆ ವಿಮಲಾ ರಂಗಯ್ಯ ಅವರನ್ನು ಸನ್ಮಾನಿಸಲಾಯಿತು.

ಎಡಮಂಗಲ ಕ್ಷೇತ್ರದಲ್ಲಿ ಜಾತ್ರಾ ಮಹೋತ್ಸವ

ಸುಬ್ರಹ್ಮಣ್ಯ: ಎಡಮಂಗಲದ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವವು ಐದು ದಿನಗಳ ಕಾಲ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ



ನೇತೃತ್ವದಲ್ಲಿ ನಡೆಯಿತು. ಮಂಗಳವಾರ ಬೆಳಗ್ಗೆ ಗಣಪತಿ ಹವನ, ಕಲಶ ಪೂಜೆ, ರುದ್ರಾಭಿಷೇಕ, ಕಲಶಾಭಿಷೇಕ, ಮಹಾಪೂಜೆ, ಮಂತ್ರಾಕ್ಷತೆ, ಪ್ರಸಾದ ವಿತರಣೆ, ಮಹಾ ಅನ್ನ ಸಂತರ್ಪಣೆ ನಡೆಯಿತು.

ಸೋಮವಾರ ಕವಾಟೋದ್ಘಾಟನೆ, ತೈಲಾಭಿಷೇಕ, ಪಂಚಾಮೃತಾಭಿಷೇಕ, ಶ್ರೀ ಎಲ್ಯಾರು ದೈವಗಳ ನೇಮ, ಮಿತ್ತೂರು ನಾಯರ್ ದೈವದ ನೇಮ, ರಾತ್ರಿ ಬಲಿ ಹೊರಟು ವಸಂತ ಕಟ್ಟೆಯಲ್ಲಿ ಸಾರ್ವಜನಿಕ ಕಟ್ಟೆಪೂಜೆ, ಬಿಲ್ವಪತ್ರೆ ಕಟ್ಟೆಯಲ್ಲಿ ಕಟ್ಟೆಪೂಜೆ ನಂತರ ನೂಚಿಲ ಶ್ರೀ ಗೋಪಾಲಕೃಷ್ಣ ದೇವರ ಸನ್ನಿಧಿಯಲ್ಲಿ ಕಟ್ಟೆಪೂಜೆ ಹಾಗೂ ಕುಮಾರಧಾರ ಭಂಡಾರಗಯದಲ್ಲಿ ಅವಭೃತಸ್ನಾನ ನಡೆಯಿತು.

ಬಳಿಕ ಧ್ವಜಾವರೋಹಣ ನೆರವೇರಿತು. ಭಾನುವಾರ ರಾತ್ರಿ ಉತ್ಸವ ಬಲಿಯೊಂದಿಗೆ ಕೋಲಾಟ, ಮಹಾರಥೋತ್ಸವ, ಪಾಟಾಳಿ ಕಟ್ಟೆ ಪೂಜೆ, ಮರೋಳಿ ಶ್ರೀ ಶಿರಾಡಿ ರಾಜನ್ ದೈವ ಮತ್ತು ಉದ್ರಾಂಡಿ ದೈವಗಳ ಓಲೆ ಸವಾರಿ, ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಕಟ್ಟೆಪೂಜೆ, ಶ್ರೀ ಭೂತಬಲಿ, ಮಹಾಶಿವರಾತ್ರಿ ಉತ್ಸವ ಮತ್ತು ಶ್ರೀ ದೇವರ ಶಯನೋತ್ಸವ ನೆರವೇರಿತು. ಶನಿವಾರ ಬೆಳಗ್ಗೆ ಶ್ರೀ ದೇವರ ದರ್ಶನ ಬಲಿ, ಬಟ್ಟಲು ಕಾಣಿಕೆ, ಮಹಾಪೂಜೆ, ಪ್ರಸಾದ ವಿತರಣೆ, ರಾತ್ರಿ ವಸಂತ ಕಟ್ಟೆ ಪೂಜೆ, ಶುಕ್ರವಾರ ಬೆಳಗ್ಗೆ ಹಸಿರು ಕಾಣಿಕೆ ಶೋಭಾಯಾತ್ರೆ, ರಾತ್ರಿ ಬಲಿ ಹೊರಟು ಉತ್ಸವ ಮತ್ತು ಮಾಲೆಂಗ್ರಿ ಪಿಲಿಕುಂಜ ಸ್ಥಾನದಿಂದ ಶ್ರೀ ಮಹಾಲಿಂಗರಾಯ ದೈವದ ಭಂಡಾರ ಬಂದು ಓಲೆ ಸವಾರಿ, ಹೊಸಮಜಲು ಕಟ್ಟೆಪೂಜೆ, ಶ್ರೀ ನೇಲ್ಯಾರು ನೇಮ ಹಾಗೂ ಉಳ್ಳಾಲ್ತಿ ನೇಮ ನಡೆಯಿತು. ಗುರುವಾರ ಧ್ವಜಾರೋಹಣ, ರಂಗಪೂಜೆ, ಬಲಿ ಹೊರಟು ಉತ್ಸವ, ಮಹಾಪೂಜೆ ನೆರವೇರಿತು.

ಮಂಗಳೂರು, ಬಂಟ್ವಾಳದಲ್ಲಿ ಬಿಜೆಪಿಯಿಂದ ಜನಜಾಗೃತಿ ಜಾಥಾ | ಸತೀಶ್ ಕುಂಪಲ ಹೇಳಿಕೆ

ವಿನಾಕಾರಣ ಕಾಂಗ್ರೆಸ್ ವಿಬಿ ಜಿ ರಾಮ್ ಜಿ ಕಾಯ್ದೆಗೆ ವಿರೋಧ





ಮಂಗಳೂರು/ಬಂಟ್ವಾಳ: ಕೇಂದ್ರ ಸರಕಾರದ ವಿಬಿ ಜಿ ರಾಮ್ ಜಿ ಕಾಯ್ದೆಯ ಬಗ್ಗೆ ಜನಜಾಗೃತಿ ಮೂಡಿಸುವ ಅಂಗವಾಗಿ ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲ ವತಿಯಿಂದ ಮ.ನ.ಪಾ ಕಚೇರಿವರೆಗೆ ಹಾಗೂ ಬಿಜೆಪಿ ಬಂಟ್ವಾಳ ಮಂಡಲದ ವತಿಯಿಂದ ಬಿ.ಸಿ.ರೋಡಿನಲ್ಲಿ ಕಾಲ್ನಡಿಗೆ ಜಾಥಾ ನಡೆಯಿತು.

ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲ

ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲ ವತಿಯಿಂದ ಕೇಂದ್ರ ಸರಕಾರದ ವಿಬಿ ಜಿ ರಾಮ್ ಜಿ ಕಾಯ್ದೆಯ ಬಗ್ಗೆ ಜನಜಾಗೃತಿ ಹಾಗೂ ರಾಜ್ಯದಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತಕ್ಕಾಗಿ ಬಿಜೆಪಿ ಜಿಲ್ಲಾ ಕಚೇರಿ ಬಳಿಯಿಂದ ಮ.ನ.ಪಾ ಕಚೇರಿ ವರೆಗೆ ಬೃಹತ್ ಕಾಲ್ನಡಿಗೆ ಜಾಥಾ ಬುಧವಾರ ನಡೆಯಿತು.

ಈ ವೇಳೆ ಮಾತಾಡಿದ ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಸ್ವತಃ ರಾಜೀವ್ ಗಾಂಧಿಯೇ ತಮ್ಮ ಸರಕಾರ ಒಂದು ರೂಪಾಯಿ ಕೊಟ್ಟರೆ ಅದರಲ್ಲಿ ಕೆಲವೇ ಪೈಸೆ ಮಾತ್ರ ಜನರಿಗೆ ತಲುಪುತ್ತದೆ ಎಂದು ಹೇಳಿ ವೈಫಲ್ಯ ವ್ಯಕ್ತಪಡಿಸಿದ್ದರು. ಆದರೆ ಈಗ ಒಂದೇ ಒಂದು ರೂಪಾಯಿ ಭ್ರಷ್ಟಾಚಾರಕ್ಕೂ ಆಸ್ಪದವಿಲ್ಲದೇ ನರೇಂದ್ರ ಮೋದಿ ಸರ್ಕಾರ ಆಡಳಿತ ನಡೆಸುತ್ತಿದೆ. ಅದರ ಮುಂದುವರಿದ ಭಾಗವೇ ವಿಬಿ ಜಿ ರಾಮ್ ಜಿ. ವಿಧಿಯಿಲ್ಲದೇ ಕಾಂಗ್ರೆಸ್ ವಿರೋಧ ಮಾಡುತ್ತಿದೆ ಅಷ್ಟೇ ಎಂದರು.

ಶಾಸಕ ವೇದವ್ಯಾಸ ಕಾಮತ್ ಮಾತನಾಡಿ, ವಿಬಿ-ಜಿ ರಾಮ್ ಜಿ ಕಾಯ್ದೆ ಮೂಲಕ ಬಡವರಿಗೆ ದುಡಿಯಲು ಹೆಚ್ಚಿನ ಅವಕಾಶ ನೀಡಿದರೂ ಕಾಂಗ್ರೆಸ್ಸಿಗರು ವಿರೋಧಿಸುತ್ತಿದ್ದಾರೆ ಎಂದರೆ ಅವರ ಉದ್ದೇಶ ಬೇರೆ ಏನೋ ಇದೆ. ದುಡಿಯುವ ದಿನವನ್ನು 100 ರಿಂದ 125ಕ್ಕೆ ಏರಿಸಿದ್ದು ತಪ್ಪಾ ? ಇದರಿಂದ ಕಾಂಗ್ರೆಸ್ಸಿಗೆ ಏನು ತೊಂದರೆ? ಬಡ ಜನರ ಅಭಿವೃದ್ಧಿಗಾಗಿರುವ ವಿಬಿ-ಜಿ ರಾಮ್ ಜಿ ಯೋಜನೆ ವಿರುದ್ದ ಸುಳ್ಳು ಸುದ್ದಿ ಹಬ್ಬಿಸುವ ಕಾಂಗ್ರೆಸ್ಸಿಗರನ್ನು ನಂಬದಿರೋಣ. ಮನರೇಗಾ ಹೆಸರಿನಲ್ಲಿ ಸಾವಿರಾರು ಕೋಟಿ ಭ್ರಷ್ಟಾಚಾರವಾಗಿದೆ. ಇನ್ನು ಮೇಲೆ ಅದಕ್ಕೆ ಅವಕಾಶವಿಲ್ಲದಿರುವುದೇ ಕಾಂಗ್ರೆಸ್ಸಿಗರ ಅಸಹನೆಗೆ ಕಾರಣವಾಗಿದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ಜನರು ರೋಸಿ ಹೋಗಿದ್ದು, ಇ -ಖಾತಾ ಸಿಗದೇ, ಜೈಲ್ ಜಾಮರ್‌ನಿಂದ ಜನರು ತೊಂದರೆ ಅನುಭವಿಸುತ್ತಿರುವಾಗ, ಕೆಂಪು ಕಲ್ಲು- ಮರಳು ಸಿಗದೇ ಒದ್ದಾಡುತ್ತಿದ್ದಾಗ ಈ ಕಾಂಗ್ರೆಸ್‌ನವರು ಪಾದಯಾತ್ರೆ ಮಾಡಿದ್ರಾ? ಪ್ರಿಯಾಂಕ್ ಖರ್ಗೆ ನಮ್ಮ ಕರಾವಳಿ ಬಗ್ಗೆ ಹೇಳಿಕೆ ನೀಡುವ ಮೊದಲು ಅವರ ಜಿಲ್ಲೆಗಿಂತ ನಮ್ಮ ಈ ಭಾಗ ಎಷ್ಟು ಮುಂದುವರಿದಿದೆ ಎಂಬುದನ್ನು ತಿಳಿದುಕೊಳ್ಳಲಿ. ಐಟಿ, ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಈ ಭಾಗ ನೀಡಿದ ಕೊಡುಗೆಯನ್ನು ಅರಿಯಲಿ ಎಂದು ಹೇಳಿದರು. ಪ್ರಮುಖರಾದ ರಮೇಶ್ ಕಂಡೆಟ್ಟು, ರಮೇಶ್ ಹೆಗ್ಡೆ, ಲಲ್ಲೇಶ್ ಕುಮಾರ್, ತಿಲಕ್ ರಾಜ್ ಕೃಷ್ಣಾಪುರ, ಪೂರ್ಣಿಮಾ ಎಂ., ಸಂಜಯ್ ಪ್ರಭು, ಶಾನವಾಜ್, ಜಗನ್ನಾಥ್, ಸುಧೀರ್ ಶೆಟ್ಟಿ ಕಣ್ಣೂರು, ನಂದನ್ ಮಲ್ಯ, ವಸಂತ್ ಜೆ.ಪೂಜಾರಿ, ರವಿಶಂಕರ್ ಮಿಜಾರ್, ನಿತಿನ್ ಕುಮಾರ್, ವಿಜಯ್ ಕುಮಾರ್ ಶೆಟ್ಟಿ, ಅಶ್ವಿತ್ ಕೊಟ್ಟಾರಿ, ರಾಜಗೋಪಾಲ್ ರೈ, ನಿಕಟಪೂರ್ವ ಪಾಲಿಕೆ ಸದಸ್ಯರುಗಳು, ಬಿಜೆಪಿ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಬಿಜೆಪಿ ಬಂಟ್ವಾಳ ಮಂಡಲ

ನರೇಗಾ ಯೋಜನೆ ಹೆಸರನ್ನು ಹಲವು ಬಾರಿ ಪರಿವರ್ತಿಸಲಾಗಿದ್ದು, ನರೇಗಾದಲ್ಲಿರುವ ಲೋಪಗಳನ್ನು ನಿವಾರಿಸಿ ಯೋಜನೆ ಪರಿಷ್ಕರಿಸಲಾಗಿದೆ. 100 ದಿನ ಇದ್ದ ಉದ್ಯೋಗ 125 ದಿನಕ್ಕೆ ಹೆಚ್ಚಿಸಿರುವುದು ಲಾಭನಾ? ನಷ್ಟನಾ ಎಂದು ಜನರು ತಿಳಿದುಕೊಳ್ಳಬೇಕಾಗಿದೆ ಎಂದು ಬಂಟ್ವಾಳ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು ಹೇಳಿದರು.

ಅವರು ಬಿಜೆಪಿ ಬಂಟ್ವಾಳ ಮಂಡಲದ ವತಿಯಿಂದ ಹಮ್ಮಿಕೊಳ್ಳಲಾದ ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿನ ಭ್ರಷ್ಟಾಚಾರವನ್ನು ತೊಡೆದು ಹಾಕಲು ಹಾಗೂ ಕೇಂದ್ರ ಸರಕಾರದ ಹೊಸ ಕಾಯ್ದೆಯ ಬಗ್ಗೆ ಜನಜಾಗೃತಿ ಮೂಡಿಸಲು ಬುಧವಾರ ಬಿ.ಸಿ.ರೋಡಿನಲ್ಲಿ ಹಮ್ಮಿಕೊಳ್ಳಲಾದ ಪಾದಯಾತ್ರೆಯಲ್ಲಿ ಭಾಗವಹಿಸಿ ಬಳಿಕ ನಡೆದ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಕಾಯ್ದೆಗೆ ತಿದ್ದುಪಡಿ ತಂದು ಗ್ರಾಮೀಣ ಭಾಗದ ಜನರಿಗೆ ಉದ್ಯೋಗದ ಜೊತೆಗೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದೇ ಕೇಂದ್ರ ಸರಕಾರದ ಗುರಿಯಾಗಿದೆ ಎಂದ ಅವರು ಕರ್ನಾಟಕ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದಿದೆ. ಕೇಂದ್ರದ ಸರಕಾರದ ಯೋಜನೆಗಳಿಗೆ ಅಸಹಕಾರವನ್ನು ನೀಡುತ್ತಿದೆ ಎಂದು ಆರೋಪಿಸಿದರು.

ಬಂಟ್ವಾಳ ವಿಧಾನ ಸಭಾ ಕ್ಷೇತ್ರದ ಬಹುತೇಕ ಗ್ರಾ.ಪಂ.ಗಳಲ್ಲಿ ಜಿ.ರಾಮ್ ಜಿ.ಕಾಯ್ದೆಯ ಪರವಾಗಿ ನಿರ್ಣಯ ಮಾಡಿ ಸರಕಾರಕ್ಕೆ ಕಳುಹಿಸಿರುವುದು ಸಂತಸದ ವಿಚಾರವಾಗಿದೆ. ಮುಂದಿನ ದಿನಗಳಲ್ಲಿ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲು ಹೊಸ ಕಾಯ್ದೆಯ ಮೂಲಕ ಗ್ರಾಮೀಣ ಜನರಿಗೆ ಸಿಗುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡಲಾಗುವುದು ಎಂದು ಹೇಳಿದರು.

ಹತಾಶೆಯಿಂದ ವಿರೋಧ

ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್ ಮಾತನಾಡಿ, ಹತಾಶೆ ಭಾವನೆಯಿಂದ ಕಾಂಗ್ರೆಸ್ ಪಕ್ಷ ಜಿ.ರಾಮ್.ಜಿ.ಯನ್ನು ವಿರೋಧಿಸುತ್ತಿದ್ದು, ಮುಖ್ಯಮಂತ್ರಿ ಸ್ಥಾನದ ಬಗ್ಗೆ ಚರ್ಚೆಯಾಗುತ್ತಿದ್ದು ಕುರ್ಚಿಯನ್ನು ಉಳಿಸಿಕೊಳ್ಳಲು ಅಭಿಯಾನದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ಇದಕ್ಕೂ ಮೊದಲು ಬಿ.ಸಿ.ರೋಡಿನ ಕೈಕಂಬ ಪೊಳಲಿ ದ್ವಾರದಿಂದ ಬಿ.ಸಿ.ರೋಡಿನ ಮೇಲ್ಸೇತುವೆ ತಳಭಾಗದಲ್ಲಿ ಸಂಪನ್ನಗೊಂಡಿತು. ಬಿಜೆಪಿ ಬಂಟ್ವಾಳ ಮಂಡಲದ ಅಧ್ಯಕ್ಷ ಆರ್.ಚೆನ್ನಪ್ಪ ಕೋಟ್ಯಾನ್ ,ಮಾಜಿ ಶಾಸಕ ಪದ್ಮನಾಭ ಕೊಟ್ಟಾರಿ,ಪಕ್ಷದ ಪ್ರಮುಖರಾದ ಸುದರ್ಶನ ಬಜ,ಶಿವಪ್ರಸಾದ್ ಶೆಟ್ಟಿ ದಿನೇಶ್ ಅಮ್ಟೂರು, ಮಾದವ ಮಾವೆ,ಸುಲೋಚನ ಜಿ.ಕೆ.ಭಟ್, ಸಂದೇಶ್ ಶೆಟ್ಟಿ, ರವೀಂದ್ರ ಕಂಬಳಿ, ತುಂಗಪ್ಪ ಬಂಗೇರ, ಡೊಂಬಯ್ಯ ಅರಳ, ರಾಮ್ ದಾಸ ಬಂಟ್ವಾಳ, ಪ್ರಭಾಕರ ಪ್ರಭು, ಪುರುಷೋತ್ತಮ ಶೆಟ್ಟಿ, ಕಮಲಾಕ್ಷಿ ಪೂಜಾರಿ, ದಿನೇಶ್ ಶೆಟ್ಟಿ ದಂಬೆ, ದಿನೇಶ್ ಭಂಡಾರಿ, ಪುರುಷೋತ್ತಮ ಸಾಲಿಯಾನ್, ಹರೀಶ್ ಆಚಾರ್ಯ, ಹರ್ಷಿಣಿ, ರವೀಶ್ ಶೆಟ್ಟಿ, ಆನಂದ ಶಂಭೂರು, ಪುರಸಭಾ ಸದಸ್ಯರು, ಗ್ರಾ.ಪಂ. ಅಧ್ಯಕ್ಷರುಗಳು, ಸದಸ್ಯರುಗಳು ಉಪಸ್ಥಿತರಿದ್ದರು.

ಮರೋಳಿ ಅಲಂಗಾರು ದೈವಸ್ಥಾನದ ಪ್ರತಿಷ್ಠಾ ಮಹೋತ್ಸವದ ಸಂಭ್ರಮ

ಫೆ.21ರಿಂದ ಎರಡು ದಿನ ವಿವಿಧ ಕಾರ್ಯಕ್ರಮ

ಮಂಗಳೂರು: ನಗರದ ಮರೋಳಿ ಅಲಂಗಾರು ಶ್ರೀ ಜ್ವಾಲಾ ಮಹಮ್ಮಾಯಿ ಕಾಲ ಭೈರವ ದೇವಸ್ಥಾನದಲ್ಲಿ ಶ್ರೀ ಜ್ವಾಲಾ ಮಹಮ್ಮಾಯಿ – ಕಾಲಭೈರವ ದೇವರ ಹಾಗೂ ಪರಿವಾರ ದೈವಗಳ ಪ್ರತಿಷ್ಠಾ ಮಹೋತ್ಸವ ಫೆ.21 ಹಾಗೂ 22ರಂದು ನಡೆಯಲಿದೆ.

ಫೆ.21ರಂದು ಬೆಳಗ್ಗೆ 7.30ಕ್ಕೆ ತಂತ್ರಿಗಳ ಆಗಮನ, 8.30ಕ್ಕೆ ಪ್ರಾರ್ಥನೆ, ಮಹಾ ಗಣಪತಿ ಹೋಮ, ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಸಂಜೆ 5ಕ್ಕೆ ಗುರುಗಳ ಆಗಮನ, ಸಂಜೆ 6ಕ್ಕೆ ಕಾಲಭೈರವ ದೇವರ ಹಾಗೂ ಶ್ರೀ ಜ್ವಾಲಾ ಮಹಮ್ಮಾಯಿ ದೇವಿಯ ಮೂರ್ತಿ ಪ್ರತಿಷ್ಠಾಪನೆ, ರಾತ್ರಿ 9ಕ್ಕೆ ಶ್ರೀ ಕಾಲಭೈರವ ಅಘೋರ ಹೋಮ, ಶ್ರೀ ಜ್ವಾಲಾ ಮಹಮ್ಮಾಯಿ ಶಕ್ತಿಹೋಮ ನೆರವೇರಲಿದೆ ಎಂದು ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ವಾಸುದೇವ ಮರೋಳಿ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಫೆ.22ರಂದು ಬೆಳಗ್ಗೆ 7ಕ್ಕೆ ರೂಟ್‌ಪೂಜೆ, ಶ್ರೀ ಕಾಲಭೈರವ ದೇವರ ಮತ್ತು ಶ್ರೀ ಜ್ವಾಲ ಮಹಮ್ಮಾಯಿ ದೇವಿಗೆ ಪಂಚಾಮೃತ ಅಭಿಷೇಕ, ಕುಂಭಾಭಿಷೇಕ ಮತ್ತು ಪ್ರಾಣ ಪ್ರತಿಷ್ಠೆ 7.40ಕ್ಕೆ ದೇವತಾ ಪ್ರತಿಷ್ಠೆ 11.58ಕ್ಕೆ ಜೀವ ಕಲಶಾಭಿಷೇಕ, ಪ್ರಾಣ ಪ್ರತಿಷ್ಠೆ ಮಹಾಪೂಜೆ, ಸಂಜೆ 5.30ಕ್ಕೆ ದೈವಗಳಿಗೆ ಪರ್ವ ನಡೆಯಲಿದೆ. ಸಂಜೆ 6.30ಕ್ಕೆ ಕದ್ರಿ ಯೋಗೇಶ್ವರ ಮಠದ ಶ್ರೀ ರಾಜಯೋಗಿ ನಿರ್ಮಲ್‌ನಾಥ್ ಜೀ ಅವರ ಸಾನಿಧ್ಯದಲ್ಲಿ ನಡೆಯುವ ಧಾರ್ಮಿಕ ಸಭೆಯಲ್ಲಿ ವಿಜಯಪುರದ ಶ್ರೀ ಗುರು ಗೋರಕ್ಷನಾಥ ಮಠದ ಶ್ರೀ ಯೋಗಿ ಅಘೋರಿಬಾಬ ನಿವೃತ್ತಿನಾಥ್‌ಜೀ, ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರದ ಯೋಗೀಶ್ವರ ಸಿದ್ಧಮಠದ ಅವಧೂತ್ ಶ್ರೀ ಪೀರ್ ರಾಜೇಶ್ ನಾಥ್ ಗುರೂಜಿ ಆಶೀರ್ವಚನ ನೀಡುವರು. ಡಾ. ಶ್ರೀನಿವಾಸ ಭಟ್ ಧಾರ್ಮಿಕ ಉಪನ್ಯಾಸ ನೀಡುವರು. ಕೆ.ಪಿ. ಶೆಟ್ಟಿ ಮೊಡಂಕಾಪುಗುತ್ತು ಅಧ್ಯಕ್ಷತೆವಹಿಸುವರು. ಶಾಸಕ ವೇದವ್ಯಾಸ ಕಾಮತ್, ಗಣ್ಯರು ಭಾಗವಹಿಸುವರು ಎಂದರು.

ಪ್ರಚಾರ ಸಮಿತಿ ಸದಸ್ಯ ಪ್ರಕಾಶ್ ಕೋಟ್ಯಾನ್ ಮಾತನಾಡಿ, ಅಷ್ಟಮಂಗಳ ಪ್ರಶ್ನೆಯಲ್ಲಿ ಕಂಡುಬಂದ ದೋಷ ಪರಿಹಾರಗಳನ್ನು ನೆರವೇರಿಸಿ, ಎರಡು ತಿಂಗಳ ಹಿಂದೆ ದೇವಸ್ಥಾನದ ಶಿಲಾನ್ಯಾಸ ನಡೆದಿತ್ತು. 2 ತಿಂಗಳ ಅವಧಿಯಲ್ಲಿ 75 ಲಕ್ಷ ರೂ. ವೆಚ್ಚದಲ್ಲಿ ದೇಗುಲವನ್ನು ನಿರ್ಮಿಸಲಾಗಿದೆ. ನಾಥ ಪಂಥದ ದೇವಸ್ಥಾನ ಇದಾಗಿದೆ ಎಂದರು.

ಆಡಳಿತ ಮಂಡಳಿ ಅಧ್ಯಕ್ಷ ಶರತ್ ಕುಮಾರ್ ಅಲಂಗಾರ್, ಜೀರ್ಣೋದ್ಧಾರ ಸಮಿತಿ ಜತೆ ಕಾರ್ಯದರ್ಶಿ ನಮಿತಾ ರಾಕೇಶ್, ಪ್ರಚಾರ ಸಮಿತಿ ಸದಸ್ಯರಾದ ಸತೀಶ್ ಡಿ., ನವೀನ್, ರೋಹಿತ್ ಮರೋಳಿ ಉಪಸ್ಥಿತರಿದ್ದರು.

ಕಾರ್ಕಳದಲ್ಲಿ ಶಿಲಾನ್ಯಾಸ ನೆರವೇರಿಸಿ ಸಂಸದ ಶ್ರೀನಿವಾಸ ಪೂಜಾರಿ ಮಾಹಿತಿ

9 ಆಯುಷ್ಮಾನ್ ಭಾರತ್ ಕಟ್ಟಡ ಮಂಜೂರಾತಿ



ಕಾರ್ಕಳ: ಕೇಂದ್ರ ಸರಕಾರದ ಹಣಕಾಸು ನೆರವಿನ ಮೂಲಕ ಆಯುಷ್ಮಾನ್ ಭಾರತ್ ಯೋಜನೆಯಡಿ ತಲಾ 65 ಲಕ್ಷ ವೆಚ್ಚದಲ್ಲಿ 9 ಆಯುಷ್ಮಾನ್ ಆರೋಗ್ಯ ಘಟಕ ಮಂಜೂರಾಗಿದೆ ಇದರಿಂದ ಕಾರ್ಕಳ ಕ್ಷೇತ್ರಕ್ಕೆ ಸುಮಾರು 6 ಕೋಟಿ ರೂ. ಬಿಡುಗಡೆಯಾಗಲಿದೆ ಎಂದು ಉಡುಪಿ ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.

ಸಂಸದ ಕೋಟ, ಕಾರ್ಕಳ ತಾಲೂಕಿನ ಕಡ್ತಲ ಗ್ರಾ.ಪಂ. ವ್ಯಾಪ್ತಿಯಲ್ಲಿ ನೂತನ ಆಯುಷ್ಮಾನ್ ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿಸಿ, ಮಾತಾನಾಡಿದರು.

ಕೇಂದ್ರ ಸರಕಾರದ ಹಲವಾರು ಯೋಜನೆಗಳು ಜನಸಾಮಾನ್ಯರಿಗೆ ತಲುಪಿಸಬೇಕಾದ ಹೊಣೆ ಜನಪ್ರತಿನಿಧಿಗಳಾದ ನಮ್ಮೆಲ್ಲರ ಕರ್ತವ್ಯ. ದುರಾದೃಷ್ಟಕ್ಕೆ 70 ವರ್ಷ ಮೇಲ್ಪಟ್ಟ ಹಿರಿಯರಿಗೆ ಕೇಂದ್ರ ಸರಕಾರದ ನೆರವಿನ ಆಯುಷ್ಮಾನ್ ಭಾರತ್ ಯೋಜನೆಯನ್ನು ರಾಜ್ಯ ಸರಕಾರ ಇನ್ನೂ ಪ್ರಾರಂಭಿಸಿಲ್ಲ, ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ 1 ಕುಟುಂಬಕ್ಕೆ 5 ಲಕ್ಷ ರೂಪಾಯಿ ಆರ್ಥಿಕ ಆರೋಗ್ಯ ನೆರವಿನ ಯೋಜನೆ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಬೆಡ್ ಇಲ್ಲ ಎಂಬ ಕಾರಣಕ್ಕೆ ರೋಗಿಯನ್ನು ವಾಪಸ್ ಕಳುಹಿಸುತ್ತಿವೆ. ಕೇಂದ್ರದ ಶಸ್ತ್ರಚಿಕಿತ್ಸಾ ದರ ರಾಜ್ಯ ಸರ್ಕಾರ ನೀಡುತ್ತಿಲ್ಲ ಎಂದು ಖಾಸಗಿ ಆಸ್ಪತ್ರೆ ವಲಯ ದೂರುತ್ತಿವೆ, ಆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಆಯುಷ್ಮಾನ್ ಭಾರತ್ ನಂತಹ ಬಡವರ ಪರ ಯೋಜನೆಗಳು ಅನುಷ್ಠಾನ ಮಾಡಲು ಆಗ್ರಹಿಸಿದ್ದೇನೆ ಎಂದು ಕೋಟ ಶ್ರೀನಿವಾಸ ಪೂಜಾರಿ ವಿವರಿಸಿದರು.

ಕಾರ್ಕಳ ಶಾಸಕ ಸುನೀಲ್ ಕುಮಾರ್, ಆಯುಷ್ಮಾನ್ ಭಾರತ್ ಯೋಜನೆಯ ಮೂಲಕ ಕಾರ್ಕಳ ಕ್ಷೇತ್ರಕ್ಕೆ ಮಂಜೂರಾಗಿರುವ ಆರೋಗ್ಯ ಘಟಕಗಳನ್ನು ಕ್ಲಪ್ತ ಸಮಯದಲ್ಲಿ ಮುಗಿಸಲು ಇಲಾಖಾಧಿಕಾರಿಗಳಿಗೆ ಸಲಹೆ ನೀಡಿದರು, ಸಭೆಯಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರ ಸಹಿತ ಅನೇಕ ಮುಖಂಡರು ಉಪಸ್ಥಿತರಿದ್ದರು.

ಪುತ್ತೂರು: ಪ್ರಚಾರ ಸಮಿತಿಯ ಪದಗ್ರಹಣ



ಪುತ್ತೂರು: ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ (ಗ್ರಾಮಾಂತರ) ಪ್ರಚಾರ ಸಮಿತಿಯ ಪದಗ್ರಹಣ ಸಮಾರಂಭವು ಸೋಮವಾರ ಪುತ್ತೂರು ಜೈನ ಭವನದಲ್ಲಿ ನಡೆಯಿತು.

ಮಾಜಿ ಸಚಿವ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ ಕುಮಾರ್ ಸೊರಕೆ ಭಾಗವಹಿಸಿ, ಕಾಂಗ್ರೆಸ್ ಪಕ್ಷವನ್ನು ಸೈದ್ಧಾಂತಿಕವಾಗಿ ಕಟ್ಟುವ ಕೆಲಸವೂ ಆಗಬೇಕು. ಬಾಬಾ ಸಾಹೇಬ್ ಅಂಬೇಡ್ಕರ್ ನೀಡಿದ ಸಂವಿಧಾನವೇ ಕಾಂಗ್ರೆಸ್ ಸಿದ್ಧಾಂತವೂ ಆಗಿದೆ. ಪಕ್ಷದ ಸಿದ್ಧಾಂತ ಮತ್ತು ಇತಿಹಾಸವನ್ನು ಗಟ್ಟಿಯಾಗಿ ಜನಮಾನಸದಲ್ಲಿ ಬೇರೂರುವಂತೆ ಮಾಡುವ ಕೆಲಸವಾಗಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಅಶೋಕ್ ರೈ ಮಾತನಾಡಿದರು. ಕೆಪಿಸಿಸಿ ಪ್ರಚಾರ ಸಮಿತಿ ಉಪಾಧ್ಯಕ್ಷ ಮುನೀರ್ ಜನ್ಸಾಲೆ ಮತ್ತು ಕೆಪಿಸಿಸಿ ಪ್ರಚಾರ ಸಮಿತಿ ಮುಖ್ಯ ಸಂಯೋಜಕ ಸುರೇರ್ ಕುಮಾರ್ ಮರೋಳಿ ಮುಖ್ಯ ಭಾಷಣ ಮಾಡಿದರು. ಮಾಜಿ ಸಚಿವ ಬಿ.ರಮಾನಾಥ ರೈ, ಪುತ್ತೂರು ಬ್ಲಾಕ್ ಅಧ್ಯಕ್ಷ ಕೃಷ್ಣ ಪ್ರಸಾದ್ ಆಳ್ವ ಪ್ರಾಸ್ತಾವಿಕ ಭಾಷಣ ಮಾಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್ ಶುಭ ಕೋರಿದರು. ಮಾಜಿ ಶಾಸಕ ಜೆ.ಆರ್. ಲೋಬೋ, ಮುಖಂಡರಾದ ಎಂ.ಎಸ್. ಮಹಮ್ಮದ್, ಭರತ್ ಮುಂಡೋಡಿ, ಶಾಹುಲ್ ಹಮೀದ್, ಜೋನಿ ಕಲ್ಲುಗುಂಡಿ, ಜೋಕಿಂ ಡಿಸೋಜ, ಉಮಾನಾಥ ಶೆಟ್ಟಿ , ಪ್ರಸಾದ ಕೌಶಲ್ ಶೆಟ್ಟಿ , ಸತೀಶ್ ಕುಮಾರ್ ಕೆಡೆಂಜಿ ಮತ್ತಿತರರು ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ (ಗ್ರಾಮಾಂತರ) ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷಎಚ್. ಮಹಮ್ಮದ್ ಆಲಿ, ಪುತ್ತೂರು ವಿಧಾನಸಭಾ ಕ್ಷೇತ್ರ ಪ್ರಚಾರ ಸಮಿತಿ ಅಧ್ಯಕ್ಷ ಡಾ.ರಾಜಾರಾಂ ಕೆ.ಬಿ., ಪುತ್ತೂರು ಬ್ಲಾಕ್ ಪ್ರಚಾರ ಸಮಿತಿ ಅಧ್ಯಕ್ಷ ಅಮರನಾಥ ಗೌಡ, ಕಡಬ ಬ್ಲಾಕ್ ಪ್ರಚಾರ ಸಮಿತಿ ಅಧ್ಯಕ್ಷ ಯತೀಶ್ ಕುಮಾರ್ ಬಾನಡ್ಕ ಸೇರಿದಂತೆ ಪುತ್ತೂರು, ಸುಳ್ಯ , ಬಂಟ್ವಾಳ ಮತ್ತು ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದ ಪ್ರಚಾರ ಸಮಿತಿ ಹಾಗೂ ಎಲ್ಲ ಬ್ಲಾಕ್ ಪ್ರಚಾರ ಸಮಿತಿಗಳ ಅಧ್ಯಕ್ಷ ಪದಾಕಾರಿಗಳು ಪದಗ್ರಹಣ ಸ್ವೀಕರಿಸಿದರು. ಪಕ್ಷದ ಜಿಲ್ಲಾ ವಕ್ತಾರ ಮಹಮ್ಮದ್ ಬಡಗನ್ನೂರು ಕಾರ್ಯಕ್ರಮ ನಿರ್ವಹಿಸಿದರು.

ಅಳಪೆ ಉತ್ತರ ವಾರ್ಡ್: ತಡೆಗೋಡೆ ನಿರ್ಮಾಣಕ್ಕೆ ಶಾಸಕರಿಂದ ಶಿಲಾನ್ಯಾಸ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 51ನೇ ಅಳಪೆ ಉತ್ತರ ವಾರ್ಡಿನ ವಿಠಲ್ ಕುಲಾಲ್ ಮನೆ ಸಹಿತ ವಿವಿಧೆಡೆ 40 ಲಕ್ಷ ರೂ. ವಿಶೇಷ ಅನುದಾನದಲ್ಲಿ ತಡೆಗೋಡೆ ನಿರ್ಮಾಣವಾಗಲಿದ್ದು, ಶಾಸಕ ವೇದವ್ಯಾಸ ಕಾಮತ್ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು, ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗೆ ಅಗತ್ಯವಿರುವ ಅನೇಕ ಅನುದಾನಗಳನ್ನು ಮಂಜೂರುಗೊಳಿಸಲಾಗಿತ್ತು. ಆದರೆ, ರಾಜ್ಯದಲ್ಲಿ ಸರಕಾರ ಬದಲಾದ ನಂತರ ಎಲ್ಲಾ ಅನುದಾನಗಳಿಗೆ ತಡೆ ನೀಡಿದ್ದು ಅಭಿವೃದ್ಧಿ ಕಾರ್ಯಕ್ಕೆ ಹಿನ್ನಡೆಯಾಗಿತ್ತು. ಇದೇ ವಿಚಾರವಾಗಿ ಹಲವು ಬಾರಿ ಸಂಬಂಧಪಟ್ಟ ಸಚಿವರನ್ನು ಭೇಟಿಯಾಗಿ ಪರಿಸ್ಥಿತಿಯನ್ನು ವಿವರಿಸಿದ ಪರಿಣಾಮ ಇದೀಗ ತಡೆ ಹಿಡಿಯಲಾಗಿದ್ದ ಅನುದಾನಗಳನ್ನು ಮತ್ತೆ ಬಿಡುಗಡೆಗೊಳಿಸಲಾಗಿದೆ. ಶೀಘ್ರದಲ್ಲಿ ಕಾಮಗಾರಿ ಮುಗಿಯುವಂತಾಗಲಿ ಎಂದರು.

ಪಾಲಿಕೆಯ ನಿಕಟಪೂರ್ವ ಸದಸ್ಯೆ ರೂಪಶ್ರೀ ಪೂಜಾರಿ, ಬಿಜೆಪಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಪ್ರವೀಣ್ ನಿಡ್ಡೇಲ್, ಮಹಾಶಕ್ತಿ ಕೇಂದ್ರದ ಸಹ ಸಂಚಾಲಕ ರಾಮ್ ಪ್ರಸಾದ್, ಶಕ್ತಿ ಕೇಂದ್ರದ ಅಧ್ಯಕ್ಷ ಸುರೇಶ್ ಆಚಾರ್, ಪ್ರಮುಖರಾದ ಸುರೇಶ್ ಕನ್ನಗುಡ್ಡ, ದೀಕ್ಷಿತ್ ಕನ್ನಗುಡ್ಡ, ಕಿಶೋರ್ ಕನ್ನಗುಡ್ಡ, ಗಾಯತ್ರಿ ಕನ್ನಗುಡ್ಡ, ಶಿಲ್ಪ, ನಿರ್ಮಲ, ಗಣೇಶ್, ಅರುಣ್, ಸುಮತಿ, ವಿಠ್ಠಲ್ ಕುಲಾಲ್, ಭರತ್, ವಿಜಯ್, ಭಾಸ್ಕರ ಕೋಟ್ಯಾನ್, ಗೆಳೆಯರ ಬಳಗದ ಎಲ್ಲಾ ಸದಸ್ಯರ ಸಹಿತ ಅನೇಕ ಸ್ಥಳೀಯರು ಉಪಸ್ಥಿತರಿದ್ದರು.

ಅಖಿಲ ಕರ್ನಾಟಕ ಹಿರಿಯರ ಸೇವಾ ಪ್ರತಿಷ್ಠಾನದ ಸಮಿತಿ ಸಭೆ



ಬಂಟ್ವಾಳ: ಅಖಿಲ ಕರ್ನಾಟಕ ಹಿರಿಯರ ಸೇವಾ ಪ್ರತಿಷ್ಠಾನ ರಿ.ಮೆಲ್ಕಾರ್ ಬಂಟ್ವಾಳ ಇದರ ಕೇಂದ್ರ ಸಮಿತಿಯ ಸಭೆಯು ಇನೋಳಿ ಶ್ರೀ ಸೋಮನಾಥೇಶ್ವರ ದೇವಸ್ಥಾನದ ವಠಾರದಲ್ಲಿ ನಡೆಸಲಾಯಿತು.

ದೇವಾಲಯದ ಆಡಳಿತ ಸಮಿತಿಯ ಅಧ್ಯಕ್ಷರಾದ ಚಂದ್ರಹಾಸ ಪೂಂಜ ಅವರು ಸಭೆಯನ್ನು ಉದ್ಘಾಟಿಸಿ ಹಿರಿಯರ ಸೇವಾ ಪ್ರತಿಷ್ಠಾನದ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕೈಪಿಡಿ ಬಗ್ಗೆ ಚರ್ಚೆ

ಸಮಾರಂಭದ ಅಧ್ಯಕ್ಷತೆಯನ್ನು ಪ್ರತಿಷ್ಠಾನದ ಅಧ್ಯಕ್ಷರಾದ ಕಯ್ಯೂರು ನಾರಾಯಣ ಭಟ್ ವಹಿಸಿ, ಪ್ರತಿಷ್ಠಾನದ ಸದಸ್ಯರ ಕೈಪಿಡಿಯನ್ನು ಸಿದ್ಧಪಡಿಸಲು ಅಗತ್ಯ ಮಾಹಿತಿಯನ್ನು ಎಲ್ಲಾ ತಾಲೂಕು ಘಟಕಗಳು ನೀಡುವಂತೆ ತಿಳಿಸಿದರು.

ಪುತ್ತೂರು ಘಟಕದ ಅಧ್ಯಕ್ಷ ಚಂದ್ರಶೇಖರ್ ಆಳ್ವ ಪಡುಮಲೆ, ಭವಾನಿ ಶಂಕರ್ ಶೆಟ್ಟಿ ಪುತ್ತೂರು, ಉದಯಶಂಕರ ರೈ ಪುಣಚ,ಗುಂಡ್ಯಡ್ಕ ಈಶ್ವರ ಭಟ್, ವಿಶ್ವನಾಥ ಪೂಂಜ,ನಾರಾಯಣ ಸಪಲ್ಯ, ಕೆ.ರಾಜಾರಾಮ ಐತಾಳ , ಸೋಮನಾಥ ಬೇಕಲ್, ಚಂದ್ರಕಲಾ ಎಸ್ ಬೇಕಲ್, ಪ್ರಭಾಕರ ನಾಯ್ಕ್, ನಾರಾಯಣ ಮೊದಲಾದವರು ಉಪಸ್ಥಿತರಿದ್ದರು. ಪ್ರತಿಷ್ಠಾನದ ಸಂಚಾಲಕ ಭಾಸ್ಕರ ಬಾರ್ಯ ಸ್ವಾಗತಿಸಿ, ಖಜಾಂಜಿ ಕೃಷ್ಣಶರ್ಮ ಅನಾರು ವಂದಿಸಿದರು. ಕಾರ್ಯದರ್ಶಿ ದಿವಾಕರ ಆಚಾರ್ಯ ಗೇರುಕಟ್ಟೆ ಕಾರ್ಯಕ್ರಮ ನಿರೂಪಿಸಿದರು.

ಕಡಬ: ಕಳಾರದಲ್ಲಿ ಮಲತ್ಯಾಜ್ಯ ಸಂಸ್ಕರಣ ಘಟಕದ ಕಾಮಗಾರಿ ಆರಂಭ | ಯೋಜನೆ ಅನುಷ್ಠಾನ ಮಾಡಲು ರೂ.3 ಕೋಟಿ ಮಂಜೂರು

ಜನಪರ ಯೋಜನೆಗೆ ಸ್ಥಳೀಯರ ವಿರೋಧ; ಬೇರೆ ಜಾಗ ನಿಗದಿಗೆ ಪಟ್ಟಣ ಪಂಚಾಯತ್ ನಿರ್ಣಯ

ಕಡಬ: ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ಮಲತ್ಯಾಜ್ಯ ಸಂಸ್ಕರಣ ಘಟಕ ಈಗಾಗಲೇ ಆಲಂಕಾರಿನಲ್ಲಿ ಸದ್ದಿಲ್ಲದೆ ನಿರ್ಮಾಣಗೊಂಡು ಸಜ್ಜಾಗಿರುವ ಬೆನ್ನಲ್ಲೇ ತಾಲೂಕು ಕೇಂದ್ರ ಕಡಬದ ಕಳಾರದ ಬಳಿಯ ತಿಮರಡ್ಡದಲ್ಲಿ ಅನುಷ್ಠಾನ ಮಾಡಲು ಉದ್ದೇಶಿಸಿರುವ ಕಡಬ ಪಟ್ಟಣ ಪಂಚಾಯತ್ ವ್ಯಾಪ್ತಿಯ ಮಲತ್ಯಾಜ್ಯ ಸಂಸ್ಕರಣ ಘಟಕಕ್ಕೆ ಸ್ಥಳೀಯರಿಂದ ವಿರೋಧ ವ್ಯಕ್ತವಾಗಿದೆ.

ಕಳಾರದ ಜನರ ವಿರೋಧದ ಹಿನ್ನೆಲೆಯಲ್ಲಿ ಘಟಕವನ್ನು ಕಳಾರದಿಂದ ಕೋಡಿಂಬಾಳಕ್ಕೆ ಸ್ಥಳಾಂತರಿಸಲು ಉದ್ದೇಶಿಸಲಾಗಿದೆ ಎನ್ನುವ ಸುದ್ದಿಯಿಂದಾಗಿ ಆ ಭಾಗದ ಜನರಿಂದ ಕೂಡಾ ಆಕ್ಷೇಪಣೆ ವ್ಯಕ್ತವಾಗಿದೆ.

ದ.ಕ. ಜಿಲ್ಲೆಯ ನೆಕ್ಕಿಲಾಡಿ, ಪಂಜ, ಕೊಲ್ತಿಗೆ, ಕೊಳ್ನಾಡು, ಚಾರ್ಮಾಡಿ, ಆಲಂಕಾರು ಗ್ರಾ.ಪಂ. ವ್ಯಾಪ್ತಿಯಲ್ಲಿ



ಮಲತ್ಯಾಜ್ಯ ಘಟಕ ನಿರ್ಮಾಣಕ್ಕೆ ಮಂಜೂರಾತಿ ದೊರೆತು ಕಡಬ ತಾಲೂಕಿನಲ್ಲಿ ಪ್ರಥಮವಾಗಿ ಆಲಂಕಾರಿನಲ್ಲಿ ಘಟಕ ತಲೆ ಎತ್ತಿದೆ. ಕಡಬ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಈ ಯೋಜನೆಯನ್ನು ಕಡ್ಡಾಯವಾಗಿ ಅನುಷ್ಠಾನ ಮಾಡಲು ಸರಕಾರದ ಆದೇಶವಿದ್ದು, ಜನರ ವಿರೋಧದಿಂದಾಗಿ ಪಟ್ಟಣ ಪಂಚಾಯತ್ ಆಡಳಿತ ಪೇಚಿಗೆ ಸಿಲುಕಿದೆ.

ಕೇಂದ್ರ ಸಚಿವಾಲಯವು ಬಯಲು ಬಹಿರ್ದೆಸೆ ಮುಕ್ತ ಸುಸ್ಥಿರತೆಗೆ ಹಾಗೂ ಘನ ಮತ್ತು ದ್ರವ ಹಾಗೂ ಮಲ ತ್ಯಾಜ್ಯ ನಿರ್ವಹಣೆಯನ್ನು ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಲುವಾಗಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಲ್ಲಿ ಘಟಕವನ್ನು ಸ್ಥಾಪಿಸಲು ಸೂಚಿಸಲಾಗಿದೆ. ಯೋಜನೆಗೆ ಕೇಂದ್ರ ಸರಕಾರದ ಶೇ.60 ಹಾಗೂ ರಾಜ್ಯ ಸರಕಾರ ಶೇ.40 ಅನುದಾನದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯ ಮತ್ತು ಆರೋಗ್ಯವನ್ನು ಉತ್ತೇಜಿಸುವ ಪ್ರಮುಖ ಯೋಜನೆಯಾಗಿದೆ.

ರೂ.3 ಕೋಟಿ ಅನುದಾನ

ಕಡಬ ಪಟ್ಟಣ ಪಂಚಾಯತ್‌ನಲ್ಲಿ ಈ ಯೋಜನೆ ಅನುಷ್ಠಾನ ಮಾಡಲು ರೂ.3 ಕೋಟಿ ಮಂಜೂರುಗಳಿಸಲಾಗಿದೆ. ಕಡಬ ಸಮೀಪದ ಕಳಾರ ತಿಮರಡ್ಡದಲ್ಲಿ ಈ ಯೋಜನೆಯನ್ನು ಅನುಷ್ಠಾನ ಮಾಡಲು 50 ಸೆಂಟ್ಸ್ ಜಾಗವನ್ನು ತಹಶೀಲ್ದಾರ್ ಮಂಜೂರು ಮಾಡಿದ್ದಾರೆ. ಬೆಂಗಳೂರಿನ ಇನ್ ಫ್ರಾಕೋನ್ ಸ್ಟ್ರಕ್ಚರ್ಸ್ ಸಂಸ್ಥೆ ಗುತ್ತಿಗೆ ಪಡೆದು ಈಗಾಗಲೇ ಕಾಮಗಾರಿ ಆರಂಭಿಸಿದೆ. ಇದೇ ಮಾರ್ಚ್ ತಿಂಗಳ ಒಳಗೆ ಪ್ರಥಮ ಹಂತದ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಯೋಜನೆಯ ಅನುದಾನ ಹಿಂಪಡೆಯುವುದು ಮಾತ್ರವಲ್ಲದೇ ಪಟ್ಟಣ ಪಂಚಾಯತ್‌ಗೆ ದಂಡ ವಿಧಿಸುವ ಎಚ್ಚರಿಕೆ ಕೂಡಾ ನೀಡಲಾಗಿದೆ.

ಕಳೆದ ಒಂದು ವಾರದಿಂದ ಕಳಾರದ ತಿಮರಡ್ಡದಲ್ಲಿ ಕಾಮಗಾರಿ ನಡೆಯುತ್ತಿದ್ದು, ಆರಂಭದಲ್ಲಿ ಯೋಜನೆಯ ಬಗ್ಗೆ ಮಾಹಿತಿ ಇಲ್ಲದೇ ಸುಮ್ಮನಿದ್ದ ಇಲ್ಲಿನ ಜನ ಈಗ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಕಳಾರದಲ್ಲಿ ತೀವ್ರ ಪ್ರತಿರೋಧ ಬಂದ ಹಿನ್ನೆಲೆಯಲ್ಲಿ ಪಟ್ಟಣ ಪಂಚಾಯತ್ ಆಡಳಿತ ಮಂಡಳಿ ಕೋಡಿಂಬಾಳ ಗ್ರಾಮದ ನೆಲ್ಲಿಪಡ್ಪು ಎಂಬಲ್ಲಿನ ಜಾಗವನ್ನು ಪರಿಶೀಲನೆ ಮಾಡಿದ್ದಾರೆ ಎನ್ನುವ ಮಾಹಿತಿ ಸಿಕ್ಕ ಕೂಡಲೇ ಆ ಭಾಗದ ಜನ ಕೂಡಾ ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ.

ನಮ್ಮ ಭಾಗದಲ್ಲಿ ಈಗಾಗಲೇ ಘನತ್ಯಾಜ್ಯ ಘಟಕ ನಿರ್ಮಾಣ ಮಾಡಲಾಗಿದೆ. ಅದು ಗಬ್ಬು ನಾರುತ್ತಿದೆ. ಮಾತ್ರವಲ್ಲದೆ ಅದೇ ಭಾಗದಲ್ಲಿ ಬೀದಿ ನಾಯಿಗಳ ಪಾಲನಾ ಕೇಂದ್ರ ಮಾಡಲು ಪಟ್ಟಣ ಪಂಚಾಯತ್ ಉದ್ದೇಶಿಸಿದೆ. ಶಾಲೆ ಇದೆ, ದೇವಸ್ಥಾನ ಇದೆ, ಚರ್ಚ್ ಇದೆ, ಜನವಸತಿ ಪ್ರದೇಶ ಮುಂತಾದ ಕಾರಣಗಳನ್ನು ನೀಡಿ ಯಾವುದೇ ಕಾರಣಕ್ಕೂ ಮಲ ತ್ಯಾಜ್ಯ ಸಂಸ್ಕರಣ ಘಟಕವನ್ನು ನೆಲ್ಲಿಪಡ್ಪು ಜಾಗದಲ್ಲಿ ನಿರ್ಮಿಸಬಾರದು ಎಂದು ಪಟ್ಟು ಹಿಡಿದು ಪಟ್ಟಣ ಪಂಚಾಯತ್‌ಗೆ ಮನವಿ ಸಲ್ಲಿಸಿದ್ದಾರೆ.

ಪೇಚಿಗೆ ಸಿಲುಕಿದ ಆಡಳಿತ ಮಂಡಳಿ

ಎರಡೂ ಕಡೆಗಳಲ್ಲಿ ಯೋಜನೆಯ ಅನುಷ್ಠಾನಕ್ಕೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಪಟ್ಟಣ ಪಂಚಾಯತ್ ಆಡಳಿತ ಪೇಚಿಗೆ ಸಿಲುಕಿದೆ. ಮಂಗಳವಾರ ಅಧ್ಯಕ್ಷೆ ತಮನ್ನಾ ಜಬೀನ್ ಅಧ್ಯಕ್ಷತೆಯಲ್ಲಿ ತುರ್ತು ಸಭೆ ನಡೆಸಿದ ಆಡಳಿತ ಮಂಡಳಿ ಕಳಾರದ ತಿಮರಡ್ಡ ಹಾಗೂ ಕೋಡಿಂಬಾಳದ ನೆಲ್ಲಿಪಡ್ಪಿನ ಜಾಗವನ್ನು ಬಿಟ್ಟು ಮೂರನೇ ಜಾಗ ಹುಡುಕಿ ಕೊಡುವಂತೆ ಕಂದಾಯ ಇಲಾಖೆಗೆ ಬರೆದುಕೊಳ್ಳುವ ನಿರ್ಣಯ ಮಾಡಿದೆ ಎಂದು ಮುಖ್ಯಾಧಿಕಾರಿ ಲೀಲಾವತಿ ಇ. ತಿಳಿಸಿದ್ದಾರೆ.

ಸುತ್ತ ಮುತ್ತ

ತುಳು ಸಾಮಾಜಿಕ ನಾಟಕ 'ಕೊಪ್ಪರಿಗೆ' ಪ್ರದರ್ಶನ

ವಿಟ್ಲ: ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಮಹಾಶಿವರಾತ್ರಿ ಆಚರಣೆ ಸಂದರ್ಭದಲ್ಲಿ ಹಿಂದೂ ಯುವಸೇನೆ ವಿಟ್ಲ ವತಿಯಿಂದ ತುಡರ್ ಕಲಾವಿದರು ಕಲ್ಲಡ್ಕ ತುಳು ಸಾಮಾಜಿಕ ನಾಟಕ 'ಕೊಪ್ಪರಿಗೆ' ನಡೆಯಿತು. ಸಭಾ ಕಾರ್ಯಕ್ರಮವನ್ನು ಹಿಂದೂ ಯುವಸೇನೆ ಅಧ್ಯಕ್ಷ ರಘುಪತಿ ಪೈ ಅಧ್ಯಕ್ಷತೆಯಲ್ಲಿ ನಡೆಯಿತು. ಅಂತಾರಾಷ್ಟ್ರೀಯ ಈಜು ಪಟು ಶ್ರೀಲಕ್ಷ್ಮೀ ಅವರನ್ನು ಸನ್ಮಾನಿಸಲಾಯಿತು. ಮಂಗಳೂರು ಹಿಂದೂ ಯುವಸೇನೆ ಕೇಂದ್ರೀಯ ಗೌರವಾಧ್ಯಕ್ಷ ಭಾಸ್ಕರಚಂದ್ರ ಶೆಟ್ಟಿ, ಅಧ್ಯಕ್ಷ ಯಶೋಧರ ಚೌಟ, ವಿಟ್ಲ ಬ್ರಹ್ಮಶ್ರೀ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಸಂಜೀವ ಪೂಜಾರಿ ನಿಡ್ಯ, ಕೃಷ್ಣಯ್ಯ ಕೆ. ವಿಟ್ಲ ಅರಮನೆ, ಹಿಂದೂ ಯುವಸೇನೆ ಗೌರವಾಧ್ಯಕ್ಷ ಹರೀಶ್ ವಿಟ್ಲ ಮತ್ತಿತರರು ಉಪಸ್ಥಿತರಿದ್ದರು. ಹರೀಶ್ ಎ. ಸಂಯೋಜಿಸಿದರು.

ಕುಕ್ಕೆ: ಅಗ್ರಹಾರದಲ್ಲಿ ಸಾಮೂಹಿಕ ಯೋಗ ಶಿವ ನಮಸ್ಕಾರ

ಸುಬ್ರಹ್ಮಣ್ಯ: ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ನೇತ್ರಾವತಿ ವಲಯ ಮಂಗಳೂರು ಇದರ ಸುಬ್ರಹ್ಮಣ್ಯ ಶಾಖೆಯಿಂದ ಶಿವರಾತ್ರಿಂ ಪ್ರಯುಕ್ತ ಸೋಮವಾರ ಬೆಳಗಿನ ಜಾವ ಅಗ್ರಹಾರ ಸೋಮನಾಥೇಶ್ವರ ದೇವಳದ ಮುಂಭಾಗದಲ್ಲಿ ಸಾಮೂಹಿಕ ಯೋಗ ಶಿವ ನಮಸ್ಕಾರ ನಡೆಯಿತು. ಆರಂಭದಲ್ಲಿ ವೆಂಕಟೇಶ್ ಭಜನೆ ನೆರವೇರಿಸಿದರು. ಅಮೃತವಚನ ಮತ್ತು ಪಂಚಾಂಗ ಪಠಣ ನಡೆಯಿತು. ಬಳಿಕ ಮಾನಸಿಕ ಸಿದ್ಧತೆ, ಉಸಿರಾಟ ಕ್ರಿಯೆ, ಹಾಗೂ ಗಣಪತಿ ನಮಸ್ಕಾರ ನೆರವೇರಿತು. ನಂತರ ಒಟ್ಟು 11 ಸುತ್ತುಗಳಲ್ಲಿ ಹಾಗೂ ನಾಲ್ಕು ಹಂತಗಳಲ್ಲಿ ಯೋಗ ಶಿವ ನಮಸ್ಕಾರ ಮಾಡಲಾಯಿತು. ಮೊದಲನೇ ಹಂತವನ್ನು ಪ್ರಭಾಕರ ಪಡ್ರೆ ನೆರವೇರಿಸಿದರು. ವಿಶ್ವನಾಥ ನಡುತೋಟ ಹಾಗೂ ಲತಾ ಪ್ರಾತ್ಯಕ್ಷಿಕೆ ನೀಡಿದರು. 2ನೇ ಹಂತದದಲ್ಲಿ ಬಾಲಕೃಷ್ಣ ಆರ್. ವಿವರಣೆ ನೀಡಿ ಯೋಗೀಶ ಹಾಗೂ ರಾಜೇಶ್ವರಿ ಪ್ರಾತ್ಯಕ್ಷಿಕೆ ನೀಡಿದರು. 3ನೇ ಹಂತದಲ್ಲಿ ಲೀಲಾ ಕುಮಾರಿ ವಿವರಣೆ ನೀಡಿ, ಬಾಲಕೃಷ್ಣ ಆರ್. ಹಾಗೂ ಹೇಮಾ ಪ್ರಾತ್ಯಕ್ಷಿಕೆ ನೀಡಿದರು. ಕೊನೆಯ ಹಂತದದಲ್ಲಿ ಜಯಲಕ್ಷ್ಮಿ ವಿವರಣೆಯನ್ನು ನೀಡಿ ವಿಶ್ವನಾಥ ಹಾಗೂ ಲತಾ ಪ್ರಾತ್ಯಕ್ಷತೆ ನೀಡಿದರು. ಬಳಿಕ ಅಮೃತಾಸನವನ್ನು ಅಶ್ವಿಜ ನಡೆಸಿಕೊಟ್ಟರು. ಕಾರ್ತಿಕ್ ವಂದಿಸಿದರು.

ಆರೋಗ್ಯ ತಪಾಸಣಾ ಶಿಬಿರ ಉದ್ಘಾಟನೆ

ಮುಲ್ಕಿ: ಕಾರ್ನಾಡ್ ಯಂಗ್ ಸ್ಟಾರ್ ಅಸೋಸಿಯೇಷನ್ ಮತ್ತು ಕಟೀಲಿನ ದುರ್ಗಾ ಸಂಜೀವನಿ ಮಣಿಪಾಲ್ ಆಸ್ಪತ್ರೆಯ ಸಹಯೋಗದಲ್ಲಿ ಕಾರ್ನಾಡ್ ಯಂಗ್ ಸ್ಟಾರ್ ಕಟ್ಟಡದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಆಶ್ತಾವರ ಲಾಯಲ್ಟಿ ಕಾರ್ಡ್ ನೋಂದಣಿ ಶಿಬಿರವನ್ನು ಲಂಡನ್ ನ ಖ್ಯಾತ ವೈದ್ಯ,ಮುಲ್ಕಿ ಡಾ.ಹಂಸರಾಜ್ ಶೆಟ್ಟಿ ಜಿ ಎಂ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾರ್ನಾಡ್ ಯಂಗ್ ಸ್ಟಾರ್ ಅಸೋಸಿಯೇಷನ್ ನ ಅಧ್ಯಕ್ಷ ಮನೋಜ್ ದೇವಾಡಿಗ ವಹಿಸಿದ್ದರು. ಕಟೀಲಿನ ದುರ್ಗಾ ಸಂಜೀವನಿ ಮಣಿಪಾಲ್ ಆಸ್ಪತ್ರೆಯ ವೈದ್ಯರಾದ ಡಾ. ಶಿವಾನಂದ ಪ್ರಭು ,ಡಾ. ಕೌಶಿಕ್.ಆರ್.,ಡಾ. ಸುಧೀಂದ್ರ ಕಾರ್ನಾಡ್, ಡಾ. ಕೀರ್ತನ್ ರಾವ್, ಡಾ. ಕೌಶಿಕ್,ನಿತೇಶ್ ಶೆಟ್ಟಿ ಎಕ್ಕಾರು ಮತ್ತಿತರರಿದ್ದರು. ಕಾರ್ಯದರ್ಶಿ ರವಿಚಂದ್ರ ವಂದಿಸಿದರು.

ಮಣೂರು ದೇಗುಲದಲ್ಲಿ ಶಿವರಾತ್ರಿ ಉತ್ಸವ

ಕೋಟ: ಇಲ್ಲಿನ ಮಣೂರು ಮಹಾಲಿಂಗೇಶ್ವರ ಮತ್ತು ಶ್ರೀ ಹೇರಂಬ ಮಹಾಗಣಪತಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಉತ್ಸವದ ಅಂಗವಾಗಿ ಬೆಳಿಗ್ಗೆ 9.30ರಿಂದ 12.30ರ ತನಕ ಸಾರ್ವಜನಿಕ ಶತರುದ್ರಾಭಿಷೇಕ ಸಂಜೆ ರಂಗಪೂಜೆ ಅಗೆಲು ರಂಗಪೂಜೆ ಜರಗಿದವು. ಶ್ರೀ ರಾಮ ಮಹಿಳಾ ಭಜನಾ ಮಂಡಳಿ, ಮಣೂರು, ಶ್ರೀ ಮಹಾಲಿಂಗೇಶ್ವರ ಭಜನಾ ಮಂಡಳಿ ಮಣೂರು ಇವರಿಂದ ಭಜನಾ ಕಾರ್ಯಕ್ರಮಗಳು ನಡೆದವು. ಈ ಹಿನ್ನೆಲ್ಲೆಯಲ್ಲಿ ಮಣೂರು, ಶ್ರೀ ಮಹಾಲಿಂಗೇಶ್ವರ ಭಜನಾ ಮಂಡಳಿಯ ಪ್ರಮುಖರಾದ ಎಂ.ವಿ ಮಯ್ಯ ಇವರನ್ನು ದೇಗುಲದ ವತಿಯಿಂದ ಸನ್ಮಾನಿಸಲಾಯಿತು. ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಸತೀಶ್ ಎಚ್ ಕುಂದರ್, ಸದಸ್ಯ ರವಿ ಐತಾಳ್, ಅಶೋಕ ಶೆಟ್ಟಿ, ಅಚ್ಚುತ ಹಂದೆ, ದಿನೇಶ್ ಆಚಾರ್, ಕೃಷ್ಣ ದೇವಾಡಿಗ, ಚಂದ್ರ, ಸುಫಲ ಸಿ. ಶೆಟ್ಟಿ ಎಂ. ದಿವ್ಯಾ ಪ್ರಭು, ಎಂ.ಎನ್ ಮಧ್ಯಸ್ಥ,ಅರುಣಾಚಲ ಮಯ್ಯ,ನಾಗರಾಜ ಅಮೀನ್, ಜಯರಾಮ ಆಚಾರ್,ಸುರೇಶ್ ಶೆಟ್ಟಿ,ನರಸಿಂಹ ತಿಂಗಳಾಯ,ನವೀನ್ ಶೆಟ್ಟಿ, ನಾಗಪಯ್ಯ ಪ್ರಭು,ತಂತ್ರಿವರ್ಗ, ಅರ್ಚಕರು, ಸಿಬ್ಬಂದಿ ವರ್ಗ , ಸದಸ್ಯರು ಜೀರ್ಣೋದ್ಧಾರ ಸಮಿತಿಯ ಪ್ರಮುಖರು ಉಪಸ್ಥಿತರಿದ್ದರು.

ಹರಿಹರ ಪಲ್ಲತ್ತಡ್ಕ: ಜಾತ್ರಾ ಉತ್ಸವ: ಗೊನೆ ಮುಹೂರ್ತ

ಸುಬ್ರಹ್ಮಣ್ಯ: ಹರಿಹರ ಪಲ್ಲತ್ತಡ್ಕದ ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಗೊನೆ ಮುಹೂರ್ತ ನೆರವೇರಿತು. ಶುಭ ಮುಹೂರ್ತದಲ್ಲಿ ಗೊನೆ ಕಡಿದು ಶ್ರೀ ದೇವಳಕ್ಕೆ ಮೆರವಣಿಗೆಯಲ್ಲಿ ದೇವಳಕ್ಕೆ ತರಲಾಯಿತು.

ಬಳಿಕ ಗರ್ಭಗುಡಿ ಮುಂಭಾಗದಲ್ಲಿ ಗೊನೆ ಇರಿಸಿ ಪೂಜೆ ನೆರವೇರಿತು. ಈ ಸಂದರ್ಭ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಗದೀಶ್ ಪಡ್ಪು, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅರ್ಚಕ ಸುಬ್ರಹ್ಮಣ್ಯ ಭಟ್, ಕೆ. ದಯಾನಂದ ಕಟ್ಟೆಮನೆ, ಗುಣವರ್ದನ ಕೆದಿಲ, ಕೆ. ಬೆಳ್ಯಪ್ಪ ಗೌಡ ಖಂಡಿಗೆ, ಎಂ.ಜೆ. ವಿನೂಪ್ ಮಲ್ಲಾರ, ಕೇಶವ ಕೆ. ಕೊಪ್ಪತ್ತಡ್ಕ, ಸವಿತಾ ಕೆ. ಕಟ್ಟೆಮನೆ, ಪದ್ಮಿನಿ ಎನ್.ಜಿ. ಉಪಸ್ಥಿತರಿದ್ದರು.

ಕೊಲ್ಯ ಮಠದ ಶ್ರೀದೇವಿ ಮೂಕಾಂಬಿಕಾ ದೇವಸ್ಥಾನದಲ್ಲಿ ಪ್ರತಿಷ್ಠಾಪನಾ ಮಹೋತ್ಸವ

ಕ್ಷೇತ್ರದ ಜೀರ್ಣೋದ್ಧಾರ ಕಾರ್ಯಕ್ಕೆ ಅನುದಾನ: ಬೊಟ್ಯಾಡಿ

ಉಳ್ಳಾಲ: ನಾವೆಲ್ಲರೂ ಉದಾಸೀನ ಮನೋಭಾವವನ್ನು ಬಿಟ್ಟು ಜಗದ್ಗುರು ಶ್ರೀ ರಮಾನಂದ ಸ್ವಾಮೀಜಿಯವರು ಸ್ಥಾಪಿಸಿದ ಕೊಲ್ಯ ಮೂಕಾಂಬಿಕಾ ಕ್ಷೇತ್ರದ ಜೀರ್ಣೋದ್ಧಾರ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ವಿಧಾನಪರಿಷತ್ ಪ್ರದೇಶಾಭಿವೃದ್ಧಿ ನಿಧಿಯಿಂದ ಕ್ಷೇತ್ರದ ಜೀರ್ಣೋದ್ಧಾರ ಕಾರ್ಯಕ್ಕೆ ಅನುದಾನ ನೀಡುವುದಾಗಿ ವಿಧಾನಪರಿಷತ್ ಸದಸ್ಯರಾದ ಕಿಶೋರ್ ಕುಮಾರ್ ಬೊಟ್ಯಾಡಿ ಹೇಳಿದರು.

ಕೊಲ್ಯ ಮಠದ ಶ್ರೀ ದೇವಿ ಮೂಕಾಂಬಿಕಾ ದೇವಸ್ಥಾನದಲ್ಲಿ ನಡೆಯುತ್ತಿರುವ 38ನೇ ವಾರ್ಷಿಕ ಪ್ರತಿಷ್ಠಾಪನಾ ಮಹೋತ್ಸವದ ಪ್ರಯುಕ್ತ ಮಂಗಳವಾರದಂದು ನಡೆದ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಈಗ ಅಭಿವೃದ್ಧಿಗೊಳ್ಳುವ ಪರ್ವ

ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿ, ರಮಾನಂದ ಸ್ವಾಮೀಜಿಯವರ ಅನುಯಾಯಿಗಳಾದ ನಾವೆಲ್ಲರೂ ಕೊಲ್ಯ ಕ್ಷೇತ್ರವು ಅಭಿವೃದ್ಧಿ ಹೊಂದುವ ವಿಚಾರದಲ್ಲಿ ಅತ್ಯಂತ ಸಂತೋಷ ಪಡುತ್ತೇವೆ. ದಕ್ಷಿಣ ಕನ್ನಡ, ಕಾಸರಗೋಡು, ಉಡುಪಿ ಜಿಲ್ಲೆಗಳ ಬಡ, ಶೋಷಿತ ವರ್ಗದವರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುವಲ್ಲಿ ರಮಾನಂದ ಸ್ವಾಮೀಜಿಗಳು ಮುಂಚೂಣಿಯಲ್ಲಿದ್ದರು. ಉಳ್ಳಾಲ ದಲ್ಲಿ ಕಡಲ್ಕೊರೆತ ಉಂಟಾದ ಸಂದರ್ಭದಲ್ಲಿ ಸ್ವಾಮೀಜಿಯವರು ನೆರೆ ಸಂತ್ರಸ್ತರಿಗೆ ಬಿರ್ಲಾರ್‌ನಿಂದ ದಿನಸಿ ಕಿಟ್‌ಗಳನ್ನ ಸಾಲ ತಂದು ಹಂಚಿದನ್ನು ಎಂದಿಗೂ ಮರೆಯಲು ಅಸಾಧ್ಯ. ಇದೀಗ ಕೊಲ್ಯ ಕ್ಷೇತ್ರವು ಅಭಿವೃದ್ಧಿಗೊಳ್ಳುವ ಪರ್ವ ಕಾಲ ಸಮೀಪಿಸಿದೆ. ಶ್ರೀ ಕ್ಷೇತ್ರ ಅಭಿವೃದ್ಧಿಗೊಳ್ಳುವಾಗ ನಮ್ಮ ಮನಸ್ಸುಗಳು ಕೂಡ ಪರಿಶುದ್ಧಗೊಳ್ಳಬೇಕು. ಆ ಮೂಲಕ ನಮ್ಮನ್ನ ಅಗಲಿರುವ ಸ್ವಾಮೀಜಿಯವರ ಆದರ್ಶಗಳಿಗೆ ಮನ್ನಣೆ ಸಿಗುವ ರೀತಿಯಲ್ಲಿ ಕೆಲಸ ಮಾಡಬೇಕು. ಹಿಂದುತ್ವದ ಚಟುವಟಿಕೆಗಳಿಗೆ ಕೇಂದ್ರವಾಗಿರುವ ಕೊಲ್ಯ ಶ್ರೀ ಕ್ಷೇತ್ರವು ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಅವರು ಆಶಿಸಿದರು.

ಶ್ರೀ ಜಗದ್ಗುರು ರಮಾನಂದ ಸ್ವಾಮೀಜಿ ಮಹಾಸಂಸ್ಥಾನಮ್ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಚಂದ್ರಹಾಸ್ ಪಂಡಿತ್ ಹೌಸ್ ಸಭಾ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಟ್ರಸ್ಟಿಗಳಾದ ಮಹಾಬಲ ಶೆಟ್ಟಿ ಕೂಡ್ಲು,ಉಳ್ಳಾಲ ಚೀರುಂಭ ಭಗವತಿ ಕ್ಷೇತ್ರದ ಆಡಳಿತ ಮೊಕ್ತೇಸರರು, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರಾದ ಸುರೇಶ್ ಭಟ್ನಗರ, ಕಲ್ಲಾಪು ಬುರ್ದುಗೋಳಿ ಗುಳಿಗ–ಕೊರಗಜ್ಜ ಕ್ಷೇತ್ರದ ಅಧ್ಯಕ್ಷ ವಿಶ್ವನಾಥ ನಾಯ್ಕ್,ಸೋಮೇಶ್ವರ ಪುರಸಭೆಯ ಉಪಾಧ್ಯಕ್ಷರಾದ ರವಿಶಂಕರ್ ಸೋಮೇಶ್ವರ, ಯಾದವ ಸಭಾ ಕರ್ನಾಟಕ ಕೇಂದ್ರ ಸಮಿತಿಯ ಜಿಲ್ಲಾಧ್ಯಕ್ಷ ಎ.ಕೆ. ಮಣಿಯಾಣಿ, ಮಾವಿನ ಕಟ್ಟೆ ಪರಿವಾರ ಸಮೇತ ಶ್ರೀ ಅಯ್ಯಪ್ಪ ಸ್ವಾಮಿ ಭಜನಾ ಮಂದಿರದ ಅಧ್ಯಕ್ಷ ವಿಶ್ವನಾಥ ಬಳ್ಳಪದವು ಮೊದಲಾದವರು ಉಪಸ್ಥಿತರಿದ್ದರು.

ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ರವಿಚಂದ್ರ ಪಿ.ಎಂ. ಮಂಗಳೂರು ಸ್ವಾಗತಿಸಿದರು. ಕೋಶಾಧಿಕಾರಿ ಸದಾನಂದ ಕಾವೂರು ವಂದಿಸಿದರು. ಪ್ರವೀಣ್ ಎಸ್. ಕುಂಪಲ ನಿರೂಪಿಸಿದರು.

> ಉಳ್ಳಾಲದಲ್ಲಿ ಪ್ರಪ್ರಥಮ ಬಾರಿಗೆ ಹಿಂದೂ ಸಮಾಜೋತ್ಸವ ಮಾಡಿಸಿದ ಕೀರ್ತಿ ರಮಾನಂದ ಸ್ವಾಮೀಜಿಯವರಿಗೆ ಸಲ್ಲತಕ್ಕದ್ದು. ಹಿಂದೂ ಸಮಾಜದ ಬಗ್ಗೆ ಅವರಲ್ಲಿದ್ದ ಪ್ರೀತಿ, ಅಭಿಮಾನಗಳು ನಮಗೆಲ್ಲರಿಗೂ ಸ್ಫೂರ್ತಿಯಾಗಿದೆ. ಅವರು ಇಂದು ಬದುಕಿದ್ದರೆ ಎಲ್ಲರನ್ನ ಒಟ್ಟುಗೂಡಿಸಿ ಕೊಲ್ಯ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುತ್ತಿದ್ದರು. ಇದೀಗ ಸ್ವಾಮೀಜಿಯವರ ದಿವ್ಯ ಪ್ರೇರಣೆಯಿಂದಲೇ ಕ್ಷೇತ್ರದ ಆಡಳಿತಕ್ಕೆ ಉತ್ತಮ ನಾಯಕತ್ವ ದೊರೆತಿದ್ದು ಮೂಕಾಂಬಿಕ ಕ್ಷೇತ್ರವು ಉತ್ತರೋತ್ತರ ಅಭಿವೃದ್ಧಿ ಹೊಂದುವುದರಲ್ಲಿ ಯಾವುದೇ ಸಂಶಯವಿಲ್ಲ. ಶ್ರೀ ಕ್ಷೇತ್ರ ಜೀರ್ಣೋದ್ಧಾರಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲು ಬದ್ಧನಾಗಿದ್ದೇನೆ.
>
> ● ಸುರೇಶ್ ಭಟ್ನಗರ, ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರು

ಕರ್ನಾಟಕ ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಜಗದೀಶ್ ಶೆಟ್ಟಿ ಎಲಿಯಾಣಗೆ ಅಭಿನಂದನೆ



ಮಂಜೇಶ್ವರ: ಚಿಗುರುಪಾದೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಹಾಗೂ ಶ್ರೀ ಮಹಾಲಿಂಗೇಶ್ವರ ಸೇವಾ ಟ್ರಸ್ಟ್‌ನ ಕೋಶಾಧಿಕಾರಿಯಾಗಿರುವ ಜಗದೀಶ್ ಶೆಟ್ಟಿ ಎಲಿಯಾಣ ಅವರಿಗೆ ಕ್ಷೇತ್ರದ ವತಿಯಿಂದ ಅಭಿನಂದನಾ ಕಾರ್ಯಕ್ರಮ, ಕ್ಷೇತ್ರ ಮೇಲ್ವಿಚಾರಕ ಗಣಪತಿ ಭಟ್ ಅಮ್ಮೆನಡ್ಕ ಅವರಿಗೆ ಗೌರವಾರ್ಪಣೆ ಗಣ್ಯರ ಸಮಕ್ಷಮದಲ್ಲಿ ಜರಗಿತು.

ಸಮಾರಂಭದಲ್ಲಿ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ವರ್ಕಾಡಿ ದಿನೇಶಕೃಷ್ಣ ತಂತ್ರಿಗಳು ಗೌರವ ಉಪಸ್ಥಿತರಿದ್ದು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಅಧ್ಯಕ್ಷತೆಯನ್ನು ಶ್ರೀ ಮಹಾಲಿಂಗೇಶ್ವರ ಸೇವಾ ಟ್ರಸ್ಟ್‌ನ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ವಹಿಸಿದ್ದರು. ಅತಿಥಿಗಳಾಗಿ ಹಿರಿಯ ಲೇಖಕ ನಿವೃತ್ತ ಪ್ರಾಂಶುಪಾಲ ಪ್ರೊ.ಪಿ.ಎನ್.ಮೂಡಿತ್ತಾಯ ಭಾಗವಹಿಸಿದ್ದರು. ಕ್ಷೇತ್ರದ ಆಡಳಿತ ಮೊಕ್ತೇಸರ ವಸಂತ ಭಟ್ ತೊಟ್ಟೆತ್ತೋಡಿ, ಶ್ರೀ ಮಹಾಲಿಂಗೇಶ್ವರ ಸೇವಾ ಸಮಿತಿ ಅಧ್ಯಕ್ಷ ಸತೀಶ್ಚಂದ್ರ ರೈ ದೇರಂಬಳ ಮತ್ತಿತರರರು ಉಪಸ್ಥಿತರಿದ್ದರು. ರಾಜಾರಾಮ ರಾವ್ ಮೀಯಪದವು ಅಭಿನಂದನಾ ಮಾತುಗಳನ್ನಾಡಿದರು. ಸದಾಶಿವ ರಾವ್ ಟಿ.ಡಿ. ಸ್ವಾಗತಿಸಿ, ಪುಷ್ಪರಾಜ ಶೆಟ್ಟಿ ತಲೇಕಳ ನಿರೂಪಿಸಿದರು. ರಾಧಾಕೃಷ್ಣರಾವ್ ಕೋಣಾಜೆ ಸನ್ಮಾನ ಪತ್ರ ವಾಚಿಸಿದರು. ಯೋಗೀಶ್ ರಾವ್ ಚಿಗುರುಪಾದೆ ವಂದಿಸಿದರು.

> **ಗೌರವ**
> ಕಾರ್ಯಕ್ರಮದಲ್ಲಿ ಕ್ಷೇತ್ರ ಮೇಲ್ವಿಚಾರಕ ಗಣಪತಿ ಭಟ್ ಅಮ್ಮೆನಡ್ಕ ಅವರನ್ನು ಗೌರವಿಸಲಾಯಿತು.

ಕೊರಂಟಬೆಟ್ಟು: ಬ್ರಹ್ಮಬೈದರ್ಕಳ ಕ್ಷೇತ್ರದಲ್ಲಿ ವಾರ್ಷಿಕ ಜಾತ್ರೆ, ನೇಮೋತ್ಸವ

ಬಂಟ್ವಾಳ: ವಾಮದಪದವು ಸಮೀಪದ ಅಜ್ಜಿಬೆಟ್ಟು ಗ್ರಾಮದ ಕೊರಂಟಬೆಟ್ಟುಗುತ್ತು ಶ್ರೀ ವಿಷ್ಣುಮೂರ್ತಿ, ಕೊಡಮಣಿತ್ತಾಯ, ಬ್ರಹ್ಮಬೈದರ್ಕಳ ಕ್ಷೇತ್ರದಲ್ಲಿ ಮೂರು ದಿನಗಳ ಕಾಲ ವರ್ಷಾವಧಿ ಜಾತ್ರೆ ಯು ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವೈಭವಯುತವಾಗಿ ಸಂಪನ್ನಗೊಂಡಿತು.



ಮೊದಲ ದಿನ ಮಹಾಮ್ಮಾಯಿ ದೇವರ ರಾಶಿ ಪೂಜೆ, ನರ್ತನ ಸೇವೆ, ಶ್ರೀ ವಿಷ್ಣುಮೂರ್ತಿ ದೈವದ ನೇಮ, ಎರಡನೇ ದಿನ ನಾಗದೇವರಿಗೆ ತಂಬಿಲ ಸೇವೆ, ದೈವಗಳಿಗೆ ಕಲಶ ಪರ್ವ, ಶ್ರೀ ಕೊಡಮಣಿತ್ತಾಯ ಮತ್ತು ಬ್ರಹ್ಮಬೈದರ್ಕಳ ಸಂಕ್ರಾಂತಿ ಸೇವೆ, ಶ್ರೀ ಕೊಡಮಣಿತ್ತಾಯ, ವ್ಯಾಘ್ರ ಚಾಮುಂಡಿ, ಧೂಮ್ರ ಧೂಮಾವತಿ, ರಕ್ತೇಶ್ವರಿ, ಮಹಿಸಂದಾಯ, ಕಲ್ಕುಡ– ಕಲ್ಲುರ್ಟಿ ದೈವಗಳಿಗೆ ನೇಮ ಹಾಗೂ ಕೊನೆಯ ದಿನ ಬೈದರ್ಕಳು ಒಲಿ ಮರೆಯಿಂದ ಹೊರಡುವುದು, ಬೈದರ್ಕಳು ಬಾಕಿಮಾರು ಗದ್ದೆಗೆ ಇಳಿಯುವುದು, ಬೈದರ್ಕಳ ಪಾತ್ರಿಗಳು ದರ್ಶನವಾಗಿ ಸುರ್ಯ ಹಾಕಿಕೊಳ್ಳುವುದು, ಬೈದರ್ಕಳು ಬಾಕಿಮಾರಿನಿಂದ ಗರಡಿಗೆ ಬಂದು ದರ್ಶನವಾಗಿ ಸುರ್ಯಹಾಕಿಕೊಳ್ಳುವುದು, ಮಾಯಾಂದತಿ ದೇವಿಯ ನೇಮೋತ್ಸವದೊಂದಿಗೆ ಬ್ರಹ್ಮಬೈದರ್ಕಳ ಜಾತ್ರೆ ನೆರವೇರಿತು.

ಚೆನ್ನಮ್ಮ ಸುಬ್ಬ ಪೂಜಾರಿ ಕೊರಂಟಬೆಟ್ಟುಗುತ್ತು ಮತ್ತು ಸುಲೋಚನಾ ದತ್ತರಾಮ್ ಗಾಯಕ್ ವಾಡ್ ಮುಂಬಾಯಿ ಸ್ಮರಣಾರ್ಥ 2025–26ನೇ ಸಾಲಿನ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಗರಡಿ ಫ್ರೆಂಡ್ಸ್ ಕೊರಂಟಬೆಟ್ಟುಗುತ್ತು ಪ್ರಾಯೋಜಕತ್ವದಲ್ಲಿ ಶ್ರೀನಿವಾಸ ನಗರ ಕಿರಿಯ ಪ್ರಾಥಮಿಕ ಶಾಲೆ, ಮೂಡುಪಡುಕೋಡಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಆಲದಪದವು ಅಕ್ಷರ ಭಾರತಿ ವಿದ್ಯಾಲಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿ, ಮಾಜಿ ಸಚಿವ ಬಿ.ರಮಾನಾಥ ರೈ, ಬುಡಾ ಅಧ್ಯಕ್ಷ ಬೇಬಿ ಕುಂದರ್, ಜಿ.ಪಂ. ಸದಸ್ಯ ಬಿ.ಪದ್ಮಶೇಖರ ಜೈನ್ ಮೊದಲಾದವರು ಭೇಟಿ ನೀಡಿ ಪ್ರಸಾದ ಸ್ವೀಕರಿಸಿದರು.

ಭಜನೆಯಿಂದ ಧಾರ್ಮಿಕ ಶ್ರದ್ಧೆ ಉಳಿವು: ಸಂದೇಶ ಶೆಟ್ಟಿ ಅಭಿಮತ



ಬಂಟ್ವಾಳ: ಭಜನೆಗಳ ಮೂಲಕ ಜನ ಮಾನಸದಲ್ಲಿ ಧಾರ್ಮಿಕ ಭಕ್ತಿ, ಸಂಪ್ರದಾಯ, ಸಂಸ್ಕಾರಗಳು ಉಳಿಯಲು ಸಾಧ್ಯ. ಇದರಿಂದಾಗಿ ಹಿಂದು ಸಮಾಜದ ಸಂಘಟನೆಯು ಬಲಿಷ್ಠವಾಗಲಿದೆ ಎಂದು ಬಿಜೆಪಿ ಮುಖಂಡ ಸಂದೇಶ ಶೆಟ್ಟಿ ಆರೆಬೆಟ್ಟು ಹೇಳಿದ್ದಾರೆ.

ತಾಲೂಕಿನ ಕರ್ಪೆ ಗ್ರಾಮದ ನೆಕ್ಲಾಜೆ ಎಂಬಲ್ಲಿ ಯಕ್ಷಗಾನ ಬಯಲಾಟ ಸಂದರ್ಭದಲ್ಲಿ ನಡೆದ ಭಜನಾ ಕಾರ್ಯಕ್ರಮದಲ್ಲಿ ಕುಣಿತ ಭಜನೆ ತಂಡಗಳನ್ನು ಗೌರವಿಸಿ, ಅವರು ಮಾತನಾಡಿದರು. ಸಿದ್ದಕಟ್ಟೆಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು ಮಾತನಾಡಿ, ಈ ಹಿಂದೆ ಎಲ್ಲಾ ಮನೆಗಳಲ್ಲಿಯೂ ನಿತ್ಯವೂ ನಡೆಯುತ್ತಿದ್ದ ಭಜನೆಗಳು ಇಂದು ಮಾಯವಾಗುತ್ತಿರುವುದರಿಂದ ಕೌಟುಂಬಿಕ ಕಲಹಗಳು ಹೆಚ್ಚಾಗುತ್ತಿದೆ. ಮುಂದಿನ ಸ್ವಚ್ಛ ಸಮಾಜದ ನಿರ್ಮಾಣಕ್ಕೆ ಮಕ್ಕಳಿಗೆ ಸಂಸ್ಕಾರದ ಪಾಠ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಬರೋಡಾ ಬ್ಯಾಂಕ್ ಅಧಿಕಾರಿ ಸಂತೋಷ ಕುಮಾರ್ ಚೌಟ ಮಡಂದೂರು, ಸುಂಕದಕಟ್ಟೆ ಮೇಳದ ವ್ಯವಸ್ಥಾಪಕ ರಮೇಶ ಕುಲಶೇಖರ, ಶಿಕ್ಷಕ ರವೀಂದ್ರ ನಾಯಕ್ ಕಿನ್ನಾಜೆ, ಪ್ರಮುಖರಾದ ಲಿಂಗಪ್ಪ ಪೂಜಾರಿ ನೆಕ್ಲಾಜೆ, ರಾಜೇಂದ್ರ ಪೂಜಾರಿ, ಸುಂದರ ಪೂಜಾರಿ, ಚಂದ್ರಶೇಖರ ಗೌಡ ರಾಯಿ, ಪೊಳಲಿ ಸಂತೋಷ್, ಹಾಗೂ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು. ದಾಮೋದರ ಪೂಜಾರಿ ಕರ್ಪೆ ಕಾರ್ಯಕ್ರಮ ನಿರೂಪಿಸಿದರು.

ಶೂನ್ಯ ತ್ಯಾಜ್ಯ ಕಾರ್ಯಕ್ರಮ ಮೂಲಕ ಜನಜಾಗೃತಿ: ಮುಖ್ಯಾಧಿಕಾರಿ ಮಧುಕರ್



ಮುಲ್ಕಿ: ಶಿವರಾತ್ರಿ ಹಬ್ಬದ ಸಂದರ್ಭ ಭಕ್ತಾದಿಗಳು ಕಾರ್ನಾಡ್ ಹರಿಹರ ದೇವಸ್ಥಾನದಲ್ಲಿ ಭಕ್ತಾದಿಗಳು ನೀಡುವ ಹೂವು, ಹಣ್ಣುಕಾಯಿಗಳನ್ನು ಬಯೋ ಡಿಗ್ರೇಡೇಬಲ್ ಪ್ಲಾಸ್ಟಿಕ್ ಮೂಲಕ, ಪ್ರಸಾದ ವನ್ನು ಪೇಪರ್ ಕವರ್‌ನಲ್ಲಿ, ದೇವಳದಲ್ಲಿ ಭೋಜನ ವನ್ನು ಬಾಳೆ ಎಲೆ ಮತ್ತು ಅಡಿಕೆ ಹಾಳೆಯಲ್ಲಿ ನೀಡುವುದು,ಭೋಜನ ಕಾರ್ಯ ಕ್ರಮದಿಂದ ಉತ್ಪತ್ತಿಯಾಗುವ ಹಸಿ ಕಸ, ಒಣ ಕಸಗಳನ್ನು ಶೇಖರಿಸಲು ಪ್ರತ್ಯೇಕವಾಗಿ ಕಸದ ಬಿನ್ ಗಳನ್ನು ಇಡುವ ಮೂಲಕ ಶೂನ್ಯ ತ್ಯಾಜ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮುಲ್ಕಿ ನಗರ ಪಂಚಾಯತ್ ಮುಖ್ಯಾಧಿಕಾರಿ ಮಧುಕರ್ ಕೆ. ಹೇಳಿದರು.

ಮುಲ್ಕಿ ನಗರ ಪಂಚಾಯತ್ ವತಿಯಿಂದ ಕಾರ್ನಾಡು ಶ್ರೀ ಹರಿಹರ ಕ್ಷೇತ್ರದಲ್ಲಿ ಶಿವರಾತ್ರಿ ಹಬ್ಬದ ಸಂದರ್ಭ ಸಾಹಸ್ ಎನ್ ಜಿಒ ಸಂಸ್ಥೆಯ ಸಹಯೋಗದೊಂದಿಗೆ ಹಮ್ಮಿಕೊಂಡ ಸ್ವಚ್ಛತೆ, ಏಕಬಳಕೆ ಪ್ಲಾಸ್ಟಿಕ್ ನಿಷೇಧ, ಶೂನ್ಯ ತ್ಯಾಜ್ಯದ ಬಗ್ಗೆ ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ದೇವಸ್ಥಾನಕ್ಕೆ ಅಭಿಷೇಕಕ್ಕಾಗಿ ಭಕ್ತಾದಿಗಳು ನೀಡುವ ಸೀಯಾಳಗಳ ತ್ಯಾಜ್ಯವನ್ನು ಶೇಖರಿಸಲು ಪ್ರತ್ಯೇಕ ವ್ಯವಸ್ಥೆ ಮಾಡುವ ಮೂಲಕ ಶೂನ್ಯ ತ್ಯಾಜ್ಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ ಎಂದರು

ಸಾಹಸ್ ಎನ್‌ಜಿಒ ವಿಶಾಲಿಯವರು ಮಾತನಾಡಿ ಸ್ವಚ್ಛತೆ ಹಾಗೂ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಎಲ್ ಇಡಿ ಪರದೆಯಲ್ಲಿ ಬಿತ್ತರಿಸುವ ಮೂಲಕ ನಗರ ಪಂಚಾಯತ್ ವತಿಯಿಂದ ಜಾಗೃತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಈ ಸಂದರ್ಭ ಗ್ರಾಮಸ್ಥರು ದೇವಳದ ಸಮಿತಿಯವರು ಉಪಸ್ಥಿತರಿದ್ದರು.

ಮಾರೂರು ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಬ್ರಹ್ಮಕಲಶ: ಸಿದ್ಧತಾ ಸಭೆ



ಮೂಡುಬಿದಿರೆ: ಶ್ರೀ ಗೋಪಾಲಕೃಷ್ಣ ಕೊಡಮಣಿತ್ತಾಯ ದೇವಸ್ಥಾನ ಮಾರೂರು ಹೊಸಂಗಡಿ ಇದರ ಬ್ರಹ್ಮಕಲಶೋತ್ಸವದ ಸಿದ್ಧತಾ ಸಭೆಯು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಜೀವಂಧರ್ ಕುಮಾರ್ ಅಧ್ಯಕ್ಷತೆಯಲ್ಲಿ ಶನಿವಾರ ಸಂಜೆ ದೇವಸ್ಥಾನದ ಆವರಣದಲ್ಲಿ ನಡೆಯಿತು.

ಬ್ರಹ್ಮಕಲಶೋತ್ಸವ ಕಾರ್ಯಕ್ರಮವು ಏ.26ರಿಂದ ಮೇ 1 ರವರೆಗೆ ನಡೆಯಲಿದ್ದು ಈ ಅವಧಿಯಲ್ಲಿ ಕ್ಷೇತ್ರದಲ್ಲಿ ನಡೆಯುವ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ರೂಪರೇಷೆಗಳ ಬಗ್ಗೆ ಚರ್ಚಿಸಲಾಯಿತು. ಸಭಾ ಕಾರ್ಯಕ್ರಮಕ್ಕೆ ಆಮಂತ್ರಿಸಬೇಕಾದ ಸ್ವಾಮೀಜಿಗಳು, ಧಾರ್ಮಿಕ ಮುಖಂಡರು, ಇತರ ಪ್ರಮುಖರ ಹೆಸರುಗಳನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಹೊರೆಕಾಣಿಕೆ ಹೊರಡುವ ದಿನ ಮತ್ತು ಸ್ಥಳದ ಬಗ್ಗೆ ಸಭೆಯಲ್ಲಿ ಅಭಿಪ್ರಾಯ ಸಂಗ್ರಹಿಸಲಾಯಿತು. ದಿನಂಪ್ರತಿ ಸೇರುವ ಭಕ್ತರ ಅಂದಾಜು ಸಂಖ್ಯೆ ಮತ್ತು ಊಟೋಪಚಾರ ವ್ಯವಸ್ಥೆಗಳ ಬಗ್ಗೆ ಚರ್ಚಿಸಲಾಯಿತು. ಬ್ರಹ್ಮಕಲಶೋತ್ಸವ ಯಶಸ್ವಿಗೆ ಈಗಾಗಲೇ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು ಅದರ ಸದಸ್ಯರು ತಮ್ಮ ಜವಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುವಂತೆ ಸಭೆಯಲ್ಲಿ ತಿಳಿಸಲಾಯಿತು. ದೇವಸ್ಥಾನದ ಅರ್ಚಕ ವೆಂಕಟರಾಜ್ ಆಸ್ರಣ್ಣರು, ಜೀರ್ಣೋದ್ಧಾರ ಸಮಿತಿ ಕಾರ್ಯಾಧ್ಯಕ್ಷ ಶಂಭು ಶೆಟ್ಟಿ ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ರವಿಪ್ರಸಾದ್ ಕೆ. ಶೆಟ್ಟಿ, ಸಮಿತಿ ಪ್ರಮುಖರಾದ ಜಯರಾಜ್ ಬಲ್ಲಾಳ ಸಂಗಡಿಗುತ್ತು, ತೋಡಾರು ದಿವಾಕರ ಶೆಟ್ಟಿ, ಮಿಥುನ್ ಶೆಟ್ಟಿ ಪಡ್ಯೋಡಿಗುತ್ತು, ಸುನೀಲ್ ಶೆಟ್ಟಿ, ದಿಲೀಪ್ ಕುಮಾರ್ ಶೆಟ್ಟಿ, ಸತೀಶ್ ಶೆಟ್ಟಿ, ಯಶೋಧರ ಮತ್ತಿತರರು ಉಪಸ್ಥಿತರಿದ್ದರು.

ಮುಳ್ಕಾಡು ಸರ್ಕಾರಿ ಶಾಲೆಯಲ್ಲಿ ಪುಣ್ಯಕೋಟಿ ವನ ಲೋಕಾರ್ಪಣೆ



ಹಿರಿಯಡ್ಕ: ಹೆಬ್ರಿಯ ಮುಳ್ಕಾಡು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಎಂಆರ್‌ಪಿಎಲ್ ಸಂಸ್ಥೆಯಿಂದ ಮಂಜೂರಾದ 25 ಲಕ್ಷ ವೆಚ್ಚದ ಎರಡು ಕೊಠಡಿಗಳ ಶಿಲಾನ್ಯಾಸ ಕಾರ್ಯಕ್ರಮ ಹಾಗೂ ಶಾಲಾ ದಾನಿಗಳ ನೆರವಿನಿಂದ ಸಾಕಾರಗೊಂಡ ಪುಣ್ಯಕೋಟಿ ವನದ ಉದ್ಘಾಟನಾ ಕಾರ್ಯಕ್ರಮವು ಫೆ.13 ರಂದು ನಡೆಯಿತು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಶಿಲಾನ್ಯಾಸ ನೆರವೇರಿಸಿ ಶುಭ ಹಾರೈಸಿದರು.

ಶಾಸಕ ವಿ. ಸುನೀಲ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಡ್ತಲ ಗ್ರಾಮ ಪಂಚಾಯತ್ ಅಧ್ಯಕ್ಷ ಸುಕೇಶ್ ಹೆಗ್ಡೆ, ಎಂಆರ್‌ಪಿಎಲ್ ಹಿರಿಯ ಮ್ಯಾನೇಜರ್ ಅಶೋಕ್ ಕುಮಾರ್ ಹೆಗ್ಡೆ, ಕ್ಯಾಂಪ್ಕೋ ಸದಸ್ಯ ದಯಾನಂದ ಹೆಗ್ಡೆ, ಸಿ.ಆರ್.ಪಿ. ಉಮೇಶ್ ಕೆ. ಎಸ್., ಸಂಜೀವಿನಿ ಫಾರ್ಮ್ ಮಾಲಕಿ ಸವಿತಾ ರಾಮಕೃಷ್ಣ ಆಚಾರ್ಯ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸದಾಶಿವ ಪ್ರಭು, ಲಯನ್ಸ್ ಕ್ಲಬ್ ಮುನಿಯಾಲು ಅಧ್ಯಕ್ಷ ಸಂದೇಶ ಶೆಟ್ಟಿ ಉಪಸ್ಥಿತರಿದ್ದರು. ಶಾಲಾ ಮುಖ್ಯೋಪಾಧ್ಯಾಯರಾದ ಜನಾರ್ಧನ ಬೆಳಿರಾಯ ಸ್ವಾಗತಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಸತೀಶ್ ಪೂಜಾರಿ ಪ್ರಸ್ತಾವನೆಗೈದರು. ಗೌರವ ಶಿಕ್ಷಕಿ ಪ್ರಫುಲ್ಲಾ ವಂದಿಸಿದರು. ಶಿಕ್ಷಕ ಸುಭಾಷ್ ನಿರೂಪಿಸಿದರು.

ಫಿಲೋಮಿನಾದಲ್ಲಿ 32 ಗಂಟೆಗಳ ಹ್ಯಾಕಥಾನ್ ಇನ್ನೊವೇಟ್ ಹ್ಯಾಕ್ 2ಕೆ26 ಸಂಪನ್ನ

ಪುತ್ತೂರು: ಇಲ್ಲಿನ ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನಲ್ಲಿ ಸ್ಟಾರ್ಟ್ ಅಪ್ ಕರ್ನಾಟಕ, ಕೆ–ಟೆಕ್ ಇನ್ನೊವೇಷನ್ ಹಬ್, ಕಾಲೇಜಿನ ನ್ಯೂ ಏಜ್ ಇನ್ಕ್ಯುಬೇಶನ್ ನೆಟ್‌ವರ್ಕ್ ಹಾಗೂ ಐಐಸಿಗಳ ಆಶ್ರಯದಲ್ಲಿ ಆಯೋಜಿಸಲಾದ 32 ಗಂಟೆಗಳ ಹ್ಯಾಕಥಾನ್ ಸಂಪನ್ನಗೊಂಡಿತು.

ಕಾಲೇಜಿನ ಇನೊವೇಶನ್ ಸೆಂಟರ್‌ನಲ್ಲಿ ನಡೆದ ಹ್ಯಾಕಥಾನ್‌ನ ಸಮಾರೋಪ, ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ರೆ.ಡಾ. ಆ್ಯಂಟನಿ ಪ್ರಕಾಶ್ ಮೊಂತೇರೊ ಅಧ್ಯಕ್ಷತೆ ವಹಿಸಿದ್ದರು.

ಉಪಪ್ರಾಂಶುಪಾಲ ಡಾ. ವಿಜಯ ಕುಮಾರ್ ಎಂ. ಶುಭಾಶಂಸನೆಗೈದರು. ನ್ಯೂ ಏಜ್ ಇನ್ಕ್ಯುಬೇಶನ್ ನೆಟ್‌ವರ್ಕ್ ಪ್ರಾಜೆಕ್ಟ್ ಸಂಯೋಜಕ ಡಾ. ವಿನಯಚಂದ್ರ ಬಹುಮಾನ ವಿತರಣಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿದ್ಯಾರ್ಥಿಗಳಾದ ಶೀತಲ್ ಹಾಗೂ ಡೆಲಿಶಾ



ಲೋಬೋ ಅನಿಸಿಕೆ ಹಂಚಿಕೊಂಡರು. ಕಾಲೇಜಿನ ನ್ಯೂ ಏಜ್ ಇನ್ಕ್ಯುಬೇಶನ್ ನೆಟ್‌ವರ್ಕ್‌ನ ಡಿಸ್ಟ್ರಿಕ್ಟ್ ಇನ್ನೊವೇಟಿವ್ ಅಸೋಸಿಯೇಟ್ ಅಭಿಷೇಕ್ ಸುವರ್ಣ ಸ್ವಾಗತಿಸಿ, ಎಂಐಎಸ್ ಎಕ್ಸಿಕ್ಯೂಟಿವ್ ಡಾ. ಗೀತಾ ಪೂರ್ಣಿಮಾ ಕೆ. ವಂದಿಸಿದರು. ಕಾಲೇಜಿನ ಐಐಸಿ ಘಟಕದ ಸದಸ್ಯೆ ಸುರಕ್ಷಾ ಎಸ್. ನಿರ್ವಹಿಸಿದರು. ಮಂಗಳೂರಿನ ಇನ್‌ಯುನಿಟಿ ಉದ್ಯೋಗಿಗಳಾದ ಅನುಭವ್, ಧನುಷ್, ನಿಖಿಲ್ ಹಾಗೂ ಪುತ್ತೂರಿನ ದ ವೆಬ್ ಪೀಪಲ್ ಸಂಸ್ಥೆಯ ವೇಣುಗೋಪಾಲ್ ತೀರ್ಪುಗಾರರಾಗಿ ಕರ್ತವ್ಯ ನಿರ್ವಹಸಿದರು. ಹಿರಿಯ ವಿದ್ಯಾರ್ಥಿಗಳಾದ ಪಿ.ಎಂ. ವೇಣುಗೋಪಾಲ್, ಕಾರ್ತಿಕ್ ಕೆ.ಆರ್., ಹವ್ವಾಸ್, ಜೀವನ್, ದಿಶಾ ಪರ್ಲ್ ಮಸ್ಕರೇನಸ್, ಗೌರೀಶ್, ಮಹಮ್ಮದ್ ಆಶಿಕ್ ವಿದ್ಯಾರ್ಥಿಗಳ ತಂಡಗಳಿಗೆ ಮೆಂಟರ್‌ಗಳಾಗಿ ಸಹಕರಿಸಿದರು. ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗದ ಸಂಯೋಜಕ, ಐಐಸಿ ಘಟಕದ ಸದಸ್ಯ ಹರ್ಷಿತ್ ಆರ್., ಲಾಜಿಸ್ಟಿಕ್ ಸಂಯೋಜಕರಾಗಿ ಕರ್ತವ್ಯ ನಿರ್ವಹಿಸಿದರು. ಇನ್ನೊವೇಟ್ ಹ್ಯಾಕ್ ತಾಂತ್ರಿಕಸಮಿತಿಮುಖ್ಯಸ್ಥೆಯಾಗಿ ಸ್ನಾತಕೋತ್ತರ ಗಣಕ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಅಕ್ಷತಾ ಬಿ. ಕರ್ತವ್ಯ ನಿರ್ವಹಿಸಿದರು. ಸಹಾಯಕ ಪ್ರಾಧ್ಯಾಪಕರಾದ ನೀಲಮ್ ಕುಟ್ಟಪ್ಪ, ರಶ್ಮಿ ವಿ., ಶೋಧನ್ ಪಿ.ಜಿ. 32 ಗಂಟೆಗಳ ಕಾಲವೂ ವಿದ್ಯಾರ್ಥಿಗಳಮೇಲ್ವಿಚಾರಕರಾಗಿಕರ್ತವ್ಯನಿರ್ವಹಿಸಿದರು. ಕಾಲೇಜಿನ ದ್ವಿತೀಯ ಬಿಬಿಎ ತರಗತಿಯ ಲಿಖಿತ್, ಭವತ್, ಪ್ರಣಾಮ್, ಸುಮಂತ್ ಹಾಗೂ ಪ್ರಕೃತ್ ಕಾರ್ಯಕ್ರಮಕ್ಕೆ ಸಹಕಾರ ನೀಡಿದರು.

ವಿಜೇತ ತಂಡಗಳು

ಹ್ಯಾಕಥಾನ್‌ನಲ್ಲಿ ಎಜುಟೆಕ್, ಅಗ್ರಿಟೆಕ್, ಸ್ಮಾರ್ಟ್ ಸಿಟಿ ಮತ್ತು ಸುಸ್ಥಿರ ಪರಿಸರ ಎಂಬ 3 ವಿಭಾಗಗಳಿದ್ದು ತಲಾ 9, 9 ಹಾಗೂ 8 ತಂಡಗಳು ಈ ವಿಭಾಗಗಳನ್ನು ಆಯ್ಕೆ ಮಾಡಿದ್ದವು. ಎಜುಟೆಕ್ ವಿಭಾಗದಲ್ಲಿ ಕೋಡ್ ಕ್ಯಾಟಲಿಸ್ಟ್ ತಂಡ, ಅಗ್ರಿ ಟೆಕ್ ವಿಭಾಗದಲ್ಲಿ ಡೆವೆಕ್ಸ್ ತಂಡ, ಸ್ಮಾರ್ಟ್ ಸಿಟಿ ವಿಭಾಗದಲ್ಲಿ ಲಾಜಿಕ್ ಲೂಪ್ ತಂಡಗಳು ತಲಾ ರೂ.1 ಸಾವಿರ ನಗದು ಬಹುಮಾನ ಮತ್ತು ಟ್ರೋಫಿಯನ್ನು ಪಡೆದವು. ಎಜುಟೆಕ್ ವಿಭಾಗದಲ್ಲಿ ಹ್ಯಾಕ್ ವರ್ಸ್ ತಂಡ, ಅಗ್ರಿ ಟೆಕ್ ವಿಭಾಗದಲ್ಲಿ ಮೈಂಡ್ ಫೋರ್ಜ್ ತಂಡ ಸ್ಮಾರ್ಟ್ ಸಿಟಿ ವಿಭಾಗದಲ್ಲಿ ಕೋಡ್ ಆಫ್ ಡ್ಯೂಟಿ ತಂಡಗಳು ವಿಶೇಷ ವಿಭಾಗದಲ್ಲಿ ತಲಾ ರೂ.2 ಸಾವಿರ ನಗದು ಬಹುಮಾನ ಮತ್ತು ಟ್ರೋಫಿಯನ್ನು ಪಡೆದವು. ಆ–ಯಸ್ಟ್ರೋಸ್ ತಂಡ ರೂ.7500 ನಗದು ಹಾಗೂ ಟ್ರೋಫಿಯೊಂದಿಗೆ ಪ್ರಥಮ, ಹ್ಯಾಕ್ ಸ್ಪ್ರಿಂಟ್ ತಂಡ ರೂ.5 ಸಾವಿರ ನಗದು ಹಾಗೂ ಟ್ರೋಫಿಯೊಂದಿಗೆ ದ್ವಿತೀಯ, ಇನ್ನೊವೇಟ್ರಿಕ್ಸ್ ತಂಡ ಟ್ರೋಫಿಯೊಂದಿಗೆ ತೃತೀಯ ಬಹುಮಾನ ತಮ್ಮದಾಗಿಸಿಕೊಂಡವು.

ಸುತ್ತ ಮುತ್ತ

ಫೆ.26: ಅನಂತಪುರ ಕ್ಷೇತ್ರ ವಾರ್ಷಿಕ ಮಹೋತ್ಸವ

ಕುಂಬಳೆ: ಸರೋವರ ಕ್ಷೇತ್ರವೆಂದೇ ಪ್ರಸಿದ್ಧಿ ಪಡೆದಿರುವ ಅನಂತಪುರ ಶ್ರೀ ಅನಂತ ಪದ್ಮನಾಭ ಸ್ವಾಮಿ ದೇವಸ್ಥಾನದಲ್ಲಿ ಫೆ.26ರಂದು ವಾರ್ಷಿಕ ಮಹೋತ್ಸವವು ವಿವಿಧ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರಗಲಿದೆ. ಬೆಳಗ್ಗೆ 8ಗಂಟೆಗೆ ಗಣಪತಿ ಹವನ, ವೇದ ಪಾರಾಯಣ, ಬಿಂಬ ಶುದ್ಧಿ, ಪಂಚ ವಿಂಶತಿ ಕಲಶಾಭಿಷೇಕ, 8.30ಕ್ಕೆ ಸೋಪಾನ ಸಂಗೀತ (ಅಷ್ಟಪದಿ), ಭಜನೆ, 10ರಿಂದ ಸಾಂಸ್ಕೃತಿಕ ಕಾರ್ಯಕ್ರಮ, 10.30ರಿಂದ ತುಲಾಭಾರ ಸೇವೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನ ಸಂತರ್ಪಣೆ, ಸಂಜೆ 6ಗಂಟೆಗೆ ತಾಯಂಬಕ, 4ಕ್ಕೆ ದೀಪಾರಾಧನೆ, ಶಾಸ್ತಾರ ವನದಲ್ಲಿ ಭಜನೆ, ರಾತ್ರಿ 7ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಪೂಜೆ, 7.30ಕ್ಕೆ ಶ್ರೀ ಭೂತಬಲಿ, ಬೆಡಿಕಟ್ಟೆ ಪೂಜೆ, ಫೆ.28ರಂದು ಬೆಳಗ್ಗೆ 9ರಿಂದ ಸಂಪ್ರೋಕ್ಷಣೆ ನೆರವೇರಲಿದೆ.

ವಾಹನ ಸಂಚಾರ ಬಂದ್

ಕಾಸರಗೋಡು: ನಿರ್ವಹಣಾ ಕಾರ್ಯದ ನಿಮಿತ್ತ ಫೆ.23 ರಂದು ಬೆಳಗ್ಗೆ 8ರಿಂದ ಫೆ.24ರಂದು ಸಂಜೆ 6ರ ವರೆಗೆ ಕೋಟಿಕುಳಂ ಲೆವೆಲ್ ಕ್ರಾಸಿಂಗ್ ಸಂಖ್ಯೆ 280 (ಟಿ) ಮುಚ್ಚಲಾಗುವುದು. ವಾಹನಗಳು ಲೆವೆಲ್ ಕ್ರಾಸಿಂಗ್ ಸಂಖ್ಯೆ 281 (ಉದುಮ ಗೇಟ್) ಮತ್ತು 1189 ಎಆರ್‌ಯುಬಿ (ತೃಕ್ಕನ್ನಾಡು ಆರ್‌ಯುಬಿ) ಮೂಲಕ ಸಂಚರಿಸಬಹುದು ಎಂದು ದಕ್ಷಿಣ ರೈಲ್ವೆ ಪಾಲಕ್ಕಾಡು ವಿಭಾಗ ಮಂಗಳೂರು ಸಹಾಯಕ ವಿಭಾಗೀಯ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.22: ಶಿವಶಕ್ತಿ ಫ್ರೆಂಡ್ಸ್ ಕ್ಲಬ್ ವಾರ್ಷಿಕೋತ್ಸವ

ಮಂಜೇಶ್ವರ: ಮುರತ್ತಣೆ ಶಿವಶಕ್ತಿ ಫ್ರೆಂಡ್ಸ್ ಕ್ಲಬ್ ಇದರ 19ನೇ ವಾರ್ಷಿಕೋತ್ಸವ ಫೆ.22ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬೆಳಗ್ಗೆ 7ಗಂಟೆಗೆ ಗಣಪತಿಹೋಮ, ರಾತ್ರಿ 8ಕ್ಕೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಉದ್ಯಮಿ ವಿಶ್ವನಾಥ ಕುದುರು ಅಧ್ಯಕ್ಷತೆ ವಹಿಸುವರು. ಯೋಗೀಶ್ ರಾವ್ ಚಿಗುರುಪಾದೆ, ತುಳಸಿ ಕುಮಾರಿ, ಕೆ.ಎ.ಅಬ್ದುಲ್ ರಜಾಕ್ ಹಾಜಿ ಮುರತ್ತಣೆ, ಕರಷ್ಣ ಮಲ್ಯ ಮೊದಲಾದವರು ಉಪಸ್ಥಿತರಿರುವರು. ಮುಖ್ಯೋಪಾಧ್ಯಾಯಿನಿ ಪುಷ್ಪಾವತಿ ಎ. ಅವರನ್ನು ಸನ್ಮಾನಿಸಲಾಗುವುದು. ಸಂಜೆ 6ಕ್ಕೆ ಮಕ್ಕಳಿಂದ ನೃತ್ಯ ಕಾರ್ಯಕ್ರಮ, ರಾತ್ರಿ 9.30ರಿಂದ ಮುರತ್ತಣೆ ಜಂಕ್ಷನ್‌ನಲ್ಲಿ ಶ್ರೀ ಭಜರಂಗ ಬಲಿ ನಾಟಕ ಪ್ರದರ್ಶನ, ಅನ್ನದಾನ ನಡೆಯಲಿದೆ.

ಗುತ್ತಿಗೆ ಹುದ್ದೆಗೆ ಸಂದರ್ಶನ

ಕಾಸರಗೋಡು: ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಸಂಖ್ಯೆ 2 ಕಾಸರಗೋಡು ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಸಂದರ್ಶನ ನಡೆಯಲಿದೆ. ನೇಮಕಾತಿ ಕೆವಿಎಸ್ ಮಾನದಂಡಗಳ ಪ್ರಕಾರವಾಗಿದೆ. ಫೆ.24ರಂದು ಪಿಜಿಟಿ (ಹಿಂದಿ, ರಸಾಯನಶಾಸ್ತ್ರ), ಟಿಜಿಟಿ (ಸಮಾಜ ವಿಜ್ಞಾನ), ಕಂಪ್ಯೂಟರ್ ಸಯನ್ಸ್ ವಿಟಿಎಲ್ ಬೋಧಕ, ಕ್ರೀಡಾ ತರಬೇತುದಾರ, ಯೋಗ ಬೋಧಕ, ವೈದ್ಯರು ಮತ್ತು ಸ್ಟಾಫ್ ನರ್ಸ್ ಹುದ್ದೆಗಳಿಗೆ ಸಂದರ್ಶನ ನಡೆಯಲಿದೆ. ಫೆ.26ರಂದು ಪ್ರಾಥಮಿಕ ಶಿಕ್ಷಕರು, ನರ್ಸರಿ ಶಿಕ್ಷಕರು, ಸಂಗೀತ ಶಿಕ್ಷಕರು, ಕಲಾ ಶಿಕ್ಷಕರು, ಮಲೆಯಾಳ ಭಾಷಾ ಶಿಕ್ಷಕರು, ಕೌನ್ಸಿಲರ್ ಮತ್ತು ವಿಶೇಷ ಶಿಕ್ಷಕರ ಹುದ್ದೆಗಳಿಗೂ ಸಂದರ್ಶನ ಏರ್ಪಡಿಸಲಾಗಿದೆ. ಸಮಯ ಬೆಳಗ್ಗೆ 9.30ರಿಂದ 11ರ ವರೆಗೆ ಆಗಿದ್ದು ಹೆಚ್ಚಿನ ಮಾಹಿತಿ ಶಾಲೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ದೂರವಾಣಿ ಸಂಖ್ಯೆ 04994 256788 ಅಥವಾ 04994 295788 ಮೂಲಕ ವಿವರ ಪಡೆಯಬಹುದು.

ಟೆಂಡರ್ ಆಹ್ವಾನ

ಕಾಸರಗೋಡು: ಪರಪ್ಪ ಐಸಿಡಿಎಸ್ ವ್ಯಾಪ್ತಿಯ 101 ಅಂಗನವಾಡಿಗಳಿಗೆ ಆಡಳಿತಾತ್ಮಕ ವೆಚ್ಚಗಳ ಖರೀದಿಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮಾರ್ಚ್ 4 ರಂದು ಮಧ್ಯಾಹ್ನ 1 ಗಂಟೆ ಆಗಿದೆ. ಅಪರಾಹ್ನ 2.30ಕ್ಕೆ ಟೆಂಡರ್ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ 9562532557 ಕರೆ ಮಾಡಬಹುದು.

ಕಿಟ್ ವಿತರಣೆಗೆ ಟೆಂಡರ್

ಕಾಸರಗೋಡು: ಪರಪ್ಪ ಹೆಚ್ಚುವರಿ ಐಸಿಡಿಎಸ್ ವ್ಯಾಪ್ತಿಯ 118 ಅಂಗನವಾಡಿಗಳಿಗೆ ಪ್ರಿ ಸ್ಕೂಲ್ ಕಿಟ್‌ಗಳನ್ನು ವಿತರಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರ್ಮ್‌ಗಳನ್ನು ವಿತರಿಸಲು ಕೊನೆಯ ದಿನಾಂಕ ಫೆ.27ರಂದು ಮಧ್ಯಾಹ್ನ 1 ಗಂಟೆ ಆಗಿದೆ. ಟೆಂಡರ್‌ಗಳನ್ನು ಅದೇ ದಿನ ಮಧ್ಯಾಹ್ನ 2 ಗಂಟೆಯವರೆಗೆ ಸ್ವೀಕರಿಸಲಾಗುತ್ತದೆ. ಟೆಂಡರ್‌ಗಳನ್ನು ಅದೇ ದಿನದಂದು ಅಪರಾಹ್ನ 2.30ಕ್ಕೆ ತೆರೆಯಲಾಗುತ್ತದೆ. ಹೆಚ್ಚಿನ ವಿವರಗಳಿಗೆ 0471 2228002 ಸಂಪರ್ಕಿಸಬಹುದು.

ಹಂದಿ ಸಾಕಾಣಿಕೆ ತರಬೇತಿ

ಕಾಸರಗೋಡು: ಫೆ.23 ಮತ್ತು 24 ರಂದು ಬೆಳಗ್ಗೆ 10.15 ರಿಂದ ಸಂಜೆ 5ರ ವರೆಗೆ ತೆಕ್ಕಿಬಜಾರ್‌ನ ಕಣ್ಣೂರು ಜಿಲ್ಲಾ ಹೋಮಿಯೋ ಆಸ್ಪತ್ರೆಯ ಬಳಿಯಿರುವ ಪಶುಸಂಗೋಪನಾ ತರಬೇತಿ ಕೇಂದ್ರದಲ್ಲಿ ಹಂದಿ ಸಾಕಾಣಿಕೆ ಕುರಿತು ತರಬೇತಿ ತರಗತಿಯನ್ನು ಆಯೋಜಿಸಲಾಗುತ್ತಿದೆ. ತರಬೇತಿಯಲ್ಲಿ ಭಾಗವಹಿಸಲು ಇಚ್ಛಿಸುವವರು ಫೆ.21ರಂದು ಸಂಜೆ 4 ಗಂಟೆಯೊಳಗೆ ತರಬೇತಿ ಕೇಂದ್ರದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ 0497 2763473 ಕರೆ ಮಾಡಬಹುದು.

ಕೇರಳದಲ್ಲಿ ಮಳೆ ಸಾಧ್ಯತೆ

ಕಾಸರಗೋಡು: ಅರಬ್ಬೀ ಸಮುದ್ರದಲ್ಲಿ ವಾಯುಭಾರ ಕುಸಿತ ಸಂಭವಿಸಿದ ಹಿನ್ನೆಲೆಯಲ್ಲಿ ಕಾಸರಗೋಡು ಕೇರಳದ ವಿವಿಧ ಜಿಲ್ಲೆಗಳಲ್ಲಿ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ತಿರುವನಂತಪುರದ ಕೇಂದ್ರ ಹವಾಮಾನ ಇಲಾಖೆಯು ತಿಳಿಸಿದೆ.

ಉತ್ಸವಕ್ಕೆ ಸಿದ್ಧಗೊಳ್ಳುತ್ತಿದೆ ಮಿಂಚಿಪದವು ಶ್ರೀ ಕಾವೇರಿಯಮ್ಮ ಮಹಾಲಿಂಗೇಶ್ವರ ದೇವಸ್ಥಾನ

ಫೆ.22ರಿಂದ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ



ಕಾಸರಗೋಡು: ಮಿಂಚಿಪದವು ಶ್ರೀ ಕಾವೇರಿಯಮ್ಮ ಮಹಾಲಿಂಗೇಶ್ವರ ಕ್ಷೇತ್ರದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವವು ಫೆ.22ರಿಂದ 27ರ ವರೆಗೆ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ಆಶೀರ್ವಾದದೊಂದಿಗೆ ಶ್ರೀ ಕ್ಷೇತ್ರದ ತಂತ್ರಿವರ್ಯರಾದ ಬ್ರಹ್ಮಶ್ರೀ ವೇದಮೂರ್ತಿ ವಾಸುದೇವ ತಂತ್ರಿ ಕುಂಟಾರು ಮತ್ತು ಬ್ರಹ್ಮಶ್ರೀ ವೇದಮೂರ್ತಿ ರವೀಶ ತಂತ್ರಿ ಕುಂಟಾರು ಅವರ ಆಚಾರ್ಯತ್ವದಲ್ಲಿ ಜರಗಲಿದೆ.

ಫೆ.22ರಂದು ಬೆಳಗ್ಗೆ 6.30ಕ್ಕೆ ಗಣಪತಿ ಹೋಮ, 7ರಿಂದ ಭಜನಾಮೃತ, 7.40 ಶಿವಕಾವೇರಿ ಸಭಾ ಭವನದ ಪ್ರವೇಶ ಮುಹೂರ್ತ, 9.30ರಿಂದ ಕುಂಟಾರು ಶ್ರೀ ವಿಷ್ಣುಮೂರ್ತಿ ಕ್ಷೇತ್ರದಿಂದ ಹಸಿರುವಾಣಿ ಹೊರೆಕಾಣಿಕೆಯ ಭವ್ಯ ಶೋಭಾಯಾತ್ರೆ ವಾದ್ಯಘೋಷ, ಚೆಂಡೆನಾದ. ಕುಣಿತ ಭಜನೆಯೊಂದಿಗೆ ಹೊರಡುವುದು, 11.31ಕ್ಕೆ ಕುಂಭ ಲಗ್ನದಲ್ಲಿ ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಸತ್ಯನಾರಾಯಣ ಭಟ್ ಅನೆಮಜಲು ಅವರು ಉಗ್ರಾಣ ಮುಹೂರ್ತ ನೆರವೇರಿಸುವರು. ಮಧ್ಯಾಹ್ನ 12.30ರಿಂದ ಮಹಾಪೂಜೆ, ಪ್ರಸಾದ ವಿತರಣೆ ನಡೆಯಲಿದೆ. ಸಂಜೆ 4 ಗಂಟೆಗೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಬ್ರಹ್ಮಶ್ರೀ ವೇದಮೂರ್ತಿ ವಾಸುದೇವ ತಂತ್ರಿ ಕುಂಟಾರು, ಬ್ರಹ್ಮಶ್ರೀ ವೇದಮೂರ್ತಿ ರವೀಶ ತಂತ್ರಿ ಕುಂಟಾರು ಅವರಿಗೆ ಪೂರ್ಣಕುಂಭ ಸ್ವಾಗತ, 4.30ಕ್ಕೆ ಎಡನೀರು ಶ್ರೀಗಳಿಂದ ಹಾಗೂ ತಂತ್ರಿವರ್ಯರಿಂದ ಶಿವಕಾವೇರಿ ಸಭಾಭವನ ಲೋಕಾರ್ಪಣೆ, 5 ಗಂಟೆಗೆ ಶಿವಕಾವೇರಿ ವೇದಿಕೆಯಲ್ಲಿ ಧಾರ್ಮಿಕ ಸಭೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 6ರಿಂದ ದೇವತಾ ಪ್ರಾರ್ಥನೆ, ಆಚಾರ್ಯವರಣ, ಪುಣ್ಯಾಹವಾಚನ, ಪ್ರಾಸಾದ ಶುದ್ಧಿ, ಅಂಕುರಾರೋಹಣ, ರಾಕ್ಷೋಘ್ನ ಹೋಮ, ವಸ್ತು ಹೋಮ, ವಾಸ್ತು ಬಲಿ, ಪುಣ್ಯಾಹ ಜರಗಲಿದೆ. ರಾತ್ರಿ 8.30 ರಿಂದ ನೃತ್ಯೋಹಂ ನೃತ್ಯ ಕಾರ್ಯಕ್ರಮ ಜರಗಲಿದೆ. ಫೆ.23ರಂದು ಬೆಳಗ್ಗೆ ಗಂಟೆ 6 ಗಂಟೆಗೆ ಗಣಪತಿ ಹೋಮ, ಪ್ರೋಕ್ತ ಹೋಮ, ಪ್ರಾಯಶ್ಚಿತ್ತ ಹೋಮಗಳು, ಬಿಂಬಶುದ್ಧಿ, ತ್ರಿಕಾಲ ಪೂಜೆ, ಶ್ರೀಕೃಷ್ಣ ಭಜನಾ ಮಂಟಪದಲ್ಲಿ ಭಜನಾಮೃತ, 10 ಗಂಟೆಯಿಂದ ಧಾರ್ಮಿಕ ಸಭಾ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ಅಂಕುರಪೂಜೆ, ತ್ರಿಕಾಲಪೂಜೆ, ಮಹಾಪೂಜೆ, 2 ಗಂಟೆಗೆ ಶಿವಕಾವೇರಿ ಕಲಾವೇದಿಕೆಯಲ್ಲಿ ಯಕ್ಷಗಾನ ತಾಳಮದ್ದಳೆ, ಸಂಜೆ 4ರಿಂದ ಶಾಸ್ತ್ರೀಯ ಸಂಗೀತ, 6 ರಿಂದ ಭರತನಾಟ್ಯ, ರಾತ್ರಿ 7 ಗಂಟೆಗೆ ಹೋಮ ಕಲಶಾಭಿಷೇಕ, ಅನುಜ್ಞಾ ಕಲಶಪೂಜೆ, ತ್ರಿಕಾಲಪೂಜೆ, ಮಹಾಪೂಜೆ ಮೊದಲಾದ ವೈದಿಕ ಕಾರ್ಯಕ್ರಮಗಳು, 7ರಿಂದ ಏಕವ್ಯಕ್ತಿ ನಾಟಕ, 8ರಿಂದ ಸಾಹಿತ್ಯ ಗಾನ ನೃತ್ಯ ವೈಭವ ಕಾರ್ಯಕ್ರಮ ಜರಗಲಿದೆ.

ಫೆ.24ರಂದು ಬೆಳಗ್ಗೆ 6ಕ್ಕೆ ಗಣಪತಿ ಹೋಮ, ಶಾಂತಿ ಹೋಮಗಳು, ದಹನ ಪ್ರಾಯಶ್ಚಿತ್ತ, ತ್ರಿಕಾಲ ಪೂಜೆ,7ರಿಂದ ಶ್ರೀಕೃಷ್ಣ ಭಜನಾ ಮಂಟಪದಲ್ಲಿ ಭಜನಾಮೃತ, 9.30ರಿಂದ ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ, ಶಿವಕಾವೇರಿ ಕಲಾವೇದಿಕೆಯಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ, ಮಧ್ಯಾಹ್ನ 12ರಿಂದ ಅಂಕುರಪೂಜೆ, ತ್ರಿಕಾಲಪೂಜೆ, ಮಹಾಪೂಜೆ, ಪ್ರಸಾದ ವಿತರಣೆ, 2 ಗಂಟೆಗೆ ಶಿವಕಾವೇರಿ ಕಲಾವೇದಿಕೆಯಲ್ಲಿ ಯಕ್ಷಗಾನ ತಾಳಮದ್ದಳೆ, ಸಂಜೆ 4ಕ್ಕೆ ಮಿಮಿಕ್ರಿ ಮತ್ತು ನೃತ್ಯಮಯ ಯೋಗಾಸನ, 6ರಿಂದ ಭಕ್ತಿ ರಸಮಂಜರಿ, ರಾತ್ರಿ 7ರಿಂದ ಹೋಮ ಕಲಶಾಭಿಷೇಕ, ಅನುಜ್ಞಾ ಕಲಶಪೂಜೆ, ತ್ರಿಕಾಲ ಪೂಜೆ, ಮಹಾ ಪೂಜೆ, ಪ್ರಸಾದ ವಿತರಣೆ 8.30ರಿಂದ ಯಕ್ಷಗಾನ ಬಯಲಾಟ, ಫೆ.25ರಂದು ಬೆಳಗ್ಗೆ 6ಕ್ಕೆ ಗಣಪತಿ ಹೋಮ, ತತ್ವಕಲಶಾಭಿಷೇಕ, ಅನುಜ್ಞಾಕಲಶಾಭಿಷೇಕ, ತ್ರಿಕಾಲ ಪೂಜೆ, ಮಹಾಪೂಜೆ, ಪ್ರಸಾದ ವಿತರಣೆ, ಶ್ರೀಕೃಷ್ಣ ಭಜನಾ ಮಂಟಪದಲ್ಲಿ ಭಜನಾಮೃತ, 9.30ಕ್ಕೆ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್‌ನ ಶ್ರೀ ಗುರುದೇವಾನಂದ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ, ಶಿವಕಾವೇರಿ ಕಲಾವೇದಿಕೆಯಲ್ಲಿ 10ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ಅಂಕುರಪೂಜೆ, ತ್ರಿಕಾಲಪೂಜೆ, ಮಹಾಪೂಜೆ, 2 ಗಂಟೆಗೆ ಶಿವಕಾವೇರಿ ಕಲಾವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ಯಕ್ಷಗಾನ ತಾಳಮದ್ದಳೆ, ಸಂಜೆ 6ಕ್ಕೆ ನಾಡನ್‌ಪಾಟ್, ರಾತ್ರಿ 7ರಿಂದ ವೈದಿಕ ಕಾರ್ಯಕ್ರಮದ ಅಂಗವಾಗಿ ಅನುಜ್ಞಾ ಬಲಿ, ಕ್ಷೇತ್ರಪಾಲನಲ್ಲಿ ಅನುಜ್ಞಾ ಪ್ರಾರ್ಥನೆ. ಬಿಂಬಶುದ್ಧಿ ಕಲಶಪೂಜೆ, ಅಂಕುರ ಪೂಜೆ, ತ್ರಿಕಾಲ ಪೂಜೆ, ಮಹಾಪೂಜೆ, ಪ್ರಸಾದ ವಿತರಣೆ ನಡೆಯಲಿದೆ. 7 ಗಂಟೆಗೆ ನೃತ್ಯ ರೂಪಕ, 8.30ಕ್ಕೆ ಭಕ್ತಿಗಾನ ಮೇಳ ನಡೆಯಲಿದೆ. ಫೆ.26ರಂದು ಬೆಳಗ್ಗೆ 6ರಿಂದ ಗಣಪತಿ ಹೋಮ, ಸಂಹಾರ ತತ್ವ ಹೋಮ, ತತ್ವಕಲಶಪೂಜೆ, ಕುಂಭೇಶ ಕರ್ಕರಿ ಪೂಜೆ, ಶಯ್ಯಾ ಪೂಜೆ, ಅ ವಾಸ ಹೋಮದ ಅಗ್ನಿ ಜನನ, ತತ್ವಕಲಶಾಭಿಷೇಕ, ಜೀವಕಲಶ ಪೂಜೆ, ಜೀವೋದ್ವಾಸನೆ, ಜೀವಕಲಶ, ಶಯೋನ್ನಯನ, ಮಧ್ಯಾಹ್ನ ಅಂಕುರಪೂಜೆ, ಮಹಾಪೂಜೆ, ಪ್ರಸಾದ ವಿತರಣೆ ನಡೆಯಲಿದೆ. 10ಕ್ಕೆ ಉಡುಪಿ ಅದೋಕ್ಷಜ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರಿಗೆ ಹಾಗೂ ಮಾಣಿ ಕುಕ್ಕಾಜೆ ಶ್ರೀ ಆಂಜನೇಯ – ಕಾಳಿಕಾಂಬಾ ದೇವಸ್ಥಾನದ ಶ್ರೀ ಕೃಷ್ಣ ಗುರೂಜಿಯವರಿಗೆ ಪೂರ್ಣಕುಂಭ ಸ್ವಾಗತ ಶ್ರೀಕೃಷ್ಣ ಭಜನಾ ಮಂಟಪದಲ್ಲಿ ಬೆಳಗ್ಗೆ 7ರಿಂದ ಭಜನಾಮೃತ, ಶಿವಕಾವೇರಿ ಕಲಾ ವೇದಿಕೆಯಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ, ಅಪರಾಹ್ನ 3 ಗಂಟೆಗೆ ಭಗವದ್ಗೀತೆ ಪಾರಾಯಣ, 4ರಿಂದ ಭಕ್ತಿ ರಸ ಮಂಜರಿ, 6ರಿಂದ ದಾಸ ಸಂಕೀರ್ತನೆ, ರಾತ್ರಿ 7 ಗಂಟೆಗೆ ಧ್ಯಾನಾಧಿವಾಸ, ಅವಾಸ ಹೋಮ, ಶಿರಸ್ತತ್ವ ಹೋಮ, ಪ್ರತಿಷ್ಠಾ ಹೋಮ, ಪುಣ್ಯಾಹವಾಚನ, ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತು ಬಲಿ, 7.30 ರಿಂದ ಭಕ್ತಿಗಾನ ಮೇಳ, 8.30ರಿಂದ ಮೆಗಾ ತಿರುವಾದಿರ ನೃತ್ಯ, 9 ಕೈಕೊಟ್ಟಿಕಳಿ, ಚಿಣ್ಣರ ಚೆಲ್ಲಾಟ, ಚಿಣ್ಣರ ಕುಣಿತ ನೃತ್ಯರೂಪಕ, ಭರತನಾಟ್ಯ ಕಾರ್ಯಕ್ರಮ, ಸಂಘ ನೃತ್ಯ, ನೃತ್ಯ, ಕೂಚುಪುಡಿ ಜರಗಲಿದೆ.

ಫೆ.27ರಂದು ಬೆಳಗ್ಗೆ 6ರಿಂದ 108 ತೆಂಗಿನಕಾಯಿ ಗಣಪತಿ ಹೋಮ, ಶ್ರೀಕೃಷ್ಣ ಭಜನಾ ಮಂಟಪದಲ್ಲಿ ಭಜನಾಮೃತ, 11.55ರ ವೃಷಭ ಲಗ್ನ ಸುಮೂಹೂರ್ತದಲ್ಲಿ ಶ್ರೀ ಮಹಾಲಿಂಗೇಶ್ವರ ದೇವರ ಪುನರ್ ಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ ಹಾಗೂ ಶ್ರೀ ಕಾವೇರಿಯಮ್ಮನ ಪುನರ್ ಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ, ಪ್ರತಿಷ್ಠಾ ಬಲಿ ಮಹಾಪೂಜೆ, ನಿತ್ಯ ನೈಮಿತ್ಯಾದಿಗಳ ನಿರ್ಣಯ ಮಹಾಮಂತ್ರಾಕ್ಷತೆ, ಪ್ರಸಾದ ವಿತರಣೆ, ಸಂಜೆ 4 ಗಂಟೆಗೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ, ಸಂಜೆ 4 ಗಂಟೆಗೆ ಶಿವಕಾವೇರಿ ಕಲಾವೇದಿಕೆಯಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ, ರಾತ್ರಿ 7ಕ್ಕೆ ರಂಗಪೂಜೆ, ಶಿವಕಾವೇರಿ ಕಲಾವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 6ರಿಂದ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ. ಎಲ್ಲಾ ದಿನಗಳಲ್ಲೂ ಮಧ್ಯಾಹ್ನ, ರಾತ್ರಿ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ.

ಕಾಸರಗೋಡು ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ: ತ್ರಿಮೂರ್ತಿ ಶಿವ ಜಯಂತಿ



ಕಾಸರಗೋಡು: ಕಾಸರಗೋಡಿನ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಆಶ್ರಯದಲ್ಲಿ 90ನೇ ತ್ರಿಮೂರ್ತಿ ಶಿವ ಜಯಂತಿ ಕಾರ್ಯಕ್ರಮ ಭಾನುವಾರ ವಿವಿಧ ಕಾರ್ಯಕ್ರಮಗಳೊಂದಿಗೆ ಕಾಸರಗೋಡು ಕೇಂದ್ರದಲ್ಲಿ ನಡೆಯಿತು. ಶಿವ ಧ್ವಜಾರೋಹಣದೊಂದಿಗೆ ಆರಂಭ ಗೊಂಡ ಕಾರ್ಯಕ್ರಮದಲ್ಲಿ ನಿವೃತ್ತ ಎಸ್‌ಐ ಸಿ.ಪಿ.ಬಾಬು ಅಧ್ಯಕ್ಷತೆ ವಹಿಸಿದ್ದರು. ವಕೀಲ ಅನಂತರಾಮ ಪಿ. ಕಾಸರಗೋಡು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು ಮಾತನಾಡಿದರು. ವಿಶ್ವವಿದ್ಯಾಲಯದ ಕಾಸರಗೋಡು ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ವಿಜಯಲಕ್ಷ್ಮೀ ಮಹಾ ಶಿವರಾತ್ರಿಯ ಸಂದೇಶ ನೀಡಿದರು. ಸಹಾಯಕ ಪ್ರಾಧ್ಯಾಪಕಿ ರೋಹಿಣಿ, ಸತೀಶ್ ಡಿ.ಕರಿವೆಲ್ಲಿ, ರವಿಶಂಕರ ನಾಯರ್ ಶುಭಹಾರೈಸಿದರು. ಗುಣಪಾಲ, ವರಪ್ರಸಾದ್ ಕೋಟೆಕಣಿ, ರವೀಂದ್ರ ಪ್ರಸಾದ್ ಅವರನ್ನು ರಾಜಯೋಗಿನಿ ಬಿ.ಕೆ.ಮಂಗಳ, ಬಿ.ಕೆ.ಪ್ರೇಮಾ ಹಾಗೂ ಮಿನ್ನಾ ಎ., ಸುಷ್ಮಾ ಮಲ್ಲ ಅವರನ್ನು ಗೌರವಿಸಲಾಯಿತು. ಆಶಿಕಾ, ಕೃಪಾ, ಕೀರ್ತಿ, ತುಷಾರ್, ಆಕ್ಷತ್ ಅವರಿಂದ ನೃತ್ಯ ಪ್ರದರ್ಶನ ನಡೆಯಿತು. ವಿಮಲಾ ಸ್ವಾಗತಿಸಿ, ಬಿ.ಕೆ. ಕವಿತಾ ವಂದಿಸಿದರು. ಬಿ.ಕೆ.ಸುಬ್ರಹ್ಮಣ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರಯಾಣಿಕರಿಗೆ ಸುರಕ್ಷತೆಯ ಸಮಗ್ರ ಅರಿವು ಮೂಡಿಸಿದ ಕಾಸರಗೋಡು ರೈಲ್ವೆ ಪೊಲೀಸರು

ಕಾಸರಗೋಡು: ಪ್ಲೇ ಸ್ಟೋರ್ ಮತ್ತು ಆಂಡ್ರಾಯಿಡ್ ಸ್ಟೋರ್ ಮೂಲಕ ಕೇರಳ ಪೊಲೀಸ್ ಆಪ್‌ನಲ್ಲಿ ರೈಲು ಪ್ರಯಾಣಿಕರ ಸಮಗ್ರ ಸುರಕ್ಷತೆ ಬಗ್ಗೆ ರೈಲ್ವೆ ಮೈತ್ರಿ ಸರ್ವೀಸಸ್ ಎಂಬ ಹೆಸರಿನಲ್ಲಿ ಐದು ಸುರಕ್ಷಾ ನಿರ್ದೇಶನಗಳನ್ನು ನೀಡಲಾಗಿದ್ದು ಆ ಕುರಿತು ಕಾಸರಗೋಡು ರೈಲ್ವೆ ಪೊಲೀಸರು ರೈಲು ಪ್ರಯಾಣಿಕರಿಗೆ ಸಂಪೂರ್ಣ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.


ಕಾಸರಗೋಡು ರೈಲ್ವೆ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಸುನಿಲ್‌ಕುಮಾರ್ ಸಿ.ಎನ್. ಅವರ ನೇತೃತ್ವದಲ್ಲಿ ಈ ಅರಿವು ಮೂಡಿಸುವ ಮತ್ತು ಜಾಗೃತ ಮೂಡಿಸುವ ಕಾರ್ಯಕ್ರಮವನ್ನು ನಡೆಸಲಾಯಿತು. ರೈಲುಗಳಲ್ಲಿ ಏಕಾಂಗಿಯಾಗಿ ಪ್ರಯಾಣಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಸುರಕ್ಷಾ ಕ್ರಮಗಳು, ರೈಲು ಪ್ರಯಾಣದ ವೇಳೆ ಪ್ರಯಾಣಿಕರ ಬೆಲೆಬಾಳುವ ಸಾಮಗ್ರಿಗಳು ನಷ್ಟಗೊಂಡಲ್ಲಿ ಅದನ್ನು ಮರು ಗಳಿಸುವಂತೆ ಮಾಡಲು ಕೈಗೊಳ್ಳಬೇಕಾದ ಕ್ರಮಗಳು, ರೈಲು ಪ್ರಯಾಣದ ಸಂದರ್ಭ ಯಾವುದೇ ರೀತಿಯ ಅಪಘಾತಗಳು ಅಥವಾ ಆರೋಗ್ಯ ಸಮಸ್ಯೆಗಳು ತಲೆದೋರಿದಲ್ಲಿ ಅದಕ್ಕೆ ತುರ್ತು ವೈದ್ಯಕೀಯ ಸಹಾಯ ಲಭಿಸುವಂತೆ ಮಾಡುವ ನಿಟ್ಟಿನಲ್ಲಿ ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತುರ್ತು ಮಾಹಿತಿ ನೀಡುವಿಕೆ ಮೊದಲಾದ ಸಹಾಯಗಳ ಕುರಿತಾದ ಮಾಹಿತಿಗಳು ರೈಲ್ವೆ ಮೈತ್ರಿ ಸರ್ವೀಸ್‌ನಲ್ಲಿ ದೊರಕುತ್ತದೆ. ಆ ಬಗ್ಗೆ ರೈಲ್ವೆ ಪೊಲೀಸರು ಪ್ರಯಾಣಿಕರಿಗೆ ವಿವಿಧ ರೀತಿಯಲ್ಲಿ ಮಾಹಿತಿ ನೀಡಿದರು. ಕಾಸರಗೋಡು ನಗರದ ರೈಲ್ವೆ ನಿಲ್ದಾಣದಲ್ಲಿ ಆಯೋಜಿಸಲಾಗಿದ್ದ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ರೈಲ್ವೆ ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್ ಮಹೇಶ್ ಸಿ.ಕೆ., ಸೀನಿಯರ್ ಸಿವಿಲ್ ಪೊಲೀಸ್ ಆಫೀಸರ್ ಕೃಪೇಶ್ ಎಂ.ಎ., ಸಿವಿಲ್ ಪೊಲೀಸ್ ಆಫೀಸರ್ ಗಣದ ಸುಶಾಂತ್, ಪಿ., ಶಾನವಾಸ್ ವಿ., ಸಲೀಂ ಕಶೀರ್ ಪಿ.ಎಂ. ಭಾಗವಹಿಸಿದ್ದರು.

ಬದಿಯಡ್ಕ: ವ್ಯಾಪಾರಿಗಳಿಂದ ನೂತನ ಜನಪ್ರತಿನಿಧಿಗಳಿಗೆ ಸನ್ಮಾನ



ಬದಿಯಡ್ಕ: ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನ ಸಮಿತಿ ಬದಿಯಡ್ಕ ಘಟಕದ ವತಿಯಿಂದ ಸ್ಥಳೀಯಾಡಳಿತ ಸಂಸ್ಥೆಗಳ ಚುನಾವಣೆಯಲ್ಲಿ ಆಯ್ಕೆಯಾದ ಜನಪ್ರತಿನಿಧಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. ಯೂನಿಟ್ ಅಧ್ಯಕ್ಷ ನರೇಂದ್ರ ಬಿ.ಎನ್. ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮವನ್ನು ಜಿಲ್ಲಾಧ್ಯಕ್ಷ ಅಹಮ್ಮದ್ ಶರೀಫ್ ಉದ್ಘಾಟಿಸಿದರು. ಮೃತಪಟ್ಟ ವ್ಯಾಪಾರಿಗಳ ಕುಟುಂಬಗಳಿಗೆ ಜಿಲ್ಲಾ ಸಮಿತಿಯ ಕ್ಷೇಮನಿಧಿಯಿಂದ ಧನಸಹಾಯವನ್ನು ಜಿಲ್ಲಾಕಾರ್ಯದರ್ಶಿ ದಾಮೋದರನ್ ಕುತ್ತಿಕೋಲು, ಕೋಶಾಧಿಕಾರಿ ಮೊಹಮ್ಮದ್ ಹಾಜಿ ವಿತರಿಸಿದರು. ಜನಪ್ರತಿನಿಧಿಗಳಾದ ಬದಿಯಡ್ಕ ಗ್ರಾ.ಪಂ.ಅಧ್ಯಕ್ಷ ಶಂಕರ ಡಿ., ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಜಿಲ್ಲಾ ಪಂಚಾಯತ್ ಸದಸ್ಯ ಎಂ.ಪಿ.ರಾಮಪ್ಪ ಮಂಜೇಶ್ವರ, ಬ್ಲಾಕ್ ಪಂಚಾಯತ್ ಸದಸ್ಯರಾದ ಎಂ.ಎಸ್.ಮೊಯ್ದು, ಮಹೇಶ್ ವಳಕ್ಕುಂಜ, ಹಾದರ್ ಮಾನ್ಯ, ಗ್ರಾಮ ಪಂಚಾಯತ್ ಸ್ಥಾಯೀ ಸಮಿತಿ ಅಧ್ಯಕ್ಷರಾದ ಹಮೀದ್ ಕೆಡೆಂಜಿ, ರಜನಿ ಸಂದೀಪ್, ಅವಿನಾಶ್ ವಿ.ರೈ, ಹಿರಿಯ ಸದಸ್ಯರಾದ ಬಾಲಕೃಷ್ಣ ಶೆಟ್ಟಿ ಕೆ., ಮಾಹಿನ್ ಕೇಳೋಟ್, ಗಂಗಾಧರ ಗೋಳಿಯಡ್ಕ, ಶ್ಯಾಮಪ್ರಸಾದ ಮಾನ್ಯ ಹಾಗೂ ವಿವಿಧ ವಾರ್ಡ್‌ಗಳ ಸದಸ್ಯರನ್ನು ಅಭಿನಂದಿಸಲಾಯಿತು. ಜಿಲ್ಲಾ ಮಾಜಿ ಉಪಾಧ್ಯಕ್ಷ ಎಸ್.ಎನ್. ಮಯ್ಯ, ಬದಿಯಡ್ಕ ಯೂನಿಟ್ ಕೋಶಾಧಿಕಾರಿ ಜ್ಞಾನದೇವ ಶೆಣೈ, ಉಪಾಧ್ಯಕ್ಷ ರಾಜು ಸ್ಟೀಫನ್, ಕಾರ್ಯದರ್ಶಿಗಳಾದ ಉದಯ ಶಂಕರ, ವಿಶ್ವನಾಥನ್ ಇದ್ದರು. ರತ್ನಾಕರ ಓಡಂಗಲ್ಲು ಪ್ರಾರ್ಥನೆ ಹಾಡಿದರು. ಯೂನಿಟ್ ಪ್ರಧಾನ ಕಾರ್ಯದರ್ಶಿ ರವಿ ನವಶಕ್ತಿ ಸ್ವಾಗತಿಸಿ, ಉಪಾಧ್ಯಕ್ಷ ಹಮೀದ್ ಬಾರಿಕ್ ವಂದಿಸಿದರು.

ಪರಾಭವ ಭೀತಿಯಿಂದ ಬಿಜೆಪಿ ವಿರುದ್ಧ ಇಲ್ಲಸಲ್ಲದ ಆರೋಪ: ಎಂ.ಎಲ್.ಅಶ್ವಿನಿ



ಕಾಸರಗೋಡು: ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಈ ಬಾರಿಯ ಚುನಾವಣೆಯಲ್ಲಿ ತಾನು ಪರಾಭವಗೊಳ್ಳುವುದು ಖಚಿತ ಎಂದು ಮನಗಂಡ ಹಿನ್ನೆಲೆಯಲ್ಲಿ ಮತ್ತು ಭೀತಿಯಿಂದ ಈಗ ಮುಸ್ಲಿಂ ಸಮುದಾಯವನ್ನು ಬಳಸಿ ಬಿಜೆಪಿ ವಿರುದ್ಧ ವಿನಾಕಾರಣ ಇಲ್ಲಸಲ್ಲದ ಆರೋಪ ಹೊರಿಸುತ್ತಿದ್ದಾರೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಹೇಳಿದರು.

ಬಿಜೆಪಿ ಕಾಸರಗೋಡು ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆ ಸಮೀಪಿಸುತ್ತಿದ್ದಂತೆ ಎ.ಕೆ.ಎಂ.ಅಶ್ರಫ್ ವೋಟ್ ಡ್ರಾಮ ನಡೆಸುತ್ತಿದ್ದಾರೆ. ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಹಲವಾರು ವರ್ಷಗಳಿಂದ ಮುಸ್ಲಿಂಲೀಗ್ ಕಳ್ಳಮತ ಚಲಾಯಿಸುತ್ತಿದೆ ಎಂದರು.

ಮಂಜೇಶ್ವರ ಬಿಎಲ್‌ಒ ಲೋಕೇಶ್ ನೋಂಡ ಅವರಿಗೆ ಏನಾದರು ಅಪಾಯ ಉಂಟಾದಲ್ಲಿ ಯಾವುದೇ ಬೆಲೆ ತೆತ್ತಾದರೂ ಬಿಜೆಪಿ ಅವರನ್ನು ರಕ್ಷಿಸಲಿದೆ ಎಂದರು.

ಕಳ್ಳ ಮತದಾನದಿಂದ ಮಂಜೇಶ್ವರ ಕ್ಷೇತ್ರದಲ್ಲಿ ಮುಸ್ಲಿಂಲೀಗ್ ಅಭ್ಯರ್ಥಿ ಗೆಲವು ಸಾಧಿಸುತ್ತಿದೆ. 2016ರಲ್ಲಿ ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಕೆ. ಸುರೇಂದ್ರನ್ ಅತ್ಯಲ್ಪ ಮತಗಳ ಅಂತರದಿಂದ ಪರಾಭವಗೊಂಡಿದ್ದಾರೆ. ಇದೇ ವೇಳೆ ಇಲ್ಲಿ 259 ಕಳ್ಳ ಮತದಾನ ನಡೆದಿತ್ತು. ಈ ಬಾರಿ ಸೋಲು ಖಚಿತಗೊಂಡ ಹಿನ್ನೆಲೆಯಲ್ಲಿ ಕುಂಬಳೆ ಟೋಲ್ ಬೂತ್ ವಿಷಯದಲ್ಲಿ ವಿನಾಕಾರಣ ಅಶಾಂತಿ ಸೃಷ್ಟಿಸಲು ಎ.ಕೆ.ಎಂ.ಅಶ್ರಫ್ ಯತ್ನಿಸಿದರು. ಬಿಜೆಪಿ ಪ್ರತಿಯೋರ್ವರ ಏಳಿಗೆಗಾಗಿ ಕಾರ್ಯವೆಸಗುತ್ತಿದೆ. ಬಿಜೆಪಿ ಒಂದು ಸಮುದಾಯವನ್ನು ಮಾತ್ರ ದೂಷಿಸುತ್ತಿಲ್ಲ ಎಂದರು.

ರಾತ್ರಿ ವೇಳೆಯ ಅಧಿಕಾರಿಗಳನ್ನು ಬಳಸಿ ಕಾಸರಗೋಡು, ಮಂಜೇಶ್ವರ ಮಂಡಲ ದಲ್ಲಿ ಮುಸ್ಲಿಂಲೀಗ್‌ನ ಮತದಾರರ ಮತದಾನವನ್ನು ಅಕ್ರಮವಾಗಿ ಸೇರ್ಪಡೆಗೊಳಿಸಲಾಗುತ್ತಿದೆ ಎಂದು ಆರೋಪಿಸಿದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನೀಲ್, ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ್ ಕುದ್ರೆಪ್ಪಾಡಿ ಇದ್ದರು.

ಮಧೂರು ಗ್ರಾಮ ಪಂಚಾಯತ್‌ನಲ್ಲಿ ಅಭಿವೃದ್ಧಿ ಸಂಬಂಧಿಸಿ ವಿಚಾರ ಸಂಕಿರಣ



ಕಾಸರಗೋಡು: ಮಧೂರು ಗ್ರಾಮ ಪಂಚಾಯತ್‌ನ 2026–27ನೇ ವರ್ಷದ ಯೋಜನೆ ರೂಪೀಕರಣಕ್ಕೆ ಸಂಬಂಧಿಸಿ ಮಧೂರು ಗ್ರಾಮ ಪಂಚಾಯತ್‌ನ ಅಟಲ್‌ಜಿ ಸಭಾಂಗಣದಲ್ಲಿ ಅಭಿವೃದ್ಧಿ ವಿಚಾರ ಸಂಕಿರಣ ಜರಗಿತು.

ಕಾಸರಗೋಡು ಬ್ಲಾಕ್ ಪಂಚಾಯತ್ ಉಪಾಧ್ಯಕ್ಷೆ ಉಷಾ ಅರ್ಜುನ್ ಉದ್ಘಾಟಿಸಿದರು. ಗ್ರಾಮ ಪಂಚಾಯತ್ ಉಪಾಧ್ಯಕ್ಷ ಭಾನುಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಪುಷ್ಪಾ ಗೋಪಾಲನ್ ಕರಡು ಯೋಜನಾ ದಾಖಲೆ ಮಂಡಿಸಿದರು. ಸ್ಥಾಯೀಸಮಿತಿ ಅಧ್ಯಕ್ಷರಾದ ಮಾಧವ ಮಾಸ್ತರ್, ದಾಕ್ಷಾಯಿಣಿ, ಬ್ಲಾಕ್ ಸದಸ್ಯೆ ಅಶ್ವಿನಾ ಹಬೀಬ್, ಗ್ರಾಮ ಪಂಚಾಯತ್ ಸದಸ್ಯರು, ಯೋಜನಾ ಸಮಿತಿ ಉಪಾಧ್ಯಕ್ಷ ಸುಕುಮಾರ ಕುದ್ರೆಪ್ಪಾಡಿ ಮತ್ತಿತರರು ಶುಭಹಾರೈಸಿದರು.

ಗ್ರಾಮ ಪಂಚಾಯತ್ ಕಾರ್ಯದರ್ಶಿ ನೀತು ಶಿಬಿಮೋನ್ ಸ್ವಾಗತಿಸಿ, ಅಸಿಸ್ಟೆಂಟ್ ಕಾರ್ಯದರ್ಶಿ ಅಜೀಶ್‌ಖಾನ್ ಎಸ್.ಎಲ್. ವಂದಿಸಿದರು. ಸಭೆಯಲ್ಲಿ ಯೋಜನಾ ಸಮಿತಿ, ವರ್ಕಿಂಗ್ ಗ್ರೂಪ್, ಗ್ರಾಮ ಪಂಚಾಯತ್ ನೌಕರರು, ಕುಟುಂಬಶ್ರೀ, ಹಸಿರು ಕ್ರಿಯಾಸೇನೆ ಸದಸ್ಯೆಯರು ಸಹಿತ ಅಪಾರ ಮಂದಿ ಪಾಲ್ಗೊಂಡಿದ್ದರು.

ಪೆರ್ಲ: ನಾಲಂದ ಕಾಲೇಜು ವಿದ್ಯಾರ್ಥಿಗಳಿಂದ ಕುಂಬಳೆ ಆಸ್ಪತ್ರೆಗೆ ಭೇಟಿ



ಪೆರ್ಲ: ಪೆರ್ಲ ನಾಲಂದ ಕಾಲೇಜಿನ ಬಿಎ ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಕುಂಬಳೆಯಲ್ಲಿರುವ ಜಿಲ್ಲಾ ಸಹಕಾರಿ ಆಸ್ಪತ್ರೆಗೆ ಅಧ್ಯಯನ ಭೇಟಿ ನೀಡಿದರು. ಹಾಸ್ಪಿಟಲ್ ಇಕನಾಮಿಕ್ಸ್ ಪಠ್ಯದ ಅಂಗವಾಗಿ ಆಸ್ಪತ್ರೆಯ ಕಾರ್ಯಾಚರಣೆ ಸೂಚಕಗಳನ್ನು ಗಣನೆ ಮಾಡುವ ಉದ್ದೇಶದಿಂದ ಈ ಭೇಟಿ ಆಯೋಜಿಸಲಾಗಿತ್ತು. ಆಸ್ಪತ್ರೆಯ ಕಾರ್ಯದರ್ಶಿ ಪ್ರದೀಪ್ ಹಾಗೂ ಮೆಡಿಕಲ್ ಸೂಪರಿಂಟೆಂಡೆಂಟ್ ಸರಸ್ವತಿ ಸಹಕಾರ ನೀಡಿದರು.

ಈ ಅಧ್ಯಯನ ಭೇಟಿಯಲ್ಲಿ ಕಾಲೇಜಿನ ಪ್ರಾಂಶುಪಾಲ ಇನ್‌ಚಾರ್ಜ್ ಶಂಕರ ಖಂಡಿಗೆ ಹಾಗೂ ಅರ್ಥಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಿಕೆ ಅನುಪಮಾ ಟಿ. ಮಾರ್ಗದರ್ಶನ ನೀಡಿದರು.

ಪಾಲಕುನ್ನುವಿನಲ್ಲಿ 1 ಲಕ್ಷ ರೂ. ಸುರಕ್ಷಾ ನಿಧಿ ವಿತರಣೆ, ಶ್ರೀ ಸತ್ಯನಾರಾಯಣ ಪೂಜೆ | ಸುನೀಶ್ ಪೂಜಾರಿಯಚ್ಚನ್ ಶ್ಲಾಘನೆ

ಮಹಿಳೆಯರನ್ನು ಆದರ್ಶ ಗೃಹಿಣಿಯಾಗಿಸುವಲ್ಲಿ ಧರ್ಮಸ್ಥಳ ಯೋಜನೆ ಶ್ರಮ ಅಪಾರ



ಕಾಸರಗೋಡು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕಾಸರಗೋಡು, ಪ್ರಗತಿ ಬಂಧು ಸ್ವ–ಸಹಾಯ ಸಂಘಗಳ ಒಕ್ಕೂಟ ಪಾಲಕುನ್ನು, ಪೆರಿಯಾಟಡ್ಕ, ಪಳ್ಳಿಕೆರೆ, ಚೆಮ್ನಾಡು ಚಂದ್ರಗಿರಿ ವಲಯದಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಅಂಬಿಕಾ ಆಡಿಟೋರಿಯಂ, ಪಾಲಕುನ್ನುನಲ್ಲಿ ಜರಗಿತು.

ನಂತರ ಜರಗಿದ ಧಾರ್ಮಿಕ ಸಭಾ ಕಾರ್ಯಕ್ರಮ ಸುಚಿತ್ರ ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಪಾಲಕ್ಕುನು ಕಯಗಂ ಭಗವತೀ ಕ್ಷೇತ್ರದ ಅರ್ಚಕರಾದ ಸುನೀಶ್ ಪೂಜಾರಿಯಚ್ಚನ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಹಿಳೆಯರನ್ನು ಆದರ್ಶ ಗ್ರಹಿಣಿಯಾಗಿಸುವಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಶ್ರಮ ಅಪಾರವಾಗಿದೆ. ಜ್ಞಾನವಿಕಾಸ ಕಾರ್ಯಕ್ರಮದ ಮೂಲಕ ಮಹಿಳೆಯರನ್ನು ಒಂದು ಚೌಕಟ್ಟಿನ ಒಳಗೆ ತಂದು ಉತ್ತಮ ಗೃಹಿಣಿಯಾಗಿ ರೂಪಿಸುವಂತಹ ಯೋಜನೆಯ ಕಾರ್ಯಕ್ರಮ ಮೆಚ್ಚುವಂತದ್ದಾಗಿದೆ. ಧರ್ಮಸ್ಥಳ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ ಸ್ವಾವಲಂಬನೆಯ ಜೊತೆಗೆ ಜನರಲ್ಲಿ ಧಾರ್ಮಿಕ ಚಿಂತನೆಗಳು ಈ ಸಂಸ್ಥೆ ವಿಶೇಷವಾಗಿ ಶಿಸ್ತು ಸಂಯಮ ಹಾಗೂ ಜಾಗೃತಿಯನ್ನು ಮೂಡಿಸುತ್ತಿದೆ. ಮಹಿಳೆಯರು ನಾಲ್ಕು ಗೋಡೆ ಮಧ್ಯೆ ಇದ್ದರು. ಈಗ ಈ ಸಂಸ್ಥೆಯು ಮಹಿಳೆಯರನ್ನು ಸ್ವಾವಲಂಬಿಗಳಾಗಿ ಸಬಲೀಕರಣಗೊಳಿಸಿದ್ದಾರೆ, ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯಂತೆ ಈ ಸಂಸ್ಥೆ ಎಲ್ಲಾ ಕ್ಷೇತ್ರದಲ್ಲೂ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಸಾಮೂಹಿಕ ಪೂಜೆ ಶ್ರೇಷ್ಠವಾದದ್ದು, ಮೊಬೈಲ್‌ನ ಯುಗದಲ್ಲಿ ಇಂದಿನ ಜನಾಂಗಕ್ಕೆ ಇಂತಹ ಧಾರ್ಮಿಕ ಕಾರ್ಯಕ್ರಮಗಳ ಬಗ್ಗೆ ಹರಿವು ಮೂಡಿಸುವ ಅನಿವಾರ್ಯತೆ ಇವತ್ತಿನ ದಿನ ಖಂಡಿತವಾಗಲೂ ಇದೆ ಎಂದು ಹೇಳಿದರು.

ಸಹಾಯಧನ ವಿತರಣೆ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಾಞಂಗಾಡು ಶಾಖೆಯ ರಾಕೇಶ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ದ.ಕ. ಜಿಲ್ಲೆ 2 ನಿರ್ದೇಶಕರಾದ ಬಾಬು ನಾಯಕ್ ಸಂಪೂರ್ಣ ಸುರಕ್ಷಾ ಪದ್ಧತಿಯಲ್ಲಿ ಅಸೌಖ್ಯದಿಂದ ಬಳತ್ತಿರುವ ಕುಟುಂಬಕ್ಕೆ ಒಂದು ಲಕ್ಷ ಧನ ಸಹಾಯ ವಿತರಿಸಿದರು.

ಜನಜಾಗೃತಿ ವೇದಿಕೆ ಕಾಸರಗೋಡು ತಾಲೂಕು ಅಧ್ಯಕ್ಷ ಅಖಿಲೇಶ್ ನಗಮುಗಂ, ಯೋಜನೆಯ ನಿರ್ದೇಶಕ ಪ್ರವೀಣ್ ಎಂ.ಸಿ., ವಕೀಲ ಉದಯಕುಮಾರ್, ಹರಿದಾಸ್ ಜಯಾನಂದ ಕುಮಾರ್, ಯೋಜನಾಧಿಕಾರಿ ದಿನೇಶ್ ಜನಜಾಗೃತಿ ವೇದಿಕೆ ಸದಸ್ಯರಾದ ಚಂದ್ರನ್, ನಿವೃತ್ತ ಪೊಲೀಸ್ ಅಧಿಕಾರಿ ವಿ.ಪಿ.ಕೃಷ್ಣನ್, ಸಮಾಜ ಸೇವಕರಾದ ಮೋಹನ್ ಬೇಕಲ್, ರಾಜೇಂದ್ರನ್, ಕೃಷ್ಣನ್ ವಿ.ಪಿ. ಸುಪ್ರಿಯಾ ಮುಂತಾದವರು ಉಪಸ್ಥಿತರಿದ್ದರು.

ಚಂದ್ರಗಿರಿ ವಲಯ ಮೇಲ್ವಿಚಾರಕಿ ಚಂದ್ರಕಲಾ ಸ್ವಾಗತಿಸಿ, ಸೇವಾ ಪ್ರತಿನಿಧಿ ದಿವ್ಯಾ ವಂದಿಸಿದರು. ಜ್ಞಾನವಿಕಾಸ ಸಮನ್ವಯಾಧಿಕಾರಿ ಸೌಮ್ಯಾ ನಿರೂಪಿಸಿದರು. ಈ ಸಂದರ್ಭ ವಿದ್ಯಾರ್ಥಿಗಳಿಗೆ ಶಿಷ್ಯ ವೇತನವನ್ನು ವಿತರಿಸಲಾಯಿತು.

ಸುತ್ತ ಮುತ್ತ



ಉಡುಪಿ ಪಡುಬೈಲೂರಿನ ಶ್ರೀ ಇಷ್ಟ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿಯಂದು ವಿಶೇಷ ರುದ್ರಾಭಿಷೇಕ, ಬಿಲ್ವಾರ್ಚನೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರಗಿತು.

ಫೆ.20ಕ್ಕೆ ವಂಡ್ಸೆ ಪ್ರತಿಷ್ಠಾ ವರ್ಧಂತಿ

ಕುಂದಾಪುರ: ವಂಡ್ಸೆ ಶ್ರೀ ತಿರುಮಲ ಲಕ್ಷ್ಮೀವೆಂಕಟರಮಣ ದೇವಸ್ಥಾನದಲ್ಲಿ ಪ್ರತಿಷ್ಠಾ ವರ್ಧಂತಿ, ಕಲಶಾಭಿಷೇಕ ಮತ್ತು ವಾರ್ಷಿಕ ಜಾತ್ರೆ ಫೆ.20ರಂದು ನಡೆಯಲಿದೆ.

ಶಾರ್ಕೆ ರಾಮಕೃಷ್ಣ ಭಟ್ ಅವರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಬೆಳಿಗ್ಗೆ ಪಂಚವಿಂಶತಿ ಕಲಶ ಸ್ಥಾಪನೆ, ಪರಿವಾರಕ್ಕೆ ಕಲಶ, ಅಧಿವಾಸ ಹೋಮ, ಕಲಾತತ್ವ ಹೋಮ, ಕಲಶಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ಸಂಜೆ 7 ಗಂಟೆಗೆ ಭಜನಾ ಕಾರ್ಯಕ್ರಮ, ರಾತ್ರಿ 8 ಗಂಟೆಗೆ ರಂಗಪೂಜೆ ನಡೆಯಲಿದೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಯಕ್ಷಗಾನ ಕಲಾವಿದ ವಂಡ್ಸೆ ದಿ.ನಾರಾಯಣ ಗಾಣಿಗರ ಸ್ಮರಣಾರ್ಥ ದಿ.ನಾರಾಯಣ ಗಾಣಿಗ ಕುಟುಂಬಸ್ಥರು ಕೊಡಮಾಡುವ ವಂಡ್ಸೆ ನಾರಾಯಣ ಗಾಣಿಗ ಪ್ರಶಸ್ತಿಯನ್ನು ಭಾಗವತ ಸುಧಾಕರ ಕೊಠಾರಿ ಅವರಿಗೆ ದೇವಸ್ಥಾನದ ಆಡಳಿತ ಮಂಡಳಿಯವರು ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಪುಸ್ತಕ ಬಿಡುಗಡೆ ಸಮಾರಂಭ

ಕೋಟ: ವಿಪ್ರವೇದಿಕೆ ಐರೋಡಿ– ಬಾಳ್ಕುದ್ರು ಹಾಗೂ ಸಾಮಾಜಿಕ ಸಾಂಸ್ಕೃತಿಕ ಧಾರ್ಮಿಕ ಸೇವಾ ಸಂಘ ಶ್ರೀ ವಿನಾಯಕ ದೇವಸ್ಥಾನ, ಚಡಗರ ಮಠ, ಪಾಂಡೇಶ್ವರ, ಸಾಸ್ತಾನ ಇವರ ಸಹಭಾಗಿತ್ವದಲ್ಲಿ ಚಡಗರ ಮಠ– ಪಾಂಡೇಶ್ವರ ಮೂಲವನ್ನು ಅರಸುತ್ತಾ ಎಂಬ ಪುಸ್ತಕ ಬಿಡುಗಡೆ ಸಮಾರಂಭ ಫೆ.19ರಂದು ಸಂಜೆ 4ಕ್ಕೆ ಸಾಸ್ತಾನದ ರಮಾದೇವಿ ಚಡಗ ಕಲ್ಯಾಣ ಮಂಟಪ, ಚಡಗರ ಅಗ್ರಹಾರ ನಡೆಯಲಿದೆ. ಅಧ್ಯಕ್ಷತೆಯನ್ನು ವಿಪ್ರವೇದಿಕೆ ಐರೋಡಿ ಬಾಳ್ಕುದ್ರು ಅಧ್ಯಕ್ಷ ಎ. ರಮೇಶ ಕಾರಂತ ವಹಿಸಲಿದ್ದು, ಕೃತಿ ಲೇಖಕ ಪಿ. ರಾಮಕೃಷ್ಣ ಚಡಗ ಅಧ್ಯಕ್ಷರು ಎಸ್. ಎಸ್. ಡಿ. ಎಸ್. ಸಂಘ ಪಾಂಡೇಶ್ವರ ಕೃತಿ ಅನಾವರಣ ಮಾಡುವರು.

ಮೊದಲನೇ ಪುಟದಿಂದ

ಇಳೆಗೆ ತಂಪೆರೆದ ಮಳೆ

ಕಳೆದ ಕೆಲವು ದಿನಗಳಿಂದ ಸುಡು ಬಿಸಿಲಿನ ವಾತಾವರಣವಿದ್ದು, ಬುಧವಾರ ಸಂಜೆ ಸುಮಾರು 4.30ರಿಂದ 5 ಗಂಟೆಯ ವೇಳೆಗೆ ಧಾರಾಕಾರವಾಗಿ ಮಳೆ ಸುರಿಯಿತು. ಮಳೆ ನೀರು ರಸ್ತೆಯಲ್ಲಿ ಧಾರಾಕಾರವಾಗಿ ಹರಿದು ಹೋಗಿದೆ. ಸುಮಾರು 10 ನಿಮಿಷಗಳಿಗೂ ಹೆಚ್ಚಿನ ಕಾಲ ಮಳೆ ಸುರಿದು ಭೂಮಿಯನ್ನು ತಂಪಾಗಿಸಿತು. ಪುತ್ತೂರು ತಾಲೂಕಿನ ಸುಳ್ಯಪದವಿ ನಲ್ಲೂ ಮಧ್ಯಾಹ್ನದ ವೇಳೆ ಉತ್ತಮ ಮಳೆಯಾಗಿದೆ. ಸುಳ್ಯ ತಾಲೂಕಿನ ಮಂಡೆಕೋಲಿನಲ್ಲೂ ಸಂಜೆ ವೇಳೆ ಮಳೆಯಾಗಿದೆ.

ಶುದ್ಧ ಗಾಳಿ ಅಭಾವ

ಈ ವಾತಾವರಣದಲ್ಲಿ ಹೆಚ್ಚು ಓಡಾಡುವುದರಿಂದ ಉಸಿರಾಟದ ತೊಂದರೆ ಹಾಗೂ ಗಂಟಲು ಸೋಂಕು (ಅಲರ್ಜಿ) ಕಾಣಿಸಿಕೊಳ್ಳುವ ಸಾಧ್ಯತೆ ಇರುವುದಾಗಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕೊಡಗಿನಲ್ಲಿ ಹೆಚ್ಚುತ್ತಿರುವ ವಾಯುಮಾಲಿನ್ಯ ಇಲ್ಲಿನ ಪ್ರವಾಸೋದ್ಯಮದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುವ ಆತಂಕ ಉಂಟಾಗಿದೆ. ಈ ನಡುವೆ ಜಿಲ್ಲೆಯಲ್ಲಿನ ತಾಪಮಾನವೂ ಸತತ ಏರಿಕಾಯಾಗುತ್ತಿದ್ದು, ಜಿಲ್ಲೆಯಲ್ಲಿ ಈಗ ಗರಿಷ್ಠ ತಾಪಮಾನ 28ಡಿಗ್ರಿ ಅದರ ಸೆಲ್ಷಿಯಸ್ ಹಾಗೂ ಕನಿಷ್ಠ ತಾಪಮಾನ 17ಡಿಗ್ರಿಗಳಿಗೆ ಏರಿಕೆಯಾಗಿದೆ.

ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯ ಕಾರ್ಯಾಗಾರದದಲ್ಲಿ ನ್ಯಾ. ಮನು ಪಟೇಲ್ ಸಲಹೆ

ಸಮಾಜದಲ್ಲಿ ಹೆಣ್ಮಕ್ಕಳ ಸುರಕ್ಷತೆಗೆ ಪೂರಕ ವಾತಾವರಣ ಕಲ್ಪಿಸಿ



ಉಡುಪಿ: ಹೆಣ್ಣು ಮಕ್ಕಳಿಗೆ ಸಮಾಜದಲ್ಲಿ ಸುರಕ್ಷಿತ ವಾತಾವರಣ ಕಲ್ಪಿಸುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ. ಹೆಣ್ಣು ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡುವ ಮೂಲಕ ಅವರಿಗೆ ಸಮಾನ ಹಕ್ಕು ನೀಡಿ, ಸಬಲರನ್ನಾಗಿ ಮಾಡಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮನು ಪಟೇಲ್ ಹೇಳಿದರು.

ಅವರು ಇಂದು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಡಾ. ವಿ.ಎಸ್ ಆಚಾರ್ಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಡುಪಿ ಜಿಲ್ಲೆ ಆಶ್ರಯದಲ್ಲಿ ಬೇಟಿ ಬಚಾವೋ ಬೇಟಿ ಪಡಾವೋ (ಹೆಣ್ಣು ಮಗಳನ್ನು ರಕ್ಷಿಸಿ ಹೆಣ್ಣು ಮಗಳನ್ನು ಓದಿಸಿ) ಯೋಜನೆಯಡಿ, ಪ್ರಸವಪೂರ್ವ ಲಿಂಗಪತ್ತೆ ಹಾಗೂ ಭ್ರೂಣ ಹತ್ಯೆ ನಿಷೇಧ ಕಾಯ್ದೆ, ಶಿ ಬಾಕ್ಸ್, ಜೀತ ಕಾರ್ಮಿಕ ಪದ್ಧತಿ (ರದ್ಧತಿ) ಕಾಯ್ದೆ –1976ರ ಕುರಿತು ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗೆ ನಡೆದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಭಯಮುಕ್ತ ಸುರಕ್ಷಿತ ವಾತಾವರಣ ಕಲ್ಪಿಸುವುದರೊಂದಿಗೆ ಅವರನ್ನು ಪುರುಷರಷ್ಟೇ ಸರಿ ಸಮಾನ ರೀತಿಯಲ್ಲಿ ಕಾಣಬೇಕು. ಹೆಣ್ಣು ಮಕ್ಕಳ ಪ್ರಾಮುಖ್ಯತೆಯ ಬಗ್ಗೆ ಪ್ರತಿಯೊಬ್ಬರೂ ಅರಿವು ಹೊಂದಿದಾಗ ಮಾತ್ರ ಲಿಂಗಾನುಪಾತದ ಅಸಮಾನತೆ ಹೋಗಲಾಡಿಸಲು ಸಾಧ್ಯ ಎಂದರು.

ಆಂತರಿಕ ದೂರು ಸಮಿತಿ

ಕೆಲಸದ ಸ್ಥಳದಲ್ಲಿ ಮಹಿಳೆಯರು ಎದುರಿಸುವ ಲೈಂಗಿಕ ಕಿರುಕುಳಗಳಿಗೆ ಸಂಬಂಧಿಸಿದ ದೂರುಗಳನ್ನು ದಾಖಲಿಸಲು ಆಂತರಿಕ ದೂರು ಸಮಿತಿ ವ್ಯವಸ್ಥೆ ಇದ್ದು, ಇದರ ಪ್ರಯೋಜನವನ್ನು ಮಹಿಳಾ ಉದ್ಯೋಗಿಗಳು ಪಡೆದುಕೊಳ್ಳಬಹುದಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ ಮಾತನಾಡಿ, ಹೆಣ್ಣು ಮಕ್ಕಳನ್ನು ಭ್ರೂಣಾವಸ್ಥೆಯಿಂದಲೇ ರಕ್ಷಿಸುವ ಕೆಲಸವಾಗಬೇಕು. ಆಗ ಮಾತ್ರ ಲಿಂಗಾನುಪಾತದಲ್ಲಿ ಸುಧಾರಣೆ ತರಲು ಸಾಧ್ಯ ಎಂದರು.

ಜಿಲ್ಲಾ ಪಂಚಾಯತ್ ಸಿಇಒ ಪ್ರತೀಕ್ ಬಾಯಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಪೋಸ್ಟರ್ ಬಿಡುಗಡೆ

ಕಾರ್ಯಕ್ರಮದಲ್ಲಿ ಬೇಟಿ ಬಚಾವೋ ಬೇಟಿ ಪಡಾವೋ ಕುರಿತ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಎನ್‌ಫೋರ್ಸ್‌ಮೆಂಟ್ ಆಫೀಸರ್ ಡಾ. ರಾಮ್‌ರಾವ್ ಕೆ ಪ್ರಸವಪೂರ್ವ ಲಿಂಗಪತ್ತೆ ಹಾಗೂ ಭ್ರೂಣ ಹತ್ಯೆ ನಿಷೇಧ ಕಾಯ್ದೆ ಕುರಿತು, ನ್ಯಾಯವಾದಿ ರಾಜೇಶ್ ಪಿ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆ ಬಗ್ಗೆ, ಡಾ. ಜಿ.ಶಂಕರ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಡಾ. ನಿಕೇತನ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಾಗುವ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ ಮತ್ತು 'ಶಿ ಬಾಕ್ಸ್' ಬಗ್ಗೆ ಹಾಗೂ ಮಂಗಳೂರು ಸೈಂಟ್ ಅಲೋಶಿಯಸ್ ಕಾನೂನು ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ರಾಯನ್ ಫರ್ನಾಂಡೀಸ್ ಜೀತ ಕಾರ್ಮಿಕ ಪದ್ಧತಿ (ರದ್ಧತಿ) ಕಾಯ್ದೆ –1976 ಬಗ್ಗೆ ಮಾಹಿತಿ ನೀಡಿದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶ್ಯಾಮ್ ಎಸ್. ಕಾದ್ರೋಳ್ಳಿ, ಉಡುಪಿ ಉಪ ವಿಭಾಗದ ಕಾರ್ಮಿಕ ಅಧಿಕಾರಿ ಕಮಲ್ ಷಾ ಅಲ್ತಾಫ್ ಅಹಮದ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಅನುರಾಧ ಬಿ ಹಾದಿಮನೆ ಸ್ವಾಗತಿಸಿ, ದೀಪಾ ನಿರೂಪಿಸಿದರು. ಶಾರದಾ ವಂದಿಸಿದರು.

> **ಪರಿಣಾಮಕಾರಿ ಅನುಷ್ಠಾನ ಮಾಡಿ**
> ಸರಕಾರದ ಯಾವುದೇ ಕಾಯಿದೆ, ಕಾನೂನು ಹಾಗೂ ಸುತ್ತೋಲೆ ಅನುಷ್ಠಾನ ಮಾಡುವಾಗ, ಅವುಗಳ ರೂಪುರೇಷೆ ಬಗ್ಗೆ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಸ್ಪಷ್ಟ ಮಾಹಿತಿ ಹೊಂದಿರಬೇಕು. ಈ ನಿಟ್ಟಿನಲ್ಲಿ ಕಾರ್ಯಾಗಾರ ಆಯೋಜಿಸಲಾಗಿದ್ದು, ತರಬೇತಿಯಲ್ಲಿ ಪಡೆದ ಮಾಹಿತಿಯನ್ನು ಅಧಿಕಾರಿಗಳು ಕ್ಷೇತ್ರಮಟ್ಟದಲ್ಲಿ ಪರಿಣಾಮಕಾರಿ ಅನುಷ್ಠಾನಕ್ಕೆ ಮುಂದಾಗಬೇಕು.
> ● ಮನು ಪಟೇಲ್, ಹಿರಿಯ ಸಿವಿಲ್ ನ್ಯಾಯಾಧೀಶ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ

ಸೂರಿಮಣ್ಣು ಭಜನಾ ಸುವರ್ಣ ಸಂಭ್ರಮ ಐತಿಹಾಸಿಕ ದಾಖಲೆ



ಹೆಬ್ರಿ: ಭಜನೆಯು ಭಗವಂತನಿಗೆ ಅತ್ಯಂತ ಪ್ರೀತಿಯ ಸೇವೆ. ಭಜನೆಯ ಮೂಲಕ ಭಗವಂತನನ್ನು ಆರಾಧಿಸಿದಾಗ ನಮ್ಮ ಬದುಕು ಸಮೃದ್ಧವಾಗುತ್ತದೆ ಎಂಬುದಕ್ಕೆ ಸೂರಿಮಣ್ಣು ಸುವರ್ಣ ಭಜನಾ ಸಂಭ್ರಮ ಎಲ್ಲರ ಕೈಜೋಡಿಸುವಿಕೆಯಿಂದ ಅತ್ಯಂತ ಯಶಸ್ವಿಯಾಗಿ ಐತಿಹಾಸಿಕ ದಾಖಲೆಯಾಗಿರುವುದೇ ಸಾಕ್ಷಿಯಾಗಿದೆ ಎಂದು ಸೂರಿಮಣ್ಣು ಭಜನೆಯ ರೂವಾರಿ ವೇದಮೂರ್ತಿ ಸೂರಿಮಣ್ಣು ಸದಾಶಿವ ಉಪಾಧ್ಯಾಯ ಹೇಳಿದರು.

ಅವರು ಭಾನುವಾರ ಸೂರಿಮಣ್ಣು ಶ್ರೀ ಲಕ್ಷ್ಮೀನಾರಾಯಣದೇವಸ್ಥಾನಸೂರಿಮಣ್ಣು ಮಠದಲ್ಲಿ ಶ್ರೀ ಲಕ್ಷ್ಮೀನರಸಿಂಹ ಭಜನಾ ಮಂಡಳಿ ಮತ್ತು ಶ್ರೀ ಲಕ್ಷ್ಮೀನಾರಾಯಣ ಮಹಿಳಾ ಭಜನಾ ಮಂಡಳಿ ಸೂರಿಮಣ್ಣು ಇದರ ವತಿಯಿಂದ 8 ದಿನಗಳ ಕಾಲ ನಡೆದ ಭಜನಾ ಸುವರ್ಣ ಸಂಭ್ರಮ ಯಶಸ್ವಿ ಸಂಪನ್ನದ ಹಿನ್ನಲೆಯಲ್ಲಿ ಕೃತಜ್ಞತೆ ಸಮರ್ಪಣಾ ಸಭೆಯಲ್ಲಿ ಮಾತನಾಡಿದರು.

ಸೂರಿಮಣ್ಣಿನಲ್ಲಿ ಭಜನೆಯ ಲೋಕವನ್ನೇ ಸೃಷ್ಟಿಸಿ ಅದ್ಭುತ ಸೇವೆ ನಡೆದಿದೆ, ಭಜನಾ ಸೇವೆಯು ನಿರಂತರವಾಗಿ ಸೂರಿಮಣ್ಣಿನಲ್ಲಿ ನಡೆಯುತ್ತಿರಲಿ ಎಂದು ಭಜನಾ ಸುವರ್ಣ ಸಂಭ್ರಮ ಸಮಿತಿಯ ಅಧ್ಯಕ್ಷ ಶಿವಪುರ ಸುರೇಶ ಶೆಟ್ಟಿ ಕೃತಜ್ಞತೆ ಸಲ್ಲಿಸಿದರು. ಹೆಬ್ರಿ ತಾ.ಪಂ. ಮಾಜಿ ಅಧ್ಯಕ್ಷ ರಮೇಶ ಕುಮಾರ್ ಶಿವಪುರ, ಕಾರ್ಯದರ್ಶಿ ರಾಧಾಕೃಷ್ಣ ಪುತ್ತಿ, ವರಂಗ ಕೆ. ರಾಮಚಂದ್ರ ಭಟ್ ಮಾತನಾಡಿದರು. ಶಿವಪುರ ಗ್ರಾ.ಪಂ. ಮಾಜಿ ಅಧ್ಯಕ್ಷ ಶೇಖರ ಶೆಟ್ಟಿ ಶಿವಪುರ, ಉಪ್ಪಳ ಸಂತೋಷ ಕುಮಾರ್ ಶೆಟ್ಟಿ, ಸೂರಿಮಣ್ಣು ಶ್ರೀ ಲಕ್ಷ್ಮೀನರಸಿಂಹ ಭಜನಾ ಮಂಡಳಿ ಮತ್ತು ಶ್ರೀ ಲಕ್ಷ್ಮೀನಾರಾಯಣ ಮಹಿಳಾ ಭಜನಾ ಮಂಡಳಿ ಹಾಗೂ ವಿವಿಧ ಭಜನ ಮಂಡಳಿಯ ಸದಸ್ಯರು, ಭಜನಾ ಸುವರ್ಣ ಸಂಭ್ರಮ ಸಮಿತಿ, ವಿವಿಧ ಉಪಸಮಿತಿಯ ಸದಸ್ಯರು, ಸ್ವಯಂ ಸೇವಕರು, ಸ್ಥಳೀಯ ಭಕ್ತ ಸಮೂಹ, ಭಜನಾ ಮಂಡಳಿಯ ಸದಸ್ಯರು, ಕಾರ್ಯದರ್ಶಿ ರಾಧಾಕೃಷ್ಣ ಪುತ್ತಿ, ಜೊತೆ ಕಾರ್ಯದರ್ಶಿ ಸುಭಾಶ್ಚಂದ್ರ ನಾಯ್ಕ್, ಕೋಶಾಧಿಕಾರಿ ಪ್ರಸನ್ನ ಶೆಟ್ಟಿ ಒಂಬತ್ತುಕ್ಕು, ಮಹಿಳಾ ಘಟಕದ ಅಧ್ಯಕ್ಷೆ ಅಕ್ಷತಾ ಶೆಟ್ಟಿ, ಯುವ ಘಟಕದ ಅಧ್ಯಕ್ಷ ಚೇತನ್ ಕುಲಾಲ್, ಗೌರವ ಸಲಹೆಗಾರ ಸುಧಾಕರ ಶೆಟ್ಟಿ ಮುನಿಯಾಲು, ಉಪಾಧ್ಯಕ್ಷರಾದ ದಿನೇಶ ಶೆಟ್ಟಿ ಸೂರಿಮಣ್ಣು, ಸೂರಿಮಣ್ಣು ಮಠದ ವಿದ್ವಾನ್ ರವಿರಾಜ್ ಉಪಾಧ್ಯಾಯ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು.

ಮಾಜಿ ಸಂಸದ ಭೇಟಿ

ಮೈಸೂರಿನ ಮಾಜಿ ಸಂಸದ ಪ್ರತಾಪಸಿಂಹ ಭಾನುವಾರ ಸೂರಿಮಣ್ಣು ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನ ಸೂರಿಮಣ್ಣು ಮಠಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ ಮಾತನಾಡಿದರು.

ಪಡುಬಿದ್ರಿ ದೇವಸ್ಥಾನದ ಪಂಚ ದೈವಿಕ ಸ್ಥಾನ ಅಭಿವೃದ್ಧಿಗೆ ಶಿಲಾನ್ಯಾಸ



ಪಡುಬಿದ್ರಿ: ಸಮಗ್ರ ಜೀರ್ಣೋದ್ಧಾರ ಗೊಳ್ಳುತ್ತಿರುವ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನಕ್ಕೆ ಸಂಬಂಧ ಪಟ್ಟ ಪಂಚ ದೈವಗಳಿಗೆ, ಪಡುಬಿದ್ರಿ ಗಣಪತಿ ಪ್ರೌಢಶಾಲಾ ಹಳೆ ವಿದ್ಯಾರ್ಥಿ ಸಂಘದ ಸಹಭಾಗಿತ್ವದಲ್ಲಿ ದೇಗುಲದ ಪುಷ್ಕರಣೀ ತಟದಲ್ಲಿ ನಿರ್ಮಿಸಲ್ಪಡುವ ಅಂದಾಜು 15 –20 ಲಕ್ಷ ರೂಪಾಯಿ ವೆಚ್ಚದ ನೂತನ ಗುಡಿಗಳ ಕಾಮಗಾರಿಯ ಶಿಲಾನ್ಯಾಸವು ಬುಧವಾರ ಜರಗಿತು.

ಈ ಕುರಿತಾದ ಧಾರ್ಮಿಕ ವಿಧಿ ವಿಧಾನಗಳನ್ನು ದೇವಸ್ಥಾನದ ಅರ್ಚಕರಾದ ಗುರುರಾಜ್ ಭಟ್ ಏಮಾರ್ಳು ನೆರವೇರಿಸಿದರು. ಶಿಲಾನ್ಯಾಸವನ್ನು ಸಂಘದ ಹಿರಿಯ ಸದಸ್ಯ ಸದಾಶಿವ ಆಚಾರ್ ನೆರವೇರಿಸಿದರು.

ದೇವಸ್ಥಾನದ ಕಾರ್ಯ ನಿರ್ವಾಹಣಾಧಿಕಾರಿ ಕೆ. ರಾಜ ಗೋಪಾಲ್ ಉಪಾಧ್ಯಾಯ, ಆನುವಂಶಿಕ ಮೊಕ್ತೇಸರ ಭವಾನಿ ಶಂಕರ್ ಹೆಗ್ಡೆ, ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷ ರವೀಂದ್ರನಾಥ .ಜಿ. ಹೆಗ್ಡೆ, ಕಾರ್ಯದರ್ಶಿ ಶ್ರೀನಾಥ್ ಹೆಗ್ಡೆ, ಮುರಳಿನಾಥ್ ಶೆಟ್ಟಿ, ಅನಿಲ್ ಶೆಟ್ಟಿ ಪೇಟೆಮನೆ, ನವೀನ್ .ಎನ್.ಶೆಟ್ಟಿ, ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ನವೀನ್ ಚಂದ್ರ ಜೆ. ಶೆಟ್ಟಿ, ಪ್ರಧಾನ ಕಾರ್ಯದರ್ಶಿ ರಮಾಕಾಂತ್ ರಾವ್, ಕೋಶಾಧಿಕಾರಿ ಕಸ್ತೂರಿ ರಾಮಚಂದ್ರ, ಸರ್ವಜ್ಞ ಆಚಾರ್, ಪ್ರಕಾಶ್ ಶೆಟ್ಟಿ ಪೇಟೆಮನೆ, ಮಾಧವ .ಸಿ. ಶೆಟ್ಟಿ, ಮಧುಕರ್ ಶೆಣೈ, ರಾಜೇಂದ್ರ ಶೆಣೈ, ಸತೀಶ್ ಆಚಾರ್ಯ, ಸುಮತಿ ವಿ. ಹೆಗ್ಡೆ, ಪೂರ್ಣಿಮಾ ಜಯ ಶಂಕರ, ಅನಸೂಯ ಶೆಣೈ ಹಾಗೂ ಉಭಯ ಶಾಲಾ ಅಧ್ಯಾಪಕರು ಉಪಸ್ಥಿತರಿದ್ದರು.

ಕಾರ್ತಟ್ಟು ಚಿತ್ರಪಾಡಿ-ಶಿವರಾತ್ರಿ ಟ್ರೋಫಿ 2026 ಕ್ರಿಕೆಟ್ ಪಂದ್ಯಾಟ



ಕೋಟ: ಶರಧಿ ಫ್ರೆಂಡ್ಸ್ ಕ್ರಿಕೆಟರ್ಸ್ ಎಚ್‌ಬಿ ಫ್ರೆಂಡ್ಸ್ ಕ್ರಿಕೆಟರ್ಸ್ ಸಂಯೋಜನೆಯಲ್ಲಿ ಕಾರ್ತಟ್ಟು ಚಿತ್ರಪಾಡಿ ಹುಣ್ಸೆಬೆಟ್ಟು ಗಿರಿಯಮ್ಮ ಕ್ರಿಕೆಟ್ ಮೈದಾನದಲ್ಲಿ ಶರಧಿ ಫ್ರೆಂಡ್ಸ್ ಹಾಗೂ ಎಚ್‌ಬಿ ಫ್ರೆಂಡ್ಸ್ ಸದಸ್ಯರಿಗಾಗಿ ಶಿವರಾತ್ರಿ ಟ್ರೋಫಿ 2026 ಕ್ರಿಕೆಟ್ ಪಂದ್ಯಾಟ ಇತ್ತೀಚೆಗೆ ಜರಗಿತು.

ನಿವೃತ್ತ ಪಶು ವೈದ್ಯಾಧಿಕಾರಿ ಡಾ. ಮೋಹನ್ ಎಸ್. ಉದ್ಘಾಟಿಸಿದರು. ಎಂಕಾಂ ಪದವಿಯಲ್ಲಿ ಮಂಗಳೂರು ವಿವಿ ತೃತಿಯ ರ್‍ಯಾಂಕ್‌ನೊಂದಿಗೆ ತೇರ್ಗಡೆಯಾದ ರಶ್ಮಿತಾ ಸಿ.ಆರ್. ಅವರಿಗೆ ಗೌರವ ಅಭಿನಂದನೆಯನ್ನು ಹಾಗೂ ಎಸ್ಸೆಸ್ಸೆಲ್ಸಿ, ಪಿ.ಯು.ಸಿ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಸ್ಥಳೀಯ ವಿದ್ಯಾರ್ಥಿಗಳಾದ ಸೌಮ್ಯ, ಕಿಶನ್, ಅಮೂಲ್ಯ, ಚಿರಂತನ್ ಭಟ್, ಅನ್ವಿತ್ ಅವರಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.

1980–1990 ದಶಕದಲ್ಲಿ ಶರಧಿ ಹಾಗೂ ಎಚ್‌ಬಿ ಫ್ರೆಂಡ್ಸ್ ತಂಡಗಳ ಪರವಾಗಿ ಆಡಿದ ಕರಾವಳಿ ಟೆನಿಸ್ ಬಾಲ್ ಕ್ರಿಕೆಟ್‌ನಲ್ಲಿ ಸಾಧನೆ ತೋರಿದ ಹಿರಿಯ ಕ್ರಿಕೆಟಿಗರಾದ ಕೃಷ್ಣದೇವಾಡಿಗ, ಗಿರೀಶ್ ಕುಂದರ್, ಸೂರ್ಯ ಆಚಾರ್, ನರಸಿಂಹ ಆಚಾರ್, ಗಣೇಶ್ ಆಚಾರ್, ಮುರುಳಿಧರ್ ಆಚಾರ್, ರಘು ಮಡಿವಾಳ, ನಾಗೇಶ್ ಪೂಜಾರಿ ಹಾಗೂ ಸ್ಥಳೀಯ ಕ್ರಿಕೆಟ್ ಪ್ರೋತ್ಸಾಹಕ ರಾಮಕೃಷ್ಣ ಆಚಾರ್, ಮಹಾಬಲ ಮಡಿವಾಳ, ಶರತ್ ಶೆಟ್ಟಿ, ಗೋಪಾಲ ಮಡಿವಾಳ ಅವರನ್ನು ಗೌರವಿಸಲಾಯಿತು.

ಸಾಲಿಗ್ರಾಮ ಪಟ್ಟಣ ಪಂಚಾಯತ್‌ನ ಸದಸ್ಯರಾದ ಶ್ಯಾಮಸುಂದರ ನಾಯರಿ ಶುಭಹಾರೈಸಿದರು. ಮಾಜಿ ಸದಸ್ಯ ಬೋಜ ಪೂಜಾರಿ, ಮಹಾಬಲ ಮಡಿವಾಳ, ಇಲೆವೆನ್ ಅಪ್ ಕ್ರಿಕೆಟರ್ಸ್ ಹಿರಿಯ ಸದಸ್ಯರಾದ ಸೀತಾರಾಮ ಆಚಾರ್, ಶಶಿಧರ ಆಚಾರ್, ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪನಿ ವ್ಯವಸ್ಥಾಪಕ ರಘು ಮಡಿವಾಳ, ನರಸಿಂಹ ಆಚಾರ್ ಕಾರ್ತಟ್ಟು, ರಾಮಕೃಷ್ಣ ಆಚಾರ್ ಕಾರ್ತಟ್ಟು ಇದ್ದರು. ಸಂಘಟಕ ಮಂಜುನಾಥ್ ಆಚಾರ್ ಕಾರ್ತಟ್ಟು ನಿರೂಪಿಸಿದರು.

ಬಂಟಕಲ್ಲು ಕಾಲೇಜಿನಲ್ಲಿ ವೃತ್ತಿಪರ ಕೌಶಲ್ಯ ಕಾರ್ಯಾಗಾರ 'ಟೆಕ್-ಲೀಡ್'



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ಐಇಇಇ ವಿದ್ಯಾರ್ಥಿ ಘಟಕವು ಐಇಇಇ ಸ್ಯಾಕ್ಸ್ ಘಟಕ ಮತ್ತು ಐಇಇಇ ಫೌಂಡೇಶನ್ ಸಹಯೋಗದೊಂದಿಗೆ 'ಟೆಕ್ –ಲೀಡ್ 2026' ಮುಂದಿನ ಇಂಜಿನಿಯರ್‌ಗಳಿಗೆ ವೃತ್ತಿಪರ ಕೌಶಲ್ಯದ ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಸೈಂಟ್ ಅಲೋಶಿಯಸ್ ಕಾಲೇಜಿನ ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ಪ್ರಾಧ್ಯಾಪಕ ಡಾ. ಗ್ಲೆನ್ಸನ್ ಟೋನಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿ, ಇಂದಿನ ವೃತ್ತಿಪರ ಜಗತ್ತಿನಲ್ಲಿ ತಾಂತ್ರಿಕ ಜ್ಞಾನದ ಜೊತೆಗೆ ಉತ್ತಮ ಸಂವಹನ ಕೌಶಲ್ಯ, ನಾಯಕತ್ವ ಗುಣ ಭಾವನಾತ್ಮಕ ಬುದ್ಧಿಮತ್ತೆ ಹೊಂದಿಕೊಳ್ಳುವ ಸಾಮರ್ಥ್ಯ ಹಾಗೂ ನೈತಿಕ ಜವಾಬ್ದಾರಿ ಇರುವ ಇಂಜಿನಿಯರ್‌ಗಳನ್ನು ಹುಡುಕುತ್ತಿದ್ದಾರೆ. ಓದುವ ಅಭ್ಯಾಸ ಬೆಳೆಸಿಕೊಳ್ಳಲು, ನೆಟ್‌ವರ್ಕಿಂಗ್ ಮಾಡಿಕೊಳ್ಳಲು ಹಾಗೂ ಐಇಇಇ ಮುಂತಾದ ವೃತ್ತಿಪರ ವೇದಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ಸಂಸ್ಥೆಯ ಪ್ರಾಂಶುಪಾಲ ಡಾ. ನಾಗರಾಜ್ ಭಟ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಐಇಇಇ ಘಟಕದ ಸಂಯೋಜಕರಾದ ಡಾ. ನಾಗರಾಜ್ ರಾವ್ ಸಂಯೋಜಿಸಿದರು. ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಜ್ಞಾನ ಮತ್ತು ಆತ್ಮವಿಶ್ವಾಸವನ್ನು ನೀಡಿದ ಪರಿಣಾಮಕಾರಿ ಕಾರ್ಯಕ್ರಮವಾಗಿದ್ದು, ವೃತ್ತಿಪರ ಸವಾಲುಗಳನ್ನು ಎದುರಿಸಲು ಹಾಗೂ ಕೈಗಾರಿಕಾ ಕ್ಷೇತ್ರಕ್ಕೆ ಸಿದ್ಧರಾದ ಸಮರ್ಥ ಇಂಜಿನಿಯರ್‌ಗಳನ್ನು ರೂಪುಗೊಳಿಸಲು ಸಹಕಾರಿಯಾಗಿದೆ.



ಪಡುಬಿದ್ರಿ ಉಚ್ಚಿಲ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ವಾರ್ಷಿಕ ರಥೋತ್ಸವದ ಪ್ರಯುಕ್ತ ಶ್ರೀ ದೇವರ ರಥಾರೋಹಣವು ಸಾವಿರಾರು ಸಂಖ್ಯೆಯ ಭಕ್ತರ ಪಾಲ್ಗೊಳ್ಳುವಿಕೆಯಲ್ಲಿ ಬುಧವಾರ ವಿಜೃಂಭಣೆಯಿಂದ ಜರಗಿತು.

ಇಂದಿನಿಂದ ಮುನಿಯಾಲಿನಲ್ಲಿ ನಾಗಮಂಡಲ: ನಾಗಸಾಧುಗಳು ಭೇಟಿ



ಹೆಬ್ರಿ: ತಾಲೂಕಿನ ಮುನಿಯಾಲು ಸಂಜೀವಿನಿ ಗೋಧಾಮದಲ್ಲಿ ಫೆ. 19ರಿಂದ 21ರ ತನಕ ಏಕಪವಿತ್ರ ಶ್ರೀಮನ್ನಾಗಮಂಡಲ ನಡೆಯಲಿದ್ದು, ಗೋಧಾಮಕ್ಕೆ ಬುಧವಾರ 10ಕ್ಕೂ ಹೆಚ್ಚು ನಾಗಸಾಧುಗಳು ದಿಢೀರ್ ಭೇಟಿ ನೀಡಿ ನೀಡಿದರು. ಸಂಜೀವಿನಿ ಗೋಧಾಮದ ಸವಿತಾ ಆರ್. ಆಚಾರ್, ರಕ್ಷಿತ್ ಆರ್. ಆಚಾರ್, ಶ್ರೀಮನ್ನಾಗಮಂಡಲ ಸೇವಾ ಸಮಿತಿಯ ಪದಾಧಿಕಾರಿಗಳು, ಉಪ ಸಮಿತಿಯ ಪ್ರಮುಖರು, ವಿಶ್ವಕರ್ಮ ಸಮುದಾಯದ ಮುಖಂಡರು ಇದ್ದರು.

ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾ.ಪಂ.ಗಳ ಕುಡಿಯುವ ನೀರಿನ ಸಮಸ್ಯೆ । ಸಮಾಲೋಚನಾ ಸಭೆ

ನೀರಿನ ಸಮಸ್ಯೆ ಪರಿಹಾರಕ್ಕೆ ಅಧಿಕಾರಿಗಳು ಆದ್ಯತೆ ನೀಡಲಿ: ಗಂಟಿಹೊಳೆ

ಕುಂದಾಪುರ: ಆಡಳಿತಾಧಿಕಾರಿಗಳು ಪಂಚಾಯತ್‌ನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ, ಮುಖ್ಯೋಪಾಧ್ಯಾಯರಿಗೆ, ಎಂಜಿನಿಯರ್‌ಗಳಿಗೆ ಆಡಳಿತಾಧಿಕಾರ ನೀಡಿದ ಕಾರಣ ಅವರದ್ದೇ ಇಲಾಖಾ ಕೆಲಸಗಳಲ್ಲಿ ಅವರು ವ್ಯಸ್ತರಾಗಿ ಪಂಚಾಯತ್ ಕಡೆಗೆ ಹೆಚ್ಚಿನ ಗಮನ ಕೊಡುವುದಿಲ್ಲ ಎಂದು ಬೈಂದೂರು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.



ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಬೈಂದೂರು ವಿಧಾನ ಸಭಾ ಕ್ಷೇತ್ರದ ಗ್ರಾ.ಪಂ.ಗಳ ಕುಡಿಯುವ ನೀರಿನ ಸಮಸ್ಯೆ ಕುರಿತು ಬುಧವಾರ ನಡೆಸಿದ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾ.ಪಂ.ಗಳಲ್ಲಿ ಸದಸ್ಯರಿಲ್ಲ, ತಾ.ಪಂ., ಜಿ.ಪಂ.ನಲ್ಲೂ ಅಧಿಕಾರಿಗಳೇ ಇರುವುದು. ಜನರ ಸಮಸ್ಯೆ ಬಗೆಹರಿಸಲು ಶಾಸಕರೊಬ್ಬರೇ ಸ್ಪಂದಿಸಬೇಕಾಗುತ್ತದೆ. ಆದ್ದರಿಂದ ಮುಂಬರುವ ದಿನಗಳಲ್ಲಿ ಬೇಸಗೆ ನೀರಿನ ಸಮಸ್ಯೆಯ ಭೀಕರತೆಗೆ ಪಂಚಾಯತ್ ಅಧಿಕಾರಿಗಳು ಸಜ್ಜಾಗಿ. ಆಡಳಿತಾಧಿಕಾರಿಗಳ ನೇಮಕವಾಗಿದ್ದರೂ ಒಂದೇ ಒಂದು ಪಂಚಾಯತ್‌ನ ಆಡಳಿತಾಧಿಕಾರಿ ಈ ಸಭೆಗೆ ಬರಲಿಲ್ಲ, ಆದ್ದರಿಂದ ಪಿಡಿಒಗಳು ಈ ನಿಟ್ಟಿನಲ್ಲಿ ಜವಾಬ್ದಾರಿ ಹೆಚ್ಚಿಸಿಕೊಳ್ಳಬೇಕು. ಸೆಪ್ಟೆಂಬರ್‌ವರೆಗೆ ಚುನಾವಣೆ ನಡೆಯುವ ಸಾಧ್ಯತೆ ಕಡಿಮೆಯಿದೆ. ಜನ ನೀರಿನ ಸಮಸ್ಯೆ, ಮಳೆಗಾಲದ ನೆರೆ ಸಮಸ್ಯೆ ಎಂದು ತಾರಕವಾಗಿ ಪ್ರಕ್ರಿಯಿಸುವ ಸಾಧ್ಯತೆ ಇರುತ್ತದೆ. ಈಗಿಂದಲೇ ಸಮಸ್ಯೆ ಎದುರಿಸಲು ಸಿದ್ಧತೆ ಮಾಡಿ ಎಂದರು.

ಉಳ್ಳೂರು 74, ಸಿದ್ದಾಪುರ, ಹಳ್ಳಿಹೊಳೆ, ಮಚ್ಚಟ್ಟು, ಕೆರಾಡಿ, ಬೆಳ್ಳಾಲ, ಹೊಸಂಗಡಿ ಪಂಚಾಯತ್‌ಗಳಲ್ಲಿ ನೀರಿನ ಸಮಸ್ಯೆ ಬರುವುದಿಲ್ಲ, ಮುಂದಿನ ತಿಂಗಳಲ್ಲಿ ಹಕ್ಲಾಡಿ, ಹೆಮ್ಮಾಡಿ, ನಾಡ, ವಂಡ್ಸೆಯಲ್ಲಿ ನೀರಿನ ಅವಶ್ಯಕತೆಯಿದೆ. ಶಿರೂರು ಪಂಚಾಯತ್‌ನಲ್ಲಿ ಮೇ ತಿಂಗಳಲ್ಲಿ ಅಗತ್ಯವಿದೆ ಎಂದು ಪಿಡಿಒಗಳು ತಿಳಿಸಿದರು.

ಜಲಜೀವನ ಮಿಶನ್‌ನಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ 553.9 ಕೋ.ರೂ. ಮಂಜೂರಾಗಿದ್ದು 288.8 ಕೋ.ರೂ. ಖರ್ಚಾಗಿದೆ. 65 ಶೇ. ಕಾಮಗಾರಿ ಪೂರ್ಣವಾಗಿದೆ ಎಂದು ಮಾಹಿತಿ ನೀಡಲಾಯಿತು.

ಸಭೆಯಲ್ಲಿ ಜಿ.ಪಂ. ಉಪಕಾರ್ಯದರ್ಶಿ ಎಸ್.ಎಸ್. ಕಾದ್ರೋಳಿ, ಕುಂದಾಪುರ ತಾ.ಪಂ. ಇಒ ಮಹೇಶ್ ಕೆ.ಜಿ., ಬೈಂದೂರು ಇಒ ರಾಮದಾಸ್ ಇದ್ದರು.

> **ಅನುದಾನ ಬಳಕೆಗೆ ತೊಡಕು**
> ಪಂಚಾಯತ್‌ಗಳಿಗೆ ಕುಡಿಯುವ ನೀರಿನ ಸರಬರಾಜಿಗೆ ಸ್ವಂತ ನಿಧಿಯಿಂದ ನೀಡಲಾಗದು. 15ನೆ ಹಣಕಾಸು ಯೋಜನೆಯಲ್ಲೂ ಕೊಡಲು ತೊಡಕು ಇದೆ. ಈ ಬಗ್ಗೆ ಸ್ಪಷ್ಟ ಆದೇಶ ಅಗತ್ಯವಿದೆ ಎಂದು ಪಿಡಿಒಗಳು ಹೇಳಿದರು.